ಶುಕ್ರವಾರ, ನವೆಂಬರ್ 11, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ@75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಕಿರಿ ವಯಸ್ಸಿನಲ್ಲೇ ಸಾಲು ಸಾಲು ಚಿತ್ರಗಳ ಆಫರ್ ಹಿಡಿದುಕೊಂಡಿದ್ದಾರೆ ನಟಿ ರೀಷ್ಮಾ ನಾಣಯ್ಯ



ನವ ಭಾರತಕ್ಕಾಗಿ
ನವ ಕರ್ನಾಟಕ



ಬೆಂಗಳೂರಿನ ಸಂಸ್ಥಾಪಕರಿಗೆ ಗೌರವ ಸಮರ್ಪಣೆ

ವಿಮಾನ ನಿಲ್ದಾಣ ಹಾಗೂ ರೈಲ್ವೆ ಮೂಲಸೌಕರ್ಯಕ್ಕೆ ಉತ್ತೇಜನ


ಸನ್ಮಾನ್ಯ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿ
ಅವರಿಂದ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಅನಾವರಣ,
ರೈಲುಗಳಿಗೆ ಚಾಲನೆ ಹಾಗೂ
ಕೆಐಎ 2ನೇ ಟರ್ಮಿನಲ್ ಉದ್ಘಾಟನೆ

ನವೆಂಬರ್ 11, 2022 । ಬೆಂಗಳೂರು

ಪ್ರಗತಿಯ ಪ್ರತಿಮೆ



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 2ನೇ ಟರ್ಮಿನಲ್ ಉದ್ಘಾಟನೆ

ಬೆಳಿಗ್ಗೆ 11:30



- ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ದಕ್ಷತೆಯನ್ನು ದ್ವಿಗುಣಗೊಳಿಸುತ್ತದೆ
- ಸುಸ್ಥಿರತೆ ತತ್ವಗಳ ಆಧಾರಿತ ವಿನ್ಯಾಸ
- ಪರಿಸರ-ಸ್ನೇಹಿ
- ನವೀನ ಹಾಗೂ ಗ್ರಾಹಕ-ಕೇಂದ್ರಿತ
- ಕರ್ನಾಟಕದ ಪರಂಪರೆ ಹಾಗೂ ಸಂಸ್ಕೃತಿಯ ಪ್ರತಿಬಿಂಬ

ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ 'ಪ್ರಗತಿಯ ಪ್ರತಿಮೆ' ಅನಾವರಣ ಹಾಗೂ ಥೀಮ್ ಪಾರ್ಕ್ ಉದ್ಘಾಟನೆ

ಮಧ್ಯಾಹ್ನ 12:00



ಸ್ಥಳ: ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ

- ನಾಡಪ್ರಭು ಕೆಂಪೇಗೌಡರು ಬೆಂಗಳೂರಿನ ಸ್ಥಾಪಕರು
- ಈ ಪ್ರತಿಮೆಯನ್ನು ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಸ್ಥಾಪಿಸಲಾಗಿದೆ.
- **ಪ್ರತಿಮೆಯ ಎತ್ತರ: 108 ಅಡಿ** (90 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು 18 ಅಡಿ ಎತ್ತರದ ಕಾಂಕ್ರೀಟ್ ಪೀಠದ ಮೇಲೆ ಸ್ಥಾಪಿಸಲಾಗಿದೆ.)
- **ಬಳಸಿರುವ ಲೋಹದ ಪ್ರಮಾಣ:** ಪ್ರತಿಮೆಗೆ 100 ಟನ್ ಕಂಚು. ಪೀಠಕ್ಕೆ 120 ಟನ್ ಉಕ್ಕು.
- ಪ್ರತಿಮೆಯ ಸುತ್ತಲಿನ ಪ್ರದೇಶದಲ್ಲಿ ಥೀಮ್ ಪಾರ್ಕ್ ಅನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಮೈಸೂರು-ಚೆನ್ನೈ ವಂದೇ ಭಾರತ್ ಎಕ್ಸ್‌ಪ್ರೆಸ್‌ಗೆ ಚಾಲನೆ

ಬೆಳಿಗ್ಗೆ 10:20

ಸ್ಥಳ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣ, ಬೆಂಗಳೂರು



- ವಂದೇ ಭಾರತ ಎಕ್ಸ್‌ಪ್ರೆಸ್-ದೇಶದ ಅತೀ ವೇಗದ ರೈಲು
- ಮೈಸೂರು ಹಾಗೂ ಚೆನ್ನೈ ನಡುವೆ ಸಂಪರ್ಕ
- ಪ್ರಯಾಣಿಕರಿಗೆ ಉತ್ತಮ ಪ್ರಯಾಣದ ಅನುಭವ
- ಕರ್ನಾಟಕದ ಪ್ರವಾಸೋದ್ಯಮಕ್ಕೆ ಉತ್ತೇಜನ
- ಉತ್ತಮ ವೇಗವರ್ಧನೆ ಹಾಗೂ ನಿಧಾನಗೊಳಿಸಲು ಇಂಟೆಲಿಜೆಂಟ್ ಬ್ರೇಕಿಂಗ್ ವ್ಯವಸ್ಥೆ
- ದಿವ್ಯಾಂಗಿ-ಸ್ನೇಹಿ ಸೌಲಭ್ಯಗಳು
- ಎಲ್ಲಾ ವರ್ಗದ ಪ್ರಯಾಣಿಕರಿಗೂ ಸೈಡ್ ರಿಕ್ಲೈನರ್ ಸೀಟ್ ಸೌಲಭ್ಯ

ಕರ್ನಾಟಕ ಭಾರತ್ ಗೌರವ್ ಕಾಶಿ ದರ್ಶನ ವಿಶೇಷ ರೈಲಿಗೆ ಚಾಲನೆ

ಬೆಳಿಗ್ಗೆ 10:20

ಸ್ಥಳ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣ, ಬೆಂಗಳೂರು



- ಯಾತ್ರಾರ್ಥಿಗಳಿಗೆ ರಿಯಾಯಿತಿ ದರಗಳಲ್ಲಿ 8 ದಿನಗಳ ಪ್ರವಾಸದ ಪ್ಯಾಕೇಜ್
- ವಾರಣಾಸಿ, ಅಯೋಧ್ಯ ಹಾಗೂ ಪ್ರಯಾಗ್‌ರಾಜ್ ಒಳಗೊಂಡಂತೆ ವಿವಿಧ ತೀರ್ಥ ಕ್ಷೇತ್ರಗಳಿಗೆ ಭೇಟಿ
- ಕಾಶಿ ವಿಶ್ವನಾಥ ಯಾತ್ರಾರ್ಥಿಗಳಿಗೆ ಕರ್ನಾಟಕ ಸರ್ಕಾರದಿಂದ ರೂ.5,000 ಹಣ ಸಹಾಯ
- ಆಹಾರ, ವಸತಿ ಹಾಗೂ ದರ್ಶನ ಸೌಲಭ್ಯಗಳನ್ನು ಒಳಗೊಂಡಿದೆ.

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." -ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ


ಕಾರ್ಯಕ್ರಮವನ್ನು ಡಿಡಿ ನ್ಯೂಸ್‌ನಲ್ಲಿ ನೇರ ಪ್ರಸಾರದಲ್ಲಿ ವೀಕ್ಷಿಸಿ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಶುಕ್ರವಾರ, ನವೆಂಬರ್ 11, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 311 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಂಖ್ಯೆ-ಸುದ್ದಿ
ದೆಹಲಿ ವಾಯುಮಾಲಿನ್ಯ ವಾರ್ಷಿಕ ಕಾಯಿಲೆ

ಬಾಳಿನ ಕನಕ ತೋರಣ 13

ಕನಕದಾಸ ಜಯಂತಿಯ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,613 ▼	18,028 ▼	₹53,100 (ಬೆಂಗಳೂರು) ▲	₹62,700 (ಬೆಂಗಳೂರು) ▲	81.40 ▲

ಸಿರಿಧಾನ್ಯ ರಫ್ತು ಉತ್ತೇಜನಕ್ಕೆ ಕ್ರಮ

ನವದೆಹಲಿ (ಪಿಟಿಐ): ಸಿರಿಧಾನ್ಯಗಳ ರಫ್ತು ಉತ್ತೇಜನಕ್ಕೆ ಕೇಂದ್ರ ಸರ್ಕಾರವು ಬೇರೆ ಬೇರೆ ದೇಶಗಳಲ್ಲಿ ಭಾರತೀಯ ರಾಯಭಾರ ಕಚೇರಿಗಳ ನೆರವು ಪಡೆಯುವ ಯೋಜನೆ ರೂಪಿಸಿದೆ. ಈ ಯೋಜನೆಯ ಭಾಗವಾಗಿ ಕೇಂದ್ರವು, ಜಾಗತಿಕ ಮಟ್ಟದಲ್ಲಿ ರಿಟೇಲ್ ಸೂಪರ್‌ಮಾರ್ಕೆಟ್ ಹೊಂದಿರುವ ವಾಲ್ಮಾರ್ಟ್ ಹಾಗೂ ಕಾರುಫಾ ಕಂಪನಿಗಳ ನೆರವನ್ನೂ ಪಡೆಯಲಿದೆ. 14

ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



ಪರಿಶಿಷ್ಟ ಜಾತಿಯ ಸ್ಥಾನಮಾನ ನೀಡಲು ಸಾಧ್ಯವಿಲ್ಲ: ಕೇಂದ್ರ ಸರ್ಕಾರ

ಕ್ರೈಸ್ತ–ಮುಸ್ಲಿಂ ದಲಿತರಿಗೆ ಮೀಸಲು ಇಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕ್ರೈಸ್ತ ಮತ್ತು ಇಸ್ಲಾಂ ಧರ್ಮಕ್ಕೆ ಮತಾಂತರವಾದ ದಲಿತರಿಗೆ 'ಪರಿಶಿಷ್ಟ ಜಾತಿ'ಯ ಸ್ಥಾನಮಾನ ನೀಡಲು ಸಾಧ್ಯವಿಲ್ಲ. ಅವರಿಗೆ ಮೀಸಲಾತಿ ನೀಡಿದರೆ, ಹಿಂದೂ ಧರ್ಮದಲ್ಲಿರುವ ಪರಿಶಿಷ್ಟ ಜಾತಿಯ ಜನರ ಹಕ್ಕಿಗೆ ಧಕ್ಕೆಯಾಗುತ್ತದೆ' ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಹೇಳಿದೆ. ಈ ಸಂಬಂಧ ವಸ್ತುಸ್ಥಿತಿಯ ಅಧ್ಯಯನಕ್ಕೆ ತಾನೇ ರಚಿಸಿರುವ ಆಯೋಗವು, ವರದಿ ಸಲ್ಲಿಸುವ ಮುನ್ನವೇ ಸರ್ಕಾರವು ಹೀಗೆ ಹೇಳಿದೆ.

ದಲಿತ ಕ್ರಿಶ್ಚಿಯನ್ನರು ಮತ್ತು ದಲಿತ ಮುಸ್ಲಿಮರಿಗೆ ಪರಿಶಿಷ್ಟ ಜಾತಿಯ ಸ್ಥಾನಮಾನ ನೀಡಬೇಕು ಎಂದು ಕೋರಿ ಸಿಪಿಐಎಲ್ ಎಂಬ ಸ್ವಯಂಸೇವಾ ಸಂಸ್ಥೆ ಅರ್ಜಿ (ಪಿಐಎಲ್) ಸಲ್ಲಿಸಿತ್ತು. ಈ ಅರ್ಜಿಯ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್ ಪೀಠವು, ನಿಲುವು ಸ್ಪಷ್ಟಪಡಿಸಿ ಎಂದು ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಿತ್ತು. 'ಕ್ರೈಸ್ತ ಮತ್ತು ಇಸ್ಲಾಂ ಧರ್ಮಕ್ಕೆ ಮತಾಂತರವಾದ ದಲಿತರಿಗೆ ಪರಿಶಿಷ್ಟ ಜಾತಿಯ ಸ್ಥಾನಮಾನ ನೀಡಬೇಕೇ ಅಥವಾ ಬೇಡವೇ ಎಂಬುದನ್ನು ಪರಿಶೀಲಿಸಲು ಆಯೋಗ ರಚಿಸುತ್ತೇವೆ' ಎಂದು ಸರ್ಕಾರವು ಹಿಂದಿನ ವಿಚಾರಣೆ ವೇಳೆ ಪೀಠಕ್ಕೆ ಮಾಹಿತಿ ನೀಡಿತ್ತು.

'ದೌರ್ಜನ್ಯ ದೃಢೀಕರಿಸುವ ದಾಖಲೆ ಇಲ್ಲ'

'ಹಿಂದೂ ಧರ್ಮದಲ್ಲಿದ್ದಾಗ ಅನುಭವಿಸಿದ್ದಕ್ಕಿಂತ ಹೆಚ್ಚಿನ ದೌರ್ಜನ್ಯವನ್ನು ಕ್ರೈಸ್ತ ಮತ್ತು ಇಸ್ಲಾಂನಲ್ಲಿ ದಲಿತರು ಎದುರಿಸುತ್ತಿದ್ದಾರೆ ಎಂಬುದಕ್ಕೆ ದೃಢೀಕೃತ ಮಾಹಿತಿ ಮತ್ತು ಅಧ್ಯಯನ ಆಧರಿತ ದಾಖಲೆಗಳು ಲಭ್ಯವಿಲ್ಲ. ಎಲ್ಲಾ ಧರ್ಮದಲ್ಲಿರುವ ದಲಿತರಿಗೆ ಪರಿಶಿಷ್ಟ ಜಾತಿಯ ಸ್ಥಾನಮಾನ ನೀಡಬೇಕು ಎಂದು ನ್ಯಾಯಮೂರ್ತಿ ರಂಗನಾಥ್ ಮಿಶ್ರಾ ಆಯೋಗದ ವರದಿಯಲ್ಲಿ ಶಿಫಾರಸು ಮಾಡಲಾಗಿತ್ತು. ಯಾವುದೇ ಅಧ್ಯಯನ ನಡೆಸದೆಯೇ ಅಂತಹ ಶಿಫಾರಸು ಮಾಡಲಾಗಿತ್ತು. ಆ ವರದಿಯು ಲೋಪಗಳಿಂದ ಕೂಡಿತ್ತು. ವಸ್ತುಸ್ಥಿತಿ ಅಧ್ಯಯನ ಮಾಡದೆಯೇ ಎಲ್ಲರಿಗೂ ಮೀಸಲಾತಿ ನೀಡಿದರೆ, ಹಿಂದೂ ಧರ್ಮದಲ್ಲಿರುವ ಪರಿಶಿಷ್ಟ ಜಾತಿಯ ಜನರ ಹಕ್ಕುಗಳನ್ನು ಕಸಿದುಕೊಂಡಂತಾಗುತ್ತದೆ' ಎಂದು ಸರ್ಕಾರವು ತನ್ನ ಪ್ರಮಾಣ ಪತ್ರದಲ್ಲಿ ವಿವರಿಸಿದೆ.

ಆನಂತರ ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣನ್ ನೇತೃತ್ವದಲ್ಲಿ ಆಯೋಗ ರಚಿಸಿತ್ತು. ಆಯೋಗವು ವರದಿಯನ್ನು ಇನ್ನಷ್ಟೇ ಸಲ್ಲಿಸಬೇಕಿದೆ. ಆದರೆ ಅದಕ್ಕೂ ಮುನ್ನವೇ, ಸರ್ಕಾರವು ಈ ಸಂಬಂಧ ಸುಪ್ರೀಂ ಕೋರ್ಟ್‌ಗೆ ಬುಧವಾರ ಪ್ರಮಾಣ ಪತ್ರ ಸಲ್ಲಿಸಿದೆ.

'1950ರ ಸಂವಿಧಾನ (ಪರಿಶಿಷ್ಟ ಜಾತಿ) ಆದೇಶದ ಪ್ರಕಾರ ಪರಿಶಿಷ್ಟ ಜಾತಿಯ ಜನರು ಹಿಂದೂ, ಸಿಖ್ ಮತ್ತು ಬೌದ್ಧ ಧರ್ಮದಲ್ಲಿ ಇದ್ದರೆ ಮಾತ್ರ ಅವರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ನೀಡಬಹುದು. ವಿದೇಶಿ ಧರ್ಮಗಳಾದ ಕ್ರೈಸ್ತ ಮತ್ತು ಇಸ್ಲಾಂಗೆ ಮತಾಂತರವಾದ ದಲಿತರಿಗೆ ಈ ಸ್ಥಾನಮಾನ ಮತ್ತು ಮೀಸಲಾತಿಯನ್ನು ವಿಸ್ತರಿಸಲು ಸಾಧ್ಯವಿಲ್ಲ' ಎಂದು ಸರ್ಕಾರವು ಪ್ರಮಾಣಪತ್ರದಲ್ಲಿ ತನ್ನ ನಿಲುವು ಸ್ಪಷ್ಟಪಡಿಸಿದೆ.

'ಕ್ರೈಸ್ತ ಮತ್ತು ಇಸ್ಲಾಂನಲ್ಲಿ ಅಸ್ಪೃಶ್ಯತೆಯಂತಹ ದಬ್ಬಾಳಿಕೆಗಳು ಇಲ್ಲ ಎಂಬುದನ್ನು 1950ರ ಸಂವಿಧಾನ (ಪರಿಶಿಷ್ಟ ಜಾತಿ) ಆದೇಶವು ಈಗಾಗಲೇ ಸಾಬೀತು ಮಾಡಿದೆ. ಆ ಎರಡೂ ಧರ್ಮಗಳಲ್ಲಿ ಅಸ್ಪೃಶ್ಯತೆಯಂತಹ ಆಚರಣೆಗಳು ಇಲ್ಲ ಎಂಬ ಕಾರಣಕ್ಕೇ ಪರಿಶಿಷ್ಟ ಜಾತಿಗೆ ಸೇರಿದ ಜನರು ಆ ಧರ್ಮಗಳಿಗೆ ಮತಾಂತರವಾಗಿದ್ದಾರೆ. ಅಲ್ಲಿ ಅವರು ಅಂತಹ ದೌರ್ಜನ್ಯಕ್ಕೆ ಒಳಗಾಗುತ್ತಿಲ್ಲ. ಈ ಕಾರಣದಿಂದ ಅವರಿಗೆ ಪರಿಶಿಷ್ಟ ಜಾತಿಯ ಸ್ಥಾನಮಾನ ಮತ್ತು ಮೀಸಲಾತಿ ನೀಡಲು ಸಾಧ್ಯವಿಲ್ಲ' ಎಂದು ಸರ್ಕಾರವು ಪ್ರಮಾಣ ಪತ್ರದಲ್ಲಿ ಹೇಳಿದೆ.

'ಕೆಲವು ಸಾಮಾಜಿಕ ಆಚರಣೆಗಳ ಕಾರಣದಿಂದ 1956ರಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಕರೆಯ ಮೇರೆಗೆ ಪರಿಶಿಷ್ಟ ಜಾತಿಯ ಜನರು ಬೌದ್ಧ ಧರ್ಮಕ್ಕೆ ಮತಾಂತರವಾದರು. ಹೀಗೆ ಮತಾಂತರವಾದವರ ಮೂಲ ಜಾತಿ ಯಾವುದು ಎಂಬುದನ್ನು ಸುಲಭವಾಗಿ ಪತ್ತೆ ಮಾಡಬಹುದು. ಆದರೆ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಕ್ಕೆ ಮತಾಂತರವಾದ ದಲಿತರ ಮೂಲ ಜಾತಿ ಪತ್ತೆ ಮಾಡಲು ಸಾಧ್ಯವಿಲ್ಲ. ಈ ಎರಡೂ ಧರ್ಮಗಳಿಗೆ ನಡೆಯುವ ಮತಾಂತರದ ಪ್ರಕ್ರಿಯೆಯೂ ಭಿನ್ನವಾದುದು. ಅಲ್ಲದೆ ಈ ಧರ್ಮಗಳಿಗೆ ಮತಾಂತರವೂ ಬೇರೆ ಬೇರೆ ಕಾರಣಗಳಿಗೆ ನಡೆಯುತ್ತದೆ' ಎಂದು ಸರ್ಕಾರ ಹೇಳಿದೆ.

ಸುಪ್ರೀಂ ಕೋರ್ಟ್ ಈ ಅರ್ಜಿಯ ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಿದೆ.

'ಹಿರಿಯರಿಗೆ ಟಿಕೆಟ್ ಬೇಡ'

ಬೆಂಗಳೂರು: 'ಗುಜರಾತ್‌ನಲ್ಲಿ ಮಾಜಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಕೆಲವು ಮಾಜಿ ಮಂತ್ರಿಗಳು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸದಿರಲು ನಿರ್ಧರಿಸಿದ್ದಾರೆ. ಕರ್ನಾಟಕದಲ್ಲೂ ಪಕ್ಷದ ಹಿರಿಯರು ಅದೇ ಮಾದರಿ ಅನುಸರಿಸಬೇಕು. ಯುವಕರಿಗೆ ಅವಕಾಶ ನೀಡಬೇಕು' ಎಂದು ಬಿಜೆಪಿಯ ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯಾ ಟ್ವೀಟ್ ಮಾಡಿದ್ದಾರೆ.


ಲಹರ್ ಸಿಂಗ್

ಕರ್ನಾಟಕ ಬಿಜೆಪಿಯಲ್ಲಿ ಬಿ.ಎಸ್. ಯಡಿಯೂರಪ್ಪ, ಜಗದೀಶ ಶೆಟ್ಟರ್, ಡಿ.ವಿ. ಸದಾನಂದಗೌಡ ಅವರು ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಕೆ.ಎಸ್. ಈಶ್ವರಪ್ಪ, ಗೋವಿಂದ ಕಾರಜೋಳ, ಲಕ್ಷ್ಮಣ ಸವದಿ, ಆರ್. ಅಶೋಕ, ಸಿ.ಎನ್. ಅಶ್ವತ್ಥನಾರಾಯಣ ಅವರು ಉಪ ಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಈಶ್ವರಪ್ಪ ಅವರನ್ನು ಮತ್ತೆ ಸಚಿವರನ್ನಾಗಿ ಮಾಡಬೇಕು ಎಂದು ಕುರುಬ ಸಮುದಾಯದ ಕೆಲವು ಮುಖಂಡರು ಬಿಜೆಪಿ ವರಿಷ್ಠರ ಮೇಲೆ ಒತ್ತಡ ಹೇರಿರುವ ಬೆನ್ನಲ್ಲೇ ಲಹರ್‌ಸಿಂಗ್ ಟ್ವೀಟ್ ಆ ಪಕ್ಷದಲ್ಲಿ ಚರ್ಚೆಗೆ ಕಾರಣವಾಗಿದೆ.

6ನೇ ಪುಟ ನೋಡಿ

ಕೆಂಪೇಗೌಡರ 108 ಅಡಿಯ 'ಪ್ರಗತಿಯ ಪ್ರತಿಮೆ' ಅನಾವರಣ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸ್ಥಾಪಿಸಿರುವ 108 ಅಡಿ ಎತ್ತರದ ನಾಡಪ್ರಭು ಕೆಂಪೇಗೌಡರ ಕಂಚಿನ ಪ್ರತಿಮೆ (ಪ್ರಗತಿಯ ಪ್ರತಿಮೆ) ಮತ್ತು ಟರ್ಮಿನಲ್–2 ಅನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಉದ್ಘಾಟಿಸಲಿದ್ದಾರೆ.

ವಿಧಾನಸೌಧದ ಆವರಣದಲ್ಲಿರುವ ಸಂತ ಕನಕದಾಸ, ಮಹರ್ಷಿ ವಾಲ್ಮೀಕಿ ಪ್ರತಿಮೆಗಳಿಗೆ ಮಾಲಾರ್ಪಣೆ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೇ ನಿಲ್ದಾಣದಲ್ಲಿ 'ವಂದೇ ಭಾರತ್ ಎಕ್ಸ್‌ಪ್ರೆಸ್' ಮತ್ತು 'ಭಾರತ ಗೌರವ ಕಾಶಿ ದರ್ಶನ' ರೈಲುಗಳಿಗೆ ಹಸಿರು ನಿಶಾನೆ ತೋರಿಸಲಿದ್ದಾರೆ. ಅಮೃತ 2.0 ಯೋಜನೆಗೂ ಚಾಲನೆ ನೀಡಿದ ಬಳಿಕ ಅವರು ಸಾರ್ವಜನಿಕ ಸಮಾರಂಭದಲ್ಲಿ ಮಾತನಾಡಲಿದ್ದಾರೆ.

6ನೇ ಪುಟ ನೋಡಿ



ಕಾಣೆಯಾಗಿದ್ದ ವಿದ್ಯಾರ್ಥಿಗಳು ಪತ್ತೆ

ಪ್ರಜಾವಾಣಿ ವಾರ್ತೆ

ಪುತ್ತೂರು (ದಕ್ಷಿಣ ಕನ್ನಡ): ಪುತ್ತೂರಿನಿಂದ ನಾಪತ್ತೆಯಾಗಿದ್ದ ಇಲ್ಲಿನ ವಸತಿಯುತ ವಿದ್ಯಾ ಸಂಸ್ಥೆಯೊಂದರ 10ನೇ ತರಗತಿಯ ಇಬ್ಬರು ವಿದ್ಯಾರ್ಥಿಗಳು ಗುರುವಾರ ಬೆಂಗಳೂರಿನ ರೈಲ್ವೆ ನಿಲ್ದಾಣದಲ್ಲಿ ಪತ್ತೆಯಾಗಿದ್ದಾರೆ. ರೈಲ್ವೆ ಪೊಲೀಸರು ಅವರಿಬ್ಬರನ್ನು ಬೆಂಗಳೂರಿನ ಮಕ್ಕಳ ಸಹಾಯವಾಣಿ ಕೇಂದ್ರಕ್ಕೆ ಹಸ್ತಾಂತರಿಸಿದ್ದಾರೆ.

‘ವಾರ್ಡ್‌ಗೊಂದು ಗ್ರಂಥಾಲಯ ಆರಂಭಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ 243 ವಾರ್ಡ್‌ಗಳಲ್ಲಿ ತಲಾ ಕನಿಷ್ಠ ಒಂದು ಗ್ರಂಥಾಲಯ ತೆರೆಯಲು ಪಾಲಿಕೆ ಆಸ್ತಿ/ಕಟ್ಟಡಗಳನ್ನು ಗುರುತಿಸಿ ಕ್ರಿಯಾಯೋಜನೆಯನ್ನು ರೂಪಿಸಬೇಕು ಎಂದು ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಅವರು ಸೂಚಿಸಿದರು.

ಬಿಬಿಎಂಪಿ ವ್ಯಾಪ್ತಿಯ 5 ವಲಯಗಳ ನಗರ ಕೇಂದ್ರ ಗ್ರಂಥಾಲಯ ಪ್ರಾಧಿಕಾರದ ಗ್ರಂಥಾಲಯಗಳ ಉಪ ನಿರ್ದೇಶಕರ ಜೊತೆ ಬಿ.ಟಿ.ಎಂ. ಬಡಾವಣೆಯಲ್ಲಿರುವ ನಗರ ಕೇಂದ್ರ ಗ್ರಂಥಾಲಯ ಕಟ್ಟಡದಲ್ಲಿ ನಡೆದ ಸಭೆಯಲ್ಲಿ ಅವರು ಪಾಲ್ಗೊಂಡು, ಮಾತನಾಡಿದರು.

ಸಂಘ–ಸಂಸ್ಥೆಗಳು ಖಾಸಗಿ ಗ್ರಂಥಾಲಯ ತೆರೆಯಲು ಮುಂದಾದರೆ ಅವುಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಉಚಿತವಾಗಿ ಪುಸ್ತಕಗಳನ್ನು ನೀಡಲಾಗುತ್ತದೆ. ಹೆಚ್ಚು ಹೆಚ್ಚು ಗ್ರಂಥಾಲಯಗಳನ್ನು ತೆರೆಯುವುದರಿಂದ ಸಾರ್ವಜನಿಕರಲ್ಲಿ ಓದುವ ಹವ್ಯಾಸವನ್ನು ಬೆಳೆಸಲು ಸಹಕಾರಿಯಾಗಲಿದೆ ಎಂದು ಅವರು ತಿಳಿಸಿದರು.

ಪಾಲಿಕೆ ಮತ್ತು ಸರ್ಕಾರದ ಶಾಲಾ/ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ ಪುಸ್ತಕಗಳ ಪಟ್ಟಿಯನ್ನು ಪ್ರಾಂಶುಪಾಲರಿಂದ ಪಡೆದು, ಅವುಗಳನ್ನು ಗ್ರಂಥಾಲಯದ ಮೂಲಕ ಉಚಿತವಾಗಿ ನೀಡಲು ಸೂಚಿಸಿದರು.

ಹೊಸದಾಗಿ ಗ್ರಂಥಾಲಯ ಕಟ್ಟಡ ನಿರ್ಮಿಸುವ ಸಂದರ್ಭದಲ್ಲಿ ಗ್ರಂಥಾಲಯ ಅಧಿಕಾರಿ/ಸಿಬ್ಬಂದಿ ಹೆಚ್ಚಿನ ಕಾರ್ಯಕ್ಷಮತೆಗೆ ಅನುಕೂಲವಾಗುವ ದೃಷ್ಟಿಯಿಂದ ಗ್ರಂಥಾಲಯ ಕಟ್ಟಡಗಳಿಗೆ ಹೊಂದಿಕೊಂಡಂತೆ ವಸತಿ ಗೃಹಗಳನ್ನು ನಿರ್ಮಿಸಲು ಯೋಜನೆ ರೂಪಿಸಲು ಸೂಚಿಸಿದರು.

ಬಿಬಿಎಂಪಿ ವತಿಯಿಂದ ನೀಡುವ ಗ್ರಂಥಾಲಯ ಕರವನ್ನು ಪಾಲಿಕೆ ವ್ಯಾಪ್ತಿಯಲ್ಲಿಯೇ ಗ್ರಂಥಾಲಯಗಳ ಸ್ಥಾಪನೆಗೆ ಉಪಯೋಗಿಸಲು ಪಾಲಿಕೆ ಮತ್ತು ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸಿ ಅನುದಾನ ಹಂಚಿಕೆ ಬಿಡುಗಡೆ ಮಾಡಲು ತೀರ್ಮಾನಿಸಲಾಯಿತು.



ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಅವರು ನಗರ ಕೇಂದ್ರ ಗ್ರಂಥಾಲಯ ಪ್ರಾಧಿಕಾರದ ಗ್ರಂಥಾಲಯಗಳ ಉಪ ನಿರ್ದೇಶಕರೊಂದಿಗೆ ಸಭೆ ನಡೆಸಿದರು

13ಕ್ಕೆ ‘ಕಿಡ್ಸ್ ವಾಕಥಾನ್’

ಬೆಂಗಳೂರು: ಮಕ್ಕಳ ದಿನಾಚರಣೆ ಅಂಗವಾಗಿ ರೋಟರಿ ಇ–ಕ್ಲಬ್ ಆಫ್ ಉತ್ಕೃಷ್ಟ ಇದೇ 13ರಂದು ‘ಕಿಡ್ಸ್ ವಾಕಥಾನ್’ ಆಯೋಜಿಸಿದೆ.

ಕಬ್ಬನ್ ಪಾರ್ಕ್‌ನಲ್ಲಿ ಬೆಳಿಗ್ಗೆ 6.30ಕ್ಕೆ ಈ ಕಾರ್ಯಕ್ರಮ ನಡೆಯಲಿದ್ದು, 2 ಕಿ.ಮೀ, 3 ಕಿ.ಮೀ, 5 ಕಿ.ಮೀ. ಸ್ಪರ್ಧೆಗಳು ನಡೆಯಲಿವೆ. ಮಕ್ಕಳಿಗೆ ಉಚಿತ ಶಿಕ್ಷಣ, ಶಸ್ತ್ರಚಿಕಿತ್ಸೆಗೆ ನೆರವು ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸುವ ಉದ್ದೇಶವನ್ನು ಹೊಂದಲಾಗಿದೆ. 15 ವರ್ಷದ ಒಳಗಿನ ಮಕ್ಕಳ ಜತೆ ಪೋಷಕರು ಕಡ್ಡಾಯವಾಗಿ ಇರಬೇಕು ಎಂದು ಪ್ರಕಟಣೆ ತಿಳಿಸಿದೆ.

ಆಸಕ್ತರು https://rotaryutkrishta.org.in/walkathon.html ವೆಬ್‌ಸೈಟ್ ಮೂಲಕ ನೋಂದಾಯಿಸಿಕೊಳ್ಳಬಹುದು. ವಿವರಗಳಿಗೆ ಮೊಬೈಲ್ ದೂರವಾಣಿ ಸಂಖ್ಯೆ: 9880767125, 9844166951, 9880539450

‘ಬುಡಕಟ್ಟು ಸಮುದಾಯಗಳಿಗೆ ಶೇ 3ರಷ್ಟು ಮೀಸಲಾತಿ ಕೊಡಿ’

ಬೆಂಗಳೂರು: ಕಾಡಿನಲ್ಲಿ ವಾಸಿಸುವ 12 ಬುಡಕಟ್ಟು ಸಮುದಾಯಗಳಿಗೆ ಮಾತ್ರ ಶೇ 3ರಷ್ಟು ಮೀಸಲಾತಿಯನ್ನು ಮುಂದುವರೆಸಬೇಕು ಎಂದು ರಾಜ್ಯ ಮೂಲ ಆದಿವಾಸಿ ವೇದಿಕೆ ಒತ್ತಾಯಿಸಿದೆ.

‘ರಾಜ್ಯ ಸರ್ಕಾರ ನೀಡಿರುವ ಎಸ್.ಟಿ. ಮೀಸಲಾತಿ ಸೌಲಭ್ಯವನ್ನು 54 ಸಮುದಾಯಗಳು ಪಡೆದುಕೊಳ್ಳುತ್ತಿವೆ. ಆದರೆ, ಪ್ರಾಚೀನ ಬುಡಕಟ್ಟು ಸಮುದಾಯಗಳಾದ ಜೇನು ಕುರುಬ, ಕೊರಗ, ಸೋಲಿಗ, ಬೆಟ್ಟ ಕುರುಬ, ಯರವ, ಮಲೆಕುಡಿಯ, ಸಿದ್ಧಿ, ಹಸಲರು, ಇರುಳಿಗರು ಕಾಡು, ನೆಲ–ಜಲ ಹಾಗೂ ಅರಣ್ಯ ಸಂಪನ್ಮೂಲಗಳ ಮೇಲೆ ಅವಲಂಬಿತವಾಗಿವೆ. ರಾಜ್ಯದಾದ್ಯಂತ 10 ಲಕ್ಷ ಜನಸಂಖ್ಯೆ ಇದೆ. ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಉತ್ತಮ ಸ್ಥಾನಮಾನ ಮತ್ತು ಸರ್ಕಾರದ ಅಭಿವೃದ್ಧಿ ಯೋಜನೆಗಳು ಸಮರ್ಪಕವಾಗಿ ದೊರೆಯುತ್ತಿಲ್ಲ’ ಎಂದು ವೇದಿಕೆ ಅಧ್ಯಕ್ಷ ವಿಠ್ಠಲ್ ಕೆ.ಎನ್. ಗುರುವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

‘ಎಸ್.ಟಿ. ಪಟ್ಟಿಯಲ್ಲಿರುವ ಬಲಾಢ್ಯ ಸಮುದಾಯಗಳೊಂದಿಗೆ ಸೆಣಸಾಟ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಪಿವಿಟಿಜಿ ಮತ್ತು ಅರಣ್ಯ ಆಧಾರಿತ ಸಮುದಾಯಗಳಿಗೆ ಜನಸಂಖ್ಯೆವಾರು ಮಾನದಂಡದ ಆಧಾರದ ಮೇಲೆ ಮೀಸಲಾತಿಯ ಬದಲು ಸದ್ಯ ಇರುವ ಶೇ 3ರಷ್ಟು ಮೀಸಲಾತಿಯನ್ನು ನಿಗದಿಪಡಿಸಬೇಕು. ಮೈಸೂರಿನಲ್ಲಿದ್ದ ರಾಜ್ಯ ಬುಡಕಟ್ಟು ಸಂಶೋಧನಾ ಕೇಂದ್ರದಲ್ಲಿದ್ದ ಮೂಲ ಆದಿವಾಸಿ ಅಧ್ಯಯನ ಕೇಂದ್ರವನ್ನು ಮರು ಪ್ರಾರಂಭಿಸಬೇಕು ‘ಎಂದು ಆಗ್ರಹಿಸಿದರು.

ನಿಧನ ವಾರ್ತೆ

ರಂಗ ನಟ ದತ್ತಾತ್ರೇಯ



ಬೆಂಗಳೂರು: ರಂಗ ನಟ ದತ್ತಾತ್ರೇಯ (68) ಅವರು ಹೃದಯಾಘಾತದಿಂದ ನಗರದಲ್ಲಿ ಗುರುವಾರ ನಿಧನರಾದರು.

ಅವರಿಗೆ ಇಬ್ಬರು ಹೆಣ್ಣುಮಕ್ಕಳು ಇದ್ದಾರೆ. ಮೈಸೂರು ರಸ್ತೆಯ ಟೆಲಿಕಾಂ ಬಡಾವಣೆಯಲ್ಲಿ ವಾಸವಿದ್ದ ಅವರು, ವಿವಿಧ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತಿದ್ದರು. ರಂಗ ಸಂಪದ ತಂಡದ ನಟರಾಗಿದ್ದ ಅವರು, ವಿವಿಧ ನಾಟಕಗಳಲ್ಲಿ ಅಭಿನಯಿಸಿದ್ದರು. ದೂರ ಸಂಪರ್ಕ ಇಲಾಖೆಯ ಬೆಂಗಳೂರು ಸೆಂಟ್ರಲ್ ಟೆಲಿಗ್ರಾಫ್ ಕಚೇರಿಯಲ್ಲಿ ನೌಕರನಾಗಿ ಸೇವೆ ಸಲ್ಲಿಸಿದ ಅವರು, ಬಿಎಸ್‌ಎನ್‌ಎಲ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದರು.

ರಂಗ ಚಂದಿರ ತಂಡದ ಗೌರವಾಧ್ಯಕ್ಷರಾಗಿ, ಹಲವು ರಂಗ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದರು.

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ • ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ಮಾಹಿತಿ

ಕೈದಿಗಳಿಗೆ ಟೆಲಿ ಮೆಡಿಸಿನ್ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಕೈದಿಗಳಿಗೆ ತುರ್ತು ಸಂದರ್ಭದಲ್ಲಿ ಟೆಲಿ ಮೆಡಿಸಿನ್ ವ್ಯವಸ್ಥೆಯ ಮೂಲಕ ಮಾನಸಿಕ ಆರೋಗ್ಯ ಸೇವೆಗಳನ್ನು ಒದಗಿಸಲಾಗುವುದು' ಎಂದು ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ತಿಳಿಸಿದರು.

ಅವರು ಕೇಂದ್ರ ಕಾರಾಗೃಹಕ್ಕೆ ಗುರುವಾರ ಭೇಟಿ ನೀಡಿ, ಅಲ್ಲಿನ ವೈದ್ಯಕೀಯ ವ್ಯವಸ್ಥೆಯನ್ನು ಪರಿಶೀಲಿಸಿದರು. ಅಲ್ಲಿನ ಆರೋಗ್ಯ ಸೌಲಭ್ಯಗಳ ಬಗ್ಗೆ ಆರೋಗ್ಯ ಇಲಾಖೆ ಹಾಗೂ ಕಾರಾಗೃಹದ ಅಧಿಕಾರಿಗಳಿಂದ ಮಾಹಿತಿ ಪಡೆದರು. ಬಳಿಕ ಮಾತನಾಡಿದ ಅವರು, 'ಕೇಂದ್ರ ಮತ್ತು ರಾಜ್ಯ ಸರ್ಕಾರದ ಆರೋಗ್ಯ ಯೋಜನೆಗಳನ್ನು ಕಾರಾಗೃಹದಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುವುದು. ಈ ಮೂಲಕ ಕೈದಿಗಳ ಆರೋಗ್ಯ ಸುಧಾರಣೆಗೆ ಕ್ರಮವಹಿಸಲಾಗುವುದು. ಕಿದ್ವಾಯಿ, ನಿಮ್ಹಾನ್ಸ್ ಸೇರಿ ವಿವಿಧ ಸಂಸ್ಥೆಗಳಲ್ಲಿರುವ ಆಧುನಿಕ ವೈದ್ಯಕೀಯ ಸೌಲಭ್ಯವನ್ನು ಇಲ್ಲಿ ಕಲ್ಪಿಸಲಾಗುವುದು' ಎಂದು ಹೇಳಿದರು.

'ಆಯುಷ್ಮಾನ್ ಭಾರತ ಸೇರಿ ಜಾರಿಯಲ್ಲಿರುವ ವಿವಿಧ ಆರೋಗ್ಯ ಯೋಜನೆಗಳಡಿ ಕೈದಿಗಳಿಗೆ ವೈದ್ಯಕೀಯ ಸೇವೆ ಒದಗಿಸಲಾಗುವುದು. ಅವರಿಗೆ ಆರೋಗ್ಯ ಕಾರ್ಡ್‌ಗಳನ್ನು ವಿತರಿಸಲು ನಿರ್ಧರಿಸಲಾಗಿದೆ' ಎಂದು ಅವರು ತಿಳಿಸಿದರು.

ಔಷಧಗಳ ದಾಸ್ತಾನು ಹೆಚ್ಚಿಸಿ: 'ಜನಸಾಮಾನ್ಯರು ಹೊರಗಡೆ ಪಡೆಯುವ ಎಲ್ಲ ವೈದ್ಯಕೀಯ ಸೌಲಭ್ಯಗಳನ್ನು ಕಾರಾಗೃಹದಲ್ಲಿರುವ ಕೈದಿಗಳಿಗೆ ಒದಗಿಸಬೇಕು. ಕಾರಾಗೃಹದಲ್ಲಿ ಔಷಧಗಳ ದಾಸ್ತಾನನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದ ಅವರು, ಕಾರಾಗೃಹದಲ್ಲಿನ ಆರೋಗ್ಯ ವ್ಯವಸ್ಥೆ ಸುಧಾರಣೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಪ್ರಸ್ತಾವನೆ ಸಲ್ಲಿಸುವಂತೆ ಅವರು ಹೇಳಿದರು.

'ಪ್ರತಿದಿನ 60ರಿಂದ 80 ಕೈದಿಗಳು ಕಾರಾಗೃಹಕ್ಕೆ ಬರುತ್ತಾರೆ. ಕೆಲವರು ಬಿಡುಗಡೆಯಾಗುತ್ತಾರೆ. ಇವರ ಆರೋಗ್ಯ ಪರಿಸ್ಥಿತಿಯನ್ನು ನಿಯಮಿತವಾಗಿ ತಪಾಸಣೆ ಮಾಡಲು ಆರೋಗ್ಯ ಸಿಬ್ಬಂದಿಯನ್ನು ಹೆಚ್ಚಿಸಲಾಗಿದೆ. ಕಾರಾಗೃಹಕ್ಕೆ ಬರುವವರ ದೈಹಿಕ ಮತ್ತು ಮಾನಸಿಕ ಸ್ಥಿತಿಗತಿಯನ್ನು ಸಮಗ್ರವಾಗಿ ತಪಾಸಣೆ ಮಾಡಲಾಗುತ್ತಿದೆ. ಇದಕ್ಕಾಗಿ ಮೂವರು ಮನಃಶಾಸ್ತ್ರಜ್ಞರು ಕಾರ್ಯನಿರ್ವಹಿಸುತ್ತಿದ್ದಾರೆ. ಮದ್ಯಪಾನ, ಧೂಮಪಾನ ವ್ಯಸನಿಗಳಿಗೆ ಚಿಕತ್ಸೆ ಒದಗಿಸಲೂ ವ್ಯವಸ್ಥೆ ಕಲ್ಪಿಸಲಾಗಿದೆ. ಅಧಿಕ ರಕ್ತದೊತ್ತಡ, ಮಧುಮೇಹ ಇದ್ದವರಿಗೆ ನಿಯಮಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದರು.



ಡಿ. ರಂದೀಪ್ ಅವರು ಕಾರಾಗೃಹ ಪರಿಶೀಲಿಸಿದರು. ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ಪಿ.ಎಸ್. ರಮೇಶ್ ಹಾಗೂ ಅಧಿಕಾರಿಗಳು ಇದ್ದಾರೆ.

'ವಿಶೇಷ ಮಾನಸಿಕ ಚಿಕಿತ್ಸೆ'

'ಜೈಲಿಗೆ ಬಂದ ಕೆಲವರು ಆಘಾತದಿಂದ ಮಾನಸಿಕ ಖಿನ್ನತೆಗೆ ಒಳಗಾಗುತ್ತಾರೆ. ಇಂತಹವರಿಗೆ ವಿಶೇಷ ಮಾನಸಿಕ ಚಿಕಿತ್ಸೆ ನೀಡಲಾಗುತ್ತಿದೆ. ರಾತ್ರಿ ವೇಳೆಯೂ ವೈದ್ಯಕೀಯ ಸೇವೆ ಒದಗಿಸಲು ವೈದ್ಯರೊಬ್ಬರನ್ನು ನಿಯೋಜಿಸಲಾಗಿದೆ. ಗರ್ಭಿಣಿಯರಿಗೆ ಹೆರಿಗೆ ವೇಳೆ ತೊಂದರೆಯಾಗದಂತೆ ಕ್ರಮ ವಹಿಸಲಾಗಿದೆ. ಆರು ವರ್ಷದವರೆಗಿನ ಮಕ್ಕಳನ್ನು ನೋಡಿಕೊಳ್ಳಲು ಅಗತ್ಯ ವ್ಯವಸ್ಥೆ ಕಲ್ಪಿಸಲಾಗಿದೆ' ಎಂದು ಇಲಾಖೆಯ ಮಾನಸಿಕ ಆರೋಗ್ಯದ ಉಪ ನಿರ್ದೇಶಕಿ ಡಾ.ಪಿ. ರಜನಿ ತಿಳಿಸಿದರು.

ವನ್ಯಜೀವಿಗಳ ಬದುಕಿನ ಕ್ಷಣ ಛಾಯಾಚಿತ್ರಗಳಲ್ಲಿ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಲಿ ಮರಿಗಳ ಚೆಲ್ಲಾಟ, ಚಿರತೆಗಳ ಓಟ, ಆನೆಗಳ ಗಂಭೀರ ಹೆಜ್ಜೆ ಬಿಂಬಿಸುವ ಛಾಯಾಚಿತ್ರಗಳು ನಗರದ ಚಿತ್ರಕಲಾ ಪರಿಷತ್‌ನಲ್ಲಿ ಅನಾವರಣಗೊಂಡಿವೆ.

ಕೆನರಾ ಬ್ಯಾಂಕ್ ನಿವೃತ್ತ ಅಧಿಕಾರಿ ಕೆ.ಎಸ್. ಸೂರ್ಯಪ್ರಕಾಶ್ ಅವರು ದೇಶ-ವಿದೇಶಗಳಲ್ಲಿ ಅರಣ್ಯಗಳನ್ನು ಸುತ್ತಾಡಿ ವನ್ಯಜೀವಿಗಳ ಅಪರೂಪದ ಈ ಚಿತ್ರಗಳನ್ನು ಸೆರೆಹಿಡಿದಿದ್ದಾರೆ.

ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ಸೂರ್ಯಪ್ರಕಾಶ್ ಅವರು ಕಳೆದ ಒಂಬತ್ತು ವರ್ಷಗಳಲ್ಲಿ ಸೆರೆಹಿಡಿದಿರುವ ಚಿತ್ರಗಳನ್ನು ಪ್ರದರ್ಶಿಸಿದ್ದಾರೆ. 'ವೆಲ್ಡ್ ಮೂಮೆಂಟ್ಸ್' ಶೀರ್ಷಿಕೆ ಅಡಿಯಲ್ಲಿ ಆಯೋಜಿಸಿರುವ ಈ ಪ್ರದರ್ಶನ ನ.13ರವರೆಗೆ ನಡೆಯಲಿದೆ.

ರಣಥಂಬೋರ್, ಒಡಿಶಾದ ಮಂಗಳ ಜೋಡಿ, ತಮಿಳುನಾಡಿನ ವಲ್ಪರೈ ಅರಣ್ಯ ಕೀನ್ಯಾದ ಮಸ್ಸೈ ಮರ, ತಾಂಜಿನಿಯಾದ ಮೌಂಟ್ ಕಿಲಿಮಂಜಾರೊ ರಾಷ್ಟ್ರೀಯ ಉದ್ಯಾನವನ ಸೇರಿ ವಿವಿಧ ಸ್ಥಳಗಳಲ್ಲಿನ ಚಿತ್ರಗಳನ್ನು ಅವರು ಸೆರೆಹಿಡಿದಿದ್ದಾರೆ.

'ಮೊದಲು ಹವ್ಯಾಸಕ್ಕಾಗಿ ಚಿತ್ರಗಳನ್ನು ತೆಗೆಯುತ್ತಿದ್ದೆ. 32 ವರ್ಷಗಳ ಕಾಲ ಬ್ಯಾಂಕ್‌ನಲ್ಲಿ ಕಾರ್ಯನಿರ್ವಹಿಸಿ ಸ್ವಯಂ ನಿವೃತ್ತಿ ಪಡೆದ ನಂತರ ಕಾಡುಗಳಲ್ಲಿ ಸುತ್ತಾಡಿ ಚಿತ್ರಗಳನ್ನು ತೆಗೆದಿದ್ದೇನೆ. ಈಗ 45 ಚಿತ್ರಗಳನ್ನು ಪ್ರದರ್ಶನಕ್ಕಿಡಲಾಗಿದೆ' ಎಂದು ಸೂರ್ಯಪ್ರಕಾಶ್ ತಿಳಿಸಿದರು.

ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದ ಅರಣ್ಯ ಇಲಾಖೆ ನಿವೃತ್ತ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಎಂ.ಎನ್. ಜಯಕುಮಾರ್, 'ಛಾಯಾಗ್ರಹಣ ಎನ್ನುವುದು ಕಲೆ. ಇಲ್ಲಿ ಬೆಳಕು ಮಹತ್ವದ ಪಾತ್ರವಹಿಸುತ್ತದೆ. ವನ್ಯಜೀವಿಗಳ ಛಾಯಾಚಿತ್ರಗಳನ್ನು ತೆಗೆಯಲು ತಾಳ್ಮೆ ಮುಖ್ಯ. ಅತ್ಯುತ್ತಮ ಚಿತ್ರಕ್ಕೆ ಅಪಾರ ಶ್ರಮ ಬೇಕು' ಎಂದರು.

'ಕಳೆದ ಐದು ದಶಕಗಳಲ್ಲಿ ವನ್ಯಜೀವಿಗಳ ಸಂಖ್ಯೆ ಶೇ 69ರಷ್ಟು ಕಡಿಮೆಯಾಗಿದೆ. ಈಗ ಕೇವಲ ಶೇ 31ರಷ್ಟು ವನ್ಯಜೀವಿಗಳು ಮಾತ್ರ ಉಳಿದಿವೆ. ಕೀನ್ಯಾದಲ್ಲಿ ಬರಗಾಲದಿಂದ ಈ ವರ್ಷ 200 ಆನೆಗಳು ಸಾವಿಗೀಡಾಗಿವೆ. ಮನುಷ್ಯನ ದುರಾಸೆಯಿಂದ ಸಮಸ್ಯೆಗಳು ಸೃಷ್ಟಿಯಾಗಿದ್ದು, ವನ್ಯಜೀವಿಗಳ ಬದುಕಿಗೂ ಮಾರಕವಾಗಿವೆ' ಎಂದು ಆತಂಕ ವ್ಯಕ್ತಪಡಿಸಿದರು.

ಖ್ಯಾತ ವೈದ್ಯ ಡಾ. ಅಜೀತ್ ಕೆ. ಹುಯಿಲಗೋಳ ಮಾತನಾಡಿ, 'ತಂತ್ರಜ್ಞಾನ ನಮ್ಮ ಜೀವನಶೈಲಿ ಬದಲಾಯಿಸಿದೆ. ಛಾಯಾಗ್ರಹಣ ಕ್ಷೇತ್ರದಲ್ಲೂ ಇದರಿಂದ ಬದಲಾವಣೆಗಳಾಗಿವೆ. ಆದರೂ ಬೆಳಕನ್ನು ಯಾವ ರೀತಿ ಬಳಸಿಕೊಳ್ಳಲಾಗುತ್ತದೆ ಎನ್ನುವುದೇ ಛಾಯಾಗ್ರಹಣದಲ್ಲಿ ಇಂದಿಗೂ ಮಹತ್ವ ಪಡೆದಿದೆ. ಜತೆಗೆ ವಸ್ತುವಿನ ಹಿಂದಿರುವ ಸನ್ನಿವೇಶವೂ ಮುಖ್ಯವಾಗುತ್ತದೆ' ಎಂದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಬಿ. ಶ್ರೀನಿವಾಸ್ ಇದ್ದರು.



ನಗರದ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಗುರುವಾರ ವನ್ಯಜೀವಿ ಛಾಯಾಗ್ರಾಹಕ ಸೂರ್ಯಪ್ರಕಾಶ್ ಕೆ.ಎಸ್. ಅವರ ಛಾಯಾಚಿತ್ರಗಳ ಪ್ರದರ್ಶನವನ್ನು ವಿದ್ಯಾರ್ಥಿಗಳು ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

ನ.24ರಿಂದ ಅಂತರರಾಷ್ಟ್ರೀಯ ಅಗರಬತ್ತಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತ ಅಗರಬತ್ತಿ ಉತ್ಪಾದಕರ ಸಂಘದ (ಎಐಎಎಂಎ) ವತಿಯಿಂದ ತ್ರಿಪುರ ವಾಸಿನಿ ಅರಮನೆ ಮೈದಾನದಲ್ಲಿ ನ.24ರಿಂದ 26ರವರೆಗೆ ಅಂತರರಾಷ್ಟ್ರೀಯ ಅಗರಬತ್ತಿ ಪ್ರದರ್ಶನ ಆಯೋಜಿಸಲಾಗಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಅರ್ಜುನ್ ರಂಗ, 'ಪ್ರಸಕ್ತ ವ್ಯಾವಹಾರಿಕ ವಾತಾವರಣದ ಜೊತೆಗೆ ಸಂಪೂರ್ಣ ಅಗರಬತ್ತಿ ಸಮುದಾಯದ ವೇಗವನ್ನು ಹೆಚ್ಚಿಸಲು ಮತ್ತು ಭವಿಷ್ಯದ ಅವಕಾಶಗಳ ಕುರಿತು ತಿಳಿಸಲು ಈ ಪ್ರದರ್ಶನ ಸಹಕಾರಿಯಾಗಲಿದೆ. ಇದರಲ್ಲಿ ಪೂರೈಕೆದಾರರು ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸುವುದರ ಜೊತೆಗೆ ಉದ್ಯಮಕ್ಕೆ ಸಂಬಂಧಿಸಿದಂತೆ ಅನೇಕ ವಿಚಾರಸಂಕಿರಣಗಳನ್ನು ಹಮ್ಮಿಕೊಳ್ಳಲಾಗಿದೆ' ಎಂದು ಹೇಳಿದರು.

'ಈ ಪ್ರದರ್ಶನದಲ್ಲಿ 175 ಪ್ರದರ್ಶಕರು ಭಾಗವಹಿಸಲಿದ್ದಾರೆ. ಮಾರುಕಟ್ಟೆ, ಕಚ್ಚಾ ವಸ್ತುಗಳ ಸಂಗ್ರಹದ ಮೂಲ, ನೂತನ ಸುಗಂಧಗಳ ಕುರಿತು ಸಂಶೋಧನೆ, ಪ್ಯಾಕೇಜಿಂಗ್, ಮಹಿಳಾ ಸಬಲೀಕರಣ ಮತ್ತು ರಫ್ತು ಅವಕಾಶಗಳ ಕುರಿತು ತಜ್ಞರು ಮಾಹಿತಿ ನೀಡಲಿದ್ದಾರೆ. ಛಾಯಾಚಿತ್ರಗಳ ಪ್ರದರ್ಶನ, ಅಗರಬತ್ತಿ ಮಾದರಿಗಳು ಮತ್ತು ಆಸಕ್ತಿಕರ ವಸ್ತುಗಳ ಪ್ರದರ್ಶನದಲ್ಲಿವೆ. ಈ ಕಾರ್ಯಕ್ರಮದ ಸ್ಮರಣೆಗಾಗಿ ಅಂಚೆ ಇಲಾಖೆಯ ಮೂಲಕ 12 ವಿಶಿಷ್ಟ ಪೋಸ್ಟ್ ಕಾರ್ಡ್‌ಗಳನ್ನು ಬಿಡುಗಡೆ ಮಾಡಲಾಗುವುದು' ಎಂದರು.

'ಈ ಉದ್ಯಮದಲ್ಲಿ ಸುಮಾರು 5 ಲಕ್ಷ ಕುಟುಂಬಗಳಿದ್ದು, ಇದರಲ್ಲಿ 3 ಲಕ್ಷಕ್ಕೂ ಹೆಚ್ಚು ಮಹಿಳೆಯರಿದ್ದಾರೆ' ಎಂದು ಸಂಘದ ಮಾಜಿ ಅಧ್ಯಕ್ಷ ಶರತಬಾಬು ಪಿ.ಎಸ್. ಅವರು ತಿಳಿಸಿದರು.

ಸಂಘದ ಮಾಜಿ ಅಧ್ಯಕ್ಷ ಸಪ್ತಗಿರಿ ಎಸ್. ಬೊಗ್ಗಾರಾಮ್, ಉಪಾಧ್ಯಕ್ಷ ವಿಜಯ್ ಎಸ್.ಜಿ., ಇದ್ದರು.

ಹಿಂದೂ ಪದ: ಜಾರಕಿಹೊಳಿ ಹೇಳಿಕೆಗೆ ದಸಂಸ ಸಹಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದೂ' ಪದದ ಬಗ್ಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ನೀಡಿರುವ ಹೇಳಿಕೆಗೆ ನಮ್ಮ ಸಹಮತ ಇದೆ. ಈ ಬಗ್ಗೆ ಸರ್ಕಾರ ಸಂಶೋಧನೆ ಮಾಡಿಸಲಿ' ಎಂದು ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿ ಪ್ರತಿಪಾದಿಸಿದೆ.

ದಲಿತರ ಸಾಂಸ್ಕೃತಿಕ ಪ್ರತಿರೋಧ ಸಮಾವೇಶದದ ಬಗ್ಗೆ ನಡೆಸಿದ ಸುದ್ದಿಗೋಷ್ಠಿಯಲ್ಲಿ ಈ ವಿಷಯಕ್ಕೆ ಪ್ರತಿಕ್ರಿಯಿಸಿದ ದಲಿತ ಮುಖಂಡ ಇಂದೂಧರ ಹೊನ್ನಾಪುರ, 'ಹಿಂದೂ ಎಂಬುದು ಧರ್ಮವಲ್ಲ, ಜೀವನ ಕ್ರಮ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಪ್ರಧಾನ ಮಂತ್ರಿಯೂ ಹೇಳಿದ್ದಾರೆ. ಚಾತುರ್ವರ್ಣದ ವೈದಿಕ ಧರ್ಮವನ್ನು ಇಡೀ ಭಾರತೀಯರ ಮೇಲೆ ಹೇರುವ ಪ್ರಯತ್ನ ಆಗುತ್ತಿದೆ. ರಾಮಾಯಣ, ಭಗವದ್ಗೀತೆಗಳಲ್ಲಿ ಹಿಂದೂ ಪದ ಬಳಕೆ ಇರುವುದು ನಮಗಂತೂ ಗೊತ್ತಿಲ್ಲ. ಈ ಪದ ಎಲ್ಲಿಂದ ಬಂತು ಎಂಬುದರ ಬಗ್ಗೆ ವೈಜ್ಞಾನಿಕ ಸಂಶೋಧನೆ ಆಗಲಿ' ಎಂದರು.

'ಜಾರಕಿಹೊಳಿ ಅವರ ಹೇಳಿಕೆಯಲ್ಲಿ ವಿವಾದ ಮಾಡುವಂತಹದ್ದು ಏನೂ ಇಲ್ಲ. ರಾಜಕೀಯ ಒತ್ತಡಗಳಿಗೆ ಮಣಿದು ಅವರು ತಮ್ಮ ಹೇಳಿಕೆ ಹಿಂಪಡೆದಿರಬಹುದು. ಆದರೆ, ಅವರು ಎತ್ತಿರುವ ಪ್ರಶ್ನೆ ಸರಿಯಾಗಿದೆ' ಎಂದರು.

'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಹೆಚ್ಚಳ ವಿಷಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ದಲಿತರ ಕಣ್ಣೊರೆಸುವ ತಂತ್ರ ಮಾಡಿದ್ದಾರೆ. ಇದಕ್ಕೆ ದಲಿತ ಸಮುದಾಯದವರು ಮರುಳಾಗಬಾರದು' ಎಂದು ಮಾವಳ್ಳಿ ಶಂಕರ್ ಹೇಳಿದರು.

'ಮಂಡಲ ವರದಿ ವಿರುದ್ಧ ಕಮಂಡಲ ಹಿಡಿದು ಹೋರಾಟ ನಡೆಸಿದವರಿಗೆ ಈಗ ಶೇ 10ರಷ್ಟು ಮೀಸಲಾತಿ ನೀಡಲಾಗಿದೆ. ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾದ ತೀರ್ಮಾನವನ್ನು ಸುಪ್ರೀಂ ಕೋರ್ಟ್ ಕೈಗೊಂಡಿದೆ. ಶೇ 4ರಷ್ಟು ಜನಸಂಖ್ಯೆ ಇರುವ ಸಮುದಾಯಕ್ಕೆ ಶೇ 10ರಷ್ಟು ಮೀಸಲಾತಿ ನೀಡುವ ನಿರ್ಧಾರದಲ್ಲಿ ಯಾವ ನ್ಯಾಯವಿದೆ' ಎಂದರು.

'ಎಸ್‌ಸಿಎಸ್‌ಟಿ ಮೀಸಲಾತಿ ಹೆಚ್ಚಳ ನಿರ್ಧಾರವನ್ನು ಸರ್ಕಾರ ಸ್ವಯಂ ಪ್ರೇರಣೆಯಿಂದ ಕೈಗೊಳ್ಳಲಿಲ್ಲ. ಹೋರಾಟಕ್ಕೆ ಮಣಿದು ಒಪ್ಪಿಕೊಂಡಿದೆ. ಸುಗ್ರೀವಾಜ್ಞೆಯಿಂದ ಮೀಸಲಾತಿ ಸಾಧ್ಯವಿಲ್ಲ ಎಂಬ ಅರಿವು ನಮಗಿದೆ. ಹೋರಾಟ ನಿಂತಿಲ್ಲ, ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ. ಸರ್ಕಾರದ ನಡೆಗಳನ್ನು ನೋಡಿಕೊಂಡು ಮತ್ತೆ ಮುಂದುವರಿಯಲಿದೆ' ಎಂದು ಅನಂತ ನಾಯಕ್ ಹೇಳಿದರು.

'ಈ ಎಲ್ಲಾ ಸವಾಲುಗಳನ್ನು ಮುಂದಿಟ್ಟುಕೊಂಡು ದಲಿತರು ಒಮ್ಮತದಿಂದ ಹೋರಾಟ ನಡೆಸಬೇಕಾಗಿದೆ. ಈ ದಿಸೆಯಲ್ಲಿಯೇ ದಲಿತರ ಸಾಂಸ್ಕೃತಿಕ ಪ್ರತಿರೋಧವನ್ನು ಡಿ.6ರಂದು ನಡೆಸಲಾಗುತ್ತಿದೆ. ಸಮಾವೇಶದ ರೂಪುರೇಷೆಗಳನ್ನು ಸಿದ್ಧಪಡಿಸಲಾಗುತ್ತಿದೆ' ಎಂದು ಗುರುಪ್ರಸಾದ್ ಕೆರಗೋಡು ತಿಳಿಸಿದರು.

ದಲಿತ ಮುಖಂಡರಾದ ವಿ.ನಾಗರಾಜ್, ಎನ್.ಮುನಿಸ್ವಾಮಿ, ಬಿ.ನಾಗರಾಜ್, ಅರ್ಜುನ್ ಭದ್ರೆ, ಅಣ್ಣಯ್ಯ, ಎಂ.ಸೋಮಶೇಖರ್. ಎಸ್. ಆರ್.ಕೊಲ್ಲೂರು ಇದ್ದರು.

ಬಹಿರಂಗ ಚರ್ಚೆಗೆ ಆಹ್ವಾನ

ಬೆಂಗಳೂರು: ಸತೀಶ ಜಾರಕಿಹೊಳಿ ಅವರು ಹಿಂದೂ ಪದದ ಕುರಿತು ಹೇಳಿಕೆಯನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ (ರಾಜ್ಯ ಸಮಿತಿ ಸಂಘಟನೆಗಳ ಸಮನ್ವಯ ಸಮಿತಿ) ಸ್ವಾಗತಿಸಿದೆ. ಅವರ ಹೇಳಿಕೆಯನ್ನು ಬೆಂಬಲಿಸಿ ಬಹಿರಂಗ ಚರ್ಚೆಗೆ ಆಹ್ವಾನ ನೀಡಿದೆ.

'ಸತೀಶ ಜಾರಕಿಹೊಳಿ ಅವರು ಯಾವುದೇ ಜಾತಿ ಮತ್ತು ಧರ್ಮವನ್ನು ನಿಂದಿಸಿಲ್ಲ. ಅವರು ನೀಡಿರುವ ಹೇಳಿಕೆಯನ್ನು ಗಮನಿಸಬೇಕು' ಎಂದು ದಸಂಸ ರಾಜ್ಯ ಸಂಚಾಲಕ ಬಸವರಾಜ್ ಕೌತಾಲ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಸಮರ್ಥಿಸಿಕೊಂಡರು.

'ಹಿಂದುತ್ವದ ಹೆಸರಿನಲ್ಲಿ ಸಾವಿರಾರೂ ವರ್ಷಗಳಿಂದ ದಲಿತ ರನ್ನು, ಆದಿವಾಸಿಗಳನ್ನು ಮತ್ತು ಮಹಿಳೆ ಯರನ್ನು ವಂಚಿಸುತ್ತಲೇ ಬಂದಿದ್ದಾರೆ. ಹಿಂದೂ ಎಂದರೆ ನಾವೆಲ್ಲ ಒಂದು ಎಂದು ಹೇಳಿ ದೊಡ್ಡ ಸಮುದಾಯಗಳನ್ನು ಜಾತಿಯ ಹೆಸರಿನಲ್ಲಿ ಹಲ್ಲೆ, ಕೊಲೆ, ಅತ್ಯಾಚಾರ ಮತ್ತು ಸಾಮಾಜಿಕ ಬಹಿಷ್ಕಾರ ಹಾಕುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆರ್‌ಪಿಐ ರಾಜ್ಯಾಧ್ಯಕ್ಷ ಆರ್. ಮೋಹನ್‌ರಾಜ್ ಮಾತನಾಡಿ, 'ಬಿಜೆಪಿ ತನ್ನ ಇಚ್ಛಾಶಕ್ತಿಯನ್ನು ಪೂರೈಸಿಕೊಳ್ಳಲು ಈ ವಿಚಾರದಲ್ಲಿ ರಾಜಕೀಯ ಮಾಡುತ್ತಿರುವುದು ಖಂಡನೀಯ. ಸತೀಶ ಜಾರಕಿಹೊಳಿ ಅವರ ಪರವಾಗಿ ಕಾಂಗ್ರೆಸ್ ಪಕ್ಷ ಇರಬೇಕಾಗಿತ್ತು. ರಾಜ ಕೀಯ ದುರದ್ದೇಶದಿಂದ ಆ ಪಕ್ಷವೂ ಹೇಳಿಕೆಯನ್ನು ಖಂಡಿಸಿದೆ' ಎಂದರು.

'ಮಿಸ್ ಮಹಾಲಕ್ಷ್ಮಿ' ರ‍್ಯಾಂಪ್‌ವಾಕ್ 13ಕ್ಕೆ

ಬೆಂಗಳೂರು: 'ಅವರ ಹೆಜ್ಜೆ' ಸಂಸ್ಥೆಯ ವತಿಯಿಂದ ಮಹಾಲಕ್ಷ್ಮಿ ಲೇಔಟ್‌ನ ಗೆಳೆಯರ ಬಳಗದಲ್ಲಿರುವ ಡಾ.ರಾಜ್‌ಕುಮಾರ್ ಒಳಾಂಗಣ ಕ್ರೀಡಾಂಗಣದಲ್ಲಿ ನ.13ರಂದು 'ಕನ್ನಡತಿ ಉತ್ಸವ–2022ರ ಅಂಗವಾಗಿ ಮಿಸ್ ಮಹಾಲಕ್ಷ್ಮಿ ಒಂದು ವಿನೂತನ ರ‍್ಯಾಂಪ್‌ವಾಕ್' ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

'ಫ್ಯಾಷನ್ ಶೋ ವಿಭಾಗದಲ್ಲಿ ಮಹಿಳೆಯರು ಮತ್ತು ಹೆಣ್ಣುಮಕ್ಕಳು ತಮ್ಮ ಕನಸು, ಕಲೆ, ಉಡುಗೆ–ತೊಡುಗೆ, ವೇಷ–ಭೂಷಣಗಳ ಮೂಲಕ ವೇದಿಕೆಯ ಮೇಲೆ ಪ್ರದರ್ಶನ ನೀಡಲಿದ್ದಾರೆ' ಎಂದು ಸಂಸ್ಥೆಯ ಸಂಸ್ಥಾಪಕಿ ಶಾಂತಲಾ ದಾಮ್ಲೆ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'7 ವರ್ಷದ ಮಗುವಿನಿಂದ 70 ವರ್ಷದ ಹಿರಿಯ ಮಹಿಳೆಯರು ನೋಂದಣಿ ಮಾಡಿಸಿಕೊಂಡಿದ್ದಾರೆ. ವೈದ್ಯಕೀಯ, ಕೇಶ ವಿನ್ಯಾಸ, ಬಾಹ್ಯಾಕಾಶ ವಿಜ್ಞಾನ, ವನ್ಯಜೀವಿ ಛಾಯಾಗ್ರಹಣ, ಸಮಾಜ ಸೇವೆ, ಕಸೂತಿ, ಶಿಕ್ಷಣ, ಫ್ಯಾಷನ್ ಡಿಸೈನಿಂಗ್, ಮಾಡೆಲಿಂಗ್, ಜಿಮ್, ಯೋಗ, ಸಾಹಿತ್ಯ, ಗಾಯನ, ಭರತನಾಟ್ಯ, ಕಥಕ್, ಯಕ್ಷಗಾನ, ಚಿತ್ರಕಲೆ, ನಾಟಕ, ಆಭರಣ ವಿನ್ಯಾಸ, ಆಪ್ತ ಸಮಾಲೋಚನೆ ಮುಂತಾದ ಕ್ಷೇತ್ರಗಳನ್ನು ಪ್ರತಿನಿಧಿಸುವ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ' ಎಂದು ಮಾಹಿತಿ ನೀಡಿದರು. ಕಾರ್ಯಕ್ರಮದ ನಿರ್ದೇಶಕಿ ದೀಪಾ ಇದ್ದರು.



ನಗರದಲ್ಲಿ ಗುರುವಾರ ನಡೆದ ಸೇಂಟ್ ಜೋಸೆಫ್ಸ್ ಇಂಡಿಯನ್ ಪ್ರೈಮರಿ ಶಾಲೆಯ ವಾರ್ಷಿಕ ಕ್ರೀಡಾಕೂಟವನ್ನು ಅಂತರರಾಷ್ಟ್ರೀಯ ಈಜುಪಟು ಮಧುಕುಮಾರ್ ಬಿ.ಎಂ. ಉದ್ಘಾಟಿಸಿದರು. ಶಾಲೆಯ ಮುಖ್ಯಸ್ಥರಾದ ಫಾ. ಜೋಸೆಫ್ ಡಿ'ಸೋಜಾ, ಮುಖ್ಯೋಪಾಧ್ಯಾಯಿನಿ ಸಿಸ್ಟರ್ ಜೈನ್ ಬೆನಿಟ ಮತ್ತಿತರರು ಹಾಜರಿದ್ದರು.

ಸಂತ ಜೋಸೆಫರ ಶಾಲೆ: ವಾರ್ಷಿಕ ಕ್ರೀಡಾಕೂಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿಠ್ಠಲ ಮಲ್ಯ ರಸ್ತೆಯಲ್ಲಿರುವ ಸೇಂಟ್ ಜೋಸೆಫ್ಸ್ ಇಂಡಿಯನ್ ಪ್ರೈಮರಿ ಶಾಲೆಯ ವಾರ್ಷಿಕ ಕ್ರೀಡಾಕೂಟವು ಗುರುವಾರ ನಡೆಯಿತು.

ಕ್ರೀಡಾಕೂಟವನ್ನು ಶಾಲೆಯ ಹಳೆಯ ವಿದ್ಯಾರ್ಥಿ ಹಾಗೂ ಅಂತರರಾಷ್ಟ್ರೀಯ ಈಜುಪಟು ಮಧುಕುಮಾರ್ ಬಿ.ಎಂ. ಉದ್ಘಾಟಿಸಿದರು. ಶಾಲೆಯ ಮುಖ್ಯಸ್ಥರಾದ ಫಾ. ಜೋಸೆಫ್ ಡಿ'ಸೋಜಾ, ಮುಖ್ಯೋಪಾಧ್ಯಾಯಿನಿ ಸಿಸ್ಟರ್ ಜೈನ್ ಬೆನಿಟ ಅವರ ನೇತೃತ್ವದಲ್ಲಿ ಕ್ರೀಡಾಕೂಟ ಆರಂಭವಾಯಿತು. ಶಾಲೆಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ವಾರ್ಷಿಕ ಕ್ರೀಡಾಕೂಟದಲ್ಲಿ ಬಾಲಕಿಯರು ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಶಾಲಾ ಮಕ್ಕಳು ವಿವಿಧ ರೀತಿಯ ಚಟುವಟಿಕೆಗಳನ್ನು ಕ್ರೀಡಾಕೂಟದಲ್ಲಿ ಪ್ರಸ್ತುತ ಪಡಿಸಿದರು.

ಶಾಲೆಯ ಹಳೆಯ ವಿದ್ಯಾರ್ಥಿ, ಏಕಲವ್ಯ ಪ್ರಶಸ್ತಿ ಪುರಸ್ಕೃತ ಹಾಗೂ ಅಂತರರಾಷ್ಟ್ರೀಯ ಹಾಕಿ ಕ್ರೀಡಾಪಟು ಪಿ.ಎಲ್. ತಿಮ್ಮಣ್ಣ ಅವರು ವಾರ್ಷಿಕ ಕ್ರೀಡಾಕೂಟದ ಮುಕ್ತಾಯ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

'ಅಂಬೇಡ್ಕರ್ ಭಾವಚಿತ್ರಕ್ಕೆ ಅವಮಾನ'

ಬೆಂಗಳೂರು: ಸಂವಿಧಾನ ಶಿಲ್ಪಿ ಡಾ.ಬಿ. ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಮತ್ತು ಕುಲಸಚಿವರು ಅವಮಾನ ಮಾಡಿದ್ದಾರೆ ಎಂದು ಪ್ರಜಾಸತ್ತಾತ್ಮಕ ದಲಿತ ವಿದ್ಯಾರ್ಥಿ ಒಕ್ಕೂಟ ಆರೋಪಿಸಿದೆ.

ಈ ಬಗ್ಗೆ ಹಲಸೂರು ಗೇಟ್ ಪೊಲೀಸ್ ಠಾಣೆಗೆ ದೂರು ನೀಡಿರುವ ಒಕ್ಕೂಟ, ಇವರ ವಿರುದ್ಧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಬೇಕು ಎಂದು ಅವರು ಒತ್ತಾಯಿಸಿದೆ.

ಸೆಂಟ್ರಲ್ ಕಾಲೇಜು ಆವರಣದ ಆಡಳಿತ ಕಚೇರಿಯ ರಾಜಾಜಿ ಹಾಲ್‌ನ ಮೂಲೆಯಲ್ಲಿ ಅನುಪಯುಕ್ತ ವಸ್ತುಗಳಿರುವ ಜಾಗದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರವನ್ನು ಸಹ ಎಸೆಯಲಾಗಿದೆ ಎಂದು ಒಕ್ಕೂಟದ ಪ್ರಧಾನ ಸಂಚಾಲಕ ವೇಣುಗೋಪಾಲ್ ಮೌರ್ಯ ಅವರು ದೂರಿದ್ದಾರೆ.

'ಕಬ್ಬು ಉತ್ಪನ್ನದ ಲಾಭಾಂಶ: ಅಧ್ಯಯನಕ್ಕೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಕ್ಕರೆ ಕಾರ್ಖಾನೆಗಳಿಗೆ ಎಥನಾಲ್ ಸೇರಿದಂತೆ ಕಬ್ಬಿನ ಉಪ ಉತ್ಪನ್ನಗಳಿಂದ ಬರುವ ಲಾಭಾಂಶವನ್ನು ರೈತರಿಗೆ ಹಂಚುವ ಸಂಬಂಧ ಅಧ್ಯಯನ ನಡೆಸಿ ವರದಿ ನೀಡಲು ತಾಂತ್ರಿಕ ಪರಿಣಿತರ ಸಮಿತಿ ರಚಿಸಲು ನಿರ್ಧರಿಸಲಾಗಿದೆ' ಎಂದು ಸಕ್ಕರೆ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ತಿಳಿಸಿದರು.

ಕಬ್ಬು ನಿಯಂತ್ರಣ ಮಂಡಳಿ ಸದಸ್ಯರು, ಸಕ್ಕರೆ ಕಾರ್ಖಾನೆ ಮಾಲೀಕರ ಜೊತೆ ಗುರುವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯದ ಆಯುಕ್ತರ ನೇತೃತ್ವದಲ್ಲಿ ಐವರು ಸದಸ್ಯರ ಸಮಿತಿ ರಚಿಸಲಾಗುವುದು. ಈ ಸಮಿತಿ 10 ದಿನಗಳಲ್ಲಿ ವರದಿ ನೀಡಲಿದ್ದು, ಬಳಿಕ ಕಬ್ಬು ಬೆಳೆಗಾರರಿಗೆ ಪೂರಕವಾದ ತೀರ್ಮಾನವನ್ನು ಮುಖ್ಯಮಂತ್ರಿ ಪ್ರಕಟಿಸಲಿದ್ದಾರೆ' ಎಂದರು.

'ಎಲ್ಲ ರೈತರ 2020-21ನೇ ಸಾಲಿನ ಕಬ್ಬು ಬಾಕಿ ಬಿಲ್ ಶೇ 100ರಷ್ಟು ಪಾವತಿ ಆಗಿದೆ. ಕಬ್ಬು ರೈತರ ಸಮಸ್ಯೆಗಳಿಗೆ ಸ್ಪಂದಿಸಲು ಸಹಾಯವಾಣಿ ಆರಂಭಿಸಲಾಗಿದೆ. 72 ಕಾರ್ಖಾನೆಗಳ ಪೈಕಿ ಐದು ಕಾರ್ಖಾನೆಗಳು ಇನ್ನೂ ಕ್ರಷಿಂಗ್ ಆರಂಭಿಸಿಲ್ಲ. ಈ ಬಗ್ಗೆ ಸೂಚನೆ ನೀಡಲಾಗಿದೆ' ಎಂದರು.

ಸಭೆಯಲ್ಲಿ ಮಾತನಾಡಿದ ಕುರುಬೂರು ಶಾಂತಕುಮಾರ್, 'ರಾಜ್ಯದ ಕಬ್ಬು ಬೆಳೆಗಾರರು ಜಿಲ್ಲಾಧಿಕಾರಿಗಳ ಕಚೇರಿ ಮುಂದೆ 10 ದಿನಗಳಿಂದ ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ. ಕಬ್ಬಿನ ಉತ್ಪಾದನಾ ವೆಚ್ಚ ಶೇ 20ರಷ್ಟು ಏರಿಕೆಯಾಗಿದೆ. ಕೇಂದ್ರ ಸರ್ಕಾರ ನಿಗದಿ ಮಾಡಿರುವ ಎಫ್‌ಆರ್‌ಪಿ ಬೆಲೆ, ಇಳುವರಿ ಆಧಾರದಲ್ಲಿ ಪರಿಗಣಿಸುವ ಕಾರಣ ರೈತರಿಗೆ ಕಳೆದ ವರ್ಷಕ್ಕಿಂತ ಪ್ರತಿ ಟನ್‌ಗೆ ಸರಾಸರಿ ₹ 50ರಷ್ಟು ಕಡಿಮೆ ಹಣ ಸಿಗುತ್ತಿದೆ. ಈ ಅನ್ಯಾಯ ಸರಿಪಡಿಸಬೇಕು' ಎಂದು ಆಗ್ರಹಿಸಿದರು.

'ಕಳೆದ ವರ್ಷಕ್ಕಿಂತ ಈ ವರ್ಷ ಕಬ್ಬು ಕಟಾವು, ಸಾಗಣೆ ವೆಚ್ಚ ಹೆಚ್ಚಳವಾದ ಕಾರಣ ಉಪ ಉತ್ಪನ್ನಗಳ ಲಾಭಾಂಶ ಸೇರಿಸಿ ಹೆಚ್ಚುವರಿ ರಾಜ್ಯ ಸಲಹಾ ಬೆಲೆ ನಿಗದಿಪಡಿಸಬೇಕು. ಕಬ್ಬಿನ ಕಟಾವು ವಿಳಂಬ ಮಾಡುವ ಕಾರ್ಖಾನೆಗಳು ಕಟಾವಿನ ವಿಳಂಬದ ಅವಧಿಗೆ ಶೇ 15ರಷ್ಟು ಹೆಚ್ಚುವರಿ ಬಡ್ಡಿ ಸೇರಿಸಿ ಕೊಡಬೇಕು. ಇದರಿಂದ ರೈತರಿಗೆ ತೂಕದಲ್ಲಿ, ಇಳುವರಿಯಲ್ಲಿ, ಸಾಲದ ಬಡ್ಡಿ ಪಾವತಿಯಲ್ಲಿ ಆಗುವ ನಷ್ಟ ತಪ್ಪಲಿದೆ' ಎಂದು ಅವರು ಹೇಳಿದರು

ಪ್ರಧಾನಿ ಭೇಟಿ: ಸಂಚಾರಕ್ಕೆ ಬದಲಿ ಮಾರ್ಗ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ನ. 11ರಂದು ನಗರಕ್ಕೆ ಬರಲಿದ್ದು, ಅವರ ಸಂಚಾರಕ್ಕಾಗಿ ಹಲವು ರಸ್ತೆಗಳಲ್ಲಿ ಸಾರ್ವಜನಿಕರ ವಾಹನಗಳ ಓಡಾಟವನ್ನು ಬಂದ್ ಮಾಡಲಾಗಿದೆ. ಇದರಿಂದಾಗಿ ದಟ್ಟಣೆ ಉಂಟಾಗುವ ಸಾಧ್ಯತೆ ಇದ್ದು, ಬದಲಿ ಮಾರ್ಗ ಬಳಸುವಂತೆ ಸಂಚಾರ ಪೊಲೀಸರು ಕೋರಿದ್ದಾರೆ.

'ಮೆಜೆಸ್ಟಿಕ್‌ನ ರೈಲು ನಿಲ್ದಾಣ, ವಿಧಾನಸೌಧ ಹಾಗೂ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಗಳಲ್ಲಿ ನಡೆಯುವ ಕಾರ್ಯಕ್ರಮ ಗಳಲ್ಲಿ ಪ್ರಧಾನಿ ಪಾಲ್ಗೊಳ್ಳಲಿದ್ದಾರೆ. ಅವರ ಸುಗಮ ಸಂಚಾರ ಹಾಗೂ ಭದ್ರತೆ ದೃಷ್ಟಿಯಿಂದ ಕೆಲ ರಸ್ತೆಗಳಲ್ಲಿ ಸಾರ್ವಜನಿಕರ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ತಿಳಿಸಿದ್ದಾರೆ.

'ಕಾರ್ಯಕ್ರಮ ನಡೆಯುವ ಸಮಯ ಆಧರಿಸಿ ರಸ್ತೆಗಳಲ್ಲಿ ಸಂಚಾರ ನಿರ್ಬಂಧಿಸಲಾಗಿದೆ. ಇದರಿಂದಾಗಿ ದಟ್ಟಣೆ ಉಂಟಾಗುವ ಸಾಧ್ಯತೆಯೂ ಇದೆ. ಸಾರ್ವಜನಿಕರು ಬದಲಿ ಮಾರ್ಗದಲ್ಲಿ ಸಂಚರಿಸಬೇಕು' ಎಂದು ಕೋರಿದ್ದಾರೆ.

ಪೊಲೀಸ್ ಬಿಗಿ ಭದ್ರತೆ: 'ಪ್ರಧಾನಿ ಸಂಚರಿಸುವ ದಾರಿಯುದ್ದಕ್ಕೂ ಹಾಗೂ ಕಾರ್ಯಕ್ರಮ ಸ್ಥಳದಲ್ಲಿ ಭದ್ರತೆ ಬಿಗಿ ಇರಲಿದೆ. 4 ಸಾವಿರಕ್ಕೂ ಹೆಚ್ಚು ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿದೆ' ಎಂದು ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಹೇಳಿದರು.

ರಸ್ತೆಗಳ ಅಕ್ಕ-ಪಕ್ಕದಲ್ಲಿ ಬ್ಯಾರಿಕೇಡ್‌ಗಳನ್ನು ನಿಲ್ಲಿಸಲಾಗಿದೆ. ಪ್ರಮುಖ ರಸ್ತೆಗಳಿಗೆ ಸಂಪರ್ಕ ಕಲ್ಪಿಸುವ ಒಳರಸ್ತೆಗಳಲ್ಲೂ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿದೆ. ಹೆಚ್ಚುವರಿ ಪೊಲೀಸ್ ಕಮಿಷನರ್, ಜಂಟಿ ಕಮಿಷನರ್, 8 ಡಿಸಿಪಿಗಳು, 13 ಎಸಿಪಿಗಳು, 50 ಇನ್‌ಸ್ಪೆಕ್ಟರ್ ಭದ್ರತೆ ಹೊಣೆ ಹೊತ್ತುಕೊಂಡಿದ್ದಾರೆ. ಕೆಎಸ್‌ಆರ್, ಸಿಎಆರ್ ಸಿಬ್ಬಂದಿಯನ್ನೂ ಭದ್ರತೆಗೆ ಬಳಸಿಕೊಳ್ಳಲಾಗುತ್ತಿದೆ.



ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ಕೆಳಸೇತುವೆ ರಸ್ತೆ ಪಕ್ಕದಲ್ಲಿ ಹಲವು ದಿನಗಳಿಂದ ಕಾಮಗಾರಿ ನಡೆಯುತ್ತಿದ್ದು, ಎಲ್ಲೆಂದರಲ್ಲಿ ಮಣ್ಣು ಸುರಿಯಲಾಗಿತ್ತು. ಪ್ರಧಾನಿ ಭೇಟಿ ಹಿನ್ನೆಲೆಯಲ್ಲಿ ಮಣ್ಣಿನ ಗುಡ್ಡೆಗಳು ಕಾಣದಂತೆ ಅಡ್ಡವಾಗಿ ಗುರುವಾರ ತಗಡುಗಳನ್ನು ನಿಲ್ಲಿಸಲಾಗಿದೆ – ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

'ವಿಮಾನ ನಿಲ್ದಾಣಕ್ಕೆ ಪರ್ಯಾಯ ರಸ್ತೆ ಬಳಸಿ'

'ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೋಗುವ ಪ್ರಯಾಣಿಕರು, ಶುಕ್ರವಾರ (ನ.11) ಬೆಳಿಗ್ಗೆ 8ರಿಂದ ಸಂಜೆ 5ರ ವರೆಗೆ ಬಳ್ಳಾರಿ ರಸ್ತೆಯ ಬದಲು ಪರ್ಯಾಯ ರಸ್ತೆ ಬಳಸಬೇಕು' ಎಂದು ಉತ್ತರ ವಿಭಾಗದ (ಸಂಚಾರ) ಡಿಸಿಪಿ ಎಸ್. ಸವಿತಾ ಕೋರಿದ್ದಾರೆ.

'ಪ್ರಧಾನಿ ಕಾರ್ಯಕ್ರಮಕ್ಕಾಗಿ ಗಣ್ಯರ ವಾಹನಗಳು ಈ ಮಾರ್ಗದಲ್ಲಿ ಸಂಚರಿಸಲಿವೆ. ಆದ್ದರಿಂದ, ಪ್ರಯಾಣಿಕರು ಪರ್ಯಾಯ ಮಾರ್ಗಗಳನ್ನು ಬಳಸಬೇಕು. ವಿಳಂಬ ತಪ್ಪಿಸಲು ಪ್ರಯಾಣಿಕರು ಹೆಣ್ಣೂರು–ಕೊತ್ತನೂರು–ಬಾಗಲೂರು–ಬೇಗೂರು ಪರ್ಯಾಯ ರಸ್ತೆ ಬಳಸಿ' ಎಂದು ಸವಿತಾ ಟ್ವೀಟ್ ಮಾಡಿದ್ದಾರೆ.



ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಹೊಸದಾಗಿ ಹಾಕಿರುವ ಡಾಂಬರ್ ರಸ್ತೆಯಲ್ಲಿ ಗುರುವಾರ ಕೆಲಸದಲ್ಲಿ ನಿರತರಾಗಿದ್ದ ಸಿಬ್ಬಂದಿ

ಸಂಚಾರ ನಿರ್ಬಂಧಿತ ಪ್ರದೇಶಗಳು

ಬೆಳಿಗ್ಗೆ 9ರಿಂದ ಮಧ್ಯಾಹ್ನ 12ರವರೆಗೆ

ಮೇಖ್ರಿ ವೃತ್ತ, ಕಾವೇರಿ ಜಂಕ್ಷನ್, ವಿಂಡ್ಸರ್ ಮ್ಯಾನರ್, ರಮಣ ಮಹರ್ಷಿ ರಸ್ತೆ, ಬಸವೇಶ್ವರ ವೃತ್ತ, ಶಾಸಕರ ಭವನ, ಉದ್ಯೋಗ ಸೌಧ (ಕೆಪಿಎಸ್‌ಸಿ ಕಚೇರಿ), ಶೇಷಾದ್ರಿ ರಸ್ತೆ, ಆನಂದರಾವ್ ವೃತ್ತ ಮೇಲ್ಸೇತುವೆ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ನಿರ್ಬಂಧ.

ಬೆಳಿಗ್ಗೆ 10.30ರಿಂದ ಮಧ್ಯಾಹ್ನ 1ರವರೆಗೆ

ಮೇಖ್ರಿ ವೃತ್ತ, ಹೆಬ್ಬಾಳ, ಎಲಿವೇಟೆಡ್ ಕಾರಿಡಾರ್

ಬದಲಿ ಮಾರ್ಗ

- ಮೈಸೂರು ಬ್ಯಾಂಕ್ ವೃತ್ತದಿಂದ ಅರಮನೆ ರಸ್ತೆಗೆ ಹೋಗುವ ವಾಹನಗಳು, ಕೆ.ಜಿ. ರಸ್ತೆ ಮೂಲಕ ಸಾಗಬಹುದು.
- ಆನಂದರಾವ್ ವೃತ್ತದ ಗಾಂಧಿ ಪ್ರತಿಮೆ ವೃತ್ತದ ಮೂಲಕ ಸಂಚರಿಸುವವರು, ರೇಸ್‌ವ್ಯೂ ವೃತ್ತ ಹಾಗೂ ಶಿವಾನಂದ ವೃತ್ತದಲ್ಲಿ ಎಡ ತಿರುವು ಪಡೆದು ನೆಹರು ವೃತ್ತದ ಮೂಲಕ ಸಾಗಬಹುದು
- ಕೆ.ಕೆ. ರಸ್ತೆ ಮೂಲಕ ವಿಂಡ್ಸರ್ ಮ್ಯಾನರ್ ವೃತ್ತಕ್ಕೆ ತೆರಳುವವರು, ಶಿವಾನಂದ ವೃತ್ತ ಹಾಗೂ ನೆಹರು ವೃತ್ತದ ಮೂಲಕ ಹೋಗಬಹುದು
- ಬಿಎಚ್‌ಇಎಲ್ ವೃತ್ತದಿಂದ ಮೇಖ್ರಿ ವೃತ್ತದ ಕಡೆಗೆ ಹೋಗುವವರು, ಸದಾಶಿವನಗರ ಪೊಲೀಸ್ ಠಾಣೆ-ಮಾರಮ್ಮ ದೇವಸ್ಥಾನ ವೃತ್ತ-ಮಾರ್ಗೋಸ್ ರಸ್ತೆ ಮೂಲಕ ಸಂಚರಿಸಬಹುದು
- ಸದಾಶಿವನಗರದ ಭಾಷ್ಯಂ ವೃತ್ತದಿಂದ ಕಾವೇರಿ ಜಂಕ್ಷನ್ ಕಡೆಗೆ ಹೋಗುವ ವಾಹನ, ಮಲ್ಲೇಶ್ವರ 18ನೇ ಕ್ರಾಸ್ - ಮಾರ್ಗೋಸಾ ರಸ್ತೆಯ ಮೂಲಕ ಸಂಚರಿಸಬಹುದು
- ಕ್ವೀನ್ಸ್ ವೃತ್ತದಿಂದ ಸಿ.ಟಿ.ಒ ಕಡೆಗೆ ಹೋಗುವ ವಾಹನಗಳು, ಸಿದ್ದಲಿಂಗಯ್ಯ ವೃತ್ತ-ಆರ್.ಆರ್.ಎಂ.ಆರ್. ರಸ್ತೆಯ ಮೂಲಕ ಸಾಗಬಹುದು
- ಬಾಳೇಕುಂದ್ರಿ ಜಂಕ್ಷನ್‌ನಿಂದ ಮೆಜೆಸ್ಟಿಕ್ ಕಡೆಗೆ ಸಂಚರಿಸುವವರು, ಕನ್ನಿಂಗ್ ಹ್ಯಾಂ ರಸ್ತೆ ಮೂಲಕ ಸಾಗಬಹುದು

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110.

ಸಂಖ್ಯೆ: ಬಿಐಎಪಿಎ/ಟಿಪಿ/ಭೂಉಬ/64/2022–23/1745 ದಿನಾಂಕ: 10–11–2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮೆ॥ ಪೃಥ್ವಿ ಎಂಟರ್ ಪ್ರೈಸಸ್ ನ ಪರವಾಗಿ ಪಾಲುದಾರರಾದ ಮೆ॥ ವಿಸ್ತಾರ ಎಸ್ಟೇಟ್ಸ್ ಪ್ರೈ.ಲಿ ನ ಪರವಾಗಿ ಆಥರೈಸ್ಡ್ ಸಿಗ್ನೇಟರಿ ಆದ ಶ್ರೀ ಪ್ರದೀಪ್ ರಾಘವೇಂದ್ರ ಗೋಪಾಡಿ ಬಿನ್ ಜಿ.ಪಿ. ರಾಘವೇಂದ್ರ	ದೇವನಹಳ್ಳಿ	ವಿಜಯಪುರ	ಕೊಂಡೇನಹಳ್ಳಿ	48/2	2–30	ವ್ಯವಸಾಯ	ವಸತಿ
2		ದೇವನಹಳ್ಳಿ	ವಿಜಯಪುರ	ಕೊಂಡೇನಹಳ್ಳಿ	49/2	2–27 & 0–03 'ಎ' ಖರಾಬು	ವ್ಯವಸಾಯ	ವಸತಿ
3		ದೇವನಹಳ್ಳಿ	ವಿಜಯಪುರ	ಕೊಂಡೇನಹಳ್ಳಿ	51	5–00 & 0–10 'ಎ' ಖರಾಬು	ವ್ಯವಸಾಯ	ವಸತಿ
4	ಶ್ರೀ ಸಂಜೀವ್ .ಪಿ ಬಿನ್ ಪ್ರಕಾಶಚಂದ್ರ & ಶ್ರೀ ಸೂರಜ್ ಪಿ. ಬಿನ್ ಪ್ರಕಾಶಚಂದ್ರ	ದೇವನಹಳ್ಳಿ	ವಿಜಯಪುರ	ಕೊಂಡೇನಹಳ್ಳಿ	50	5–07 & 0–10 'ಎ' ಖರಾಬು	ವ್ಯವಸಾಯ	ವಸತಿ
5	ಮೆ॥ ಪೃಥ್ವಿ ಎಂಟರ್ ಪ್ರೈಸಸ್ ನ ಪರವಾಗಿ ಪಾಲುದಾರರಾದ ಮೆ॥ ವಿಸ್ತಾರ ಎಸ್ಟೇಟ್ಸ್ ಪ್ರೈ.ಲಿ ನ ಪರವಾಗಿ ಆಥರೈಸ್ಡ್ ಸಿಗ್ನೇಟರಿ ಆದ ಶ್ರೀ ಪ್ರದೀಪ್ ರಾಘವೇಂದ್ರ ಗೋಪಾಡಿ ಬಿನ್ ಜಿ.ಪಿ. ರಾಘವೇಂದ್ರ	ದೇವನಹಳ್ಳಿ	ವಿಜಯಪುರ	ದಂಡಿಗಾನಹಳ್ಳಿ	154	2–00	ವ್ಯವಸಾಯ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಉದ್ದೇಶಿತ ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುವುದೆಂದೂ ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶಗಳನ್ನು **'ವ್ಯವಸಾಯ ವಲಯ'** ದಿಂದ **'ವಸತಿ ವಲಯ'** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ವಾಸಾಸಂಇ/ವಾ.ಪ್ರ/3065/2022–23

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರ, ಈ ಕೆಳಕಂಡ "ಷೆಡ್ಯೂಲ್" (ಇನ್ನುಮುಂದೆ ಇದನ್ನು **"ಷೆಡ್ಯೂಲ್ ಸ್ವತ್ತು"** ಎಂದು ಕರೆಯಲ್ಪಡುವ) ಪರಿವರ್ತನೆಗೊಂಡಿರುವ ಸ್ಥಿರಾಸ್ತಿ ಸ್ವತ್ತನ್ನು ಸದರಿ ಮಾಲೀಕರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಕೆಳಕಂಡ ಷೆಡ್ಯೂಲ್‌ನಲ್ಲಿ ಜಮೀನಿನ ಸವಿವರಗಳ ಜೊತೆಗೆ ಪ್ರಸ್ತುತ ಮಾಲೀಕರುಗಳ ವಿವರಗಳು ತಿಳಿಸಲಾಗಿದೆ.

ಯಾವುದೇ ವ್ಯಕ್ತಿಗಳು, ಷೆಡ್ಯೂಲ್ ಸ್ವತ್ತಿನ ಅಥವಾ ಅದರ ಯಾವುದೇ ಭಗಾಂಶದ ಮೇಲೆ ಯಾವುದೇ ರೀತಿಯ ಹಕ್ಕು, ಹಕ್ಕುಬಾಧ್ಯತೆ, ಕ್ಲೇಮ್, ಅಡಮಾನ, ಧಾರಣೆ, ಅಥವಾ ಯಾವುದೇ ರೀತಿಯ ಹಿತಾಸಕ್ತಿಯನ್ನು ಹೊಂದಿದ್ದರೆ, ಅಥವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಮಾಲೀಕರೊಂದಿಗೆ ಯಾವುದೇ ವ್ಯವಹಾರಗಳು ಅಥವಾ ದಸ್ತಾವೇಜುಗಳು (ನೋಂದಣಿಯಾಗಿರುವ ಅಥವಾ ನೋಂದಣಿಯಾಗದಿರುವ) ಹಕ್ಕು ಪತ್ರವನ್ನು ಹೊಂದಿದ್ದರೆ, ಅದನ್ನು ತಮ್ಮ ಆಕ್ಷೇಪಣೆಗಳು ಅಥವಾ ಕ್ಲೇಮುಗಳನ್ನು ದಾಖಲೆ ಪುರಾವೆಗಳೊಡನೆ ಲಿಖಿತ ರೂಪದಲ್ಲಿ ಜೊತೆಗೆ ಯಾವುದೇ ಸ್ವರೂಪದ ಮೂಲ ದಾಖಲೆ ಪತ್ರಗಳ ಬೆಂಬಲದೊಡನೆ ಸದರಿ ನೋಟೀಸ್ ಪ್ರಕಟವಾದ **ಹದಿನೈದು (15 ದಿನಗಳು)** ಅವಧಿಯೊಳಗೆ ತಿಳಿಸಿರುವ ವಿಳಾಸಕ್ಕೆ ತಿಳಿಸತಕ್ಕದ್ದು. ಒಂದು ವೇಳೆ ಅಂತಹ ಆಕ್ಷೇಪಣೆಗಳು ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಅದರ ಭಾಗದ ಮೇಲೆ ಯಾವುದೇ ವ್ಯಕ್ತಿಗಳು ಯಾವುದೇ ಹಕ್ಕು, ಹಕ್ಕು ಬಾಧ್ಯತೆ, ಆಸಕ್ತಿ, ಕ್ಲೇಮುಗಳು, ಡಿಮ್ಯಾಂಡ್, ಧಾರಣೆ ಅಥವಾ ಹೊರೆ ಇರುವುದಿಲ್ಲವೆಂದು ಭಾವಿಸಲಾಗುವುದು ಮತ್ತು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ತಿಳಿಸಿರುವ ಮಾಲೀಕರುಗಳು ಸ್ವತ್ತಿನ ಮೇಲೆ ಹಕ್ಕು ಬಾಧ್ಯತೆ ಹೊಂದಿರುತ್ತಾರೆ ಎಂದು ನಾವು ದೃಢೀಕರಿಸುತ್ತೇವೆ.

ಷೆಡ್ಯೂಲ್

(ಷೆಡ್ಯೂಲ್ ಸ್ವತ್ತುಗಳ ವಿವರಗಳು)

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕಸಬ ಹೋಬಳಿ, ಬಿಡಲೂರು ಗ್ರಾಮದಲ್ಲಿವ ಜಮೀನಿನ ಒಟ್ಟಾರೆ ವಿಸ್ತೀರ್ಣ 25 ಎಕರೆಗಳು 36 ಗುಂಟೆಗಳು, ಕೆಳಗೆ ತಿಳಿಸಿರುವ ಸರ್ವೆ ನಂಬರುಗಳ ಸಂಬಂಧಿಸಿದಂತೆ ಪರಿವರ್ತನೆಯಾಗಿರುವ ಜಮೀನಿಗೆ ಚಕ್ಕುಬಂದಿ:

ಕ್ರಮ ಸಂಖ್ಯೆ	ಮಾಲೀಕರ ಹೆಸರು	ಸರ್ವೆ ನಂ	ವಿಸ್ತೀರ್ಣ ಎಕರೆ –ಗುಂಟೆ	ಚಕ್ಕುಬಂದಿ ಪೂರ್ವಕ್ಕೆ :	ಪಶ್ಚಿಮಕ್ಕೆ :	ಉತ್ತರಕ್ಕೆ :	ದಕ್ಷಿಣಕ್ಕೆ
1	ಸಿ. ಭೀಮ್ ರಾಜ್	113/1	2–06	ಸರ್ವೆ ನಂ.112	ಸರ್ವೆ ನಂ.114 ಮತ್ತು 115	ಸರ್ವೆ ನಂ.127	ಸರ್ವೆ ನಂ.113/2
2	ಸಿ. ಭೀಮ್ ರಾಜ್	113/2(ಪಿ)	0–28	ಸರ್ವೆ ನಂ.112	ಸರ್ವೆ ನಂ.115	ಸರ್ವೆ ನಂ.113/1	ಸರ್ವೆ ನಂ.113/2ರ ಉಳಿದ ಭಾಗ
3	ಸಿ. ಭೀಮ್ ರಾಜ್	115/1	1–32	ಸರ್ವೆ ನಂ.113/2	ಸರ್ವೆ ನಂ.116	ಸರ್ವೆ ನಂ.114 ಮತ್ತು 126	ಸರ್ವೆ ನಂ.115/2
4	ಸಿ. ಭೀಮ್ ರಾಜ್	115/2	1–34	ಸರ್ವೆ ನಂ.113/2 ಮತ್ತು 113/3	ಸರ್ವೆ ನಂ.116	ಸರ್ವೆ ನಂ.115/1	ಸರ್ವೆ ನಂ.115/3
5	ಎಂ.ಎಸ್.ಕೆ. ಹೋಲ್ಡಿಂಗ್ಸ್	114	0–22	ಸರ್ವೆ ನಂ.113/1	ಸರ್ವೆ ನಂ.126	ಸರ್ವೆ ನಂ.127	ಸರ್ವೆ ನಂ.115/1
6	ಎಂ.ಎಸ್.ಕೆ. ಹೋಲ್ಡಿಂಗ್ಸ್	117/1	3–00	ಸರ್ವೆ ನಂ.116	ಸರ್ವೆ ನಂ.119	ಸರ್ವೆ ನಂ.125	ಸರ್ವೆ ನಂ.117/2
7	ಎಂ.ಎಸ್.ಕೆ. ಹೋಲ್ಡಿಂಗ್ಸ್	117/2	3–06	ಸರ್ವೆ ನಂ.116	ಸರ್ವೆ ನಂ.119	ಸರ್ವೆ ನಂ.117/1	ಸರ್ವೆ ನಂ.117/3
8	ಎಂ.ಎಸ್.ಕೆ. ಹೋಲ್ಡಿಂಗ್ಸ್	117/3	3–00	ಸರ್ವೆ ನಂ.116	ಸರ್ವೆ ನಂ.119	ಸರ್ವೆ ನಂ.117/2	ರಸ್ತೆ ಮತ್ತು ಸರ್ವೆ ನಂ.118 ರ ಜಮೀನು
9	ಎಂ.ಎಸ್.ಕೆ. ಹೋಲ್ಡಿಂಗ್ಸ್	126	9–22	ಸರ್ವೆ ನಂ.114 ಮತ್ತು 127	ಸರ್ವೆ ನಂ.125/4	ಕೆರೆ (ಸರ್ವೆ ನಂ.144)	ಸರ್ವೆ ನಂ.115/1 ಮತ್ತು 116
10	ರೂಪೇಶ್ ಕುಮಾರ್	125/4(ಪಿ)	0–06	ಸರ್ವೆ ನಂ.125/4 ಮತ್ತು ಸರ್ವೆ ನಂ.126ರ ಉಳಿದ ಭಾಗ	ಇದೇ ಸರ್ವೆ ನಂ.125/4 ರ ಉಳಿದ ಭಾಗ	ಇದೇ ಸರ್ವೆ ನಂ.125/4 ರ ಉಳಿದ ಭಾಗ	ಸರ್ವೆ ನಂ.117/1

ಜೆರಲ್ಡ್ ಮನೋಹರನ್, ಪಾಲುದಾರರು
ಜೆ. ಸಾಗರ್ ಅಸೋಸಿಯೇಟ್ಸ್
ಲೆವೆಲ್ 3, ಪ್ರೆಸ್ಟೀಜ್ ಒಬೆಲಿಸ್ಕ್, 3, ಕಸ್ತೂರ್ಬಾ ರಸ್ತೆ, ಬೆಂಗಳೂರು–560001.
ದೂ: 080–43503600/080–43503610.
ಇಮೇಲ್– gerald@jsalaw.com

ದಿನಾಂಕ: 11/11/2022
ಸ್ಥಳ: ಬೆಂಗಳೂರು

ಕೆಂಪೇಗೌಡರ ಪ್ರತಿಮೆ ಲೋಕಾರ್ಪಣೆಗೆ ಸಿದ್ಧತೆ: ಮುಖ್ಯಮಂತ್ರಿ ಪರಿಶೀಲನೆ

‘ಪ್ರಗತಿ ಪ್ರತಿಮೆ ಅಭಿವೃದ್ಧಿಗೆ ಪ್ರೇರಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾಡಪ್ರಭು ಹೆಸರಿನಲ್ಲಿರುವ ವಿಮಾನ ನಿಲ್ದಾಣದಲ್ಲಿ 108 ಅಡಿ ಎತ್ತರದ ಪ್ರಗತಿ ಪ್ರತಿಮೆಯನ್ನು ಅಭಿವೃದ್ಧಿಗೆ ಪ್ರೇರಣೆಯಾಗುವ ದೃಷ್ಟಿಯಿಂದ ನಿರ್ಮಿಸಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಪಾದಿಸಿದರು.

ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೆಂಪೇಗೌಡರ ಕಂಚಿನ ಪ್ರತಿಮೆ ಲೋಕಾರ್ಪಣೆ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ಸಾರ್ವಜನಿಕ ಸಭಾ ವೇದಿಕೆ ಕಾರ್ಯಕ್ರಮದ ಸಿದ್ಧತೆಗಳನ್ನು ಗುರುವಾರ ಪರಿಶೀಲಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ಕೆಂಪೇಗೌಡರ ಪ್ರಗತಿ ಪ್ರತಿಮೆಯನ್ನು ರಾಮ್ ಸುತಾರಾ ನಿರ್ಮಿಸಿದ್ದಾರೆ. ಇಡೀ ಭಾರತದಲ್ಲಿಯೇ ಅವರು ಅತ್ಯಂತ ಶ್ರೇಷ್ಠ ಶಿಲ್ಪಿ. ಅಹಮದಾಬಾದ್‌ನಲ್ಲಿರುವ ವಲ್ಲಭಭಾಯಿ ಪಟೇಲ್ ಅವರ ಏಕತಾ ಮೂರ್ತಿ ಹಾಗೂ ಅಂಬೇಡ್ಕರ್ ಅವರ ಅತಿ ಎತ್ತರದ ಮೂರ್ತಿ ನಿರ್ಮಿಸಿದ ಖ್ಯಾತಿ ಅವರದ್ದಾಗಿದೆ. ಪ್ರಧಾನಮಂತ್ರಿ ಅವರು ಸುತಾರಾ ಅವರಿಗೆ ಅಭಿನಂದನೆ ಸಲ್ಲಿಸಲಿದ್ದಾರೆ. ಅವರ ಕೈಚಳಕದಿಂದ ಇಷ್ಟು ಬೃಹತ್ ಮೂರ್ತಿ ಮೈದಳೆದಿದೆ. ಸಮಸ್ತ ಕನ್ನಡ ನಾಡಿನ ಜನತೆಯ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ’ ಎಂದು ಹೇಳಿದರು.

‘ಕನಕ ಜಯಂತಿಯ ಸಂದರ್ಭದಲ್ಲಿ ಪ್ರಧಾನಮಂತ್ರಿ ಅವರು ಆಗಮಿಸುತ್ತಿರುವುದು ಯೋಗಾಯೋಗ. ಒಬ್ಬ ಹಿಂದುಳಿದ ವರ್ಗಕ್ಕೆ ಸೇರಿದ ಪ್ರಧಾನಮಂತ್ರಿ ಅವರು ಸಮಸ್ತ ಮಾನವಕುಲಕ್ಕೆ ದಾರಿದೀಪವಾಗಿರುವ ಕನಕದಾಸರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಲಿದ್ದಾರೆ. ಜತೆಗೆ, ಪಕ್ಕದಲ್ಲಿಯೇ ಇರುವ ವಾಲ್ಮೀಕಿ ಮೂರ್ತಿಗೂ ಪುಷ್ಪಾರ್ಚನೆ ಮಾಡಲಿದ್ದಾರೆ’ ಎಂದರು.

‘ಗುಂಡಿಗಳನ್ನು ಶೀಘ್ರ ಮುಚ್ಚಲಾಗುವುದು’

‘ಗುಂಡಿಗಳನ್ನು ಮುಚ್ಚುವ ಕಾರ್ಯ ನಿರಂತರವಾಗಿ ನಡೆಯುವ ಪ್ರಕ್ರಿಯೆ. 3-4 ದಿನಗಳಲ್ಲಿ ಎಲ್ಲಾ ಗುಂಡಿಗಳನ್ನು ಮುಚ್ಚಲಾಗುವುದು’ ಎಂದು ಬೊಮ್ಮಾಯಿ ತಿಳಿಸಿದರು.



ಕೆಂಪೇಗೌಡ ಪ್ರತಿಮೆ

ಮತದಾರರ ವಿಶೇಷ ನೋಂದಣಿ ಅಭಿಯಾನ ನಾಳೆ

ಬೆಂಗಳೂರು: ಮತದಾರರ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದಂತೆ ನ.12ರಂದು ಬಿಬಿಎಂಪಿ ವಿಶೇಷ ನೋಂದಣಿ ಅಭಿಯಾನವನ್ನು ಆಯೋಜಿಸಿದೆ.

ಮತದಾರರ ಕರಡು ಪಟ್ಟಿಯನ್ನು ನ.9ರಂದು ಪ್ರಕಟಿಸಲಾಗಿದ್ದು, ಮತದಾರರಿಗೆ ಮಾಹಿತಿ ಹಾಗೂ ಅಗತ್ಯ ತಿದ್ದುಪಡಿ ಮತ್ತು ಹೊಸ ನೋಂದಣಿಯನ್ನು ಈ ಅಭಿಯಾನದಲ್ಲಿ ಮಾಡಿಕೊಳ್ಳಲಾಗುತ್ತದೆ.

ಈ ಬಗ್ಗೆ ಎಲ್ಲ ಅಧಿಕಾರಿಗಳು ಸನ್ನದ್ಧರಾಗಬೇಕು ಎಂದುಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿ ಸೂಚಿಸಿದ್ದಾರೆ.

ನ.21ರಂದು ನಡೆಯುವ ವಿಶೇಷ ನೋಂದಣಿ ಅಭಿಯಾನದಲ್ಲಿ ಮತದಾರರ ನೋಂದಣಾಧಿಕಾರಿ, ಸಹಾಯಕ ಮತದಾರರ ನೋಂದಣಾಧಿಕಾರಿ, ಬಿಎಲ್‌ಒ ಮತ್ತು ಬಿಎಲ್‌ಒ ಮೇಲ್ವಿಚಾರಕರು ಹಾಜರಿರುತ್ತಾರೆ. ಮತಗಟ್ಟೆ ಮಟ್ಟದ ಅಧಿಕಾರಿಗಳು ಮತದಾರರ ಕರಡು ಪಟ್ಟಿಯೊಂದಿಗೆ ಇರುತ್ತಾರೆ ಎಂದು ಅವರು ತಿಳಿಸಿದ್ದಾರೆ.

ಮುಖ್ಯ ಚುನಾವಣಾಧಿಕಾರಿ ಸೇರಿ ಚುನಾಣಾಧಿಕಾರಿಗಳು ಮತಗಟ್ಟೆಗಳಿಗೆ ಭೇಟಿ ನೀಡಿ ಅಭಿಯಾನವನ್ನು ಪರಿಶೀಲಿಸಲಿದ್ದಾರೆ. ನ.20, ಡಿ.3, 4ರಂದೂ ಅಭಿಯಾನ ನಡೆಯಲಿದೆ ಎಂದು ಹೇಳಿದ್ದಾರೆ.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 12/2022 ದಿನಾಂಕ : 04-11-2022
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಐಟಂನ ಸರಬರಾಜಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಸಂಕ್ಷಿಪ್ತ ವಿವರಣೆ : 11 ಕೆವಿ ಎಕ್ಸ್‌ಎಲ್‌ಪಿಇ ಹೆಚ್‌ಟಿಯುಜಿ ಕೇಬಲ್‌ನ ಸರಬರಾಜು (ಪ್ರಮಾಣ : 6700 ಮೀಟರ್‌ಗಳು) (ಟೆಂಡರ್ ಸಂ. ಎಲ್8226017)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **25-11-2022 ರಂದು 14:00 ಗಂಟೆವರೆಗೆ**

ಹೆಚ್ಚಿನ ವಿವರಗಳಿಗಾಗಿ **www.ireps.gov.in** ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ಸಾಮಗ್ರಿಗಳ ವ್ಯವಸ್ಥಾಪಕರು, ಬೆಂಗಳೂರು

ಪಿಯುಬಿ/473/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23

S.W.Railways SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/103/2022 ದಿನಾಂಕ : 04-11-2022
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ರಾಜಾನುಕುಂಟೆ – ದೊಡ್ಡಬಳ್ಳಾಪುರ ನಿಲ್ದಾಣಗಳ ನಡುವೆ ಕಿ.ಮೀ. 33/600 – 700 ನಲ್ಲಿ ರಸ್ತೆ ಮೇಲ್ಸೇತುವೆ ಸಂ. 438ಬಿ ಇಲ್ಲಿ ವಾಹನಗಳ ಕೆಳಸೇತುವೆಯ ರಿಇನ್‌ಫೋರ್ಸ್ಡ್ ಸಿಮೆಂಟ್ ಕಾಂಕ್ರೀಟ್ ರೀಟೇನಿಂಗ್ ವಾಲ್‌ನ ನಿರ್ಮಾಣದಿಂದ ರೀಟೇನಿಂಗ್ ಅರ್ಥ್ ಸಂಪರ್ಕದ ಮರುನಿರ್ಮಾಣ. (ಟೆಂಡರ್ ಉಲ್ಲೇಖ ಸಂ. ಆರ್‌ಎನ್‌ಎನ್-ಡಿಬಿಯು-ಆರ್‌ಓಬಿ-483ಬಿ)	ರೂ. 10,58,83,110/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **24-11-2022 ರಂದು 15:00 ಗಂಟೆವರೆಗೆ**

ಹೆಚ್ಚಿನ ವಿವರಗಳಿಗಾಗಿ **www.ireps.gov.in** ಗೆ ಲಾಗ್‌ಆನ್ ಮಾಡಿ.

ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು / ನಿರ್ಮಾಣ ಬೆಂಗಳೂರು ದಂಡು

ಪಿಯುಬಿ/474/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23

S.W.Railways SWRRLY SWRRLY

KMF ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ.,

ಘಟಕ : ಪಶು ಆಹಾರ ಕಾರ್ಖಾನೆ, ಗುಬ್ಬಿ – 572216 ತುಮಕೂರು ಜಿಲ್ಲೆ

“ಜಾಹಿರಾತು”
ಕೆ.ಎಂ.ಎಫ್‌ನಿಂದ ಮೆಕ್ಕೇಜೋಳ ಖರೀದಿ

ಗುಬ್ಬಿ, ತುಮಕೂರು ಜಿಲ್ಲೆ:– ಪ್ರಸ್ತುತ ಮೆಕ್ಕೇಜೋಳ ಬೆಳೆದ ರೈತರಿಗೆ ನೆರವಾಗಲು ಕರ್ನಾಟಕ ಹಾಲು ಮಹಾಮಂಡಳಿ ಮುಂದೆ ಬಂದು ರೈತರಿಂದ ನೇರವಾಗಿ ನಿಗಧಿಪಡಿಸಿದ ಬೆಲೆ (ರೂ. 1962/–) ಮತ್ತು ಪ್ರತಿ ಕ್ವಿಂಟಾಲ್‌ಗೆ ಗೋಣಿಚೀಲದ ಮೊತ್ತ ಮತ್ತು ಸಾಗಾಣಿಕೆ ಪ್ರೋತ್ಸಾಹಕ ಧನವಾಗಿ ರೂ. 38/– ಸೇರಿಸಿ ಒಟ್ಟಾರೆ ರೂ. 2000/– (ರೂ. ಎರಡು ಸಾವಿರ ಮಾತ್ರ) ಪ್ರತಿ ಕ್ವಿಂಟಾಲ್‌ಗೆ ಖರೀದಿಸಲು ಆದೇಶಿಸಿದ್ದು, ಇದಕ್ಕೆ ರೈತರ ಸಹಕಾರ ಅತ್ಯವಶ್ಯಕವಾಗಿರುತ್ತದೆ. ದಿನಾಂಕ: 09.11.2022 ರಿಂದ ನೋಂದಣಿ ಪ್ರಾರಂಭವಾಗುತ್ತದೆ. ಗುಬ್ಬಿ ಪಶು ಆಹಾರ ಘಟಕಕ್ಕೆ ನಿಗಧಿಪಡಿಸಿರುವ ವ್ಯಾಪ್ತಿಯ ತುಮಕೂರು, ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲಾ ಪ್ರದೇಶಗಳಿಂದ 20,000 ಮೆ.ಟನ್ ಮೆಕ್ಕೇಜೋಳ ನಿಗಧಿಯಾಗಿದ್ದು, ಕಛೇರಿ ವೇಳೆಯಲ್ಲಿ ಅಗತ್ಯ ಮಾಹಿತಿ ಪಡೆಯಲು ದೂರವಾಣಿ ಸಂಖ್ಯೆ: 08131–222039 / 9591994340 / 9606012593 / 6366906946 / 9741452130 ಅನ್ನು ಸಂಪರ್ಕಿಸಬಹುದೆಂದು ಶ್ರೀ ಎಸ್.ಆರ್ ಮಧುಸೂದನ್, ಪ್ರಧಾನ ವ್ಯವಸ್ಥಾಪಕರು, ಪಶು ಆಹಾರ ಘಟಕ, ಗುಬ್ಬಿ ಇವರು ತಿಳಿಸಿದ್ದಾರೆ.

ಪ್ರತಿಯೊಬ್ಬ ರೈತರಿಂದ ಗರಿಷ್ಟ 500 ಕ್ವಿಂಟಾಲ್ ಮೆಕ್ಕೇಜೋಳವನ್ನು ಸರಬರಾಜು ಮಾಡಲು ಸೀಮಿತಗೊಳಿಸಿದೆ, ಕೆ.ಎಂ.ಎಫ್ ಒದಗಿಸಿರುವ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು, ಸಂಬಂಧಪಟ್ಟ ಜಿಲ್ಲೆಗಳ ರೈತರು ನೇರವಾಗಿ ಸರಬರಾಜು ಮಾಡಬೇಕು. ಮೆಕ್ಕೇಜೋಳ ಪರಿಮಾಣಕ್ಕೆ ನಿಗಧಿಪಡಿಸಿರುವ ದರದಂತೆ ಸರ್ಕಾರದ ಡಿ.ಬಿ.ಟಿ ಪೋರ್ಟಲ್ ಮೂಲಕ ಪಾವತಿ ಮಾಡಲಾಗುವುದರಿಂದ ಕಡ್ಡಾಯವಾಗಿ ಆಧಾರ್ ಸೀಡೆಡ್ ಆಗಿರುವ ಉಳಿತಾಯ ಬ್ಯಾಂಕ್ ಖಾತೆಯನ್ನು ಹೊಂದಿರಬೇಕು. “ಕ್ಷೀರಸಿರಿ” ಮತ್ತು “FRUITS” ತಂತ್ರಾಂಶದ ಮೂಲಕ, ರೈತರು “FRUITS” ಐ.ಡಿ. ಹೊಂದಿರುವವರು ನೊಂದಣಿ ಮಾಡಿಕೊಳ್ಳಬಹುದಾಗಿರುತ್ತದೆ ಎಂದು ಶ್ರೀ ಎಸ್.ಆರ್ ಮಧುಸೂದನ್, ಪ್ರಧಾನ ವ್ಯವಸ್ಥಾಪಕರು, ಪಶು ಆಹಾರ ಘಟಕ, ಗುಬ್ಬಿ ಇವರು ತಿಳಿಸಿದ್ದಾರೆ.

ಪ್ರಧಾನ ವ್ಯವಸ್ಥಾಪಕರು
ಪಶು ಆಹಾರ ಕಾರ್ಖಾನೆ, ಗುಬ್ಬಿ



ಆಮ್ ಆದ್ಮಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ತಾಂತ್ರಿಕ ದೋಷ ಸರಿಪಡಿಸಿದ ಬೆಸ್ಕಾಂ

ಬೆಂಗಳೂರು: ಬಿಲ್ ಪಾವತಿಸುವಲ್ಲಿ ತಲೆದೋರಿದ್ದ ತಾಂತ್ರಿಕ ಸಮಸ್ಯೆಯನ್ನು ಬೆಸ್ಕಾಂ ಸರಿಪಡಿಸಿದೆ.

ಇತ್ತೀಚೆಗೆ ಆನ್‌ಲೈನ್ ಮೂಲಕ ಬಿಲ್ ಪಾವತಿಸಲು ಮುಂದಾದ ಗ್ರಾಹಕರಿಗೆ ಆಘಾತ ಕಾದಿತ್ತು. ವಾಸ್ತವಕ್ಕಿಂತಲೂ ಮೂರ್ನಾಲ್ಕು ಪಟ್ಟು ಹೆಚ್ಚು ಬಿಲ್ ತೋರಿಸುತ್ತಿತ್ತು. ಈ ಬಗ್ಗೆ ಹಲವು ಗ್ರಾಹಕರು ಬೆಸ್ಕಾಂಗೆ ದೂರು ನೀಡಿದ್ದರು.

‘ನಮ್ಮ ಗಮನಕ್ಕೆ ಬಂದ ತಕ್ಷಣ ತಾಂತ್ರಿಕ ತಂಡವು ಸಮಸ್ಯೆಯನ್ನು ಬಗೆಹರಿಸಿದೆ. ರಾಜ್ಯದಲ್ಲಿನ ಎಲ್ಲ ಎಸ್ಕಾಂಗಳ ವ್ಯಾಪ್ತಿಯ ಹಲವೆಡೆ ಈ ರೀತಿ ಸಮಸ್ಯೆಗಳು ವರದಿಯಾಗಿದ್ದವು’ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ಸಹಾಯವಾಣಿಗೆ 1912 ಸಂಪರ್ಕಿಸುವಂತೆ ತಿಳಿಸಿದ್ದಾರೆ.

ಪ್ರತಿ ತಿಂಗಳು ಮೋದಿ ನಗರಕ್ಕೆ ಆಗಮಿಸಲಿ: ಎಎಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಸ್ತೆಗಳು ಸದಾ ಉತ್ತಮವಾಗಿರಬೇಕಾದರೆ ಪ್ರಧಾನಿ ನರೇಂದ್ರ ಮೋದಿ ಅವರು ತಿಂಗಳಿಗೊಮ್ಮೆ ಆಗಮಿಸಬೇಕು ಎಂದು ಒತ್ತಾಯಿಸಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಗುರುವಾರ ಪ್ರತಿಭಟನೆ ನಡೆಸಿದರು.

ಪ್ರಧಾನಿ ಅವರು ಆಗಮಿಸಲು ಒಂದೆರಡು ದಿನಗಳಿರುವಾಗ ಮಾತ್ರ ರಸ್ತೆ ದುರಸ್ತಿ ಮಾಡಲು ರಾಜ್ಯ ಸರ್ಕಾರ ಹಾಗೂ ಬಿಬಿಎಂಪಿ ನಿರ್ಧರಿಸಿದೆ ಎಂದು ದೂರಿದರು.

ಗುರುವಾರ ಬೆಳಿಗ್ಗೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ಎದುರಿನ ರಸ್ತೆಯಲ್ಲಿ ಹಾಗೂ ಮಧ್ಯಾಹ್ನ ಮಲ್ಲೇಶ್ವರದ ದತ್ತಾತ್ರೇಯ ದೇವಸ್ಥಾನ ರಸ್ತೆಯಲ್ಲಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಸರ್ಕಾರದ ವಿರುದ್ಧ ಭಿತ್ತಿಪತ್ರಗಳನ್ನು ಹಿಡಿದು ಆಕ್ರೋಶ ವ್ಯಕ್ತಪಡಿಸಿದರು. ರೈಲು ನಿಲ್ದಾಣದ ಸಮೀಪ ಪ್ರತಿಭಟಿಸಿದ ಎಎಪಿ ಮುಖಂಡರು ಹಾಗೂ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

‘ಜನಸಾಮಾನ್ಯರ ಬಗ್ಗೆ ಸ್ವಲ್ಪವೂ ಕಾಳಜಿ ಇಲ್ಲದ ಸರ್ಕಾರ, ರಾಜ್ಯದಲ್ಲಿ ಅಧಿಕಾರದಲ್ಲಿದೆ. ವಾಹನ ಸವಾರರು ರಸ್ತೆ ಗುಂಡಿಗಳಿಗೆ ಬಿದ್ದು ಕೈಕಾಲು ಮುರಿದುಕೊಂಡರೂ ಸರ್ಕಾರ ತಲೆಕೆಡಿಸಿಕೊಂಡಿರಲಿಲ್ಲ.

ಈಗ ಮೋದಿ ಅವರು ಆಗಮಿಸುತ್ತಾರೆ ಎನ್ನುವ ಕಾರಣಕ್ಕೆ ತರಾತುರಿಯಲ್ಲಿ ರಸ್ತೆಗುಂಡಿಗಳನ್ನು ಮುಚ್ಚಲಾಗುತ್ತಿದೆ. ಅವರು ಸಂಚರಿಸುವ ರಸ್ತೆಗಳನ್ನು ಮಾತ್ರ ದುರಸ್ತಿ ಮಾಡಿ, ಉಳಿದ ರಸ್ತೆಗಳ ಬಗ್ಗೆ ನಿರ್ಲಕ್ಷ್ಯ ತೋರಲಾಗುತ್ತಿದೆ. ಮೋದಿ ಅವರನ್ನು ಮೆಚ್ಚಿಸಿ, ಮುಂದಿನ ಚುನಾವಣೆಯಲ್ಲಿ ಮುಖ್ಯಮಂತ್ರಿ ಅಭ್ಯರ್ಥಿಯಾಗುವುದೇ ಬಸವರಾಜ ಬೊಮ್ಮಾಯಿಯವರ ಏಕೈಕ ಉದ್ದೇಶ’ ಎಂದು ಎಎಪಿ ಬೆಂಗಳೂರು ಘಟಕದ ಅಧ್ಯಕ್ಷ ಮೋಹನ್ ದಾಸರಿ ಟೀಕಿಸಿದರು.

‘ತರಾತುರಿಯಲ್ಲಿ ಮುಚ್ಚಿರುವ ಗುಂಡಿಗಳು ಕೆಲವೇ ದಿನಗಳಲ್ಲಿ ಮತ್ತೆ ಬಾಯಿ ತೆರೆಯಲಿವೆ. ಗುಣಮಟ್ಟ ಕಾಯ್ದುಕೊಳ್ಳದೇ ಅವಸರದಲ್ಲಿ ಮಾಡಿದ ಕಾಮಗಾರಿಗಳು ಒಂದು ತಿಂಗಳು ಬಾಳಿಕೆ ಬರುವುದೂ ಅನುಮಾನ’ ಎಂದು ಅವರು ದೂರಿದರು.

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಬೆಂಗಳೂರು ಮಹಾನಗರ ಪ್ರದೇಶಾಭೀವೃದ್ಧಿ ಪ್ರಾಧಿಕಾರ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560 052
ದೂರವಾಣಿ ಸಂಖ್ಯೆ: 080–22263479

ಸಂಖ್ಯೆ : STRRPA/TP/CLU/107/2022-23 **ಪ್ರಕಟಣೆ** ದಿನಾಂಕ: 10.11.2022

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವಸತಿ** ವಲಯದಿಂದ **ಕೈಗಾರಿಕೆ** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1.	ಶ್ರೀ ಎಸ್. ಮುನಿರೆಡ್ಡಿ ಬಿನ್ ಲೇಟ್ ಸಿದ್ದಾರೆಡ್ಡಿ, ಶ್ರೀಮತಿ ರತ್ನಮ್ಮ ಕೋಂ. ಎಸ್. ಮುನಿರೆಡ್ಡಿ, ಶ್ರೀ ಎಂ. ಮುರಳೀಧರ ಬಿನ್ ಎಸ್. ಮುನಿರೆಡ್ಡಿ	ಆನೇಕಲ್	ಕಸಬಾ–2	ಮಡಿವಾಳ	574/1	1–20	ವಸತಿ	ಕೈಗಾರಿಕೆ
2	ಶ್ರೀ ಎಸ್.ಬಿ. ನಾರಾಯಣರೆಡ್ಡಿ	ಆನೇಕಲ್	ಕಸಬಾ–2	ಮಡಿವಾಳ	574/2	0–22	ವಸತಿ	ಕೈಗಾರಿಕೆ
3	ಶ್ರೀ ಎಂ. ರಾಜೇಂದ್ರರೆಡ್ಡಿ ಬಿನ್ ಲೇಟ್ ಮುನಿರೆಡ್ಡಿ	ಆನೇಕಲ್	ಕಸಬಾ–2	ಮಡಿವಾಳ	574/5	0–32	ವಸತಿ	ಕೈಗಾರಿಕೆ
4	ಶ್ರೀಮತಿ ನಂದಿನಿ – ಸಿ. ಬಾಬುರೆಡ್ಡಿ	ಆನೇಕಲ್	ಕಸಬಾ–2	ಮಡಿವಾಳ	575/1	1–25	ವಸತಿ	ಕೈಗಾರಿಕೆ
5	ಶ್ರೀಮತಿ ಬಿ. ನೇತ್ರ ಕೋಂ ಸಿ. ಬಾಬುರೆಡ್ಡಿ	ಆನೇಕಲ್	ಕಸಬಾ–2	ಮಡಿವಾಳ	575/1	1–20	ವಸತಿ	ಕೈಗಾರಿಕೆ
6	ಶ್ರೀಮತಿ ಎಂ. ಸುಮಾ ಬಿನ್ ಎಸ್. ಮುನಿರೆಡ್ಡಿ	ಆನೇಕಲ್	ಕಸಬಾ–2	ಮಡಿವಾಳ	561/2	0–20	ವಸತಿ	ಕೈಗಾರಿಕೆ
7	ಶ್ರೀಮತಿ ಎಂ. ಪ್ರಭಾ ಬಿನ್ ಎಸ್. ಮುನಿರೆಡ್ಡಿ	ಆನೇಕಲ್	ಕಸಬಾ–2	ಮಡಿವಾಳ	561/2	0–20	ವಸತಿ	ಕೈಗಾರಿಕೆ
8	ಶ್ರೀಮತಿ ಎನ್. ಶೋಭಮ್ಮ, ಕೋಂ. ಮಂಜುನಾಥರೆಡ್ಡಿ	ಆನೇಕಲ್	ಕಸಬಾ–2	ಮಡಿವಾಳ	572 573	2–13 1–19	ವಸತಿ	ಕೈಗಾರಿಕೆ
9	ಶ್ರೀಮತಿ ಎಂ. ರಾಜಣ್ಣ ಬಿನ್ ಲೇಟ್ ಮುದ್ದಪ್ಪ	ಆನೇಕಲ್	ಕಸಬಾ–2	ಮಡಿವಾಳ	566	3–24	ವಸತಿ	ಕೈಗಾರಿಕೆ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳು ಭೂಉಪಯೋಗ ಬದಲಾವಣೆಯಿಂದ ಉದ್ಯೋಗ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸದರಿ ಪ್ರದೇಶವನ್ನು **‘ ವಸತಿ ವಲಯ’** ದಿಂದ **‘ಕೈಗಾರಿಕೆ ವಲಯ’** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/– ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ,ಬೆಂಗಳೂರು.

ವಾಸಾಸಂಇ/ವಾಪ್ರ/ಜಿಎ/3056/2022–23

KIOCL LIMITED

(A Government of India Enterprise)
CIN - L13100KA1976GOI002974
Regd. Office - II Block, Koramangala, Bengaluru - 560034
Tel. & Fax No.080-25531525,
E-mail:cs@kioclltd.in, Website: www.kioclltd.in

KUDREMUKH

UN-AUDITED FINANCIAL RESULTS FOR THE QUARTER AND HALF YEAR ENDED 30TH SEPTEMBER, 2022

(₹ in Lakhs, except EPS)

S. No.	Particulars	Quarter Ended 30.09.2022 (Un-Audited)	Quarter Ended 30.06.2022 (Un-Audited)	Quarter Ended 30.09.2021 (Un-Audited)	Half Year Ended 30.09.2022 (Un-Audited)	Half Year Ended 30.09.2021 (Un-Audited)
	1	2	3	4	5	6
1.	Total income from operations	15,447	36,632	46,239	52,079	1,50,387
2.	Net Profit / (Loss) for the period (before tax, Exceptional and/or Extraordinary items)	(10,271)	(4,378)	(3,850)	(14,649)	25,672
3.	Net Profit / (Loss) for the period before tax (after Exceptional and/or Extraordinary items)	(10,271)	(4,378)	(3,850)	(14,649)	25,672
4.	Net Profit / (Loss) for the period after tax (after Exceptional and/or Extraordinary items)	(10,222)	(4,378)	(3,033)	(14,600)	18,559
5.	Total Comprehensive Income for the period [Comprising Profit / (Loss) for the period (after tax) and Other Comprehensive Income (after tax)]	(10,222)	(4,378)	(3,033)	(14,600)	18,559
6.	Equity Share Capital	60,775	60,775	60,775	60,775	60,775
7.	Reserves (excluding Revaluation Reserve) as shown in the Audited Balance Sheet of the previous year.	-	-	-	-	-
8.	Earnings Per Share (of Rs.10/- each) (for continuing and discontinued operations) Basic & Diluted	(1.68)	(0.72)	(0.50)	(2.40)	3.05

Note : 1) The above is an extract of the detailed un-audited Financial Results filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015. The full format of the Financial Results for the quarter and half year ended September 30, 2022 are available on the Stock Exchange(s) website www.nseindia.com, www.bseindia.com, www.msei.in and on Company website at www.kioclltd.in.

2) The above results of the Company have been reviewed by the Audit Committee and approved by Board of Directors at their Meeting held on 09.11.2022.

Place: Bangalore
Date: 09.11.2022

By order of the Board
For KIOCL Limited
Sd/-
(S.K. GORAI)
Director (Finance)
(DIN: 07223221)

‘ಬಿ.ಎಸ್. ಯಡಿಯೂರಪ್ಪ ಹಿಂದೂ ಧರ್ಮದವರಲ್ಲ’

ತುಮಕೂರು: ಮಾಜಿ ಮುಖ್ಯಮಂತ್ರಿ ಮತ್ತು ಬಿಜೆಪಿ ಮುಖಂಡ ಬಿ.ಎಸ್.ಯಡಿಯೂರಪ್ಪ ಅವರು ಹಿಂದೂ ಧರ್ಮಕ್ಕೆ ಸೇರಿದವರಲ್ಲ. ಅವರು ಲಿಂಗಾಯತ ಧರ್ಮಕ್ಕೆ ಸೇರಿದವರು ಎಂದು ಅಖಿಲ ಭಾರತ ವೀರಶೈವ ಲಿಂಗಾಯತರ ಮಹಾಸಭಾ ಹೇಳಿದೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ಪ್ರಧಾನ ಕಾರ್ಯದರ್ಶಿ ನಟರಾಜ ಸಾಗರನಹಳ್ಳಿ, ಹಿಂದೂ ಧರ್ಮ ಮತ್ತು ಲಿಂಗಾಯತ ಧರ್ಮದ ಆಚರಣೆಯಲ್ಲಿ ಕೆಲವು ವ್ಯತ್ಯಾಸಗಳಿವೆ ಎಂದರು.

‘ಲಿಂಗಾಯತರು ಹಿಂದೂ ಧರ್ಮಕ್ಕೆ ಸೇರಿಲ್ಲ. ನಾವು ಪ್ರತ್ಯೇಕ ಧರ್ಮವಾಗಿ ಗುರುತಿಸಿಕೊಂಡಿದ್ದೇವೆ. ಹಾಗಾಗಿಯೇ ನಮ್ಮನ್ನು ಪ್ರತ್ಯೇಕ ಲಿಂಗಾಯತ ಧರ್ಮವೆಂದು ಘೋಷಿಸುವಂತೆ ಕೇಳಿಕೊಳ್ಳುತ್ತಿರುವುದು’ ಎಂದು ಸಮರ್ಥಿಸಿಕೊಂಡರು.

‘ಲಿಂಗಾಯತರಿಗೆ ಪ್ರತ್ಯೇಕ ಧರ್ಮ ಬೇಕು’ ಎಂದು ಕಾಂಗ್ರೆಸ್ ಶಾಸಕ ಎಂ.ಬಿ.ಪಾಟೀಲ ಅವರು ಪ್ರತಿಪಾದಿಸಿರುವುದು ಸರಿಯಾಗಿಯೇ ಇದೆ. ಅದರಲ್ಲಿ ತಪ್ಪೇನೂ ಇಲ್ಲ’ ಎಂದು ಸಮರ್ಥಿಸಿಕೊಂಡರು.

‘ನ್ಯಾಯ’ ತಂಡದಿಂದ ಕಾನೂನು ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾನೂನಿನ ತಿಳಿವಳಿಕೆ ಇಲ್ಲದವರಿಗೆ ನೆರವಾಗಲು ‘ನ್ಯಾಯ’ ಸಂಸ್ಥೆಯು ಏಳು ವಕೀಲರಿಗೆ ಫೆಲೋಶಿಪ್ ನೀಡಿದೆ.

‘ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಜತೆ ಸೇರಿ ‘ನ್ಯಾಯ’ ತಂಡವು ಕಾನೂನು ಅರಿವು ಮೂಡಿಸಲಿದೆ. ಅವಕಾಶ ವಂಚಿತ, ಸಮಾಜದ ಕಟ್ಟಕಡೆಯ ಸಮುದಾಯಗಳಿಗೆ ಕಾನೂನು ನೆರವು ಒದಗಿಸಲಾಗುವುದು. ಇದಕ್ಕಾಗಿ ಒಂದು ವರ್ಷದ ಅವಧಿಗೆ ಫೆಲೋಶಿಪ್ ಆಧಾರದಲ್ಲಿ ವಕೀಲರನ್ನು ನೇಮಿಸಿಕೊಳ್ಳಲಾಗಿದೆ. ಕಾನೂನು ಅರಿವು ಮೂಡಿಸುವ ಕೆಲಸದಲ್ಲಿ ಆಸಕ್ತಿ ಹೊಂದಿರುವ ವಕೀಲರನ್ನೇ ಆಯ್ಕೆ ಮಾಡಲಾಗಿದೆ. ಸಮುದಾಯ ಆಧಾರಿತ ಸಂಸ್ಥೆಗಳ ಜತೆ ಕೈಜೋಡಿಸಿ ದುರ್ಬಲರಿಗೆ ಕಾನೂನಿನ ತಿಳಿವಳಿಕೆ ನೀಡಿ ನ್ಯಾಯ ಒದಗಿಸಲಿದ್ದಾರೆ. ವಾರಕ್ಕೆ 20 ಗಂಟೆಗಳ ಕಾಲ ಅವರು ಇದೇ ಕೆಲಸದಲ್ಲಿ ನಿರತ ಆಗಲಿದ್ದಾರೆ’ ಎಂದು ‘ನ್ಯಾಯ’ ತಂಡ ತಿಳಿಸಿದೆ.

ಕಾನೂನಿನ ಮಾಹಿತಿಯು ಇಂಗ್ಲಿಷ್‌ನಲ್ಲೇ ಇದೆ. ಭಾರತದಲ್ಲಿ ಶೇ 10ರಷ್ಟು ಜನ ಮಾತ್ರ ಇದನ್ನು ಓದಲು ಸಾಧ್ಯ. ಇದನ್ನು ಕನ್ನಡಕ್ಕೆ ತರುವ ಪ್ರಯತ್ನವನ್ನು ಫೆಲೋಶಿಪ್ ಪಡೆಯುವ ವಕೀಲರು ಮಾಡಲಿದ್ದಾರೆ ಎಂದು ನ್ಯಾಯ ತಂಡದ ಅನಿಶಾ ಗೋಪಿ ತಿಳಿಸಿದರು.

ಅಮೃತಾ ಶಿವಪ್ರಸಾದ್, ಗೀತಾ ಸಜ್ಜನಶೆಟ್ಟಿ, ಡಿ.ಎಸ್. ಗಂಗಾಧರ, ಎಸ್.ಪಿ. ಗೀತಾ, ಜೈರಾಮ್ ಸಿದ್ಧಿ, ಮನೋರಂಜಿನಿ ಥಾಮಸ್, ಮತ್ತು ಶಿರಿಶಾ ಬಿ. ರೆಡ್ಡಿ ಫೆಲೋಶಿಪ್‌ಗೆ ಆಯ್ಕೆಯಾಗಿದ್ದಾರೆ. ಈ ತಂಡದಲ್ಲಿ ಶೇ 70ರಷ್ಟು ಮಹಿಳೆಯರೇ ಇರುವುದು ವಿಶೇಷ. ಇವರು ಹಿಂದುಳಿದ ಸಮುದಾಯಗಳ ಹಕ್ಕು, ಮಕ್ಕಳ ಹಕ್ಕು, ಮಹಿಳಾ ಮತ್ತು ಆಸ್ತಿ ಹಕ್ಕುಗಳ ಬಗ್ಗೆ ಪರಿಣತಿ ಹೊಂದಿದ್ದಾರೆ ಎಂದು ವಿವರಿಸಿದ್ದಾರೆ.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN-U04010KA2002SGC030438

BESCOM

ಪ್ರಕಟಣೆ

ಕೋರಮಂಗಲ ವಿಭಾಗದ ಉಪವಿಭಾಗಗಳಾದ ದ3–ಆಸ್ಟಿನ ಟೌನ್, ದ4–ಕೋರಮಂಗಲ, ದ7–ಮುರುಗೇಶ್ ಪಾಳ್ಯ, ದ–16 ಮಡಿವಾಳ, ದ–17–ಹೆಚ್.ಎ.ಎಲ್ ವ್ಯಾಪ್ತಿಗೆ ಸಂಬಂಧಿಸಿದ ಕ್ಷೇತ್ರವಾರು (ವಾರ್ಡ್) ಬಿ.ಬಿ.ಎಂ.ಪಿ ಮತ್ತು ಬಿ.ಡಬ್ಲ್ಯೂಎಸ್.ಎಸ್.ಬಿ. ಇಲಾಖೆಗಳಿಂದ ಬೆವಿಕಂಗೆ ಸೆಪ್ಟೆಂಬರ್–2022 ರ ಅಂತ್ಯದವರೆಗೆ ವಿದ್ಯುತ್ ಬಾಕಿ ಈ ಕೆಳಕಂಡಂತಿರುತ್ತದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ (BWSSB) ಬರಬೇಕಾದ ಬಾಕಿ ಮೊತ್ತ: ರೂ. ಲಕ್ಷಗಳಲ್ಲಿ

ವಾರ್ಡ್ ಸಂ.	ಮೊತ್ತ (ಲಕ್ಷಗಳಲ್ಲಿ)	ವಾರ್ಡ್ ಸಂ.	ಮೊತ್ತ (ಲಕ್ಷಗಳಲ್ಲಿ)
58	32.60	115	81.23
81	247.15	116	73.12
84	0.02	147	3.05
85	166.46	148	313.50
86	373.42	149	137.92
87	366.88	150	127.36
111	34.17	151	246.41
112	31.55	172	4.58
113	79.49	ಒಟ್ಟು	**2371.41**
114	52.50		

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ (BBMP) ಬರಬೇಕಾದ ಬಾಕಿ ಮೊತ್ತ: ರೂ. ಲಕ್ಷಗಳಲ್ಲಿ

ವಾರ್ಡ್ ಸಂ.	ಮೊತ್ತ (ಲಕ್ಷಗಳಲ್ಲಿ)	ವಾರ್ಡ್ ಸಂ.	ಮೊತ್ತ (ಲಕ್ಷಗಳಲ್ಲಿ)
58	4	81	7.61
81	340.76	84	2.90
84	38.93	86	16.20
85	30.97	87	27.14
86	76.51	111	19.51
87	129.12	112	2.17
111	30.56	113	5.21
112	21.14	115	6.16
113	36.65	116	8.19
114	3.55	118	26.34
115	20.67	147	10.55
116	20.01	148	6.71
137	1.88	149	22.17
147	16.39	150	36.38
148	119.29	151	12.52
149	547.41	152	6.10
150	494.24	171	1.69
151	60.29	172	5.04
172	5.32		
ಒಟ್ಟು	**1997.69**	ಒಟ್ಟು	**2220.28**

ಈ ಪ್ರಕಟಣೆಯ ದಿನಾಂಕದಿಂದ ಏಳು ದಿನದೊಳಗಾಗಿ ಮೇಲ್ಕಾಣಿಸಿದ ಮೊತ್ತವನ್ನು ಸಂಭಂಧಿಸಿದ ಉಪ ವಿಭಾಗಗಳಲ್ಲಿ ಪಾವತಿಸುವುದು. ತಪ್ಪಿದಲ್ಲಿ ಬೆವಿಕಂ ನಿಯಮಗಳನ್ವಯ ವಿದ್ಯುತ್ ಸರಬರಾಜನ್ನು ನಿಲುಗಡೆಗೊಳಿಸಲಾಗುವುದು. ಸದರಿ ಕ್ರಮದಿಂದ ಸಾರ್ವಜನಿಕರಿಗೆ ಆಗುವ ಅನಾನುಕೂಲಗಳಿಗೆ ಸಂಬಂಧಪಟ್ಟ ಇಲಾಖೆಗಳೇ ಜವಾಬ್ದಾರಿಯಾಗುತ್ತವೆ.

(ಕೆ.ವಿ. ರಾಜೇಶ್)
ಕಾರ್ಯನಿರ್ವಾಹಕ ಇಂಜಿನಿಯರ್(ವಿ).,
(ವಾ.ಕಾ ಮತ್ತು ಪಾ) ಕೋರಮಂಗಲ ವಿಭಾಗ, ಬೆ.ವಿ.ಕಂ., ಬೆಂಗಳೂರು.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

CENTUM

(CIN): L85110KA1993PLC013869 ನೋಂದಾಯಿತ ಕಚೇರಿ: ನಂ.44 ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂಟೌನ್, ಬೆಂಗಳೂರು – 560 106.
ದೂರವಾಣಿ: +91-80-41436000 ಫ್ಯಾಕ್ಸ್: +91-80-41436005
ಇ-ಮೇಲ್: investors@centumelectronics.com ವೆಬ್‌ಸೈಟ್: www.centumelectronics.com

30ನೇ ಸೆಪ್ಟೆಂಬರ್ 2022ರ ಎರಡನೆಯ ತ್ರೈಮಾಸಿಕ ಮತ್ತು ಅರ್ಧವಾರ್ಷಿಕ ಅವಧಿಗೆ ಕೊನೆಗೊಂಡ ಅಪರಿಶೋಧಿತ ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್ಸ್‌ಗಳಲ್ಲಿ)

ಕ್ರ. ಸಂ.	ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ 30 ಸೆಪ್ಟೆಂಬರ್ 2022 (ಅಪರಿಶೋಧಿತ)	ಅರ್ಧವಾರ್ಷಿಕ ಅವಧಿಗೆ ಕೊನೆಗೊಂಡ 30 ಸೆಪ್ಟೆಂಬರ್ 2021 (ಅಪರಿಶೋಧಿತ)	ತ್ರೈಮಾಸಿಕಕ್ಕೆ ಕೊನೆಗೊಂಡ 30 ಸೆಪ್ಟೆಂಬರ್ 2021 (ಅಪರಿಶೋಧಿತ)	ವರ್ಷಕ್ಕೆ ಕೊನೆಗೊಂಡ 31 ಮಾರ್ಚ್ 2022 (ಪರಿಶೋಧಿತ)
1.	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	2,017.21	4,127.79	1,753.15	7,879.64
2.	ನಿವ್ವಳ ಲಾಭ / (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳು)	(84.79)	(114.73)	(22.49)	81.52
3.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ ಮುಂಚೆ, (ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳು)	(84.79)	(114.73)	(22.49)	(522.02)
4.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ, (ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳ ನಂತರ)	(68.60)	(94.31)	(21.08)	(534.65)
5.	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ / (ನಷ್ಟ) (ತೆರಿಗೆಯ ನಂತರ) ಅವಧಿಗೆ ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	(54.01)	(58.13)	(10.56)	(510.43)
6.	ಈಕ್ವಿಟಿ ಷೇರು ಬಂಡವಾಳ (ಮುಖ ಬೆಲೆ ರೂ.10 ಪ್ರತಿ ಷೇರಿಗೆ)	128.85	128.85	128.85	128.85
7.	ಮೀಸಲು (ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಪರಿಶೋಧಿತ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿರುವಂತೆ				1,910.83
8.	ಪ್ರತಿ ಷೇರಿನ ಗಳಿಕೆ (ಪ್ರತಿ ರೂ. 10 ಕ್ಕೆ) ಕಾರ್ಯಾಚರಣೆಗಳನ್ನು ಮುಂದುವರಿಸುವದಕ್ಕಾಗಿ ಹಾಗೂ ಸ್ಥಗಿತಗೊಳಸುವುದಕ್ಕಾಗಿ				
	ಎ) ಮೂಲಭೂತ:	(4.60)	(6.27)	(0.53)	(23.70)
	ಬಿ) ಡೈಲ್ಯೂಟೆಡ್:	(4.60)	(6.27)	(0.53)	(23.70)

ಸೂಚನೆ :

1. 30ನೇ ಸೆಪ್ಟೆಂಬರ್ 2022ರ ಎರಡನೆಯ ತ್ರೈಮಾಸಿಕ ಮತ್ತು ಅರ್ಧವಾರ್ಷಿಕ ಅವಧಿಗೆ ಕೊನೆಗೊಂಡ ಪ್ರತ್ಯೇಕವಾದ ಅಪರಿಶೋಧಿತ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್‌ಗಳಲ್ಲಿ)

ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ 30 ಸೆಪ್ಟೆಂಬರ್ 2022 (ಅಪರಿಶೋಧಿತ)	ಅರ್ಧವಾರ್ಷಿಕ ಅವಧಿಗೆ ಕೊನೆಗೊಂಡ 30 ಸೆಪ್ಟೆಂಬರ್ 2021 (ಅಪರಿಶೋಧಿತ)	ತ್ರೈಮಾಸಿಕಕ್ಕೆ ಕೊನೆಗೊಂಡ 30 ಸೆಪ್ಟೆಂಬರ್ 2021 (ಅಪರಿಶೋಧಿತ)	ವರ್ಷಕ್ಕೆ ಕೊನೆಗೊಂಡ 31 ಮಾರ್ಚ್ 2022 (ಪರಿಶೋಧಿತ)
ನಿರ್ವಹಣೆಯಿಂದ ಬಂದ ನಿವ್ವಳ ಮಾರಾಟ / ವರಮಾನ	1,055.72	2,049.83	852.90	3,538.17
ಲಾಭ ತೆರಿಗೆಯ ಮುಂಚೆ	(34.33)	(33.33)	28.80	153.76
ಲಾಭ ತೆರಿಗೆಯ ನಂತರ	(24.75)	(24.87)	23.92	117.66

2. ಈ ಮೇಲಿನ ಅಪರಿಶೋಧಿತ ಪ್ರತ್ಯೇಕವಾದ ಮತ್ತು ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳನ್ನು ಕಂಪನಿಯ ಲೆಕ್ಕಪರಿಶೋಧಕ ಸಮಿತಿಯು 8ನೇ ನವೆಂಬರ್, 2022 ರಂದು ನಡೆದ ಸಭೆಯಲ್ಲಿ ಪರಿಶೀಲಿಸಿದ್ದು ಹಾಗೂ ನಿರ್ದೇಶಕ ಮಂಡಳಿಯು 9ನೇ ನವೆಂಬರ್, 2022 ರಂದು ನಡೆದ ಸಭೆಯಲ್ಲಿ ಅನುಮೋದಿಸಿದೆ.
3. ಈ ಮೇಲಿನವು ಅಪರಿಶೋಧಿತ ಪ್ರತ್ಯೇಕವಾದ ಮತ್ತು ಒಟ್ಟುಗೂಡಿಸಿದ ಸಮಗ್ರ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪವಾಗಿದ್ದು, 2015ರ ಸೆಬಿ (ಪಟ್ಟಿ ಕರಾರು ಮಾಡುವುದು ಮತ್ತು ಬಹಿರಂಗಗೊಳಿಸುವಿಕೆ ಅಗತ್ಯಗಳು) ನಿಯಮಾವಳಿಗಳ ನಿಯಮಾವಳಿ 33 ರಂತೆ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲು ಮಾಡಲಾಗಿದೆ. ಎರಡನೆಯ ತ್ರೈಮಾಸಿಕ ಮತ್ತು ಅರ್ಧವಾರ್ಷಿಕ ಅವಧಿಗೆ ಕೊನೆಗೊಂಡ ಸಮಗ್ರ ಹಣಕಾಸಿನ ಫಲಿತಾಂಶಗಳು ಸ್ಟಾಕ್ ಎಕ್ಸ್‌ಚೇಂಜ್‌ನ ಜಾಲತಾಣದಲ್ಲಿ www.nseindia.com, www.bseindia.com ಮತ್ತು ನಮ್ಮ ಕಂಪನಿಯ ಜಾಲತಾಣದಲ್ಲಿ www.centumelectronics.com ಲಭ್ಯವಿದೆ.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಪರವಾಗಿ
ಸಹಿ/–
ನಿಖಿಲ್ ಮಲ್ಲವರಪು
ಕಾರ್ಯನಿರ್ವಾಹಕ ನಿರ್ದೇಶಕರು

ಸ್ಥಳ : ಬೆಂಗಳೂರು
ದಿನಾಂಕ: ನವೆಂಬರ್ 09, 2022

ಎರಡೂವರೆ ತಿಂಗಳಾದರೂ ನಿಯೋಜನೆ ಇಲ್ಲ: ಕೆಲಸವಿಲ್ಲದೇ ಕಾಲ ಕಳೆಯುತ್ತಿರುವ ನೂರಾರು ಮಂದಿ

ಎಸಿಬಿ: ಕಾಲಹರಣವೇ ಅಧಿಕಾರಿಗಳ ಕಷ್ಟ!

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳವನ್ನು (ಎಸಿಬಿ) ರದ್ದುಗೊಳಿಸಿ ಹೈಕೋರ್ಟ್ ತೀರ್ಪು ನೀಡಿ ಎರಡೂವರೆ ತಿಂಗಳು ಕಳೆದರೂ ತನಿಖಾ ಸಂಸ್ಥೆಯಲ್ಲಿದ್ದ ಪೊಲೀಸ್ ಅಧಿಕಾರಿಗಳನ್ನು ಬೇರೆಡೆ ನಿಯುಕ್ತಿಗೊಳಿಸುವ ಪ್ರಕ್ರಿಯೆಯನ್ನು ರಾಜ್ಯ ಸರ್ಕಾರ ಇನ್ನೂ ಪೂರ್ಣಗೊಳಿಸಿಲ್ಲ. ಎಸ್‌ಪಿ, ಡಿವೈಎಸ್‌ಪಿ, ಇನ್‌ಸ್ಪೆಕ್ಟರ್ ದರ್ಜೆಯ ನೂರಕ್ಕೂ ಹೆಚ್ಚು ಅಧಿಕಾರಿಗಳು ಕೆಲಸವಿಲ್ಲದೇ ಕಾಲ ಕಳೆಯುತ್ತಿದ್ದಾರೆ.

ಎಸಿಬಿ ರಚನೆಯ ಅಧಿಸೂಚನೆಯನ್ನೇ ರದ್ದುಗೊಳಿಸಿ ಹೈಕೋರ್ಟ್ ಇದೇ ಆಗಸ್ಟ್ 11ರಂದು ತೀರ್ಪು ನೀಡಿತ್ತು. ನ್ಯಾಯಾಲಯದ ಆದೇಶ ಹೊರಬಿದ್ದ ದಿನದಿಂದಲೇ ತನಿಖಾ ಸಂಸ್ಥೆ ಕಾರ್ಯನಿರ್ವಹಣೆಯನ್ನು ಸ್ಥಗಿತಗೊಳಿಸಿತ್ತು. ಎಸಿಬಿ ರದ್ದುಗೊಳಿಸುವ ಹೈಕೋರ್ಟ್ ತೀರ್ಪಿನ ಅನುಷ್ಠಾನಕ್ಕೆ ಸೆಪ್ಟೆಂಬರ್ 9ರಂದು ಆದೇಶ ಹೊರಡಿಸಿದ್ದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್), ಸಂಸ್ಥೆಯಲ್ಲಿದ್ದ ಎಲ್ಲ ಪ್ರಕರಣಗಳನ್ನು ಲೋಕಾಯುಕ್ತಕ್ಕೆ ಹಸ್ತಾಂತರಗೊಳಿಸಲು ನಿರ್ದೇಶನ ನೀಡಿತ್ತು.

ಆ.11ರಿಂದ ಎಸಿಬಿ ಕಚೇರಿಗಳಲ್ಲಿ ಲೋಕಾಯುಕ್ತಕ್ಕೆ ಪ್ರಕರಣ ಹಸ್ತಾಂತರಿಸಲು ಕಡತ ಸಜ್ಜುಗೊಳಿಸುವುದರ ಹೊರತಾಗಿ ಯಾವ ಕೆಲಸಗಳೂ ನಡೆಯುತ್ತಿಲ್ಲ. ಬಹುತೇಕ ಎಲ್ಲ ಜಿಲ್ಲಾ ಘಟಕಗಳು ತಮ್ಮ ವ್ಯಾಪ್ತಿಯ ಪ್ರಕರಣಗಳ ಕಡತಗಳನ್ನು ಲೋಕಾಯುಕ್ತಕ್ಕೆ ಹಸ್ತಾಂತರಿಸಿವೆ. ಬೆಂಗಳೂರು ನಗರ ಘಟಕದಲ್ಲಿ ಮಾತ್ರ ಕಡತ ಹಸ್ತಾಂತರ ಪ್ರಕ್ರಿಯೆ ಕೊಂಚ ನಿಧಾನಗತಿಯಲ್ಲಿ ಸಾಗಿದೆ.

ಎಸಿಬಿಯಲ್ಲಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಐಜಿಪಿ ದರ್ಜೆಯ ತಲಾ 1, ಹತ್ತು ಎಸ್‌ಪಿ, 35 ಡಿವೈಎಸ್‌ಪಿ, 75 ಇನ್‌ಸ್ಪೆಕ್ಟರ್ ಹಾಗೂ 200 ಹೆಡ್ ಕಾನ್‌ಸ್ಟೆಬಲ್, ಕಾನ್‌ಸ್ಟೆಬಲ್ ಸೇರಿದಂತೆ ಎಸಿಬಿಯಲ್ಲಿ 322 ಹುದ್ದೆಗಳಿಗೆ ಮಂಜೂರಾತಿ ಇತ್ತು. ಬಹುತೇಕ ಹುದ್ದೆಗಳು ಭರ್ತಿಯಾಗಿದ್ದವು. ಈ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನೂ ಲೋಕಾಯುಕ್ತಕ್ಕೆ ನೀಡುವಂತೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಸರ್ಕಾರವನ್ನು ಕೋರಿದ್ದರು. ಆದರೆ, ಕೆಲವು ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಮಾತ್ರ ವರ್ಗಾಯಿಸುವ ತೀರ್ಮಾನವನ್ನು ಸರ್ಕಾರ ಕೈಗೊಂಡಿತ್ತು.

110 ಪೊಲೀಸ್ ಕಾನ್‌ಸ್ಟೆಬಲ್‌ಗಳನ್ನು ಎಸಿಬಿಯಿಂದ ಲೋಕಾಯುಕ್ತಕ್ಕೆ ವರ್ಗಾಯಿಸಲಾಗಿದೆ. ಮೂವರು ಎಸ್‌ಪಿಗಳು, ನಾಲ್ವರು ಡಿವೈಎಸ್‌ಪಿಗಳು ಹಾಗೂ ಎಂಟು ಇನ್‌ಸ್ಪೆಕ್ಟರ್‌ಗಳನ್ನು ಎಸಿಬಿಯಿಂದ ಲೋಕಾಯುಕ್ತಕ್ಕೆ ವರ್ಗಾವಣೆ ಮಾಡಲಾಗಿತ್ತು. ಅವರಲ್ಲಿ ಕೆಲವರು ಇನ್ನೂ ವರ್ಗಾವಣೆಯಾದ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾಗಿಲ್ಲ ಎಂದು ಲೋಕಾಯುಕ್ತದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಹಾಜರಾತಿಗೆ ಸೀಮಿತ: 'ಎಸ್‌ಪಿ, ಡಿವೈಎಸ್‌ಪಿ ಮತ್ತು ಇನ್‌ಸ್ಪೆಕ್ಟರ್ ದರ್ಜೆಯ ನೂರಕ್ಕೂ ಹೆಚ್ಚು ಪೊಲೀಸ್ ಅಧಿಕಾರಿಗಳಿಗೆ ಎಸಿಬಿಯಲ್ಲಿ ಯಾವ ಕೆಲಸವೂ ಇಲ್ಲ. ಆದರೆ, ಬೇರೆಡೆ ಸ್ಥಳ ನಿಯುಕ್ತಿಗೊಳಿಸದ ಕಾರಣದಿಂದ ನಿತ್ಯವೂ ಕಚೇರಿಗೆ ಬಂದು ಹಾಜರಿ ಪುಸ್ತಕಕ್ಕೆ ಸಹಿಮಾಡಿ, ಸಂಜೆಯವರೆಗೂ ಕಾಲ ಕಳೆದು ವಾಪಸ್ ಹೋಗುತ್ತಿದ್ದೇವೆ' ಎಂದು ಎಸಿಬಿಯಲ್ಲಿರುವ ಹೆಸರು ಬಹಿರಂಗಪಡಿಸಲು ಇಚ್ಛಿಸಿದ ಅಧಿಕಾರಿಗಳು ಹೇಳುತ್ತಾರೆ.

80ಕ್ಕೂ ಹೆಚ್ಚು ಕಾನ್‌ಸ್ಟೆಬಲ್‌ಗಳೂ ಎಸಿಬಿಯಲ್ಲೇ ಇದ್ದಾರೆ. ಯಾರಿಗೂ ಪೂರ್ಣ ಪ್ರಮಾಣದ ಕೆಲಸ ಇಲ್ಲ. ಎರಡೂವರೆ ತಿಂಗಳಿನಿಂದ ಇದೇ ಪರಿಸ್ಥಿತಿ ಮುಂದುವರಿದಿದೆ ಎನ್ನುತ್ತಾರೆ ಅವರು.

ಪ್ರಜಾವಾಣಿ ವಿಶೇಷ

'15 ದಿನಗಳೊಳಗೆ ಸ್ಥಳನಿಯುಕ್ತಿ'

'ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಕೆಲಸವಿಲ್ಲದೇ ಖಾಲಿ ಕೂರಿಸುವುದನ್ನು ಸರ್ಕಾರ ಒಪ್ಪುವುದಿಲ್ಲ. ಆದರೆ, ಎಸಿಬಿಯಲ್ಲಿರುವ ಅಧಿಕಾರಿಗಳು, ಸಿಬ್ಬಂದಿಯನ್ನು ಹಂಚಿಕೆ ಮಾಡುವ ಕುರಿತು ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಚರ್ಚೆ ನಡೆಯುತ್ತಿದೆ. 15 ದಿನಗಳೊಳಗೆ ಸ್ಥಳ ನಿಯುಕ್ತಿ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಎಸಿಬಿ ಕಚೇರಿ ಲೋಕಾಯುಕ್ತಕ್ಕೆ

ಲೋಕಾಯುಕ್ತ ಕಚೇರಿಯಲ್ಲಿ ಸ್ಥಳಾವಕಾಶದ ಕೊರತೆ ಇರುವುದರಿಂದ ಲೋಕಾಯುಕ್ತಕ್ಕೆ ಹೆಚ್ಚಿನ ಸ್ಥಳಾವಕಾಶ ಕಲ್ಪಿಸುವಂತೆ ಲೋಕಾಯುಕ್ತರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಪ್ರಸ್ತಾವ ಕಳುಹಿಸಿದ್ದರು. ರೇಸ್‌ಕೋರ್ಸ್ ರಸ್ತೆಯಲ್ಲಿರುವ ಖನಿಜ ಭವನದ ತಳಮಹಡಿಯಲ್ಲಿರುವ ಎಸಿಬಿ ಕಚೇರಿಯನ್ನು ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ನೀಡಿ ಆದೇಶ ಹೊರಡಿಸಲಾಗಿದೆ.

ಸುದ್ದಿ 2 ನಿಮಿಷ

ಮಕ್ಕಳಿಗೆ 'ಗಂಧದ ಗುಡಿ' ಟಿಕೆಟ್ ಉಚಿತವಾಗಿ ವಿತರಣೆ

ಬೆಂಗಳೂರು: ಮಕ್ಕಳ ದಿನಾಚರಣೆಯ ಪ್ರಯುಕ್ತ ಕರ್ನಾಟಕ ರಕ್ಷಣಾ ವೇದಿಕೆಯ (ಕರವೇ) ಬೊಮ್ಮನಹಳ್ಳಿ ಘಟಕವು ಶಾಲಾ ಶಿಕ್ಷಕರು ಹಾಗೂ ಮಕ್ಕಳಿಗೆ ದಿವಂಗತ ನಟ ಪುನೀತ್ ರಾಜ್‌ಕುಮಾರ್ ಅಭಿನಯದ 'ಗಂಧದ ಗುಡಿ' ಚಿತ್ರದ ಟಿಕೆಟ್‌ಗಳನ್ನು ನಗರದಲ್ಲಿ ಗುರುವಾರ ಉಚಿತವಾಗಿ ವಿತರಿಸಿತು.

ಟಿಕೆಟ್ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಕರವೇ ರಾಜ್ಯ ಘಟಕದ ಅಧ್ಯಕ್ಷ ಪ್ರವೀಣ್ ಶೆಟ್ಟಿ, 'ನಮ್ಮ ಕಾಡು, ನಾಡು-ನುಡಿ ಹಾಗೂ ಪ್ರಾಣಿ-ಪಕ್ಷಿಗಳ ಸಂರಕ್ಷಣೆ ಬಗೆಗಿನ ಸದಭಿರುಚಿಯ ಚಿತ್ರಗಳ ವೀಕ್ಷಣೆಯಿಂದ ಪರಿಸರ ಜಾಗೃತಿ ಹೆಚ್ಚಲಿದೆ. 'ಗಂಧದ ಗುಡಿ' ಚಿತ್ರವು ಇಡೀ ಮನುಕುಲಕ್ಕೆ ವಿಶ್ವಮಾನವ ಪರಿಕಲ್ಪನೆಯ ಸಂದೇಶವನ್ನು ಸಾರುತ್ತಿದೆ. ಇದು ಪ್ರತಿಯೊಬ್ಬರೂನೋಡಲೇಬೇಕಾದ ಉತ್ತಮ ಚಿತ್ರವಾಗಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಬೆಂಗಳೂರು ನಗರ ಕರವೇ ಘಟಕದ ಕಾರ್ಯದರ್ಶಿ ಬೊಮ್ಮನಹಳ್ಳಿ ರಾಜೇಶ್, 'ನಾವು ಓದುವಾಗ ಪರಿಸರ ಪ್ರಜ್ಞೆ ಹಾಗೂ ದೇಶ ಪ್ರೇಮ ಸಾರುವ ಚಲನಚಿತ್ರಗಳನ್ನು ನಮ್ಮ ಶಾಲೆಯ ಶಿಕ್ಷಕರು ತೋರಿಸುತ್ತಿದ್ದರು. ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎಲ್ಲ ಸರ್ಕಾರಿ ಶಾಲೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಉಚಿತವಾಗಿ ಚಿತ್ರ ವೀಕ್ಷಿಸಲು ಅವಕಾಶ ಮಾಡಿಕೊಡಲಾಯಿತು. ಟಿಕೆಟ್ ವೆಚ್ಚವನ್ನು ನಮ್ಮ ಕರವೇ ಭರಿಸಿದೆ' ಎಂದರು.

ಜಾಮೀನಿನ ಮೇಲೆ ಹೊರಬಂದು ಕಳ್ಳತನ

ಬೆಂಗಳೂರು: ನಗರದ ಹಲವೆಡೆ ಮನೆಗಳ ಬೀಗ ಮುರಿದು ಕಳ್ಳತನ ಮಾಡಿದ್ದ ಆರೋಪದಡಿ ಸಂತೋಷ್ ಅಲಿಯಾಸ್ ಸಂತು (36) ಎಂಬುವವರನ್ನು ಕಾಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೋಲಾರ ಜಿಲ್ಲೆಯ ನರಸಾಪುರ ತಾಲ್ಲೂಕಿನ ಇಂದಿರಾ ಕಾಲೊನಿ ನಿವಾಸಿ ಸಂತೋಷ್, ಅಪರಾಧ ಹಿನ್ನೆಲೆಯುಳ್ಳವ. ಈತನಿಂದ ₹10 ಲಕ್ಷ ಮೌಲ್ಯದ 195 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಕೆಲ ತಿಂಗಳ ಹಿಂದೆಯಷ್ಟೇ ಪ್ರಕರಣವೊಂದರಲ್ಲಿ ಸಂತೋಷ್ ಜೈಲು ಸೇರಿದ್ದ. ಅಕ್ಟೋಬರ್‌ನಲ್ಲಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ.'

'ನಗರದಲ್ಲಿ ಸುತ್ತಾಡುತ್ತಿದ್ದ ಆರೋಪಿ, ಬೀಗ ಹಾಕಿರುತ್ತಿದ್ದ ಮನೆಗಳನ್ನು ಗುರುತಿಸುತ್ತಿದ್ದ. ರಾತ್ರಿ ವೇಳೆ ಮನೆಗಳ ಬೀಗ ಮುರಿದು ಒಳನುಗ್ಗುತ್ತಿದ್ದ. ಚಿನ್ನಾಭರಣ, ನಗದು ಹಾಗೂ ಇತರೆ ವಸ್ತುಗಳನ್ನು ಕದ್ದೊಯ್ಯುತ್ತಿದ್ದ. ಅವುಗಳನ್ನು ಮಾರಿ ಬಂದ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

ರೀಲ್ಸ್, ಶಾರ್ಟ್ಸ್ ಮಾಡಲು ಕ್ಯಾಮೆರಾ ಕಳ್ಳತನ

ಯಶವಂತಪುರ ಠಾಣೆ ಪೊಲೀಸರಿಂದ ವಿದ್ಯಾರ್ಥಿ ಬಂಧನ: ಡೆಲಿವರಿ ಬಾಯ್ ನೀಡಿದ್ದ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಡಿಯೊ ಚಿತ್ರೀಕರಣಕ್ಕೆ ಅಗತ್ಯವಿರುವ ಕ್ಯಾಮೆರಾ ಹಾಗೂ ಇತರೆ ವಸ್ತುಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪದಡಿ ಪ್ರಜ್ವಲ್ (20) ಎಂಬುವವರನ್ನು ಯಶವಂತಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಪ್ರಜ್ವಲ್, ಕಾಲೇಜೊಂದರಲ್ಲಿ ಪದವಿ ವ್ಯಾಸಂಗ ಮಾಡುತ್ತಿದ್ದ. ಫ್ಲಿಪ್‌ಕಾರ್ಟ್ ಜಾಲತಾಣದ ಡೆಲಿವರಿ ಬಾಯ್ ನೀಡಿದ್ದ ದೂರು ಆಧರಿಸಿ ಪ್ರಜ್ವಲ್‌ನನ್ನು ಬಂಧಿಸಲಾಗಿದೆ. ₹3.68 ಲಕ್ಷ ಮೌಲ್ಯದ 2 ಕ್ಯಾಮೆರಾ, ಲೆನ್ಸ್ ಹಾಗೂ ಆ್ಯಪಲ್ ಕಂಪನಿಯ ಎರಡು ಇಯರ್ ಪಾಡ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಇನ್‌ಸ್ಟಾಗ್ರಾಂ ಹಾಗೂ ಯೂಟ್ಯೂಬ್ ಸಾಮಾಜಿಕ ಮಾಧ್ಯಮಗಳಲ್ಲಿ ಆರೋಪಿ ಪ್ರಜ್ವಲ್ ಖಾತೆ ತೆರೆದಿದ್ದ. ರೀಲ್ಸ್ ಹಾಗೂ ಶಾರ್ಟ್ಸ್ ವಿಡಿಯೊ ಮಾಡುವ ಹವ್ಯಾಸ ಬೆಳೆಸಿಕೊಂಡಿದ್ದ.

ಆರಂಭದಲ್ಲಿ ಮೊಬೈಲ್‌ನಲ್ಲಿ ವಿಡಿಯೊ ಚಿತ್ರೀಕರಿಸಿ, ಅಪ್‌ಲೋಡ್ ಮಾಡುತ್ತಿದ್ದ. ಆದರೆ, ವಿಡಿಯೊ ಗುಣಮಟ್ಟ ಚೆನ್ನಾಗಿಲ್ಲವೆಂದು ಹಲವರು ಕಾಮೆಂಟ್ ಮಾಡುತ್ತಿದ್ದರು. ಹೀಗಾಗಿ, ಹೊಸ ಕ್ಯಾಮೆರಾ ಖರೀದಿಸಲು ಆರೋಪಿ ಮುಂದಾಗಿದ್ದ.

'ಕ್ಯಾಮೆರಾ ಖರೀದಿಗೆ ಅಗತ್ಯವಿರುವ ಹಣ ಆರೋಪಿ ಬಳಿ ಇರಲಿಲ್ಲ. ಹೀಗಾಗಿ, ಕ್ಯಾಮೆರಾ ಕಳ್ಳತನ ಮಾಡಲು ಸಂಚು ರೂಪಿಸಿದ್ದ. ಮದುವೆ ನಡೆಯುತ್ತಿದ್ದ ಮಂಟಪವೊಂದಕ್ಕೆ ಸಂಬಂಧಿಕರ ಸೋಗಿನಲ್ಲಿ ಹೋಗಿದ್ದ ಆರೋಪಿ, ಅಲ್ಲಿಯ ಛಾಯಾಗ್ರಾಹಕರ ಕ್ಯಾಮೆರಾ ಕದ್ದು ಪರಾರಿಯಾಗಿದ್ದ' ಎಂದು ಪೊಲೀಸರು ತಿಳಿಸಿದರು.

ಕ್ಯಾಮೆರಾ ಬಾಕ್ಸ್ ಕಿತ್ತುಕೊಂಡು ಪರಾರಿ: 'ಫ್ಲಿಪ್‌ಕಾರ್ಟ್ ಜಾಲತಾಣದಲ್ಲಿ ಹೊಸ ಕ್ಯಾಮೆರಾವನ್ನು ಆರೋಪಿ ಕಾಯ್ದಿರಿಸಿದ್ದ. ಕ್ಯಾಮೆರಾ ನೀಡುವುದಕ್ಕಾಗಿ ಡೆಲಿವರಿ ಬಾಯ್, ಸೆ. 27ರಂದು ನಿಗದಿತ ವಿಳಾಸಕ್ಕೆ ಹೋಗಿದ್ದರು. ಅವರನ್ನು ಭೇಟಿಯಾಗಿದ್ದ ಆರೋಪಿ, ಕ್ಯಾಮೆರಾ ಬಾಕ್ಸ್ ಕಿತ್ತುಕೊಂಡು ಹಣ ನೀಡದೇ ಸ್ಥಳದಿಂದ ಪರಾರಿಯಾಗಿದ್ದ' ಎಂದು ಪೊಲೀಸರು ಹೇಳಿದರು.

'ಕಳ್ಳತನದ ಸಂಬಂಧ ಡೆಲಿವರಿ ಬಾಯ್ ದೂರು ನೀಡಿದ್ದರು. ಸಿಸಿಟಿವಿ ಕ್ಯಾಮೆರಾ ದೃಶ್ಯ ಆಧರಿಸಿ ತನಿಖೆ ಕೈಗೊಂಡಾಗ ಆರೋಪಿ ಸಿಕ್ಕಿಬಿದ್ದ' ಎಂದರು.



ಯಶವಂತಪುರ ಪೊಲೀಸರು ಆರೋಪಿಯಿಂದ ಜಪ್ತಿ ಮಾಡಿರುವ ಕ್ಯಾಮೆರಾಗಳು ಹಾಗೂ ಇಯರ್ ಪಾಡ್ಸ್

ಸಿನಿಮಾ ಚಿತ್ರೀಕರಣ ಜಾಗದಲ್ಲೂ ಕಳವು

'ಬಸವನಗುಡಿ ಠಾಣೆ ವ್ಯಾಪ್ತಿಯ ಪ್ರದೇಶವೊಂದರಲ್ಲಿ ಸಿನಿಮಾ ಚಿತ್ರೀಕರಣ ನಡೆಯುತ್ತಿತ್ತು. ಸ್ಥಳಕ್ಕೆ ಹೋಗಿದ್ದ ಆರೋಪಿ, ಚಿತ್ರೀಕರಣಕ್ಕೆ ಅಗತ್ಯವಿದ್ದ ಹಲವು ವಸ್ತುಗಳನ್ನು ಕದ್ದಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದರು.

'ಹೊಸ ರೀತಿಯಲ್ಲಿ ಗುಣಮಟ್ಟದ ರೀಲ್ಸ್ ಹಾಗೂ ಶಾರ್ಟ್ಸ್ ವಿಡಿಯೊ ಮಾಡುವ ಉದ್ದೇಶಕ್ಕಾಗಿ ಕ್ಯಾಮೆರಾ ಕಳ್ಳತನ ಮಾಡಿದ್ದಾಗಿ ಆರೋಪಿ ಹೇಳಿಕೆ ನೀಡಿದ್ದಾನೆ' ಎಂದೂ ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಶಾಲಾ ಬಾಲಕಿಯರಿಗೆ ಕಿರುಕುಳ ದೈಹಿಕ ಶಿಕ್ಷಣ ಶಿಕ್ಷಕ ಬಂಧನ

ಬೆಂಗಳೂರು: ಶಾಲಾ ಬಾಲಕಿಯರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ ಆರೋಪದಡಿ ದೈಹಿಕ ಶಿಕ್ಷಣ ಶಿಕ್ಷಕರೊಬ್ಬರನ್ನು ಹೆಬ್ಬಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಹೆಬ್ಬಾಳ ಠಾಣೆ ವ್ಯಾಪ್ತಿಯ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ 55 ವರ್ಷದ ಶಿಕ್ಷಕ, ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದ. ಬಾಲಕಿಯರು ನೀಡಿದ್ದ ಮಾಹಿತಿ ಆಧರಿಸಿ ಶಾಲೆಯ ಮುಖ್ಯ ಶಿಕ್ಷಕರೇ ಠಾಣೆಗೆ ದೂರು ನೀಡಿದ್ದರು. ಅದರನ್ವಯ ಆರೋಪಿ ಶಿಕ್ಷಕನನ್ನು ಬಂಧಿಸಲಾಗಿದೆ. ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ಪೊಲೀಸರು ಹೇಳಿದರು.

'ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಶಿಕ್ಷಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಚಿಕ್ಕಬಳ್ಳಾಪುರದವನಾದ ಶಿಕ್ಷಕನಿಗೆ ಮದುವೆಯಾಗಿ, ಮಕ್ಕಳಿದ್ದಾರೆ. ಶಿಕ್ಷಕನ ಕೃತ್ಯದ ಬಗ್ಗೆ ಕೆಲ ಬಾಲಕಿಯರಿಂದ ಹೇಳಿಕೆ ಪಡೆಯಲಾಗಿದೆ' ಎಂದರು.

ಅಂಗಾಂಗ ಮುಟ್ಟಿ ಕಿರುಕುಳ: 'ಆಟ ಹಾಗೂ ಪಾಠದ ನೆಪದಲ್ಲಿ ಬಾಲಕಿಯರನ್ನು ತನ್ನ ಬಳಿ ಕರೆಸಿಕೊಳ್ಳುತ್ತಿದ್ದ ಆರೋಪಿ, ಮೈ-ಕೈ ಹಾಗೂ ಇತರೆ ಅಂಗಾಂಗಗಳನ್ನು ಮುಟ್ಟಿ ಲೈಂಗಿಕ ಕಿರುಕುಳ ನೀಡುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಶಾಲೆಯ 8 ಹಾಗೂ 9ನೇ ತರಗತಿಯ 15 ಬಾಲಕಿಯರಿಗೆ ಆರೋಪಿ ಕಿರುಕುಳ ನೀಡಿರುವುದು ತನಿಖೆಯಿಂದ ಗೊತ್ತಾಗಿದೆ. ಕೃತ್ಯಕ್ಕೆ ಸಂಬಂಧಪಟ್ಟ ಪುರಾವೆಗಳನ್ನೂ ಸಂಗ್ರಹಿಸಲಾಗಿದ್ದು, ತನಿಖೆ ಮುಂದುವರಿದಿದೆ' ಎಂದು ತಿಳಿಸಿದರು.



ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘ ನಗರದಲ್ಲಿ ಗುರುವಾರ ಆಯೋಜಿಸಿದ್ದ ಸಮಾರಂಭದಲ್ಲಿ ರಂಗಕರ್ಮಿ ಚನ್ನಬಸಯ್ಯಗುಬ್ಬಿ ಅವರ ಜನ್ಮ ಶತಮಾನೋತ್ಸವ ಆಚರಿಸಲಾಯಿತು. ಅವರನ್ನು ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ಸನ್ಮಾನಿಸಿದರು. ರಂಗಕರ್ಮಿಗಳಾದ ಮಲ್ಲಿಕಾರ್ಜುನ ಕಡಕೋಳ, ಕೆ.ವಿ. ನಾಗರಾಜಮೂರ್ತಿ, ವೀರಶೈವ ನಿತ್ಯಾನ್ನ ದಾಸೋಹ ಸೇವಾ ಸಮಿತಿ ಅಧ್ಯಕ್ಷ ಎಸ್. ಶಾಂತರಾಜು ಮತ್ತಿತರರು ಇದ್ದಾರೆ.

ಸೈಬರ್ ವಂಚನೆ: ಪೊಲೀಸರ ಕ್ರಮಕ್ಕೆ ಹೈಕೋರ್ಟ್ ಅತೃಪ್ತಿ

ಬೆಂಗಳೂರು: 'ಸೈಬರ್ ವಂಚನೆ ಪ್ರಕರಣಗಳಲ್ಲಿ ಹಣ ಕಳೆದುಕೊಂಡ ಬಗ್ಗೆ ತನಿಖೆ ನಡೆಸಿ ಸತ್ಯಾಂಶ ಬಯಲಿಗೆಳೆಯುವ ಬದಲಿಗೆ ಪೊಲೀಸರೇ ಅಂತಹ ಪ್ರಕರಣಗಳನ್ನು ಮುಚ್ಚಿ ಹಾಕುತ್ತಿದ್ದಾರೆ' ಎಂದು ಹೈಕೋರ್ಟ್ ಕಳವಳ ವ್ಯಕ್ತಪಡಿಸಿದೆ.

ಈ ಕುರಿತಂತೆ ರಾಹುಲ್ ಚಾರಿ ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

'ಥರ್ಡ್ ಪಾರ್ಟಿ ಯೂನಿಫೈಡ್ ಪೇಮೆಂಟ್ ಇಂಟರ್‌ಫೇಸ್ (ಯುಪಿಐ) ಮಧ್ಯವರ್ತಿಗಳ ಮೂಲಕ ಪೊಲೀಸರು ಸ್ಥಗಿತಗೊಳಿಸಿದ ಬ್ಯಾಂಕ್ ಖಾತೆಗಳಿಂದ ಮೊತ್ತವನ್ನು ವರ್ಗಾಯಿಸಲು ದೂರುದಾರರಿಂದ ಅರ್ಜಿಗಳನ್ನು ಪರಿಗಣಿಸುವಾಗ ಮ್ಯಾಜಿಸ್ಟ್ರೇಟ್ ಕೋರ್ಟ್‌ಗಳು ಎಚ್ಚರಿಕೆ ವಹಿಸಿ ಎಲ್ಲ ಅಂಶಗಳನ್ನೂ ಪರಿಶೀಲಿಸಿದ ನಂತರವೇ ಅಂತಹ ಮನವಿಗಳನ್ನು ಪುರಸ್ಕರಿಸಬೇಕು' ಎಂದು ಆದೇಶಿಸಿದೆ.

'ಡಿಜಿಟಲ್ ಪಾವತಿ ವಂಚನೆ ಪ್ರಕರಣಗಳಲ್ಲಿ ಹಣ ಕಳೆದುಕೊಂಡವರಿಗೆ ಪುನಃ ಹಣ ಕೊಡಿಸಲು ಪೊಲೀಸರೇ ಕಾನೂನುಬಾಹಿರ ವಿಧಾನಗಳನ್ನು ಅನುಸರಿಸುತ್ತಿದ್ದಾರೆ' ಎಂದು ನ್ಯಾಯಪೀಠ ಹೇಳಿದೆ.

ಫೋನ್ ಪೇ ಪ್ರೈಲಿ ಕಂಪನಿಯ ನಿರ್ದೇಶಕ ರಾಹುಲ್ ಚಾರಿ ಅವರ ಖಾತೆಯಿಂದ ಹಣ ಕಡಿತ ಮಾಡಿದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿ, ಪುನಃ ಯಾವ ಖಾತೆಯಿಂದ ಹಣ ಕಡಿತ ಮಾಡಲಾಗಿದೆಯೋ ಅದೇ ಖಾತೆಗೆ ವರ್ಗಾಯಿಸುವಂತೆ ನಿರ್ದೇಶಿಸಿದೆ.



ಕನ್ನಡ ಹಬ್ಬ...

ಬನ್ನೇರುಘಟ್ಟ ರಸ್ತೆಯ ಅಪೋಲೊ ಆಸ್ಪತ್ರೆ ನಗರದಲ್ಲಿ ಹಮ್ಮಿಕೊಂಡ ಕನ್ನಡ ಹಬ್ಬವನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಉದ್ಘಾಟಿಸಿದರು. ಆಸ್ಪತ್ರೆಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಮನೀಷ್ ಮಟ್ಟು ಹಾಗೂ ವೈದ್ಯರು ಇದ್ದಾರೆ.

ಮಾದೇಗೌಡರಿಗೆ ಮರಳಿ ಹುದ್ದೆ: ಪ್ರಸ್ತಾವ ತಿರಸ್ಕರಿಸಿದ ಸಚಿವ

ಬೆಂಗಳೂರು: ಶಿಕ್ಷಕರ ನೇಮಕಾತಿ ಹಗರಣದಲ್ಲಿ ಸಿಐಡಿಯಿಂದ ಬಂಧನಕ್ಕೆ ಒಳಗಾಗಿ, ಅಮಾನತುಗೊಂಡಿದ್ದ ಇಬ್ಬರು ಹಿರಿಯ ಅಧಿಕಾರಿಗಳನ್ನು ಮರಳಿ ಕರ್ತವ್ಯಕ್ಕೆ ತೆಗೆದುಕೊಳ್ಳಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಆಯುಕ್ತರು ಸಲ್ಲಿಸಿದ್ದ ಪ್ರಸ್ತಾವವನ್ನು ಸಚಿವ ಬಿ.ಸಿ.ನಾಗೇಶ್ ತಿರಸ್ಕರಿಸಿದ್ದಾರೆ.

2012–13 ಹಾಗೂ 2014–15ನೇ ಸಾಲಿನ ಸಹ ಶಿಕ್ಷಕರ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಕರ್ನಾಟಕ ಪಠ್ಯಪುಸ್ತಕ ಸಂಘದ ನಿರ್ದೇಶಕ ಎಂ.ಪಿ. ಮಾದೇಗೌಡ, ಸಮಗ್ರ ಶಿಕ್ಷಣ ಅಭಿಯಾನ ನಿರ್ದೇಶಕಿ ಗೀತಾ, ಬಿ.ಕೆ.ಎಸ್. ವರ್ಧನ್ ಹಾಗೂ 38 ಶಿಕ್ಷಕರನ್ನು ಸಿಐಡಿ ಬಂಧಿಸಿತ್ತು. ಅಧಿಕಾರಿಗಳು ಜಾಮೀನಿನ ಮೇಲೆ ಹೊರಬಂದಿದ್ದರು. ಅಮಾನತುಗೊಂಡಿದ್ದ ಅವರ ಸ್ಥಾನಕ್ಕೆ ಬೇರೆ ಅಧಿಕಾರಿಗಳನ್ನು ನೇಮಿಸಲಾಗಿತ್ತು.

'ಅಮಾನತುಗೊಂಡಿರುವ ಅವರನ್ನು ಸೇವಾ ಅನುಭವದ ಆಧಾರದ ಮೇಲೆ ಮರಳಿ ಸೇರ್ಪಡೆ ಮಾಡಿಕೊಳ್ಳಬಹುದು. ಪಠ್ಯಪುಸ್ತಕಗಳ ಟೆಂಡರ್ ಸೇರಿದಂತೆ ಹಲವು ವಿಷಯಗಳಲ್ಲಿ ಅವರ ಅನುಭವದ ಅಗತ್ಯವಿದೆ' ಎಂದು ಆಯುಕ್ತ ಆರ್. ವಿಶಾಲ್ ಅವರ ಮೌಖಿಕ ಸೂಚನೆ ಅನ್ವಯ ಇಲಾಖೆಯ ಸಿಬ್ಬಂದಿ, ಸಚಿವರಿಗೆ ಕಡತವನ್ನು ಮಂಡಿಸಿದ್ದರು.

'ಕಳಂಕಿತ ಅಧಿಕಾರಿಗಳ ವಿಷಯದಲ್ಲಿ ರಾಜಿಯ ಪ್ರಶ್ನೆಯೇ ಇಲ್ಲ. ಈಗಾಗಲೇ ಅವರ ಸ್ಥಾನಕ್ಕೆ ಬೇರೆ ಅಧಿಕಾರಿಗಳನ್ನು ನೇಮಿಸಲಾಗಿದೆ. ಕೋರ್ಟ್ ತೀರ್ಪಿಗೂ ಮೊದಲು ಅವಕಾಶ ನೀಡಲು ಸಾಧ್ಯವಿಲ್ಲ' ಎಂದು ಸಚಿವ ನಾಗೇಶ್ ಅವರು ಪ್ರಸ್ತಾವ ತಿರಸ್ಕಾರಕ್ಕೆ ಕಾರಣ ನೀಡಿದ್ದಾರೆ.

58ಕ್ಕೆ ನಿವೃತ್ತಿ: ಕೆಎಸ್‌ಸಿಎಗೆ ನೋಟಿಸ್

ಹೈಕೋರ್ಟ್ ಸುದ್ದಿ

ಬೆಂಗಳೂರು: ರಾಜ್ಯ ಸರ್ಕಾರವು ನಿವೃತ್ತಿ ವಯಸ್ಸನ್ನು 60ಕ್ಕೆ ಹೆಚ್ಚಿಸಿದ್ದರೂ 58ನೇ ವಯಸ್ಸಿನಲ್ಲೇ ತನ್ನ ನೌಕರರೊಬ್ಬರನ್ನು ನಿವೃತ್ತಿಗೊಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ (ಕೆಎಸ್‌ಸಿಎ) ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಕೆಎಸ್‌ಸಿಎ ನಿವೃತ್ತ ನೌಕರ ಜೆ.ರಾಜಕುಮಾರ್ ಎಂಬುವವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ಕಾರ್ಮಿಕ ಇಲಾಖೆ ಹಾಗೂ ಕೆಎಸ್‌ಸಿಎಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

58 ವರ್ಷ ತುಂಬಿದೆ ಎಂಬ ಕಾರಣಕ್ಕೆ ರಾಜಕುಮಾರ್ ಅವರಿಗೆ ಕೆಎಸ್‌ಸಿಎ 2022ರ ಮಾರ್ಚ್ 13ರಂದು ಪತ್ರ ಬರೆದು ತಿಳಿಸಿತ್ತು.

ಈ ಪತ್ರದ ಬಗ್ಗೆ ಅರ್ಜಿದಾರರು, 'ನನ್ನ ನಿವೃತ್ತಿಯ ಆದೇಶ ಪತ್ರವನ್ನು ಮರುಪರಿಶೀಲನೆ ಮಾಡಬೇಕು' ಎಂದು ಕೋರಿ 2022ರ ಜುಲೈ 11ರಂದು ಕೆಎಸ್‌ಸಿಎಗೆ ಪತ್ರ ಬರೆದಿದ್ದರು.

ಅರ್ಜಿಯಲ್ಲಿ ಏನಿದೆ?: 'ಖಾಸಗಿ ವಲಯದಲ್ಲಿ ನಿವೃತ್ತಿ ವಯಸ್ಸನ್ನು 58ರಿಂದ 60 ವರ್ಷಕ್ಕೆ ಹೆಚ್ಚಿಸುವ ಬಗ್ಗೆ ಕರ್ನಾಟಕ ಕೈಗಾರಿಕಾ ಸ್ಥಾಪನೆ ನಿಯಮಗಳು-1961ರ ವೇಳಾಪಟ್ಟಿ-1 ಅನ್ನು ತಿದ್ದುಪಡಿ ಮಾಡಿ ರಾಜ್ಯ ಸರ್ಕಾರವು 2017ರ ಮಾರ್ಚ್ 27ರಂದು ಅಧಿಸೂಚನೆ ಹೊರಡಿಸಿದೆ. ಖಾಸಗಿ ಸಂಸ್ಥೆಗಳಿಗೆ ಸಂಬಂಧಿಸಿದಂತೆ ನಿವೃತ್ತಿಯ ವಯಸ್ಸು 60 ವರ್ಷಗಳಾಗಿರಬೇಕು ಎಂದು ಈ ಹಿಂದಿನ ಹಲವು ಪ್ರಕರಣಗಳಲ್ಲಿ ಹೈಕೋರ್ಟ್ ಕೂಡ ತೀರ್ಪು ನೀಡಿದೆ' ಎಂಬ ಅಂಶಗಳನ್ನು ಅರ್ಜಿಯಲ್ಲಿ ವಿವರಿಸಲಾಗಿದೆ.

ಬಾಡಿಗೆ ಮನೆಯಲ್ಲಿ ಡ್ರಗ್ಸ್ ಸಂಗ್ರಹಿಸಿ ಮಾರಾಟ

ಬೆಂಗಳೂರು: ಬಾಗಲಗುಂಟೆ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ನೈಜೀರಿಯಾದ ಇಬ್ಬರು ಪ್ರಜೆಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ವಿಕ್ಟರ್ ಹಾಗೂ ಚಿಕ್ ಬಂಧಿತರು. ಇವರಿಂದ ₹25 ಲಕ್ಷ ಮೌಲ್ಯದ ಎಂಡಿಎಂಎ, ಎಕ್ಸ್‌ಟೆಸಿ ಮಾತ್ರೆಗಳು, ಎಲ್‌ಎಸ್‌ಡಿ ಕಾಗದ ಚೂರು ಹಾಗೂ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ವಿದ್ಯಾರ್ಥಿ ಹಾಗೂ ವ್ಯಾಪಾರ ವೀಸಾದಡಿ ನಗರಕ್ಕೆ ಬಂದಿದ್ದ ಆರೋಪಿಗಳು, ಬಾಗಲಗುಂಟೆ ಬಳಿಯ ಬಾಡಿಗೆ ಮನೆಯೊಂದರಲ್ಲಿ ವಾಸವಿದ್ದರು. ಅಕ್ರಮವಾಗಿ ಹಣ ಸಂಪಾದಿಸಲು ಡ್ರಗ್ಸ್ ಮಾರಾಟಕ್ಕೆ ಇಳಿದಿದ್ದರು. ಪೆಡ್ಲರ್ ಜೊತೆ ಒಡನಾಟ ಹೊಂದಿ, ಡ್ರಗ್ಸ್ ತರಿಸಿಕೊಳ್ಳುತ್ತಿದ್ದರು' ಎಂದರು.

'ಬಾಡಿಗೆ ಮನೆಯಲ್ಲಿ ಡ್ರಗ್ಸ್ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದ ಆರೋಪಿಗಳು, ಅದನ್ನು ಚಿಕ್ಕ ಪೊಟ್ಟಣಗಳಲ್ಲಿ ತುಂಬಿ ಮಾರುತ್ತಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಕಂಪನಿಗಳ ಉದ್ಯೋಗಿಗಳು, ಕೆಲ ಉದ್ಯಮಿಗಳು ಹಾಗೂ ಇತರರು ಆರೋಪಿಗಳ ಬಳಿ ಡ್ರಗ್ಸ್ ಖರೀದಿಸುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

'3 ಮೊಬೈಲ್‌ಗಳು, 2 ಲ್ಯಾಪ್‌ಟಾಪ್ ಸಹ ಜಪ್ತಿ ಮಾಡಲಾಗಿದೆ' ಎಂದರು.

ಹುಬ್ಬಳ್ಳಿ: ವಿರೋಧದ ನಡುವೆ 'ಈದ್ಗಾ'ದಲ್ಲಿ ಟಿಪ್ಪು ಜಯಂತಿ

ಹುಬ್ಬಳ್ಳಿ: ವಿರೋಧದ ನಡುವೆಯೇ ನಗರದ ಚನ್ನಮ್ಮ ವೃತ್ತದ ಬಳಿ ಇರುವ ಈದ್ಗಾ ಮೈದಾನದಲ್ಲಿ ಎಐಎಂಐಎಂ ಪಕ್ಷ ಮತ್ತು ಸಮತಾ ಸೈನಿಕ ದಳದ ಕಾರ್ಯಕರ್ತರು ಗುರುವಾರ ಟಿಪ್ಪು ಸುಲ್ತಾನ್ ಜಯಂತಿ ಆಚರಿಸಿದರು. ಜಯಂತಿ ಕಾರ್ಯಕ್ರಮ ವಿರೋಧಿಸಿ ಪ್ರತಿಭಟಿಸಲು ಮುಂದಾದ ಶ್ರೀರಾಮ ಸೇನೆ ಸಂಸ್ಥಾಪಕ ಅಧ್ಯಕ್ಷ ಪ್ರಮೋದ ಮುತಾಲಿಕ್ ಮತ್ತು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ಮಹಾನಗರ ಪಾಲಿಕೆ ಮೇಯರ್ ಈರೇಶ ಅಂಚಟಗೇರಿ, ವಿರೋಧ ಪಕ್ಷಗಳ ವಿರೋಧ ಲೆಕ್ಕಿಸದೆ ಬುಧವಾರ ಜಯಂತಿಗೆ ಅನುಮತಿ ಕೊಟ್ಟಿದ್ದರು. ಮೈದಾನದಲ್ಲಿ ಜಯಂತಿ ಬೇಡ ಎಂದರೂ, ಎಐಎಂಐಎಂ ಪಕ್ಷದ ಜಿಲ್ಲಾ ಜಂಟಿ ಕಾರ್ಯದರ್ಶಿ ವಿಜಯ ಗುಂಟ್ರಾಳ ಅವರು ಪೊಲೀಸ್ ಮತ್ತು ಪಾಲಿಕೆಯ ಅನುಮತಿ ಪಡೆದು, ತಮ್ಮ ಬೆಂಬಲಿಗರು ಹಾಗೂ ದಳದ ಕಾರ್ಯಕರ್ತರೊಂದಿಗೆ ಜಯಂತಿ ಆಚರಿಸಿದರು.

> **ಈದ್ಗಾ ಮೈದಾನದಲ್ಲಿ ಟಿಪ್ಪು ಜಯಂತಿ ಆಚರಣೆಯನ್ನು ಬಿಜೆಪಿ ತಡೆಯಬಹುದಿತ್ತು. ಆದರೆ, ರಾಜಕೀಯ ಲಾಭಕ್ಕಾಗಿ ಅವರೇ ಈ ತಂತ್ರಗಾರಿಕೆ ಮಾಡಿದ್ದಾರೆ**
> **ಪ್ರಮೋದ ಮುತಾಲಿಕ್**
> ಶ್ರೀರಾಮ ಸೇನೆಯ ಸಂಸ್ಥಾಪಕ ಅಧ್ಯಕ್ಷ

ಕಾರ್ಯಕರ್ತರು ಟಿಪ್ಪು ಚಿತ್ರಕ್ಕೆ ಪೂಜೆ ಸಲ್ಲಿಸಿದರು. ಶಹಜಹಾನ್ ದೇಸಾಯಿ ಮೌಲ್ವಿ ಅವರು, ಕುರಾನ್ ಪಠಣ ಮಾಡಿದರು. ಕಾರ್ಯಕರ್ತರು ಟಿಪ್ಪು ಪರ ಘೋಷಣೆ ಕೂಗಿದರು. ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದರಿಂದ, ಮಧ್ಯಾಹ್ನ 12ಕ್ಕೆ ನಿಗದಿಯಾಗಿದ್ದ ಜಯಂತಿಯು ಬೆಳಿಗ್ಗೆ 11.30ಕ್ಕೆ ನಡೆಯಿತು. ನಂತರ, ಆಯೋಜಕರು ಚಿತ್ರ ತೆರವು ಮಾಡಿದ ಮೇಲೆ ಪೊಲೀಸರು ಮೈದಾನದ ಗೇಟ್‌ಗೆ ಬೀಗ ಹಾಕಿದರು.

ಬ್ಲ್ಯಾಕ್‌ಮೇಲ್: ಇನ್‌ಸ್ಟಾಗ್ರಾಂ ಮೂಲಕ ಯುವತಿ ಪರಿಚಯ; ಸ್ನೇಹಿತನನ್ನೇ ದೋಚಿದ ಆರೋಪಿಗಳು

'ಐಪಿಎಸ್' ಹೆಸರು ಹೇಳಿ ₹ 15.90 ಲಕ್ಷ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಂ ಮೂಲಕ ಪರಿಚಯವಾದ ಯುವತಿ ಜೊತೆಗಿನ ಸಲುಗೆಯ ಫೋಟೊ-ವಿಡಿಯೊ ಇಟ್ಟುಕೊಂಡು ಐಪಿಎಸ್ ಅಧಿಕಾರಿ ಹೆಸರಿನಲ್ಲಿ ಬ್ಲ್ಯಾಕ್‌ಮೇಲ್ ಮಾಡಿ ₹15.90 ಲಕ್ಷ ಸುಲಿಗೆ ಮಾಡಲಾಗಿದ್ದು, ಈ ಸಂಬಂಧ ತಿಲಕ್‌ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಚಾಮರಾಜಪೇಟೆ ನಿವಾಸಿಯಾದ 20 ವರ್ಷದ ಯುವಕ ಕೃತ್ಯದ ಬಗ್ಗೆ ದೂರು ನೀಡಿದ್ದಾರೆ. ಆರೋಪಿಗಳು ಎನ್ನಲಾದ ಸುನೀಲ್, ಹೇಮಂತ್ ಹಾಗೂ ಪ್ರವೀಣ್ ಎಂಬುವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಕೃತ್ಯ ನಡೆದ ಸ್ಥಳದ ಆಧಾರದಲ್ಲಿ ಪ್ರಕರಣವನ್ನು ಚಾಮರಾಜಪೇಟೆ ಠಾಣೆಗೆ ವರ್ಗಾಯಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮುಖ್ಯಾಂಶಗಳು
- ತಿಲಕ್‌ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ
- ಚಾಮರಾಜಪೇಟೆಯಲ್ಲಿ ನೆಲೆಸಿರುವ ಯುವಕನಿಂದ ಕೃತ್ಯದ ಬಗ್ಗೆ ದೂರು
- ಚಾಮರಾಜಪೇಟೆ ಠಾಣೆಗೆ ಪ್ರಕರಣ ವರ್ಗಾವಣೆ

'ಆರೋಪಿಗಳು, ದೂರುದಾರರ ಸ್ನೇಹಿತರು. ದೂರುದಾರರು ನೀಡಿದ್ದ ಫೋಟೊ ಹಾಗೂ ವಿಡಿಯೊವನ್ನು ದುರ್ಬಳಕೆ ಮಾಡಿಕೊಂಡಿದ್ದ ಸ್ನೇಹಿತರು, ₹ 15.90 ಲಕ್ಷ ನಗದು ಹಾಗೂ 99 ಗ್ರಾಂ ಚಿನ್ನಾಭರಣ ದೋಚಿದ್ದಾರೆ. ಈ ಸಂಗತಿ ದೂರಿನಲ್ಲಿದೆ' ಎಂದು ಮೂಲಗಳು ತಿಳಿಸಿವೆ.

'ಚಾಂದಿನಿ' ಖಾತೆಯಿಂದ ರಿಕ್ವೆಸ್ಟ್: 'ದೂರುದಾರ ಯುವಕ, ಇನ್‌ಸ್ಟಾಗ್ರಾಂನಲ್ಲಿ ಖಾತೆ ಹೊಂದಿದ್ದಾರೆ. ಚಾಂದಿನಿ ಎಂಬ ಯುವತಿ ಫ್ರೆಂಡ್ ರಿಕ್ವೆಸ್ಟ್ ಕಳುಹಿಸಿದ್ದರು. ಅದನ್ನು ದೂರುದಾರ ಸ್ವೀಕರಿಸಿದ್ದರು. ನಂತರ, ಇಬ್ಬರು ಪರಸ್ಪರ ಚಾಟಿಂಗ್ ಮಾಡಲಾರಂಭಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದಿನ ಕಳೆದಂತೆ ಇಬ್ಬರ ನಡುವೆ ಸಲುಗೆ ಬೆಳೆದಿತ್ತು. ವಿಡಿಯೊ ಕರೆ ಮಾಡಲಾರಂಭಿಸಿದ್ದ ಯುವತಿ, ಲೈಂಗಿಕವಾಗಿ ಪ್ರಚೋದಿಸುವ ರೀತಿಯಲ್ಲಿ ಮಾತನಾಡುತ್ತಿದ್ದರು. ದೂರುದಾರ ಯುವಕ, ಯುವತಿ ಜೊತೆ ಮಾತನಾಡುತ್ತಲೇ ಬಟ್ಟೆ ಬಿಚ್ಚಿ ಬೆತ್ತಲಾಗುತ್ತಿದ್ದರು. ಇದೇ ಸಂದರ್ಭದಲ್ಲೇ ಯುವತಿ, ದೂರುದಾರ ಯುವಕನ ಬೆತ್ತಲೆ ಫೋಟೊ ಹಾಗೂ ವಿಡಿಯೊ ಚಿತ್ರೀಕರಿಸಿಟ್ಟುಕೊಂಡಿದ್ದರು. ಅವುಗಳನ್ನು ದೂರುದಾರರಿಗೂ ಕಳುಹಿಸಿದ್ದರು' ಎಂದು ತಿಳಿಸಿವೆ.

'ನೇರವಾಗಿ ಭೇಟಿಯಾಗಿ ಖಾಸಗಿ ಕ್ಷಣ ಕಳೆಯುವಂತೆ ಯುವತಿ ಒತ್ತಾಯಿಸಿದ್ದರು. ಅದಕ್ಕೆ ಯುವಕ ಒಪ್ಪಿರಲಿಲ್ಲ. ಸಿಟ್ಟಾದ ಯುವತಿ, ಫೋಟೊ–ವಿಡಿಯೊ ಇರುವುದಾಗಿ ಬ್ಲ್ಯಾಕ್‌ಮೇಲ್ ಮಾಡಲಾರಂಭಿಸಿದ್ದರು. ಹೆದರಿದ್ದ ದೂರುದಾರ ಯುವಕ, ಯುವತಿಯನ್ನು ಇನ್‌ಸ್ಟಾಗ್ರಾಂನಲ್ಲಿ ಬ್ಲಾಕ್ ಮಾಡಿದ್ದರು. ಇದೇ ಸಂಗತಿಯನ್ನು ದೂರುದಾರ ಯುವಕ, ಆರೋಪಿಗಳಾದ ಸ್ನೇಹಿತರಿಗೆ ತಿಳಿಸಿದ್ದರು. ಜೊತೆಗೆ, ಯುವತಿ ಜೊತೆಗಿನ ಸಲುಗೆ ವಿಡಿಯೊ–ಫೋಟೊಗಳನ್ನೂ ಸ್ನೇಹಿತರಿಗೆ ಕಳುಹಿಸಿದ್ದರು' ಎಂದು ಮೂಲಗಳು ಹೇಳಿವೆ.

ಸಂಚು ರೂಪಿಸಿ ಕೃತ್ಯ

'ಫೋಟೊ–ವಿಡಿಯೊಗಳನ್ನು ತಮ್ಮಲ್ಲೇ ಹಂಚಿಕೊಂಡಿದ್ದ ಆರೋಪಿಗಳು, ಅವುಗಳನ್ನು ಇಟ್ಟುಕೊಂಡು ಸ್ನೇಹಿತನಾದ ದೂರುದಾರರನ್ನೇ ಬ್ಲ್ಯಾಕ್‌ಮೇಲ್ ಮಾಡಿ ಹಣ ಸುಲಿಗೆ ಮಾಡಲು ಸಂಚು ರೂಪಿಸಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ದೂರುದಾರರಿಗೆ ಕರೆ ಮಾಡಿದ್ದ ಸ್ನೇಹಿತರು, 'ನನಗೆ ಪರಿಚಯವಿರುವ ಐಪಿಎಸ್ ಅಧಿಕಾರಿಯೊಬ್ಬರು ಕರೆ ಮಾಡಿದ್ದರು. ನಿನ್ನ ಬೆತ್ತಲೆ ಫೋಟೊ–ವಿಡಿಯೊ ಸಮೇತ ಯುವತಿಯೊಬ್ಬರು ದೂರು ನೀಡಿರುವುದಾಗಿ ಅವರು ಹೇಳುತ್ತಿದ್ದಾರೆ. ಹಣ ನೀಡಿದರೆ ಸಂಧಾನ ಮಾಡಿಸುವುದಾಗಿಯೂ ತಿಳಿಸಿದ್ದಾರೆ' ಎಂದಿದ್ದರು. ಅದರಿಂದ ಹೆದರಿದ್ದ ದೂರುದಾರ, 99 ಗ್ರಾಂ ಚಿನ್ನದ ಸರ ಕೊಟ್ಟಿದ್ದರು. ಅದನ್ನು ಮಾರಿ ಸಂಧಾನ ಮಾಡಿಸುವಂತೆ ಹೇಳಿದ್ದರು' ಎಂದು ಪೊಲೀಸ್ ಮೂಲಗಳು ವಿವರಿಸಿವೆ.

'99 ಗ್ರಾಂ ಚಿನ್ನ ಸಾಕಾಗುವುದಿಲ್ಲವೆಂದು ಹೇಳಿದ್ದ ಆರೋಪಿಗಳು, ಐಪಿಎಸ್ ಅಧಿಕಾರಿ ಹಾಗೂ ಸಿಸಿಬಿ ಪೊಲೀಸರ ಹೆಸರು ಹೇಳಿ ಹಂತ ಹಂತವಾಗಿ ₹ 15.90 ಲಕ್ಷ ಸುಲಿಗೆ ಮಾಡಿದ್ದರು. ಇದಾದ ನಂತರ ಪುನಃ ಹಣ ಕೇಳಿದ್ದರು. ಬೇಸತ್ತ ಸಂತ್ರಸ್ತ, ಠಾಣೆಗೆ ಬಂದು ಸ್ನೇಹಿತರ ವಿರುದ್ಧ ದೂರು ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಪರಿಷ್ಕರಣೆಯಾಗದ ಪ್ರಾಧಿಕಾರ, ಸಾಂಸ್ಕೃತಿಕ ಅಕಾಡೆಮಿಗಳ ಜಾಲತಾಣ

ಮಾಜಿಗಳೇ ಹಾಲಿ ಅಧ್ಯಕ್ಷರು!

● ವರುಣ ಹೆಗಡೆ



ಕರ್ನಾಟಕ ಸಾಹಿತ್ಯ ಅಕಾಡೆಮಿ ಜಾಲತಾಣದ ಮುಖಪುಟ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವ್ಯಾಪ್ತಿಯಲ್ಲಿನ ಅಕಾಡೆಮಿಗಳು ಹಾಗೂ ಪ್ರಾಧಿಕಾರಗಳ ಅಧ್ಯಕ್ಷರ ಅಧಿಕಾರಾವಧಿ ಮುಗಿದು ತಿಂಗಳಾಗುತ್ತಾ ಬಂದರೂ ಜಾಲತಾಣಗಳಲ್ಲಿ ಮಾತ್ರ ಅವರೇ ಅಧ್ಯಕ್ಷರಾಗಿ ಉಳಿದಿದ್ದಾರೆ.

ನಾಟಕ, ಸಾಹಿತ್ಯ ಸೇರಿ ವಿವಿಧ ಅಕಾಡೆಮಿಗಳ ಅಧ್ಯಕ್ಷರ ಹಾಗೂ ಸದಸ್ಯರ ಮೂರು ವರ್ಷದ ಅಧಿಕಾರವಧಿ ಕಳೆದ ತಿಂಗಳೇ ಅಂತ್ಯವಾಗಿದೆ. ಆದ್ದರಿಂದ ಸರ್ಕಾರವು ಇಲಾಖೆಯ ಜಂಟಿ ನಿರ್ದೇಶಕರನ್ನು ಆಡಳಿತಾಧಿಕಾರಿಗಳನ್ನಾಗಿ ನೇಮಕ ಮಾಡಿ, ಆದೇಶ ಹೊರಡಿಸಿತ್ತು. ಕರ್ನಾಟಕ ಯಕ್ಷಗಾನ ಅಕಾಡೆಮಿ ಹಾಗೂ ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷರ ಅಧಿಕಾರಾವಧಿ ವರ್ಷ ಕಳೆಯದಿದ್ದರೂ ಅವರ ನೇಮಕಾತಿಯನ್ನು ರದ್ದುಗೊಳಿಸಿ, ಅವರ ಸ್ಥಾನಕ್ಕೂ ಆಡಳಿತಾಧಿಕಾರಿಯನ್ನು ನೇಮಕ ಮಾಡಲಾಗಿತ್ತು. ಆದರೆ, ಅಕಾಡೆಮಿಗಳ ವೆಬ್‌ಸೈಟ್‌ಗಳಲ್ಲಿ ಈ ಬಗ್ಗೆ ಮಾಹಿತಿಯನ್ನು ಪರಿಷ್ಕರಿಸಿಲ್ಲ. ಇದರಿಂದಾಗಿ ಅಧ್ಯಕ್ಷರುಗಳ ಅಧಿಕಾರಾವಧಿ ಮುಗಿದರೂ ಜಾಲತಾಣಗಳಲ್ಲಿ ಅವರೇ ಹಾಲಿ ಅಧ್ಯಕ್ಷರಾಗಿ ಉಳಿದಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಜಾಲತಾಣದಲ್ಲಿ ಬಿ.ವಿ. ವಸಂತಕುಮಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ ಜಾಲತಾಣದಲ್ಲಿ ಡಿ. ಮಹೇಂದ್ರ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಜಾಲತಾಣದಲ್ಲಿ ಆನೂರು ಅನಂತಕೃಷ್ಣ ಶರ್ಮಾ, ಕರ್ನಾಟಕ ಜಾನಪದ ಅಕಾಡೆಮಿ ಜಾಲತಾಣದಲ್ಲಿ ಮಂಜಮ್ಮ ಜೋಗತಿ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಜಾಲತಾಣದಲ್ಲಿ ಅಜಕ್ಕಳ ಗಿರೀಶ್ ಭಟ್ ಸೇರಿ ವಿವಿಧ ಅಕಾಡೆಮಿ ಹಾಗೂ ಪ್ರಾಧಿಕಾರಗಳ ಜಾಲತಾಣದಲ್ಲಿ ಹಳೆಯ ಕಾರ್ಯಕಾರಿ ಸಮಿತಿಯ ವಿವರವನ್ನು ಹಾಗೇ ಉಳಿಸಲಾಗಿದೆ. ಇದು ಕಲಾವಿದರು ಹಾಗೂ ಜನಸಾಮಾನ್ಯರ ಗೊಂದಲಕ್ಕೆ ಕಾರಣವಾಗಿದೆ.

ಜಾಲತಾಣ ಹೊಂದಿಲ್ಲ: ಕರ್ನಾಟಕ ಯಕ್ಷಗಾನ ಅಕಾಡೆಮಿಯ ನೂತನ ಜಾಲತಾಣದಲ್ಲಿ ಅಧ್ಯಕ್ಷರು ಹಾಗೂ ಸದಸ್ಯರ ಮಾಹಿತಿಯನ್ನು ಈ ಮೊದಲು ದಾಖಲಿಸಿರಲಿಲ್ಲ. ಆದ್ದರಿಂದ ಈ ಬಗ್ಗೆ ವಿವರ ಸಿಗುವುದಿಲ್ಲ. ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಕರ್ನಾಟಕ ಬಯಲಾಟ ಅಕಾಡೆಮಿ ಸೇರಿ ಕೆಲ ಅಕಾಡೆಮಿಗಳು ಜಾಲತಾಣ ಹೊಂದಿಲ್ಲ. ಇದರಿಂದ ಕಲಾವಿದರಿಗೆ ಅಕಾಡೆಮಿಗಳ ಯೋಜನೆಗಳು, ಅರ್ಜಿ ಆಹ್ವಾನ ಸೇರಿ ವಿವಿಧ ಮಾಹಿತಿಗಳು ಕಾಲ ಕಾಲಕ್ಕೆ ದೊರೆಯದಂತಾಗಿದೆ.

‘ನಮ್ಮ ಕಾರ್ಯಕಾರಿ ಸಮಿತಿಯ ಅಧಿಕಾರಾವಧಿ ಮುಗಿದಿದೆ. ಅಕಾಡೆಮಿಯ ಜಾಲತಾಣ ಪರಿಷ್ಕರಣೆ ಆಗದಿರುವುದನ್ನು ಇಲಾಖೆಯ ಅಧಿಕಾರಿಗಳ ಗಮನಕ್ಕೆ ತರುತ್ತೇನೆ’ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ನಿಕಟಪೂರ್ವ ಅಧ್ಯಕ್ಷ ಬಿ.ವಿ. ವಸಂತಕುಮಾರ್ ತಿಳಿಸಿದರು.

‘ಇಲಾಖೆ ವ್ಯಾಪ್ತಿಯ ಜಾಲತಾಣಗಳು ಸಮರ್ಪಕವಾಗಿ ನಿರ್ವಹಣೆ ಆಗುತ್ತಿಲ್ಲ ಎಂಬ ದೂರುಗಳು ಮೊದಲಿನಿಂದಲೂ ಇವೆ. ಕಾಲಕಾಲಕ್ಕೆ ಮಾಹಿತಿಯನ್ನೂ ಪರಿಷ್ಕರಣೆ ಮಾಡಲಾಗುತ್ತಿಲ್ಲ. ಇದರಿಂದಾಗಿ ಈ ಹಿಂದಿನ ಕಾರ್ಯಕಾರಿ ಸಮಿತಿಯ ವಿವರ ಹಾಗೇ ಉಳಿದಿದೆ. ಸಂಬಂಧಪಟ್ಟವರ ಗಮನಕ್ಕೆ ತಂದು, ದೋಷವನ್ನು ಸರಿಪಡಿಸಲಾಗುವುದು’ ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಇಲಾಖೆ ನಿರ್ದೇಶಕ ಪ್ರಕಾಶ್ ನಿಟ್ಟಾಲಿ ದೂರವಾಣಿ ಸಂಪರ್ಕಕ್ಕೆ ಲಭ್ಯವಾಗಲಿಲ್ಲ.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪರಿಷ್ಕರಣೆ

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರ ಅಧಿಕಾರಾವಧಿಯು 2022ರ ಅ.14ರಂದು ಮುಕ್ತಾಯಗೊಂಡಿದೆ. ಹೊಸ ಅಧ್ಯಕ್ಷರ ನೇಮಕದವರೆಗೆ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಪ್ರಾಧಿಕಾರದ ಜಾಲತಾಣದಲ್ಲಿ ಮಾಹಿತಿಯನ್ನು ಪರಿಷ್ಕರಣೆ ಮಾಡಲಾಗಿದ್ದು, ಅಧ್ಯಕ್ಷರ ಮಾಹಿತಿಯಲ್ಲಿ ಸುನಿಲ್ ಕುಮಾರ್ ಅವರ ವಿವರ ನೀಡಲಾಗಿದೆ.

ನುಸುಳುವಿಕೆ ಚೀನಾದ ವ್ಯವಸ್ಥಿತ ಕಾರ್ಯತಂತ್ರ: ಅಧ್ಯಯನ ವರದಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಗಡಿಯಲ್ಲಿನ ಪಶ್ಚಿಮ ಮತ್ತು ಕೇಂದ್ರ ವಲಯದ ಪ್ರದೇಶಗಳ ಮೇಲೆ ಹತೋಟಿ ಸಾಧಿಸಲು ಚೀನಾ ವ್ಯವಸ್ಥಿತವಾಗಿ ಒಳನುಸುಳುವಿಕೆಯಲ್ಲಿ ತೊಡಗಿದೆ ಎಂದು ನೂತನ ಅಧ್ಯಯನ ವರದಿ ತಿಳಿಸಿದೆ.

ಗಡಿಯಲ್ಲಿ ಒಳನುಸುಳುವಿಕೆ ಆಕಸ್ಮಿಕವಲ್ಲ. ಅದು, ವ್ಯವಸ್ಥಿತಕಾರ್ಯತಂತ್ರ ಎಂದು ಈ ಅಧ್ಯಯನ ನಡೆಸಿದ ನಾರ್ಥ್ ವೆಸ್ಟರನ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ಮತ್ತು ನೆದರ್‌ಲ್ಯಾಂಡ್ ಯೂನಿವರ್ಸಿಟಿ, ರಕ್ಷಣಾ ಅಕಾಡೆಮಿಯ ಸದಸ್ಯರು ವರದಿಯಲ್ಲಿ ತಿಳಿಸಿದ್ದಾರೆ.

ಒಳನುಸುಳುವಿಕೆ ಕುರಿತಂತೆ 2006 ರಿಂದ 2020ರವರೆಗಿನ ಅಂಕಿ ಅಂಶಗಳು ಮತ್ತು ಆ ನಂತರ ಬಳಸಲಾದ ಕಾರ್ಯವಿಧಾನ ಹಾಗೂ ಸಾಂಖ್ಯಿಕ ಸೂತ್ರಗಳನ್ನು ವಿಶ್ಲೇಷಿಸಿ ಅಧ್ಯಯನ ತಂಡವು ಈ ತೀರ್ಮಾನಕ್ಕೆ ಬಂದಿದೆ.

ಕಾರ್ಯವಿಧಾನದ ವಿಶ್ಲೇಷಣೆ ಆಧರಿಸಿ ಗಡಿ ಭಾಗದ ಪಶ್ಚಿಮ ವಲಯದಲ್ಲಿನ (ಅಕ್ಸಾಯ್ ಚಿನ್) ಅತಿಕ್ರಮಣವು ವ್ಯವಸ್ಥಿತ ಕಾರ್ಯತಂತ್ರ. ಈಗಿನ ಚೀನಾದ ಸರ್ಕಾರದ ಕಾರ್ಯತಂತ್ರ ಕುರಿತ ಇತರೆ ಅಧ್ಯಯನಗಳನ್ನು ಈ ವರದಿಗಾಗಿ ಅವಲೋಕಿಸಲಾಗಿದೆ ಎಂದು ‘ಪಿಎಲ್‌ಒಎಸ್ ಒನ್’ ಜರ್ನಲ್‌ನಲ್ಲಿ ಪ್ರಕಟವಾಗಿರುವ ವರದಿ ತಿಳಿಸಿದೆ.

ಭೌಗೋಳಿಕ ವಿಶ್ಲೇಷಣೆ ಆಧರಿಸಿ ಚೀನಾ 13 ಆಯಕಟ್ಟಿನ ತಾಣಗಳನ್ನು ಗುರುತಿಸಿದೆ. ಅವುಗಳೆಂದರೆ ಡೆಪ್ಸಂಗ್, ಗಾಲ್ವಾನ್, ಹಾಟ್‌ಸ್ಪ್ರಿಂಗ್, ಪಾಂಗಾಂಗ್, ಡೆಮ್‌ಚೊಕ್, ಚುಮರ್, ಬರಹೋಟಿ, ಸಿಕ್ಕಿಂ, ತವಾಂಗ್, ಹುಂಚೆ, ಬಿಷಿಂಗ್, ಅನಿನಿ, ಕಿಬಿತು. ಇವುಗಳಲ್ಲಿ ಮೊದಲ ಆರು ತಾಣಗಳು ಪಶ್ಚಿಮ ವಲಯದಲ್ಲಿ ಇದ್ದರೆ, ಉಳಿದ ಆರು ತಾಣಗಳು ಪೂರ್ವ ಹಾಗೂ ಬರಹೋಟಿ ತಾಣವು ಉತ್ತರಾಖಂಡ್ ವ್ಯಾಪ್ತಿಯಲ್ಲಿ ಬರಲಿದೆ.

ಈ ಸ್ಥಳಗಳಲ್ಲಿ ಬಿಗುವಿನ ವಾತಾವರಣ ಸೃಷ್ಟಿಸಿದಲ್ಲಿ 3,488 ಕಿ.ಮೀ.ಉದ್ದವಿರುವ ವಾಸ್ತವ ಗಡಿರೇಖೆಯುದ್ದಕ್ಕೂ ಘರ್ಷಣೆಯ ವಾತಾವರಣ ಉಂಟು ಮಾಡಬಹುದು ಎಂಬುದು ಈ ಕಾರ್ಯತಂತ್ರದ ಭಾಗವಾಗಿತ್ತು.

ಒಳನುಸುಳುವಿಕೆ ಕುರಿತ ಹಲವು ಬೆಳವಣಿಗೆಗಳನ್ನು ಗಮನಿಸಿದರೆ, ಇದೊಂದು ವ್ಯವಸ್ಥಿತ ಕಾರ್ಯತಂತ್ರ ಎಂದು ಮನವರಿಕೆಯಾಗಲಿದೆ ಎಂದು ಅಧ್ಯಯನ ತಂಡದ ಹಿರಿಯ ಸದಸ್ಯ ವಿ.ಎಸ್.ಸುಬ್ರಹ್ಮಣಿಯನ್ ಅಭಿಪ್ರಾಯಪಡುತ್ತಾರೆ. ಇವರು ನಾರ್ಥ್ ವೆಸ್ಟರನ್ ಮ್ಯಾಕ್‌ಕಾರ್ಮಿಕ್ ಎಂಜಿನಿಯರಿಂಗ್ ಸ್ಕೂಲ್‌ನಲ್ಲಿ ಪ್ರೊಫೆಸರ್ ಆಗಿದ್ದಾರೆ.

ಒಳನುಸುಳುವಿಕೆ ಎರಡು ವಲಯಗಳಲ್ಲಿ ಅಂದರೆ ಅಕ್ಸಾಯ್ ಚಿನ್ ಮತ್ತು ಅರುಣಾಚಲ ಪ್ರದೇಶ ಭಾಗದಲ್ಲಿ ಹೆಚ್ಚು ಕಂಡುಬಂದವು ಎಂದು ಒಳನುಸುಳುವಿಕೆ ಕುರಿತ ಮಾಧ್ಯಮ ವರದಿಗಳನ್ನು ಆಧರಿಸಿ ಅಧ್ಯಯನ ವರದಿ ತಿಳಿಸಿದೆ.

15 ವರ್ಷಗಳ ಅಂಕಿ ಅಂಶದ ಅನುಸಾರ, ಅಧ್ಯಯನಕಾರರು ವಾರ್ಷಿಕ ಸರಾಸರಿ 7.8ರಷ್ಟು ಒಳನುಸುಳುವಿಕೆ ನಡೆದಿದೆ. ಆದರೆ, ಭಾರತ ಸರ್ಕಾರದ ಅಂದಾಜಿನ ಪ್ರಕಾರ, ಈ ಪ್ರಮಾಣ ವಾರ್ಷಿಕ 300ರಷ್ಟಿದೆ. 2019ರಲ್ಲಿ ಇದು ಗರಿಷ್ಠ 663ರಷ್ಟಿದ್ದರೆ, 2007ರಲ್ಲಿ ಕನಿಷ್ಠ ಅಂದರೆ 140 ಇತ್ತು.

ಒಳನುಸುಳುವಿಕೆಯ ಕಾರ್ಯತಂತ್ರ ಅಕ್ಸೈ ಚಿನ್ ಭಾಗದಲ್ಲಿ ಸಹಯೋಗ ಯತ್ನದಿಂದ ಈ ನಡೆದಿದೆ. ಅಕ್ಸಾಯ್ ಚಿನ್ ಭಾಗದಲ್ಲಿ ಶಾಶ್ವತವಾಗಿ ನಿಯಂತ್ರಣ ಹೊಂದಲು ಚೀನಾ ಯತ್ನಿಸುತ್ತಿತ್ತು. ಇದಕ್ಕಾಗಿ ದೀರ್ಘ ಅವಧಿಗೆ ದೊಡ್ಡ ಪ್ರಮಾಣದಲ್ಲಿ ಸೇನೆ ನಿಯೋಜಿಸಲಾಗುತ್ತಿತ್ತು ಎಂದು ತಿಳಿಸಿದೆ.

ಎರಡೂವರೆ ಗಂಟೆ ಸಂಚಾರ ದಟ್ಟಣೆಯಲ್ಲಿ ಸಿಲುಕಿದ ಮಕ್ಕಳು!

ಮೌನ ಪ್ರತಿಭಟನೆ: ಉತ್ತಮ ರಸ್ತೆ ಕಲ್ಪಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪಣತ್ತೂರು ಪ್ರದೇಶದ ವಿದ್ಯಾರ್ಥಿಗಳು ಮತ್ತು ಪೋಷಕರು ಉತ್ತಮ ರಸ್ತೆಗಾಗಿ ಮೇಣದಬತ್ತಿ ಮತ್ತು ಮೊಬೈಲ್ ಟಾರ್ಚ್‌ಗಳನ್ನು ಹಿಡಿದು ಮೌನಪ್ರತಿಭಟನೆ ಮಾಡಿದ್ದಾರೆ.

ಸಂಗಪ್ಪ ದೇಸಾಯಿ ಎನ್ನುವವರು ಈ ಬಗ್ಗೆ ಟ್ವಿಟರ್‌ನಲ್ಲಿ ವಿಡಿಯೊ ಹಂಚಿಕೊಂಡಿದ್ದಾರೆ.

ಬಳಗೆರೆ-ಪಣತ್ತೂರು ರಸ್ತೆಯ ಮೂಲಕ ಸಾಗುವಾಗ ಪಣತ್ತೂರು ಕ್ರಾಸ್‌ನಲ್ಲಿ ಬುಧವಾರ ಎರಡೂವರೆ ಗಂಟೆಗಳಿಗೂ ಹೆಚ್ಚು ಕಾಲ ಸಂಚಾರ ದಟ್ಟಣೆಯಲ್ಲಿ ಸಿಲುಕಿರುವುದನ್ನು ವಿದ್ಯಾರ್ಥಿಗಳೇ ವಿವರಿಸಿದ್ದಾರೆ.

ಶಾಲೆಯಿಂದ ಮಕ್ಕಳು ಸರಿಯಾದ ಸಮಯಕ್ಕೆ ಮನೆಗೆ ಬರಲು ಸಾಧ್ಯವಾಗುತ್ತಿಲ್ಲ. ಪದೇ ಪದೇ ಇಂತಹ ಘಟನೆಗಳು ನಡೆಯುತ್ತಿವೆ ಎಂದು ಪೋಷಕರು ದೂರಿದ್ದಾರೆ.



ಮಕ್ಕಳು ಮತ್ತು ಪೋಷಕರು ಮೇಣಬತ್ತಿ ಮತ್ತು ಮೊಬೈಲ್ ಟಾರ್ಚ್ ಹಿಡಿದು ಪ್ರತಿಭಟನೆ ನಡೆಸಿದರು

ವಿಡಿಯೊ ಅನ್ನು ಮರು ಟ್ವೀಟ್ ಮಾಡಿರುವ ಕಿರಣ್ ಮಜುಂದಾರ್ ಶಾ, ‘ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಾರೆಯೇ? ರಾಜಕಾರಣಿಗಳನ್ನು ಪ್ರತಿಯೊಂದಕ್ಕೂ ದೂರಲು ಸಾಧ್ಯವಿಲ್ಲ. ಕೆಳಹಂತದ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿತ್ತು. ಅಧಿಕಾರಿಗಳ ಜತೆಗೆ ಗುತ್ತಿಗೆದಾರರು ಸಹ ಉತ್ತರದಾಯಿತ್ವ ಹೊಂದಿದ್ದಾರೆ’ ಎಂದು ಹೇಳಿದ್ದಾರೆ.

ಪ್ರತಿಭಟನೆಗೆ ಪ್ರತಿಕ್ರಿಯಿಸಿರುವ ಹಲವರು, ಈ ಪ್ರದೇಶಕ್ಕೂ ಪ್ರಧಾನಿ ಅವರು ಭೇಟಿ ನೀಡಲಿ ಎಂದು ಒತ್ತಾಯಿಸಿದ್ದಾರೆ.

ಪೈಥಾನ್: ಗುತ್ತಿಗೆ ಭಾಗಶಃ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಗುಂಡಿಗಳನ್ನು ಪೈಥಾನ್ ಯಂತ್ರದಲ್ಲಿ ದುರಸ್ತಿ ಮಾಡಲು ಅಮೆರಿಕನ್ ರೋಡ್ ಟೆಕ್ನಾಲಜಿ ಆ್ಯಂಡ್ ಸಲ್ಯೂಷನ್ ಸಂಸ್ಥೆಗೆ ನೀಡಿದ್ದ ಗುತ್ತಿಗೆಯನ್ನು ಬಿಬಿಎಂಪಿ ಭಾಗಶಃ ರದ್ದುಪಡಿಸಿದೆ.

ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳಲ್ಲಿ ಗುಂಡಿಗಳಿಲ್ಲದಂತೆ ಕಾರ್ಯನಿರ್ವಹಿಸಲು ಗುತ್ತಿಗೆ ನೀಡಲಾಗಿತ್ತು. ಗುಣಮಟ್ಟದ ಕೊರತೆ, ಶೀಘ್ರವಾಗಿ ದುರಸ್ತಿ ಕಾರ್ಯ ಕೈಗೊಳ್ಳದಿರುವುದು ಗುತ್ತಿಗೆ ರದ್ದುಪಡಿಸಿದ ಕಾರಣಗಳಾಗಿವೆ.

ಪೈಥಾನ್ ಯಂತ್ರದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯವನ್ನು ಕಂಪನಿ ನಿರ್ವಹಿಸುತ್ತಿಲ್ಲ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಸಮಾಧಾನ ವ್ಯಕ್ತಪಡಿಸಿದರು. ಈ ಕಂಪನಿಯ ಗುತ್ತಿಗೆಯನ್ನು ರದ್ದು ಮಾಡಲು ಸರ್ಕಾರಕ್ಕೆ ಶಿಫಾರಸು ಮಾಡಿದ್ದರು. ಗಡುವು ಮೀರಿದರೂ ಕಂಪನಿಯು 964 ರಸ್ತೆ ಗುಂಡಿಗಳನ್ನು ಮುಚ್ಚಿರಲಿಲ್ಲ ಎಂದು ಎಂಜಿನಿಯರ್‌ಗಳು ವರದಿ ನೀಡಿದ್ದರು.

ಪ್ಯಾಕೇಜ್ ‘ಎ’ನಲ್ಲಿ 90 ರಸ್ತೆಗಳ 147 ಕಿಮೀ ರಸ್ತೆಗಳಿವೆ. ಈ ಪ್ಯಾಕೇಜ್ ಗುತ್ತಿಗೆಯನ್ನು ರದ್ದುಪಡಿಸಲಾಗಿದೆ. ಹೊಸಕೆರೆಹಳ್ಳಿ ಮುಖ್ಯರಸ್ತೆ, ಮಾಗಡಿ ಮುಖ್ಯರಸ್ತೆ, ಕಾರ್ಡ್ ರಸ್ತೆ, ಹರೆಕೃಷ್ಣ ರಸ್ತೆ, ವಾಟಾಳ್ ನಾಗರಾಜ್ ರಸ್ತೆ, ಡಾ. ರಾಜ್‌ಕುಮಾರ್ ರಸ್ತೆ, ಸರ್ಜಾಪುರ ಮುಖ್ಯ ರಸ್ತೆ, ಎಂ.ಜಿ. ರಸ್ತೆ, ಸ್ಯಾಂಕಿ ರಸ್ತೆ, ಕಬ್ಬನ್ ರಸ್ತೆ ಮತ್ತು ಬಾಣಸವಾಡಿ ಮುಖ್ಯರಸ್ತೆ ಪ್ಯಾಕೇಜ್ ‘ಎ’ನಲ್ಲಿವೆ.

ಪ್ಯಾಕೇಜ್ ಎನಲ್ಲಿರುವ ಗಾಂಧಿಬಜಾರ್ ರಸ್ತೆ, ಗುಬ್ಬಿ ತೋಟದಪ್ಪ ರಸ್ತೆ ಮತ್ತು ನಾಗರಬಾವಿ ರಸ್ತೆಗಳನ್ನು ಬಿಬಿಎಂಪಿಯ ಯೋಜನಾ ವಿಭಾಗ ನಿರ್ವಹಿಸುತ್ತಿದೆ. ಪ್ಯಾಕೇಜ್ ‘ಬಿ’ ಮತ್ತು ‘ಸಿ’ ಗುತ್ತಿಗೆ ಕಂಪನಿಯೊಂದಿಗೆ ಮುಂದುವರಿಯಲಿದೆ.

ಪೊಲೀಸರಿಂದ ಸುಳ್ಳು ಪ್ರಕರಣ: ಆಯೋಗಕ್ಕೆ ದೂರು

ಪ್ರಜಾವಾಣಿ ವಾರ್ತೆ



ಹನುಮಂತರಾಜು

ನೆಲಮಂಗಲ: ‘ಪೊಲೀಸರು ಸುಳ್ಳು ಪ್ರಕರಣ ದಾಖಲಿಸಿ ಮಾನಹರಣ ಮಾಡಿದ್ದಾರೆ. ಸಮಾಜದಲ್ಲಿ ಕಳಂಕಿತರಂತೆ ಬಿಂಬಿಸಿದ್ದಾರೆ. ಪ್ರಕರಣದ ವಿಚಾರಣೆಗೆ ತಡರಾತ್ರಿ ನ್ಯಾಯಾಲಯ ಕರ್ತವ್ಯ ನಿರ್ವಹಿಸುವಂತೆ ಮಾಡಿ ನ್ಯಾಯಾಧೀಶರ ಸಮಯ ಹಾಳು ಮಾಡಿದ್ದಾರೆ’ ಎಂದು ಪುರಸಭೆ ಮಾಜಿ ಸದಸ್ಯ ಎ. ಹನುಮಂತರಾಜು ಆರೋಪಿಸಿದ್ದಾರೆ.

ಸ್ಥಳೀಯ ಪೊಲೀಸರ ವಿರುದ್ಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಮಾನವ ಹಕ್ಕುಗಳ ಆಯೋಗಕ್ಕೆ ದೂರು ನೀಡಿರುವ ಹನುಮಂತರಾಜು, ‘ನ್ಯಾಯ ಒದಗಿಸಬೇಕು’ ಎಂದು ಕೋರಿದ್ದಾರೆ.

‘ಕಾನೂನು ಅಡಿಯಲ್ಲಿ ಅವಕಾಶವಿರುವ ಕೌಶಲ ಕ್ರೀಡೆ ರಮ್ಮಿಯನ್ನು ನನ್ನ ಸ್ನೇಹಿತರೊಂದಿಗೆ ನನ್ನ ಮನೆಯಲ್ಲಿ ಆಡುತ್ತಿದ್ದೆ. ನನ್ನಿಂದ ಲಂಚ ಪಡೆಯಲಾಗಲಿಲ್ಲ ಎಂಬ ಉದ್ದೇಶದಿಂದ ದಾಳಿ ನೆಪದಲ್ಲಿ ಜುಲೈ 6ರಂದು ರಾತ್ರಿ ಇನ್‌ಸ್ಪೆಕ್ಟರ್‌ಎ.ವಿ.ಕುಮಾರ್ ಅವರು ಯಾವುದೇ ವಾರೆಂಟ್ ಇಲ್ಲದೆ ಮನೆಗೆ ಅಕ್ರಮವಾಗಿ ಪ್ರವೇಶಿಸಿದರು. ಸಿಸಿಟಿವಿ ಕ್ಯಾಮೆರಾ ಡಿವಿಆರ್ ಕಿತ್ತು ಹಾಕಿ ತಮ್ಮ ಸಮವಸ್ತ್ರವನ್ನು ತಾವೇ ಹರಿದುಕೊಂಡರು. ಮನೆಯ ಹೊರಗಡೆ ಬಂದು ಪೊಲೀಸರ ಮೇಲೆ ಕೈ ಮಾಡುತ್ತಿದ್ದಾರೆ ಎಂದು ಕೂಗಾಡಿದರು. ನನ್ನನ್ನು ಸೇರಿ 11 ಜನರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಬಂಧಿಸಿದ್ದರು’ ಎಂದು ದೂರಿದ್ದಾರೆ.

‘ನಾನಾಗಲಿ, ಸ್ನೇಹಿತರಾಗಲಿ ಇನ್‌ಸ್ಪೆಕ್ಟರ್ ಮೇಲೆ ಹಲ್ಲೆ ಮಾಡಿಲ್ಲ. ನಮ್ಮ ಮೇಲೆ ದಾಖಲಿಸಿರುವ ಸುಳ್ಳು ಪ್ರಕರಣವನ್ನು ವಜಾ ಮಾಡಲು ಕೋರಿ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಲಾಗಿದೆ. ಇನ್‌ಸ್ಪೆಕ್ಟರ್ ಎ.ವಿ. ಕುಮಾರ್, ಸಿಬ್ಬಂದಿ ಬಸವರಾಜು, ಕೇಶವಾನಂದ, ಐಒ ಮಂಜುನಾಥ್, ತಾಲ್ಲೂಕು ಆಸ್ಪತ್ರೆಯ ತಜ್ಞ ವೈದ್ಯ ಡಾ. ಚೌಡಯ್ಯ ಅವರ ವಿರುದ್ಧ ಮಾನವ ಹಕ್ಕುಗಳ ಆಯೋಗಕ್ಕೆ ದೂರು ನೀಡಿದ್ದು, ಅವರು ಕ್ರಮ ಕೈಗೊಂಡು ವರದಿ ನೀಡಲು ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ’ ಎಂದು ಹೇಳಿದ್ದಾರೆ.

‘ಎಲ್ಲರನ್ನೂ ಮಂಪರು ಪರೀಕ್ಷೆಗೆ ಒಳಪಡಿಸಬೇಕು. ಇಲ್ಲವಾದಲ್ಲಿ ನಮ್ಮನ್ನಾದರೂ ಒಳಪಡಿಸಬೇಕು. ನಮ್ಮ ಮನೆಯಲ್ಲಿ ಸಿಸಿಟಿವಿ ಇದ್ದು ಅದನ್ನು ಪರಿಶೀಲಿಸಬಹುದು. ನಾವು ಕಾನೂನು ಅಡಿಯಲ್ಲಿ ಅವಕಾಶವಿರುವ ರಮ್ಮಿ ಬಿಟ್ಟು ಯಾವುದೇ ಅಕ್ರಮ ಚಟುವಟಿಕೆಯಲ್ಲಿ ತೊಡಗಿರಲಿಲ್ಲ. ಸೂಕ್ತ ತನಿಖೆ ನಡೆಸಿದರೆ, ಸತ್ಯ ಹೊರಬರಲಿದೆ’ ಎಂದು ಹನುಮಂತರಾಜು ತಿಳಿಸಿದ್ದಾರೆ.

ಕುಸಿಯುತ್ತಿದೆ ರಾಜಕಾರಣದ ನೈತಿಕ ಮೌಲ್ಯ: ಎಂ.ವೆಂಕಯ್ಯ ನಾಯ್ಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಕಾರಣದಲ್ಲಿ ಇಂದು ನೈತಿಕ ಮೌಲ್ಯ ಕುಸಿಯುತ್ತಿದೆ. ಜಾತಿ, ಅಪರಾಧ, ಹಣವೇ ಪ್ರಾಧಾನ್ಯ ಪಡೆಯುತ್ತಿದೆ ಎಂದು ಮಾಜಿ ಉಪ ರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಕಳವಳ ವ್ಯಕ್ತಪಡಿಸಿದರು.

ನಗರದ ತೆಲುಗು ವಿಜ್ಞಾನ ಸಮಿತಿ ಗುರುವಾರ ಹಮ್ಮಿಕೊಂಡಿದ್ದ ಸಮಿತಿಯ 70ನೇ ಸಂಸ್ಥಾಪನಾ ದಿನಾಚರಣೆ, ಅಲ್ಲೂರಿ ಸತ್ಯನಾರಾಯಣ ರಾಜು ಜೀವನ ಚರಿತ್ರೆಯ ಪುಸ್ತಕ ಬಿಡುಗಡೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸಜ್ಜನಿಕೆ, ನಡೆ, ನುಡಿ, ಸಂಸ್ಕೃತಿ ರಾಜಕಾರಣದಲ್ಲಿ ಹಿಂದಿನಿಂದಲೂ ಹಾಸುಹೊಕ್ಕಾಗಿದ್ದವು. ಇಂದು ಮೌಲ್ಯಗಳು ನಿಧಾನವಾಗಿ ಮಾಯವಾಗುತ್ತಿವೆ. ಭಾರತೀಯ ಸಂಸ್ಕೃತಿಯಿಂದ ರಾಜಕೀಯ ಕ್ಷೇತ್ರ ವಿಮುಖವಾಗುತ್ತಿರುವುದೇ ಇದಕ್ಕೆ ಕಾರಣ ಎಂದು ಅಭಿಪ್ರಾಯಪಟ್ಟರು.

ಜನಪ್ರತಿನಿಧಿಗಳೂ ಮಾತೃಭಾಷೆ ಬಳಸಲು ಹಿಂದೇಟು ಹಾಕುತ್ತಿದ್ದಾರೆ. ಹಿಂಜರಿಕೆ ಇರಬಾರದು. ಮಾತೃಭಾಷೆಯಲ್ಲಿ ಶಿಕ್ಷಣ ಪಡೆದು, ತಮ್ಮದೇ ಭಾಷೆಯಲ್ಲಿ ವ್ಯವಹರಿಸುವುದು, ವಿಷಯ ಮಂಡನೆ ಮಾಡುವುದು ಪರಿಣಾಮಕಾರಿಯಾಗಿರುತ್ತದೆ. ಇಂಗ್ಲಿಷ್, ಹಿಂದಿ ಮೋಹ ತೊರೆಯಬೇಕು. ಅಮ್ಮ ಎಂದು ನಮ್ಮದೇ ಭಾಷೆಯಲ್ಲಿ ಎದೆಯಾಳದಿಂದ ಹೇಳುವುದಕ್ಕೂ, ಮಮ್ಮಿ ಎನ್ನುವುದಕ್ಕೂ ಭಾರಿ ವ್ಯತ್ಯಾಸವಿದೆ ಎಂದು ವಿವರಿಸಿದರು.

ಭಾರತೀಯ ಸಂಸ್ಕೃತಿ, ವಿಚಾರಗಳು, ಆಹಾರ ಪದ್ಧತಿ ಶ್ರೇಷ್ಠವಾಗಿವೆ. ಕೋಳಿ ಸಾರು ಮುದ್ದೆಯ ಮುಂದೆ ಪಿಜ್ಜಾ, ಬರ್ಗರ್ ಎಂದಿಗೂ ಉತ್ತಮ ಆಹಾರವಾಗಲು ಸಾಧ್ಯವಿಲ್ಲ. ಉಡುಗೆ, ತೊಡುಗೆಯೂ ಹಾಗೆಯೇ. ತಾವು ಉಪ ರಾಷ್ಟ್ರಪತಿಯಾದಾಗಲೂ ಸಾಂಪ್ರದಾಯಿಕ ಉಡುಗೆ ಬದಲಿಸಲಿಲ್ಲ. ಎಲ್ಲಿ ಹೋದರೂ ವಿಳಾಸವಷ್ಟೇ ಬದಲಾಗುತ್ತಿತ್ತು ಎಂದರು.

ಶಾಸಕ ಕೆ.ಆರ್.ರಮೇಶ್‌ಕುಮಾರ್, ಕನ್ನಡ ಹಾಗೂ ತೆಲುಗು ಅವಳಿ ಭಾಷೆಗಳು, ಎರಡೂ ಭಾಷೆಗಳ ಜನರ ಬಾಂಧವ್ಯವೂ ಮಧುರವಾಗಿದೆ. ವೆಂಕಯ್ಯ ನಾಯ್ಡು ಸರಳ, ಸಜ್ಜನಿಕೆಯ ವ್ಯಕ್ತಿ ಎಂದು ಬಣ್ಣಿಸಿದರು.

ಸಮಿತಿ ಅಧ್ಯಕ್ಷ ಎ. ರಾಧಾಕೃಷ್ಣ ರಾಜು, ಉಪಾಧ್ಯಕ್ಷ ಗಂಗರಾಜು, ತೆಲುಗು ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಕೆ. ಮುನಿಸ್ವಾಮಿ ರಾಜು, ಕಾರ್ಯದರ್ಶಿ ಇಡಮಕಂತಿ ಲಕ್ಷ್ಮಿ ರೆಡ್ಡಿ, ಸಾಂಸ್ಕೃತಿಕ ಕಾರ್ಯದರ್ಶಿ ರಶ್ಮಿ ಶರತ್ ಉಪಸ್ಥಿತರಿದ್ದರು.



ನಗರದ ತೆಲುಗು ವಿಜ್ಞಾನ ಸಮಿತಿ ಗುರುವಾರ ಹಮ್ಮಿಕೊಂಡಿದ್ದ ಸಂಸ್ಥಾಪಕರ ದಿನಾಚರಣೆಯಲ್ಲಿ ತೆಲುಗು ವಿಜ್ಞಾನ ಸಮಿತಿ ಅಧ್ಯಕ್ಷ ಎ. ರಾಧಾಕೃಷ್ಣ ರಾಜು ಅವರು ಮಾಜಿ ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರನ್ನು ಸನ್ಮಾನಿಸಿದರು. ಲಕ್ಷ್ಮಿ ರೆಡ್ಡಿ, ಕೆ.ಮುನಿಸ್ವಾಮಿ ರಾಜು, ಕೆ.ಆರ್. ರಮೇಶ್ ಕುಮಾರ್, ಗಂಗರಾಜು, ಇದ್ದಾರೆ —ಪ್ರಜಾವಾಣಿ ಚಿತ್ರ

‘2ಎ’ ಮೀಸಲಾತಿಗೆ ಬಲಿಜ ಸಮಾಜ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಲಿಜ ಸಮುದಾಯವನ್ನು ಪ್ರವರ್ಗ ‘2ಎ’ ಮೀಸಲಾತಿ ಅಡಿ ಪರಿಗಣಿಸಬೇಕು ಎಂದು ಕರ್ನಾಟಕ ಬಲಿಜ ಸಮುದಾಯಗಳ ಅಭಿಮಾನಿ ಬಳಗ ಒತ್ತಾಯಿಸಿದೆ.

‘ರಾಜ್ಯದಲ್ಲಿ 47 ಲಕ್ಷಕ್ಕೂ ಹೆಚ್ಚು ಬಲಿಜ ಸಮುದಾಯದ ಜನರು ಇದ್ದಾರೆ. ಪ್ರಸ್ತುತ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ 3ಎ ಮೀಸಲಾತಿ ಪಡೆಯುತ್ತಿದ್ದೇವೆ. ಸಾಮಾಜಿಕವಾಗಿ, ಆರ್ಥಿಕವಾಗಿ ಅತ್ಯಂತ ಹಿಂದುಳಿದ ಈ ಸಮುದಾಯಕ್ಕೆ 2ಎ ಮೀಸಲಾತಿ ಸೌಲಭ್ಯ ಕಲ್ಪಿಸಬೇಕು. ಉದ್ಯೋಗ, ರಾಜಕೀಯ ಕ್ಷೇತ್ರಗಳಲ್ಲಿ ಸೂಕ್ತ ಪ್ರಾತಿನಿಧ್ಯ ಒದಗಿಸಬೇಕು. ಸೂಕ್ತ ನ್ಯಾಯ ದೊರಕಿಸಿಕೊಡಬೇಕು’ ಎಂದು ಕರ್ನಾಟಕ ಬಲಿಜ ಸಮುದಾಯಗಳ ಅಭಿಮಾನಿ ಬಳಗದ ಅಧ್ಯಕ್ಷ ಎಸ್.ರಮೇಶ್ ಒತ್ತಾಯಿಸಿದರು.

ರಾಜ್ಯದಲ್ಲಿರುವ ಬಲಿಜ ಮತ್ತು ಇದರ ಉಪ ಜಾತಿಗಳ ಅಧ್ಯಯನ ನಡೆಸಿದ್ದ ರಾಜ್ಯ ಸರ್ಕಾರ ಹಿಂದುಳಿದ ವರ್ಗಗಳ ಆಯೋಗ ಅಗತ್ಯ ಮಾಹಿತಿ ಸಂಗ್ರಹಿಸಿದರೂ, ಇದುವರೆಗೂ ವರದಿ ಸಲ್ಲಿಕೆಯಾಗಿಲ್ಲ. ಇದರಿಂದ ಸಮುದಾಯಕ್ಕೆ ಅನ್ಯಾಯವಾಗಿದೆ. ಸರ್ಕಾರ ತಕ್ಷಣ ವರದಿ ಪಡೆಯಬೇಕು. 2ಎ ಮೀಸಲಾತಿ ಕಲ್ಪಿಸಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಹೋರಾಟ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಆರ್.ಕೆ. ನಾಗರಾಜ್ ಮಾತನಾಡಿ, ‘ಬಲಿಜ ಸಮಾಜದ ಜನರು ಬೀದಿಗಳಲ್ಲಿ ಅರಿಸಿನ, ಕುಂಕುಮ, ಹೂ, ಎಲೆ, ಅಡಿಕೆ ಮಾರಾಟಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಇಂತಹ ಸಮುದಾಯದ ಅಭಿವೃದ್ಧಿಗೆ ಕರ್ನಾಟಕ ಬಲಿಜ ಸಮುದಾಯಗಳ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು. ನಿಗಮಕ್ಕೆ ಸಮುದಾಯದ ನಾಯಕರನ್ನು ಅಧ್ಯಕ್ಷರನ್ನಾಗಿ ಮಾಡಬೇಕು. ಪಠ್ಯಪುಸ್ತಕದಲ್ಲಿ ಕೈವಾರ ತಾತರ ಜೀವನ ಚರಿತ್ರೆ ಅಳವಡಿಸಿಬೇಕು’ ಎಂದು ಆಗ್ರಹಿಸಿದರು.

ಬಲಿಜ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷ ದೇವಪ್ರಕಾಶ್, ಉಪಧ್ಯಾಕ್ಷ ರಾಮಚಂದ್ರಪ್ಪ, ಕಾರ್ಯದರ್ಶಿ ಎನ್.ಸಂಜೀವಪ್ಪ, ಜಂಟಿ ಕಾರ್ಯದರ್ಶಿ ವಿನುತಾ, ಜಗನ್ನಾಥ ಇದ್ದರು.

ನಿಮ್ಹಾನ್ಸ್‌ನ ಒಸಿಡಿ ಕ್ಲಿನಿಕ್‌ನ ರಜತ ಮಹೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಮ್ಹಾನ್ಸ್ ಒಸಿಡಿ ಕ್ಲಿನಿಕ್‌ನ 25ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಗೀಳುರೋಗ ಮತ್ತು ಅದಕ್ಕೆ ಸಂಬಂಧಿಸಿದ ಕಾಯಿಲೆಗಳ ಕುರಿತು ನವೆಂಬರ್ 11ರಿಂದ 13ರ ವರೆಗೆ ನಿಮ್ಹಾನ್ಸ್‌ನ ಕನ್ವೆನ್ಷನ್ ಸೆಂಟರ್‌ನಲ್ಲಿ ವಿಚಾರ ಗೋಷ್ಠಿಗಳನ್ನು ಆಯೋಜಿಸಲಾಗಿದೆ.

‘ಗೀಳುರೋಗವನ್ನು ಪರೀಕ್ಷಿಸುವ ಮತ್ತು ಉಪಚರಿಸುವ ಅತಿ ದೊಡ್ಡ ಚಿಕಿತ್ಸಾ ಸೌಲಭ್ಯವನ್ನು ಹೊಂದಿದೆ. ಇದೊಂದು ಮಾನಸಿಕ ರೋಗವಾಗಿದ್ದು, ಇದರಲ್ಲಿ ಗೀಳು ಮತ್ತು ಒತ್ತಡಪೂರಿತ ನಡುವಳಿಕೆಗಳೆಂಬ ಗುಣ ಲಕ್ಷಣಗಳು ಇರುತ್ತವೆ’ ಎಂದು ಒಸಿಡಿ ಕ್ಲಿನಿಕ್ ಮುಖ್ಯಸ್ಥ ಡಾ.ಜನಾರ್ದನ ರೆಡ್ಡಿ ಗುರುವಾರ ಸುದ್ದಿಗೋಷ್ಠಿ ತಿಳಿಸಿದರು.

‘ಅರ್ಥಹೀನ ಹಾಗೂ ಅತೀರೇಕ ಎಂದು ತಿಳಿದರೂ ತಡೆಯಲಾಗದೆ ಪದೇ ಪದೇ ಮನದಲ್ಲಿ ಪುನರಾವರ್ತಿಸುವ ಯೋಚನೆಗಳು ಅಥವಾ ಚಿತ್ರಗಳನ್ನು ಗೀಳು ಎಂದು ಹೇಳಲಾಗುತ್ತದೆ. ಈ ಆಲೋಚನೆಗಳಿಂದ ಆಗುವ ಆತಂಕ ತೀವ್ರವಾಗಿರುತ್ತದೆ. ಇದನ್ನು ಕಡಿಮೆ ಮಾಡಿಕೊಳ್ಳಲು ಒಬ್ಬ ವ್ಯಕ್ತಿ ಒತ್ತಡಪೂರಿತ ನಡುವಳಿಕೆಗಳನ್ನು ತೋರುತ್ತಾನೆ. ಗೀಳಿನ ಕ್ರಿಯೆಗೆ ಪ್ರತಿಕ್ರಿಯೆಗೆಯಾಗಿ ಅವುಗಳನ್ನು ನಿಯಂತ್ರಿಸಲು ಮಾಡುವ ಪುನರಾವರ್ತಿಸುವ ಕ್ರಿಯೆಗಳನ್ನು ಒತ್ತಡಪೂರಿತ ನಡುವಳಿಕೆಗಳೆಂದು ಹೇಳಬಹುದು’ ಎಂದು ಅವರು ಹೇಳಿದರು.

‘ಒಸಿಡಿ ಕ್ಲಿನಿಕ್‌ನಲ್ಲಿ ಗೀಳು ರೋಗ ಜೊತೆ ಗೀಳು ಸಂಬಂಧಿ ರೋಗಗಳಾದ ಬಾಡಿ ಡಿಸ್ಮಾರ್ಫಿಕ್ ಡಿಸಾರ್ಡರ್ (ತಮ್ಮ ಶಾರೀರಿಕ ಊನದ ಚಿಂತೆ), ಕೂದಲು ಕಿತ್ತುಕೊಳ್ಳುವ ತುಡಿತ, ಪದೇ ಪದೇ ಚರ್ಮವನ್ನು ಕೀಳುವ ಇತ್ಯಾದಿ ಕಾಯಿಲೆಗಳಿಗೆ ಚಿಕತ್ಸೆ ನೀಡಲಾಗುತ್ತದೆ’ ಎಂದು ತಿಳಿಸಿದರು.

‘ಈ ವಿಶೇಷ ಕ್ಲಿನಿಕ್ ಪ್ರತಿ ಮಂಗಳವಾರ ಹೊರರೋಗಿಗಳಿಗೆ ಸೇವೆ ನೀಡುತ್ತದೆ. ತೀವ್ರ ಕಾಯಿಲೆಯಿಂದ ಬಳಲುತ್ತಿರುವವರಿಗೆ ಆಪ್ತ ಸಮಾಲೋಚನೆಯ ಮೂಲಕ ಚಿಕಿತ್ಸೆ ನೀಡಲಾಗುತ್ತದೆ. ಕಳೆದ 25 ವರ್ಷದಲ್ಲಿ 50 ಸಾವಿರಕ್ಕೂ ಹೆಚ್ಚು ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ’ ಎಂದರು.



ಮೃತ್ತಿಕೆ ಸಂಗ್ರಹ

ಶುಕ್ರವಾರ ಲೋಕಾರ್ಪಣೆಗೊಳ್ಳಲಿರುವ ನಾಡಪ್ರಭು ಕೆಂಪೇಗೌಡ ಪ್ರತಿಮೆಗೆ ಪಾಕ್ ಆಕ್ರಮಿತ ಕಾಶ್ಮೀರ ಶಾರದಾ ಪೀಠದಿಂದ ಮೃತ್ತಿಕೆಯನ್ನು ಸೇವ್ ಶಾರದಾ ಸಮಿತಿಯ ಕಾಶ್ಮೀರ ಅಧ್ಯಕ್ಷ ರವೀಂದ್ರ ಪಂಡಿತ ಅವರು ತರಿಸಿದ್ದಾರೆ. ಶಾರದಾ ಸಮಿತಿಯ ಸೇವಕ ಮಂಜುನಾಥ ಶರ್ಮ ಅವರು ಮೃತ್ತಿಕೆಯನ್ನು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಅವರಿಗೆ ನೀಡಿದರು. ಸಮಿತಿಯ ದಕ್ಷಿಣ ಭಾರತ ಘಟಕದ ಅಧ್ಯಕ್ಷ ಕೆ. ಸತ್ಯನಾರಾಯಣ ಇದ್ದರು

‘ವಸತಿ ಪ್ರದೇಶ: ಅನಧಿಕೃತ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶವಿಲ್ಲ’

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ‘ನಗರದ ಜನವಸತಿ ಪ್ರದೇಶದಲ್ಲಿ ಸಾರ್ವಜನಿಕರಿಗೆ ಅಗತ್ಯವಿರುವ ಸೇವೆ ಹೊರತುಪಡಿಸಿದಂತೆ ಅನಧಿಕೃತ ವಾಣಿಜ್ಯ ವ್ಯವಹಾರಗಳಿಗೆ ಅವಕಾಶ ನೀಡುವುದಿಲ್ಲ’ ಎಂದು ಬಿಬಿಎಂಪಿ ಹೈಕೋರ್ಟ್‌ಗೆ ತಿಳಿಸಿದೆ.

‘ವಿಲ್ಸನ್ ಗಾರ್ಡನ್ ಜನವಸತಿ ಪ್ರದೇಶದ ರಸ್ತೆ ಮತ್ತು ಪಾದಚಾರಿ ಮಾರ್ಗದ ಮೇಲೆ ಅನಧಿಕೃತವಾಗಿ ತೆರೆದಿರುವ ಹೂವಿನ ಅಂಗಡಿಗಳನ್ನು ತೆರವುಗೊಳಿಸಲು ಬಿಬಿಎಂಪಿಗೆ ನಿರ್ದೇಶಿಸಬೇಕು’ ಎಂದು ಕೋರಿ ಸ್ಥಳೀಯ ನಿವಾಸಿಗಳ ಸಂಘ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲರು, ‘ಜನವಸತಿ ಪ್ರದೇಶದಲ್ಲಿ ಸಣ್ಣಪುಟ್ಟ ಅಂಗಡಿಗಳು, ಹಾಲಿನ ಬೂತ್‌ಗಳು, ಸ್ಟೇಷನರಿ ಅಂಗಡಿ, ಬೇಕರಿಗಳು, ಎಸ್‌ಟಿಡಿ ಬೂತ್ ಮತ್ತು ಬ್ಯಾಂಕ್ ಸೇರಿ ಸಾರ್ವಜನಿಕರಿಗೆ ಅಗತ್ಯವಿರುವ ಇತರೆ ಸೇವೆಗಳಿಗೆ ಮಾತ್ರ ಅವಕಾಶವಿರಲಿದೆ’ ಎಂದು ತಿಳಿಸಿದರು.

‘ಯಾವುದೇ ರೀತಿಯ ಅನಧಿಕೃತ ವಾಣಿಜ್ಯ ವ್ಯವಹಾರಗಳಿಗೆ ಅವಕಾಶ ಕಲ್ಪಿಸುವುದಿಲ್ಲ. ವಸತಿ ಪ್ರದೇಶಗಳಲ್ಲಿ ವಾಣಿಜ್ಯ ಚಟುವಟಿಕೆ ನಡೆಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿ ಈ ಕುರಿತಂತೆ ಪ್ರಮಾಣ ಪತ್ರ ಸಲ್ಲಿಸಿದರು.

ಬಿಬಿಎಂಪಿ ಅಧಿಕಾರಿಗಳು ಇದೇ ವೇಳೆ, ‘ಹೈಕೋರ್ಟ್ ಆದೇಶದಂತೆ ವಿಲ್ಸನ್ ಗಾರ್ಡನ್ ವಸತಿ ಪ್ರದೇಶದಲ್ಲಿ ಪರಿಶೀಲನೆ ನಡೆಸಲಾಗಿದೆ. ಅನಧಿಕೃತ 101 ಹೂವಿನ ಅಂಗಡಿಗಳ ಪೈಕಿ ಈಗಾಗಲೇ 60 ಅಂಗಡಿಗಳನ್ನು ತೆರವುಗೊಳಿಸಲಾಗಿದೆ. ಉಳಿದ 41 ಅಂಗಡಿಗಳನ್ನು ಮುಂದಿನ ಎರಡು ವಾರಗಳಲ್ಲಿ ತೆರವು ಮಾಡಲಾಗುವುದು’ ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ‘ವಿಲ್ಸನ್ ಗಾರ್ಡನ್ ಬಡಾವಣೆಯಲ್ಲಿರುವ 41 ಅನಧಿಕೃತ ಹೂವಿನ ಅಂಗಡಿ ಮತ್ತು ದಾಸ್ತಾನು ಘಟಕಗಳ ತೆರವು ಕಾರ್ಯಚರಣೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಿ’ ಎಂದು ನಿರ್ದೇಶಿಸಿ ವಿಚಾರಣೆಯನ್ನು ಡಿಸೆಂಬರ್ 6ಕ್ಕೆ ಮುಂದೂಡಿತು.

ನಗರದಲ್ಲಿ ಇಂದು

ನ್ಯಾಯ ದೀಕ್ಷೆ: ಅತಿಥಿಗಳು: ಎಂ. ನಾಗಪ್ರಸನ್ನ, ಬಿ.ವಿ. ಆಚಾರ್ಯ, ಅಧ್ಯಕ್ಷತೆ: ಅವಿರಾಮ್ ಶರ್ಮ, ಆಯೋಜನೆ ಮತ್ತು ಸ್ಥಳ: ಬಿಎಂಎಸ್ ಕಾನೂನು ಕಾಲೇಜು, ಬೆಳಿಗ್ಗೆ 10.30

ಕನಕದಾಸರ ಜಯಂತಿ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಯವನಿಕ ಸಭಾಂಗಣ, ಕೆ. ಆರ್. ರಸ್ತೆ, ಬೆಳಿಗ್ಗೆ 11

ವೀರವನಿತೆ ಒನಕೆ ಓಬವ್ವ ಜಯಂತಿ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಡಾ.ಬಿ. ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 12

5ನೇ ಅಖಿಲ ಭಾರತ ಹರಿದಾಸ ಸಾಹಿತ್ಯ ಸಮ್ಮೇಳನ: ಅಧ್ಯಕ್ಷತೆ: ಸುಜಯನಿಧಿ ತೀರ್ಥ ಸ್ವಾಮೀಜಿ, ಅತಿಥಿಗಳು: ಎಂ.ಎನ್. ವೆಂಕಟಾಚಲಯ್ಯ, ಆರ್. ಗುರುರಾಜನ್, ಅಶೋಕ ಹಾರನಹಳ್ಳಿ, ಸುಭಾಸ.ಬಿ. ಕಾಖಂಡಕಿ, ಪ್ರಹ್ಲಾದ ರಾಮರಾವ್, ವಾಸುದೇವ ಅಗ್ನಿಹೋತ್ರಿ, ಆಯೋಜನೆ: ರಾಷ್ಟ್ರೀಯ ವೇದ ವಿಜ್ಞಾನ ಸಂಸ್ಥೆ ಟ್ರಸ್ಟ್, ಸ್ಥಳ: ಶ್ರೀಪಾದರಾಜ ಸಭಾಮಂಟಪ, ರಾಘವೇಂದ್ರ ಕಾಲೊನಿ, ಚಾಮರಾಜಪೇಟೆ, ಬೆಳಿಗ್ಗೆ 9.30



ದಿವ್ಯಾ ಗಿರಿಧರ್, ಅನಂತರಾಜ್ ಮಿಸ್ತ್ರಿ


ಕನಕದಾಸರ ಮೇರುಕೃತಿ ‘ಹರಿಭಕ್ತಿಸಾರ’ ಯೂಟ್ಯೂಬ್ ಚಾನೆಲ್‌ನಲ್ಲಿ ಸಮರ್ಪಣೆ: ಗಾಯನ: ದಿವ್ಯಾ ಗಿರಿಧರ್, ಅನಂತರಾಜ್ ಮಿಸ್ತ್ರಿ

ಕಾರ್ತಿಕ ಸಂಗೀತ ಸಂಭ್ರಮ, ಕನಕದಾಸರ ಜಯಂತಿ, ಕನ್ನಡ ರಾಜ್ಯೋತ್ಸವ ಹಾಗೂ ಹರಿದಾಸ ಸಂಭ್ರಮ–2022: ಗಾಯನ: ವೈ.ಜಿ. ಶ್ರೀಲತ, ಪಿಟೀಲು: ಕಾರ್ತಿಕೇಯ ರಾಮಚಂದ್ರ, ಮೃದಂಗ: ನಿಕ್ಷಿತ್ ಪುತ್ತೂರ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಸಂಜೆ 6

ಕನಕದಾಸರ ಜಯಂತಿಯ ಅಂಗವಾಗಿ ಗಾನ ಲಹರಿ: ಪ್ರಸ್ತುತಿ: ಆರ್.ಕೆ. ಪದ್ಮನಾಭ ಮತ್ತು ಶಿಷ್ಯರು, ಆಯೋಜನೆ: ವಿಎಲ್‌ಎನ್ ನಿರ್ಮಾಣ್ ಪುರಂದರ ಪ್ರತಿಷ್ಠಾನ, ಸ್ಥಳ: ಪುರಂದರ ಮಂಟಪ, ನಿಸರ್ಗ ಬಡಾವಣೆ, ಸಂಜೆ 6

ಮುಕ್ತಧಾರ ನಾಟಕ ಪ್ರದರ್ಶನ: ರಚನೆ: ರವೀಂದ್ರನಾಥ್ ಟ್ಯಾಗೋರ್, ನಿರ್ದೇಶನ: ಪ್ರವೀಣ್ ಕುಮಾರ್ ಎಡಮಂಗಲ, ಆಯೋಜನೆ: ನೀನಾಸಂ ತಿರುಗಾಟ, ಸ್ಥಳ: ಡಾ.ಎಚ್.ಎನ್. ಕಲಾಕ್ಷೇತ್ರ, ಸಂಜೆ 6.30

ಶ್ರೀನಿವಾಸ ಕಲ್ಯಾಣ ಪ್ರವಚನ: ಪ್ರಸ್ತುತಿ: ಕಲ್ಲಾಪುರ ಪವಮಾನಾಚಾರ್, ಆಯೋಜನೆ: ಗೀತಾ ಮಂದಿರ ಟ್ರಸ್ಟ್, ಶ್ರೀರಾಮಪುರ, ಸಂಜೆ 7



ಕಲ್ಲಾಪುರ ಪವಮಾನಾಚಾರ್

ವಂದೇ ಭಾರತ್: ವೇಳಾಪಟ್ಟಿ ಪ್ರಕಟ

ಬೆಂಗಳೂರು: ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಚಾಲನೆ ನೀಡಲಿದ್ದಾರೆ. ವಾಣಿಜ್ಯ ಸಂಚಾರ ನ.12ರಿಂದ ಆರಂಭವಾಗಲಿದ್ದು, ವೇಳಾಪಟ್ಟಿ ಪ್ರಕಟಗೊಂಡಿದೆ.

ಚೆನ್ನೈ-ಬೆಂಗಳೂರು-ಮೈಸೂರು (20607/ 20608) ನಿತ್ಯ ಬೆಳಿಗ್ಗೆ 5.50ಕ್ಕೆ ಚೆನ್ನೈನಿಂದ ಹೊರಟು, 7.21ಕ್ಕೆ ಕಟ್ಪಾಡಿ, 10.15ಕ್ಕೆ ಕೆಎಸ್‌ಆರ್ ನಿಲ್ದಾಣ, ಮಧ್ಯಾಹ್ನ 12.20ಕ್ಕೆ ಮೈಸೂರು ತಲುಪಲಿದೆ.

ಮೈಸೂರಿನಿಂದ ಮಧ್ಯಾಹ್ನ 1.05ಕ್ಕೆ ಹೊರಡುವ ರೈಲು, 2.50ಕ್ಕೆ ಕೆಎಸ್‌ಆರ್, ಸಂಜೆ 7.30ಕ್ಕೆ ಚೆನ್ನೈ ತಲುಪಲಿದೆ. 6 ಗಂಟೆ 30 ನಿಮಿಷದಲ್ಲಿ 497 ಕಿಲೋ ಮೀಟರ್ ಕ್ರಮಿಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಂದೇ ಭಾರತ್ ಎಕ್ಸ್‌ಪ್ರೆಸ್ ಮತ್ತು ಶತಾಬ್ದಿ ಎಕ್ಸ್‌ಪ್ರೆಸ್ ರೈಲುಗಳ ಪ್ರಯಾಣ ದರದಲ್ಲಿ ಅಲ್ಪ ವ್ಯತ್ಯಾಸವಿದೆ. ವಂದೇ ಭಾರತ್ ಎಕ್ಸ್‌ಪ್ರೆಸ್‌ಗೆ ₹1200 (ಚೇರ್ ಕಾರ್) ಮತ್ತು ₹2,295 (ಎಕ್ಸಿಕ್ಯುಟಿವ್ ಕಾರ್) ಇದೆ. ಶತಾಬ್ದಿ ಎಕ್ಸ್‌ಪ್ರೆಸ್‌ನಲ್ಲಿ ಕ್ರಮವಾಗಿ ₹1135 ಮತ್ತು ₹2280 ಇದೆ.

ಕಾಶಿ ದರ್ಶನ ವೇಳಾಪಟ್ಟಿ: 14 ಬೋಗಿಗಳ ‘ಕಾಶಿ ದರ್ಶನ’ ರೈಲು ಬೆಂಗಳೂರು ಕೆಎಸ್‌ಆರ್-ಬನಾರಸ್ ನಡುವೆ ಸಂಚರಿಸಲಿದೆ. ಈ ರೈಲು (ರೈಲು ಸಂಖ್ಯೆ 06553) ಶುಕ್ರವಾರ ಬೆಳಿಗ್ಗೆ 10.33ಕ್ಕೆ ಕೆಎಸ್‌ಆರ್‌ನಿಂದ ಹೊರಟು ನ. 13ರಂದು ಸಂಜೆ 4ಕ್ಕೆ ಬನಾರಸ್ ತಲುಪಲಿದೆ.

ಬನಾರಸ್- ಕೆಎಸ್‌ಆರ್ (06554) ನ.15ರಂದು ಬೆಳಿಗ್ಗೆ 5.30ಕ್ಕೆ ಬನಾರಸ್‌ನಿಂದ ಹೊರಟು 18ರಂದು ಸಂಜೆ 6.40ಕ್ಕೆ ಬೆಂಗಳೂರು ತಲುಪಲಿದೆ. ಅಯೋಧ್ಯೆ ಮತ್ತು ಪ್ರಯಾಗರಾಜ್‌ನಲ್ಲಿ ರೈಲು ನಿಲುಗಡೆ ಆಗಲಿದೆ. ರಾಜ್ಯ ಸರ್ಕಾರ ಪ್ರಯಾಣಿಕರಿಗೆ ರಿಯಾಯಿತಿ ನೀಡಿ ₹5 ಸಾವಿರ ದರ ನಿಗದಿಪಡಿಸಿದೆ.

ವಂದೇ ಭಾರತ್ ಎಕ್ಸ್‌ಪ್ರೆಸ್ ಪ್ರಯಾಣ ದರಪಟ್ಟಿ(₹ಗಳಲ್ಲಿ)

ಎಲ್ಲಿಂದ	ಎಲ್ಲಿಗೆ	ಸಿಸಿ(ಚೇರ್ ಕಾರ್)	(ಇಸಿ) ಎಕ್ಸಿಕ್ಯುಟಿವ್ ಚೇರ್
ಚೆನ್ನೈ	ಮೈಸೂರು	1200	2295
	ಕಟ್ಪಾಡಿ	495	950
	ಬೆಂಗಳೂರು	995	1885
ಕಟ್ಪಾಡಿ	ಮೈಸೂರು	1010	1915
	ಬೆಂಗಳೂರು	785	1460
ಬೆಂಗಳೂರು	ಮೈಸೂರು	515	985

ಎಲ್ಲಿಂದ	ಎಲ್ಲಿಗೆ	ಸಿಸಿ(ಚೇರ್ ಕಾರ್)	(ಇಸಿ)ಎಕ್ಸಿಕ್ಯುಟಿವ್ ಚೇರ್
ಮೈಸೂರು	ಚೆನ್ನೈ	1365	2485
	ಬೆಂಗಳೂರು	720	1215
	ಕಟ್ಪಾಡಿ	1175	2110
ಬೆಂಗಳೂರು	ಚೆನ್ನೈ	940	1835
	ಕಟ್ಪಾಡಿ	730	1410
ಕಟ್ಪಾಡಿ	ಚೆನ್ನೈ	495	950

ಸರ್ಕಾರದ ಬದಲು ವಿಮಾನ ನಿಲ್ದಾಣದ ಆಡಳಿತ ಸಂಸ್ಥೆಯೇ ಕೆಂಪೇಗೌಡರ ಪ್ರತಿಮೆ ನಿರ್ಮಿಸಬಹುದಿತ್ತು: ಡಿಕೆಶಿ

ಮೋದಿ ಉತ್ತರಿಸಲಿ: ಕಾಂಗ್ರೆಸ್ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯಕ್ಕೆ ಬರುತ್ತಿರುವ ಪ್ರಧಾನಿ ನರೇಂದ್ರ ಮೋದಿಗೆ ಪಕ್ಷದ ವತಿಯಿಂದ ಪತ್ರ ಬರೆದು, ಬಿಜೆಪಿ ಸರ್ಕಾರದ ಲೋಪಗಳ ಬಗ್ಗೆ ವಿವರಣೆ ನೀಡಿದ್ದೇವೆ. ಈ ವಿಚಾರವಾಗಿ ರಾಜ್ಯದ ಜನರಿಗೆ ಅವರು ಉತ್ತರ ನೀಡಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದರು.

ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಿವಕುಮಾರ್, 'ರಾಜ್ಯ ಸರ್ಕಾರದ ವತಿಯಿಂದ ವಿಮಾನ ನಿಲ್ದಾಣದಲ್ಲಿ ವಾಣಿಜ್ಯ ಉದ್ದೇಶಕ್ಕೆ 2 ಸಾವಿರ ಎಕರೆ ಜಮೀನು ನೀಡಲಾಗಿತ್ತು. ಹೀಗಾಗಿ, ಅಲ್ಲಿ ಕೆಂಪೇಗೌಡರ ಪ್ರತಿಮೆಯನ್ನು ಸರ್ಕಾರದ ಬದಲು ವಿಮಾನ ನಿಲ್ದಾಣದ ಆಡಳಿತ ಸಂಸ್ಥೆಯೇ ನಿರ್ಮಿಸಬಹುದಾಗಿತ್ತು. ಆದರೆ, ಸರ್ಕಾರದ ಹಣದಲ್ಲಿ ಪ್ರತಿಮೆ ಮಾಡಲಾಗಿದೆ' ಎಂದರು.

'ಬಿಜೆಪಿ ಸರ್ಕಾರ ಕೊಟ್ಟ ಮಾತಿನಂತೆ ನಡೆಯದೇ ವಚನಭ್ರಷ್ಟವಾಗಿದ್ದು, ಚುನಾವಣೆ ಸಮಯದಲ್ಲಿ ಪ್ರಣಾಳಿಕೆಯಲ್ಲಿ ಕೊಟ್ಟಿದ್ದ ಭರವಸೆಗಳಲ್ಲಿ ಶೇ 90ರಷ್ಟು ಈಡೇರಿಸಿಲ್ಲ. ಈ ಬಗ್ಗೆ ನಾವು ನಿತ್ಯ ಪ್ರಶ್ನೆಗಳನ್ನು ಕೇಳುತ್ತಾ ಬಂದಿದ್ದು, ಸರ್ಕಾರ ಯಾವುದಕ್ಕೂ ಉತ್ತರ ನೀಡಿಲ್ಲ. ಯಾವುದೇ ದಾಖಲಾತಿ ಇಲ್ಲದೆ ನಮ್ಮ ಸರ್ಕಾರವನ್ನು ಶೇ 10 ಕಮಿಷನ್ ಸರ್ಕಾರ ಎಂದು ಮೋದಿ ಗೂಬೆ ಕೂರಿಸಿದರು. ಅದನ್ನು ಸಾಬೀತುಪಡಿಸಲು ನಮ್ಮ ಮೇಲೆ ಯಾವುದೇ ತನಿಖೆ ಮಾಡಲಿಲ್ಲ' ಎಂದರು.

'ಸರ್ಕಾರದ ವಿರುದ್ಧ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ದೂರು ನೀಡಿದ್ದಾರೆ. ಬೆಳಗಾವಿಯ ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಮಾಡಿಕೊಂಡರೆ, ಹುಬ್ಬಳ್ಳಿಯ ಗುತ್ತಿಗೆದಾರ ಬಸವರಾಜ್ ದಯಾ ಮರಣ ಅರ್ಜಿ ಬರೆದಿದ್ದಾರೆ. ಈ ಬಗ್ಗೆ ಮೋದಿ ಉತ್ತರಿಸಬೇಕು' ಎಂದೂ ಆಗ್ರಹಿಸಿದರು.

'ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಚುನಾವಣೆ ಸಮಯದಲ್ಲಿ ನಾನು ತಿನ್ನುವುದಿಲ್ಲ ಬೇರೆಯವರಿಗೂ ತಿನ್ನಲು ಬಿಡುವುದಿಲ್ಲ ಎಂದು ಹೇಳಿದ್ದೀರಿ. ಈಗ ನಿಮ್ಮವರು ಏನು ತಿನ್ನುತ್ತಿದ್ದಾರೆ? ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ರೈತರಿಗೆ ₹ 1 ಲಕ್ಷದವರೆಗೂ ಸಾಲ ಮನ್ನಾ ಮಾಡುವುದಾಗಿ ಹೇಳಿದ್ದ ನೀವು ಅದನ್ನು ಮಾಡಿಲ್ಲ. ರೈತರ ಆದಾಯ ಇಮ್ಮಡಿ ಆಗುವ ಬದಲು ರೈತರ ಕೃಷಿ ವೆಚ್ಚ ಇಮ್ಮಡಿ ಆಗಿದೆ. ಹತ್ತು ಹಲವು ವಿಚಾರಗಳನ್ನು ಪತ್ರದ ಮೂಲಕ ಕೇಂದ್ರ ಸರ್ಕಾರದ ಮುಂದೆ ಇಟ್ಟಿದ್ದೇವೆ' ಎಂದರು.

ಪ್ರಧಾನಿಗೆ ಸಿದ್ದರಾಮಯ್ಯ ಪತ್ರ

ಪ್ರಧಾನಿಗೆ ಪ್ರತ್ಯೇಕ ಪತ್ರ ಬರೆದಿರುವ ಸಿದ್ದರಾಮಯ್ಯ, 'ನಾಲ್ಕು ವರ್ಷಗಳ ಹಿಂದೆ ಚುನಾವಣಾ ಪ್ರಚಾರಕ್ಕೆ ಬಂದಿದ್ದಾಗ ನೀಡಿದ್ದ ಭರವಸೆಗಳು ಏನಾಗಿವೆ? ಶೇ 40 ಕಮಿಷನ್ ಸರ್ಕಾರವೆಂಬ ಆರೋಪದ ಬಗ್ಗೆ ಯಾವ ಕ್ರಮ ಕೈಗೊಂಡಿದ್ದೀರಿ? ಪಿಎಸ್ಐ ನೇಮಕಾತಿ ಹಗರಣದಲ್ಲಿ ಹಿರಿಯ ಐಪಿಎಸ್ ಅಧಿಕಾರಿಗಳು ಸಿಕ್ಕಿ ಬಿದ್ದಿದ್ದಾರೆ. ಸಚಿವ ಎಸ್.ಟಿ. ಸೋಮಶೇಖರ್ ಮೇಲಿನ ಲಂಚ ಪ್ರಕರಣದ ತನಿಖೆ ನಡೆಸುವಂತೆ ಲೋಕಾಯುಕ್ತ ಪೊಲೀಸರಿಗೆ ಹೈಕೋರ್ಟ್ ಸೂಚನೆ ನೀಡಿದೆ. ಸಚಿವ ಡಾ.ಕೆ. ಸುಧಾಕರ್, ಶಿವರಾಮ್ ಹೆಬ್ಬಾರ್, ಬಿ.ಸಿ. ಪಾಟೀಲ, ಕೆ. ಗೋಪಾಲಯ್ಯ, ಬೈರತಿ ಬಸವರಾಜ್, ಬಿ. ಶ್ರೀರಾಮುಲು, ಆನಂದ್ ಸಿಂಗ್, ಪ್ರಭು ಚೌಹಾಣ್ ಹೀಗೆ ಸಾಲು ಸಾಲು ಸಚಿವರ ಮೇಲೆ ಭ್ರಷ್ಟಾಚಾರ, ದುರಾಡಳಿತ, ಅಕ್ರಮಗಳ ಆರೋಪಗಳಿವೆ. ಆದರೆ, ನೀವು ಮೌನಕ್ಕೆ ಜಾರಿರುವುದು ಏಕೆ' ಎಂದು ಪ್ರಶ್ನಿಸಿದ್ದಾರೆ.

ಕೆಂಪೇಗೌಡರ 108 ಅಡಿಯ 'ಪ್ರಗತಿಯ ಪ್ರತಿಮೆ' ಅನಾವರಣ ಇಂದು

ಒಂದನೇ ಪುಟದಿಂದ...

ಶುಕ್ರವಾರ ಕನಕದಾಸ ಜಯಂತಿಯ ದಿನವೂ ಆಗಿರುವುದರಿಂದ ಕನಕದಾಸರ ಪ್ರತಿಮೆಗೆ ಮಾಲಾರ್ಪಣೆ ಮಾಡುವಾಗ ಕಾಗಿನೆಲೆ ಪೀಠಾಧಿಪತಿ ನಿರಂಜನಾನಂದಪುರಿ ಸ್ವಾಮೀಜಿ, ವಾಲ್ಮೀಕಿ ಗುರುಪೀಠದ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಭಾಗವಹಿಸುವರು. ಕೆಂಪೇಗೌಡ ಪ್ರತಿಮೆ ಅನಾವರಣದ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಸ್ಫಟಿಕಪುರ ಮಹಾಸಂಸ್ಥಾನ ಮಠದ ನಂಜಾವಧೂತ ಸ್ವಾಮೀಜಿ ಭಾಗವಹಿಸಲಿದ್ದಾರೆ.

ಕಳೆದ ಜೂನ್‌ನಲ್ಲೂ ಮೋದಿ ಬೆಂಗಳೂರಿಗೆ ಭೇಟಿ ನೀಡಿದ್ದರು. ಆಗ ಬೆಂಗಳೂರು ಉಪನಗರ ರೈಲು ಮಾರ್ಗ ಯೋಜನೆಯ ಕಾಮಗಾರಿಗೆ ಶಿಲಾನ್ಯಾಸ ಸೇರಿ ಸುಮಾರು ₹27 ಸಾವಿರ ಕೋಟಿ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮತ್ತು ಚಾಲನೆ ನೀಡಿದ್ದರು. 'ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುವುದರ ಭಾಗವಾಗಿ ಪ್ರಧಾನಿ ಮೋದಿ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡುತ್ತಿದ್ದಾರೆ. ಮಿಷನ್ 150 ಗೆ ಗುರಿ ನೀಡಿದ್ದಾರೆ. ಚುನಾವಣೆ ಸಿದ್ಧತೆಯ ಬಗ್ಗೆ ರಾಜ್ಯದ ವರಿಷ್ಠರ ಜತೆ ಮಾತುಕತೆ ನಡೆಸುವ ಸಾಧ್ಯತೆ ಇದೆ' ಎಂದು ಬಿಜೆಪಿ ಮೂಲಗಳು ಹೇಳಿವೆ.

ಕಾರ್ಯಕ್ರಮಗಳ ವಿವರ

- **10.30** ಕ್ಕೆ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮನ
- **10.36** ರಿಂದ **10.40** ಕನಕದಾಸ ಪ್ರತಿಮೆ ಮತ್ತು ವಾಲ್ಮೀಕಿ ಪ್ರತಿಮೆಗಳಿಗೆ ಮಾಲಾರ್ಪಣೆ
- **10.50** ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ 'ವಂದೇ ಭಾರತ್' ರೈಲಿಗೆ ಹಸಿರು ನಿಶಾನೆ
- **11.01** ಕ್ಕೆ 'ಭಾರತ ಗೌರವ ದರ್ಶನ– ಕಾಶಿ ದರ್ಶನ' ರೈಲಿಗೆ ಹಸಿರು ನಿಶಾನೆ
- **11.50** ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 2 ರ ಉದ್ಘಾಟನೆ
- **12.22** ಕ್ಕೆ ನಾಡಪ್ರಭು ಕೆಂಪೇಗೌಡರ 'ಪ್ರಗತಿ ಪ್ರತಿಮೆ' ಅನಾವರಣ
- **1.09** ಕ್ಕೆ ಅಮೃತ್–2 ಯೋಜನೆಗೆ ಚಾಲನೆ ಮತ್ತು ಸಾರ್ವಜನಿಕ ಸಭೆ

27 ರೈಲುಗಳ ಸಂಚಾರ ವ್ಯತ್ಯಯ

ಬೆಂಗಳೂರು: ವಂದೇ ಭಾರತ್ ಎಕ್ಸ್‌ಪ್ರೆಸ್ ಮತ್ತು ಕಾಶಿ ದರ್ಶನಕ್ಕೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡುತ್ತಿದ್ದು, ಈ ಅವಧಿಯಲ್ಲಿ 27 ರೈಲುಗಳ ಕಾರ್ಯಾಚರಣೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ಈ ರೈಲುಗಳಿಗೆ ಹಸಿರು ನಿಶಾನೆ ತೋರಿಸುವ ಕಾರ್ಯಕ್ರಮ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣದಲ್ಲಿ ಶುಕ್ರವಾರ ಬೆಳಿಗ್ಗೆ ನಡೆಯಲಿದ್ದು, ಈ ನಿಲ್ದಾಣಕ್ಕೆ ಬರುವ ರೈಲುಗಳ ಪೈಕಿ ಕೆಲವನ್ನು ಭದ್ರತೆ ದೃಷ್ಟಿಯಿಂದ ರದ್ದುಗೊಳಿಸಲಾಗಿದೆ. ಹಲವು ರೈಲುಗಳ ಮಾರ್ಗ ಬದಲಾವಣೆ ಮತ್ತು ಕೆಲವನ್ನು ಭಾಗಶಃ ರದ್ದುಗೊಳಿಸಲಾಗಿದೆ. ಪರಿಷ್ಕೃತ ವೇಳಾಪಟ್ಟಿಯನ್ನು ನೈರುತ್ಯ ರೈಲ್ವೆ ಗುರುವಾರ ರಾತ್ರಿ ಬಿಡುಗಡೆ ಮಾಡಿದೆ. ಕೆಎಸ್‌ಆರ್ ನಿಲ್ದಾಣದ 8ನೇ ಪ್ಲಾಟ್‌ಫಾರ್ಮ್‌ನಲ್ಲಿ ಕಾರ್ಯಕ್ರಮ ಆಯೋಜನೆಗೊಂಡಿದ್ದು, ಆಸುಪಾಸಿನ ಪ್ಲಾಟ್‌ಫಾರ್ಮ್‌ಗಳಿಗೆ ರೈಲುಗಳ ಆಗಮನ ಮತ್ತು ನಿರ್ಗಮನವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ವಿವರ ಇಂತಿದೆ: ಕೆಎಸ್‌ಆರ್- ಚನ್ನಪಟ್ಟಣ (ರೈಲು ಸಂಖ್ಯೆ 06581) ಮತ್ತು ಚನ್ನಪಟ್ಟಣ- ಕೆಎಸ್‌ಆರ್ (06582) ರದ್ದುಗೊಳಿಸಲಾಗಿದೆ. ಇನ್ನು ಅರಸೀಕೆರೆ- ಕೆಎಸ್‌ಆರ್ (06274), ಕೋಲಾರ- ಕೆಎಸ್‌ಆರ್ (16550), ಹಿಂದೂಪುರ- ಕೆಎಸ್‌ಆರ್ (06266) ರೈಲುಗಳು ಯಶವಂತಪುರದಲ್ಲೇ ನಿಲುಗಡೆ ಆಗಲಿವೆ. ಅದೇ ರೀತಿ, ಮೈಸೂರು- ಕೆಎಸ್‌ಆರ್ (06256) ರೈಲು ನಾಯಂಡಹಳ್ಳಿಯಲ್ಲೇ ನಿಲುಗಡೆ ಆಗಲಿದೆ. ಮಾರಿಕುಪ್ಪಂ- ಕೆಎಸ್‌ಆರ್ (06264) ರೈಲು ಕಂಟೋನ್ಮೆಂಟ್ ನಿಲ್ದಾಣದಲ್ಲೇ ಕೊನೆ ಆಗಲಿದೆ.

ಕೆಎಸ್‌ಆರ್-ತುಮಕೂರು (06571) ಮತ್ತು ಕೆಎಸ್‌ಆರ್-ಹಾಸನ (06583) ರೈಲುಗಳು ಕೆಎಸ್‌ಆರ್ ಬದಲಿಗೆ ಯಶವಂತಪುರದಿಂದ ಹೊರಡಲಿವೆ. ಕೆಎಸ್‌ಆರ್- ವೈಟ್‌ಫೀಲ್ಡ್ (01765) ರೈಲು ಕಂಟೋನ್ಮೆಂಟ್‌ನಿಂದ ಮತ್ತು ಕೆಎಸ್‌ಆರ್- ಮೈಸೂರು (06257) ನಾಯಂಡಹಳ್ಳಿಯಿಂದ ಹೊರಡಲಿದೆ. ಕುಪ್ಪಂ- ಕೆಎಸ್‌ಆರ್ (06292) ರೈಲು ಕಂಟೋನ್ಮೆಂಟ್ ನಿಲ್ದಾಣಕ್ಕೆ ಕೊನೆಯಾಗಲಿದೆ.

ಮೈಸೂರು-ಬೆಳಗಾವಿ (17326) ರೈಲು ಮೈಸೂರು- ಹಾಸನ-ಅರಸೀಕೆರೆ ಮೂಲಕ ಸಾಗಲಿದೆ. ಶಿವಮೊಗ್ಗ- ಕೆಎಸ್‌ಆರ್ (12090), ಮೈಸೂರು-ಕೆಎಸ್‌ಆರ್ (16215), ಚೆನ್ನೈ-ಮೈಸೂರು (12007) ರೈಲುಗಳು ಕ್ರಮವಾಗಿ ಸುಮಾರು 60 ನಿಮಿಷ ತಡವಾಗಿ ಹೊರಡಲಿವೆ. ಕೆಎಸ್‌ಆರ್-ಮೈಸೂರು (16558) ರೈಲು 90 ನಿಮಿಷ ತಡವಾಗಿ ನಿರ್ಗಮನ ಆಗಲಿದೆ. ಅದೇ ರೀತಿ, ಕೊಚ್ಚುವೇಲಿ-ಮೈಸೂರು (16316) ಮೂರು ತಾಸು, ಮೈಸೂರು-ಬೆಳಗಾವಿ (17326) 1.40 ತಾಸು, ಸೊಲ್ಲಾಪುರ-ಮೈಸೂರು (16536) ಮತ್ತು ಬಾಗಲಕೋಟೆ-ಮೈಸೂರು (17308) ಕ್ರಮವಾಗಿ ಎರಡು ತಾಸು ತಡವಾಗಿ ಹೊರಡಲಿವೆ. ವೈಟ್‌ಫೀಲ್ಡ್–ಕೆಎಸ್‌ಆರ್(01766) ಮಾರ್ಗದುದ್ದಕ್ಕೂ ಅಲ್ಲಿ 50 ನಿಮಿಷ ನಿಲುಗಡೆ ಆಗಲಿದೆ. ಅದೇ ರೀತಿ, ಮಾರಿಕುಪ್ಪಂ-ಕೆಎಸ್‌ಆರ್ (01776) 75 ನಿಮಿಷ, ಮೈಸೂರು- ಕೆಎಸ್‌ಆರ್ (16215) ಮತ್ತು ಮೈಸೂರು- ಕೆಎಸ್‌ಆರ್ (16023) ಒಂದೂವರೆ ತಾಸು ಹಾಗೂ ಶಿವಮೊಗ್ಗ- ಕೆಎಸ್‌ಆರ್ (12090) ಒಂದು ತಾಸು ಅಲ್ಲಲ್ಲಿ ನಿಲುಡೆಗೆ ಸೂಚಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸುದ್ದಿ 2 ನಿಮಿಷ

ತಿಂಗಳಾಂತ್ಯಕ್ಕೆ ತಾಂಡಾ ನಿವಾಸಿಗಳಿಗೆ ಹಕ್ಕುಪತ್ರ: ರಾಜೀವ್

ಕಲಬುರಗಿ: 'ತಾಂಡಾಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಿ, ಫಲಾನುಭವಿ ತಾಂಡಾ ನಿವಾಸಿಗಳಿಗೆ ಹಕ್ಕುಪತ್ರ ವಿತರಿಸುವ ಬೃಹತ್ ಸಮಾವೇಶ ನವೆಂಬರ್ ಅಂತ್ಯದಲ್ಲಿ ಯಾದಗಿರಿಯಲ್ಲಿ ನಡೆಯಲಿದೆ' ಎಂದು ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಪಿ. ರಾಜೀವ್ ಹೇಳಿದರು.

'ಸಮಾವೇಶದಲ್ಲಿ ಕಲಬುರಗಿಯ 216 ಮತ್ತು ಯಾದಗಿರಿಯ 140 ತಾಂಡಾಗಳ ಫಲಾನುಭವಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಕ್ಕುಪತ್ರ ವಿತರಿಸುವರು. ಹಂತಹಂತವಾಗಿ ವಿವಿಧೆಡೆ ಸಮಾವೇಶಗಳ ಮೂಲಕ ರಾಜ್ಯದ 3,300 ಪೈಕಿ 1,700 ತಾಂಡಾಗಳ ನಿವಾಸಿಗಳಿಗೆ ಹಕ್ಕುಪತ್ರ ತಲುಪಿಸಲಾಗುವುದು' ಎಂದು ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಕಲಬುರಗಿ ಜಿಲ್ಲೆ ಮಾದರಿಯಾಗಿ ಇರಿಸಿಕೊಂಡು, ಜಿಲ್ಲಾಧಿಕಾರಿಗೆ ನೋಡಲ್ ಅಧಿಕಾರಿಯಾಗಿ ನೇಮಿಸಲಾಗುವುದು. ಹಕ್ಕುಪತ್ರಗಳ ವಿತರಣಾ ಸಮಾವೇಶ ವಿಜಯಪುರ, ಶಿವಮೊಗ್ಗ, ತುಮಕೂರು, ಚಿತ್ರದುರ್ಗದಲ್ಲಿ ನಡೆಸಲಾಗುವುದು' ಎಂದರು.

'ಫಲಾನುಭವಿಗಳು ಪಾವತಿಸಬೇಕಾದ ತಾಂಡಾ ಜಮೀನಿನ ಮೌಲ್ಯವನ್ನು ರಾಜ್ಯ ಸರ್ಕಾರ ಅಥವಾ ತಾಂಡಾ ಅಭಿವೃದ್ಧಿ ನಿಗಮ ಭರಿಸುವುದು. ಈ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚಿಸಲಾಗುವುದು. ಖಾಸಗಿ ಜಮೀನಿನಲ್ಲಿನ ನಿವಾಸಿಗಳಿಗೆ ಹಕ್ಕುಪತ್ರ ನೀಡಿದ ನಂತರ, ಆ ಜಮೀನು ಮಾಲೀಕರು ತಕರಾರು ಅರ್ಜಿ ಸಲ್ಲಿಸಿದರೆ ಜಿಲ್ಲಾಧಿಕಾರಿ ಮೂಲಕ ಪರಿಹಾರ ಧನ ಪಾವತಿಸಲಾಗುವುದು' ಎಂದರು.



ಟಿಪ್ಪು ನಾಟಕದ ವಿರುದ್ಧ ಕಾನೂನು ಹೋರಾಟ: ತನ್ವೀರ್ ಸೇಠ್

ಮೈಸೂರು: 'ಆಡಳಿತ ನಡೆಸುವವರನ್ನು ಓಲೈಸುತ್ತಿರುವ ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಅವರ 'ಟಿಪ್ಪು ನಿಜ ಕನಸುಗಳು' ನಾಟಕದ ವಿರುದ್ಧ ಕಾನೂನು ಹೋರಾಟ ನಡೆಸಲಾಗುವುದು' ಎಂದು ಶಾಸಕ ತನ್ವೀರ್ ಸೇಠ್ ತಿಳಿಸಿದರು.

ರಾಜೀವ್‌ನಗರದ ಅಲ್‌ಬದರ್ ಮೈದಾನದಲ್ಲಿ ಗುರುವಾರ ಟಿಪ್ಪು ಜಯಂತಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಯುವ ಕಲಾವಿದರಿಗೆ ನೆಲೆಯಾಗಬೇಕಾದ ಜಾಗದಲ್ಲಿಯೂ ಅಧಿಕಾರದ ದುರುಪಯೋಗಪಡಿಸಿಕೊಂಡು ತಮ್ಮ ಅಜೆಂಡಾಗಳನ್ನು ಮುನ್ನೆಲೆಗೆ ತರುತ್ತಿರುವುದು ವಿಷಾದನೀಯ' ಎಂದರು.

'ಹೈದರಾಲಿ ಮತ್ತು ಟಿಪ್ಪು ತಮ್ಮ ಅಧಿಕಾರಾವಧಿಯಲ್ಲಿ ದಸರಾವನ್ನು ಮುಂದುವರಿಸಿದರು. ವಿಶ್ವದ ಭೂಪಟದಲ್ಲಿ ಮೈಸೂರಿಗೆ ಸ್ಥಾನ ತಂದುಕೊಟ್ಟರು. ಆದರೆ ರಾಜಕೀಯ ಲಾಭಕ್ಕಾಗಿ ಇತಿಹಾಸ ತಿರುಚುವ ಕೆಲಸ ನಡೆದಿದೆ. ಟಿಪ್ಪುವಿನ ವಿರುದ್ಧ ಪ್ರಚೋದಿಸುವವರ ವಿರುದ್ಧ ಹೋರಾಟ ಅನಿವಾರ್ಯ' ಎಂದರು.

ಮುರುಘಾ ಮಠದ ಮಾಜಿ ಆಡಳಿತಾಧಿಕಾರಿ ಬಂಧನ

ಪೋಕ್ಸೊ ಪ್ರಕರಣ ದಾಖಲಿಸಲು ವಿದ್ಯಾರ್ಥಿನಿಯರಿಗೆ ಕುಮ್ಮಕ್ಕು ನೀಡಿದ ಆರೋಪ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಲು ವಿದ್ಯಾರ್ಥಿನಿಯರಿಗೆ ಕುಮ್ಮಕ್ಕು ನೀಡಿದ ಆರೋಪದ ಮೇರೆಗೆ ಮಠದ ಮಾಜಿ ಆಡಳಿತಾಧಿಕಾರಿ ಎಸ್.ಕೆ. ಬಸವರಾಜನ್ ಹಾಗೂ ಪ್ರೌಢಶಾಲೆಯ ಶಿಕ್ಷಕ ಬಸವರಾಜೇಂದ್ರ ಎಂಬುವರನ್ನು ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಆರೋಪಿಗಳನ್ನು ನ್ಯಾಯಾಲಯದ ಎದುರು ಹಾಜರುಪಡಿಸಿದ ಪೊಲೀಸರು, ಹೆಚ್ಚಿನ ವಿಚಾರಣೆಗಾಗಿ ನಾಲ್ಕು ದಿನಗಳ ಅವಧಿಗೆ ವಶಕ್ಕೆ ಪಡೆದಿದ್ದಾರೆ. ಬಸವರಾಜನ್ ಪತ್ನಿ ಸೌಭಾಗ್ಯ ತಲೆಮರೆಸಿಕೊಂಡಿದ್ದಾರೆ.

'ಮುರುಘಾ ಮಠದ ಉಸ್ತುವಾರಿ ಬಸವಪ್ರಭು ಸ್ವಾಮೀಜಿ ನೀಡಿದ ದೂರಿನ ಆಧಾರದ ಮೇರೆಗೆ ತನಿಖೆ ಕೈಗೊಳ್ಳಲಾಗಿದ್ದು, ಬಸವರಾಜೇಂದ್ರ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಮುರುಘಾ ಶರಣರ ವಿರುದ್ಧ ಎರಡನೇ ಪೋಕ್ಸೊ ಪ್ರಕರಣ ದಾಖಲಿಸಲು ತನ್ನ ಮಕ್ಕಳ ಮನವೊಲಿಸುವಂತೆ ಮಹಿಳೆಯೊಬ್ಬರು ಕೋರಿಕೊಂಡಿದ್ದು



ಬಸವರಾಜನ್



ಬಸವರಾಜೇಂದ್ರ

> **ಮುರುಘಾ ಮಠಕ್ಕೆ ಸಂಬಂಧಿಸಿದಂತೆ ದಾಖಲಾದ ಎಲ್ಲ ಪ್ರಕರಣಗಳನ್ನು ಪ್ರತ್ಯೇಕ, ನಿಷ್ಪಕ್ಷಪಾತವಾಗಿ ತನಿಖೆ ನಡೆಸಲಾಗುವುದು. ಸತ್ಯಾಸತ್ಯತೆ ಪರಿಶೀಲಿಸಿ ದೋಷಾರೋಪ ಪಟ್ಟಿ ಸಲ್ಲಿಸಲಾಗುವುದು**
> **ಕೆ. ಪರಶುರಾಮ,** ಎಸ್ಪಿ

ಗಮನಕ್ಕೆ ಬಂದಿತು. ಆರೋಪಿ ನೀಡಿದ ಹೇಳಿಕೆ ಆಧರಿಸಿ ಬಸವರಾಜನ್ ಅವರನ್ನು ಬಂಧಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ ತಿಳಿಸಿದ್ದಾರೆ.

'ದೂರು ದಾಖಲಿಸಿದ ವಿದ್ಯಾರ್ಥಿನಿಯರ ಶಿಕ್ಷಣದ ವೆಚ್ಚ ಹಾಗೂ ಕುಟುಂಬಕ್ಕೆ ಮನೆ ಕಟ್ಟಿಸಿಕೊಡುವುದಾಗಿ ಎಸ್.ಕೆ. ಬಸವರಾಜನ್ ಆಶ್ವಾಸನೆ ನೀಡಿದ್ದರು. ವಿದ್ಯಾರ್ಥಿನಿಯರ ಭವಿಷ್ಯಕ್ಕೆ ಅನುಕೂಲ ಮಾಡಿಕೊಡುವುದಾಗಿ ನಂಬಿಸಿದ್ದು ತನಿಖೆಯಿಂದ ಗೊತ್ತಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

ಬಸವರಾಜೇಂದ್ರ ಹಾಗೂ ಬಾಲಕಿಯೊಬ್ಬರ ನಡುವೆ ನಡೆದ ಫೋನ್ ಸಂಭಾಷಣೆಯ ಆಧಾರದ ಮೇರೆಗೆ ಬಸವಪ್ರಭು ಸ್ವಾಮೀಜಿ ಗ್ರಾಮಾಂತರ ಠಾಣೆಯಲ್ಲಿ 'ಒಡನಾಡಿ' ಸೇವಾ ಸಂಸ್ಥೆ ಸೇರಿ ಹಲವರ ವಿರುದ್ಧ ಬುಧವಾರ ದೂರು ದಾಖಲಿಸಿದ್ದರು.

ಫೋಟೊ ಕಳವು: ಮತ್ತೊಬ್ಬ ಸೆರೆ: ಮುರುಘಾ ಮಠದ ರಾಜಾಂಗಣದಲ್ಲಿದ್ದ ಶಿವಮೂರ್ತಿ ಮುರುಘಾ ಶರಣರ ಫೋಟೊಗಳನ್ನು ಕಳವು ಮಾಡಿದ ಪ್ರಕರಣದಲ್ಲಿ ಶ್ರೀನಿವಾಸ ಎಂಬಾತನನ್ನು ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ಮೂರಕ್ಕೆ ಏರಿದೆ. ಹೊಸಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಮೋಹನಮೂರ್ತಿ ಹಾಗೂ ಡಿಪ್ಲೊಮಾ ಕಾಲೇಜು ಉಪನ್ಯಾಸಕ ಶಿವಾನಂದಸ್ವಾಮಿ ಎಂಬುವರನ್ನು ಪೊಲೀಸರು ಬಂಧಿಸಿದ್ದರು.

ಮತ್ತೊಬ್ಬ ಬಾಲಕಿ ಮೇಲೂ ನಡೆದಿತ್ತು ದೌರ್ಜನ್ಯ

ಚಿತ್ರದುರ್ಗ: ಮುರುಘಾ ಮಠದ ಹಾಸ್ಟೆಲ್‌ನಲ್ಲಿದ್ದ ಮತ್ತೊಬ್ಬ ಬಾಲಕಿಯ ಮೇಲೂ ಲೈಂಗಿಕ ದೌರ್ಜನ್ಯ ನಡೆದಿತ್ತು ಎಂಬುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ. ಪೊಲೀಸರ ಎದುರು ನೀಡಿದ ಹೇಳಿಕೆಯಲ್ಲಿ ದೌರ್ಜನ್ಯದ ಸ್ವರೂಪವನ್ನು ಸಂತ್ರಸ್ತೆ ಬಿಚ್ಚಿಟ್ಟಿದ್ದಾರೆ.

ಶಿವಮೂರ್ತಿ ಮುರುಘಾ ಶರಣರು ಸೇರಿ ಮೂವರ ವಿರುದ್ಧ ತನಿಖಾಧಿಕಾರಿ ನ್ಯಾಯಾಲಯಕ್ಕೆ ಸಲ್ಲಿಸಿದ ದೋಷಾರೋಪ ಪಟ್ಟಿಯಲ್ಲಿ ಈ ಉಲ್ಲೇಖವಿದೆ.

ತನಿಖೆಯ ಸಂದರ್ಭದಲ್ಲಿ ಕೆಲವರು ನೀಡಿದ ಸುಳಿವಿನ ಆಧಾರದ ಮೇರೆಗೆ ಪೊಲೀಸರು ಸಂತ್ರಸ್ತೆಯನ್ನು ಪತ್ತೆ ಮಾಡಿದ್ದಾರೆ. ಮದುವೆಯಾಗಿ ಕೌಟುಂಬಿಕ ಜೀವನ ನಡೆಸುತ್ತಿರುವ ಸಂತ್ರಸ್ತೆ, ಹಾಸ್ಟೆಲ್‌ನಲ್ಲಿದ್ದ ಸಂದರ್ಭದಲ್ಲಿ ಅನುಭವಿಸಿದ ಯಾತನೆಯನ್ನು ಹೇಳಿಕೊಂಡಿದ್ದಾರೆ.

'ಎಲ್ಲರೂ ಮಲಗಿದ ಬಳಿಕ ಹಿಂಬಾಗಿಲಿನ ಮೂಲಕ ಸ್ವಾಮೀಜಿ ಕೊಠಡಿಗೆ ವಾರ್ಡನ್ ಕಳುಹಿಸುತ್ತಿದ್ದರು. ಹಣ್ಣು ತಿಂದ ನಂತರ ನನ್ನನ್ನು ಮುಟ್ಟುತ್ತಿದ್ದರು. ಇಬ್ಬರೂ ಗಂಡ–ಹೆಂಡತಿಯರಂತೆ ಸೇರುತ್ತಿದ್ದೆವು. ನಸುಕಿನ 4.30ಕ್ಕೆ ಅಲಾರ್ಮ್ ಕೂಗಿದಾಗ ಹಾಸ್ಟಲ್‌ಗೆ ಕಳುಹಿಸುತ್ತಿದ್ದರು' ಎಂದು ಸಂತ್ರಸ್ತೆ ನೀಡಿದ ಹೇಳಿಕೆಯನ್ನು ಪೊಲೀಸರು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿದ್ದಾರೆ.

ಅನುಮಾನ ಹೊರಹಾಕಿದ ಸಹಾಯಕರು: 'ಹಾಸ್ಟೆಲ್ ವಿದ್ಯಾರ್ಥಿನಿಯರನ್ನು ಸ್ವಾಮೀಜಿ ಕೊಠಡಿಗೆ ಕರೆಸಿಕೊಳ್ಳುತ್ತಾರೆ ಎಂಬ ವಿಚಾರವನ್ನು ಮಠಕ್ಕೆ ಬರುವ ಭಕ್ತರು ಮಾತನಾಡಿಕೊಳ್ಳುತ್ತಿದ್ದರು. ನಮಗೂ ಈ ಬಗ್ಗೆ ಅನುಮಾನ ಮೂಡಿತ್ತು. ಆದರೆ, ಕೆಲಸದಿಂದ ವಜಾ ಮಾಡಿದರೆ ಎಂಬ ಆತಂಕದಿಂದ ಸುಮ್ಮನಿದ್ದೆವು' ಎಂದು ಶಿವಮೂರ್ತಿ ಮುರುಘಾ ಶರಣರ ಕೊಠಡಿಯ ಸಹಾಯಕರೊಬ್ಬರು ಹೇಳಿಕೆ ನೀಡಿದ್ದಾರೆ. ಇನ್ನೂ ಇಬ್ಬರು ಸಹಾಯಕರು ತನಿಖಾಧಿಕಾರಿ ಎದುರು ಇದೇ ರೀತಿಯ ಹೇಳಿಕೆ ನೀಡಿದ್ದಾರೆ.

'ಸ್ವಾಮೀಜಿಯ ಬೆಡ್‌ರೂಂಗೆ ವಾರ್ಡನ್ ವಿದ್ಯಾರ್ಥಿನಿಯರೊಂದಿಗೆ ಹೋಗುತ್ತಿದ್ದರು. ಗಂಟೆಗಳ ಕಾಲ ಅಲ್ಲಿದ್ದು, ಮರಳುತ್ತಿದ್ದರು. ಈ ಸಮಯದಲ್ಲಿ ನಾವು ಕೊಠಡಿಗೆ ಹೋಗುವಂತಿರಲಿಲ್ಲ' ಎಂದು ಸಹಾಯಕರೊಬ್ಬರು ನೀಡಿರುವ ಹೇಳಿಕೆ ದೋಷಾರೋಪ ಪಟ್ಟಿಯಲ್ಲಿದೆ.

'ಬಸವ ಭೂಷಣ' ಪ್ರಶಸ್ತಿ ವಾಪಸ್‌ಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ಮುರುಘಾಮಠದ ಶಿವಮೂರ್ತಿ ಶರಣರು ನೀಡಿದ್ದ 'ಬಸವ ಭೂಷಣ' ಪ್ರಶಸ್ತಿಯನ್ನು ವಾಪಸ್ ನೀಡಬೇಕು ಎಂದು ನೈಜ ಹೋರಾಟಗಾರರ ವೇದಿಕೆಯ ಎಚ್.ಎಂ. ವೆಂಕಟೇಶ್ ಅವರು ಮುಖ್ಯಮಂತ್ರಿ ಅವರನ್ನು ಒತ್ತಾಯಿಸಿದ್ದಾರೆ.

ಈ ಬಗ್ಗೆ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿರುವ ಅವರು, 'ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯವೆಸಗಿರುವ ಆರೋಪ ಎದುರಿಸುತ್ತಿರುವ ಶಿವಮೂರ್ತಿ ಶರಣರು ಸಂಸ್ಕೃತಿ ಉತ್ಸವದಲ್ಲಿ ನೀಡಿದ್ದ ಪ್ರಶಸ್ತಿಯನ್ನು ವಾಪಸ್ ನೀಡಿ ನಾಡಿನ ಘನತೆ ಮತ್ತು ಗೌರವ ಕಾಪಾಡಬೇಕು' ಎಂದು ಆಗ್ರಹಿಸಿದ್ದಾರೆ.

ಜತೆಗೆ, ಅತ್ಯಾಚಾರದ ಕೃತ್ಯವೆಸಗಿರುವ ಆರೋಪಿಯ ಕೈಯಿಂದ ಪ್ರಶಸ್ತಿ ಪಡೆದವರು ಸಹ ವಾಪಸ್ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

'ಹಿರಿಯರಿಗೆ ಟಿಕೆಟ್ ಬೇಡ'

ಒಂದನೇ ಪುಟದಿಂದ

'ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾಣಿ, ಮಾಜಿ ಉಪ ಮುಖ್ಯಮಂತ್ರಿ ನಿತಿನ್‌ಭಾಯ್ ಪಟೇಲ್, ಮಾಜಿ ಸಚಿವರಾದ ಭೂಪೇಂದ್ರ ಸಿನ್ಹಾ ಮತ್ತು ಪ್ರದೀಪ್‌ಸಿಂಗ್ ಅವರು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸದಿರಲು ಸ್ವಯಂ ತೀರ್ಮಾನ ತೆಗೆದುಕೊಂಡಿದ್ದಾರೆ. ಈ ತೀರ್ಮಾನ ಕರ್ನಾಟಕಕ್ಕೂ ಮಾದರಿಯಾಗಬೇಕು' ಎಂದು ಲಹರ್ ಸಿಂಗ್ ಹೇಳಿದ್ದಾರೆ.


'ಬಿಜೆಪಿ ಮಾತ್ರವಲ್ಲ ಎಲ್ಲ ರಾಜಕೀಯ ಪಕ್ಷಗಳಿಗೂ ಇಂತಹ ನಡೆ ಅತಿಮುಖ್ಯ. ರಾಜಕೀಯದಲ್ಲಿ ತಲೆಮಾರಿನ ಬದಲಾವಣೆಗಾಗಿ ಹಿರಿಯ ರಾಜಕಾರಣಿಗಳು ಯುವಪೀಳಿಗೆಗೆ ಅವಕಾಶ ಮಾಡಿಕೊಡುವುದರಿಂದ ಪ್ರಜಾತಂತ್ರ ಇನ್ನಷ್ಟು ಶಕ್ತಿಶಾಲಿಯಾಗಲಿದೆ. ಕರ್ನಾಟಕದಲ್ಲಿ ಇನ್ನು ಕೆಲವೇ ತಿಂಗಳುಗಳಲ್ಲಿ ಚುನಾವಣೆ ನಡೆಯಲಿದೆ. ಆದ್ದರಿಂದ, ಪಕ್ಷದ ಹಿರಿಯ ನಾಯಕರು ರಾಜ್ಯ ಮತ್ತು ದೇಶದ ಹಿತಾಸಕ್ತಿಯಿಂದ ಯುವ ಜನತೆಗೆ ದಾರಿ ಮಾಡಿಕೊಡಬೇಕು' ಎಂದು ಮನವಿ ಮಾಡಿದ್ದಾರೆ.

'ನಮ್ಮ ರಾಜ್ಯದ ಉದಾಹರಣೆ ತೆಗೆದುಕೊಂಡರೆ ಎಚ್.ಡಿ.ದೇವೇಗೌಡ ಅವರು 38 ನೇ ವಯಸ್ಸಿಗೇ ದೇವರಾಜ ಅರಸು ಎದುರು ವಿರೋಧಪಕ್ಷ ನಾಯಕರಾಗಿ ಕೆಲಸ ಮಾಡಿದ್ದನ್ನು ಸ್ಮರಿಸಬಹುದು. ಯಡಿಯೂರಪ್ಪ ಮತ್ತು ಈಶ್ವರಪ್ಪ ಅವರು ಅತಿ ಚಿಕ್ಕ ವಯಸ್ಸಿನಲ್ಲೇ ಪಕ್ಷದ ಅಧ್ಯಕ್ಷರಾದರೆ, ದಿವಂಗತ ಅನಂತಕುಮಾರ್ ಚಿಕ್ಕ ಪ್ರಾಯದಲ್ಲೇ ಕೇಂದ್ರ ಸಚಿವರಾದ ಉದಾಹರಣೆ ನಮ್ಮ ಮುಂದೆ ಇದೆ. ಆದ್ದರಿಂದ ಮುಂಬರುವ ಚುನಾವಣೆಯಲ್ಲಿ ಪಕ್ಷದಲ್ಲಿ ಹಲವು ಬಾರಿ ಸಚಿವರಾದ ಹಿರಿತನ ಹೊಂದಿರುವ ನಾಯಕರು ಯುವಕರಿಗೆ ದಾರಿ ಮಾಡಿಕೊಡಬೇಕು. ಇಲ್ಲವಾದಲ್ಲಿ ಇದರ ಲಾಭವನ್ನು ಆಮ್ ಆದ್ಮಿ ಪಾರ್ಟಿಯಂತಹ ಪಕ್ಷಗಳು ಪಡೆದುಕೊಳ್ಳಲಿವೆ' ಎಂದು ಲಹರ್ ಸಿಂಗ್ ಹೇಳಿದ್ದಾರೆ.

ಪ್ರಜಾವಾಣಿ@75 ಅಮೃತ ಮಹೋತ್ಸವ — ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ.
ಪೂರ್ಣ ಪ್ರತಿಕ್ರಿಯೆಗಳನ್ನು prajavani.net ನಲ್ಲಿ ನೋಡಬಹುದು

ದಲಿತ ಹೋರಾಟಕ್ಕೆ ಸ್ಫೂರ್ತಿಯಾದ 'ಪ್ರಜಾವಾಣಿ'



ಕಾಲೇಜು ದಿನಗಳಿಂದಲೂ ನಾನು 'ಪ್ರಜಾವಾಣಿ' ಓದುತ್ತಿದ್ದೇನೆ. ಬೂಸಾ ಚಳವಳಿ ಸಂದರ್ಭದಲ್ಲಿ ರಾಷ್ಟ್ರಕವಿ ಕುವೆಂಪು ಮತ್ತು ಡಾ.ಯು.ಆರ್.ಅನಂತಮೂರ್ತಿ ಅವರ ಹೇಳಿಕೆಗಳು ಪ್ರಜಾವಾಣಿಯಲ್ಲಿ ಪ್ರಕಟವಾಗಿದ್ದವು. ಇದು, ಆ ದಿನಗಳಲ್ಲಿ ಸ್ವಲ್ಪಮಟ್ಟಿಗೆ ಹಿಂಸಾಚಾರ ತಗ್ಗಲು ಕಾರಣವಾಯಿತು. 'ಬೂಸಾ ಚಳವಳಿ –ಕಾಲು ಶತಮಾನ' ಹೆಸರಿನಲ್ಲಿ ನಾನು ತಂದ ಪುಸ್ತಕದಲ್ಲಿಯೂ ಪ್ರಜಾವಾಣಿಯಲ್ಲಿ ಬಂದಿದ್ದ ಅನೇಕ ಸುದ್ದಿ ತುಣುಕುಗಳನ್ನು ಬಳಸಿದ್ದೇನೆ. ಇತ್ತೀಚಿನ ಉಳ್ಳೇರಹಳ್ಳಿ ಘಟನೆ ಸೇರಿದಂತೆ ಅನೇಕ ಬಾರಿ ದಲಿತರ ಸಾಮಾಜಿಕ ಭದ್ರತೆ ರಕ್ಷಿಸುವಲ್ಲಿ ಪತ್ರಿಕೆ ಯಶಸ್ವಿಯಾಗಿದೆ. ದಲಿತರು, ದಲಿತರ ಮೇಲಿನ ದೌರ್ಜನ್ಯಗಳಿಗೆ ಸಂಬಂಧಿಸಿದ ವಿಷಯಗಳನ್ನು ಪ್ರಾಮಾಣಿಕವಾಗಿ ವರದಿ ಮಾಡಿದೆ. ಪ್ರಜಾವಾಣಿ ನೂರಾರು ವರ್ಷ ಯಶಸ್ವಿಯಾಗಿ ಸಾಗಲಿ ಎಂದು ಆಶಿಸುತ್ತೇನೆ.

ಲಕ್ಷ್ಮಿನಾರಾಯಣ ನಾಗವಾರ, ಸಂಚಾಲಕರು, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಬೆಂಗಳೂರು.

ಗಟ್ಟಿ ನಿಲುವಿನ ಪತ್ರಿಕೆ



ಕಳೆದ ಐದು ದಶಕಗಳಿಂದ 'ಪ್ರಜಾವಾಣಿ' ಪತ್ರಿಕೆ ನನ್ನ ಸಂಗಾತಿಯಂತಾಗಿದೆ. ತನ್ನತನವನ್ನು ಉಳಿಸಿಕೊಂಡು ವಿವಿಧ ಆಸಕ್ತಿಯ ಓದುಗರ ಪ್ರೀತಿಗೆ ಪಾತ್ರವಾದ ಪತ್ರಿಕೆ ಇದು. ವಿವಿಧ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಓದುಗರ ಜ್ಞಾನಾರ್ಜನೆಗೆ ಸಹಾಯಕ ಕೂಡ. ನಾನು ಬರೆಯತೊಡಗಿದ ಎಪ್ಪತ್ತರ ದಶಕದ ಆರಂಭದ ದಿನಗಳಲ್ಲಿ ನನ್ನ ಕವಿತೆಗಳನ್ನು ಮತ್ತು ಪುಸ್ತಕಗಳ ಪರಿಚಯ ಪ್ರಕಟಿಸಿ ಪ್ರೋತ್ಸಾಹಿಸಿದ್ದನ್ನು ಎಂದಿಗೂ ಮರೆಯಲಾರೆ. 'ಪ್ರಜಾವಾಣಿ' ಯಾವುದೇ ಸುದ್ದಿಯನ್ನು ಪಕ್ಷಪಾತವಿಲ್ಲದೆ ತಕ್ಷಣ ಪ್ರಕಟಿಸುತ್ತದೆ. ಸುದ್ದಿಗಳೂ ಸಹ ನಿಷ್ಠುರ, ವಾಸ್ತವಿಕ ಮತ್ತು ವಿಶ್ವಾಸಾರ್ಹವಾಗಿರುವುದು ವಿಶೇಷ.

ಈ ದೀರ್ಘ ಅವಧಿಯಲ್ಲಿ ತನ್ನ ಜಾತ್ಯತೀತ ನಿಲುವಿನಿಂದ ಕೂದಲೆಳೆಯಷ್ಟು ಅಲುಗಾಡದೇ ಇರುವುದಂತೂ ನನಗೆ ಅಪ್ಯಾಯಮಾನ. ಅಂತಲೇ 'ಪ್ರಜಾವಾಣಿ' ನನಗೆ ಹೆಮ್ಮೆ, ನಿತ್ಯದ ಒಡನಾಡಿಯಂತಾಗಿದೆ.

ಧರಣೇಂದ್ರ ಕುರಕುರಿ, ಶಿರಸಿ

ವೈಚಾರಿಕತೆ ರೂಪಿಸಿದ ಪತ್ರಿಕೆ



ಶಾಲಾ ದಿನಗಳಿಂದಲೂ 'ಪ್ರಜಾವಾಣಿ' ಓದಿಕೊಂಡು ಬೆಳೆದವಳು ನಾನು. ನನ್ನ ಅಭಿರುಚಿಯನ್ನು, ವೈಚಾರಿಕತೆಯನ್ನು ರೂಪಿಸಿದ ಪತ್ರಿಕೆ ಇದು. ನನಗೆ ನೆನಪಿದ್ದಾಗಿಂದ ನಮ್ಮನೆಗೆ 'ಪ್ರಜಾವಾಣಿ' ಪತ್ರಿಕೆ ಬರುತ್ತಿತ್ತು. ನಾನು ಪ್ರಾಥಮಿಕ ಶಾಲೆಯಲ್ಲಿದ್ದಾಗಿಂದ ಭಾನುವಾರದ ಮಕ್ಕಳ ಪುಟ ಓದುತ್ತಿದ್ದುದು. ಆಮೇಲೆ 'ಸುಧಾ', 'ಮಯೂರ' ಸೇರಿಕೊಂಡವು.

ಒಳ್ಳೊಳ್ಳೆ ಲೇಖಕರ ಕತೆ ಕವಿತೆ ಓದಿದ್ದು 'ಪ್ರಜಾವಾಣಿ'ಯ ದೀಪಾವಳಿ ವಿಶೇಷಾಂಕಗಳಲ್ಲಿ; ಅರವತ್ತು ಎಪ್ಪತ್ತರ ದಶಕಗಳಲ್ಲಿ. ದೇವನೂರ ಮಹಾದೇವ ಅವರ 'ಮೂಡಲ ಸೀಮೆಲೀ ಕೊಲೆ ಗಿಲೇ ಮುಂತಾಗಿ' ಕತೆ, ಶ್ರೀಕೃಷ್ಣ ಆಲನಹಳ್ಳಿ ಯವರ 'ತೊರೆ ಬತ್ತಿರಲಿಲ್ಲ'. ಬೇಸಗರಹಳ್ಳಿ ಕತೆಗಳು ಇನ್ನೂ ಎಷ್ಟೋ ಕತೆ, ಲೇಖನಗಳನ್ನು ಹೀಗೆ ಓದಿ ಥ್ರಿಲ್ ಆಗಿದ್ದು.

ಶಾಲಾ ದಿನಗಳಿಂದಲೂ ಒಂದು ದಿನ ಪತ್ರಿಕೆ ಓದದಿದ್ದರೆ ಸಮಾಧಾನವಿಲ್ಲ. ಮುಂದೆ 'ಪ್ರಜಾವಾಣಿ'ಯಲ್ಲಿ ನನ್ನ ಕೆಲವು ಲೇಖನ ಪ್ರಬಂಧ, ಕಥೆಗಳು ಪ್ರಕಟವಾದವು. 1994ರಲ್ಲಿ 'ಸಾಪ್ತಾಹಿಕ ಪುರವಣಿ'ಯ ಮುಖಪುಟದಲ್ಲಿ ಸೀತಾಳೆ ಕುರಿತ ಲೇಖನ ಅರ್ಧ ಪುಟ ಬಂದಾಗ ಬಹಳ ಖುಷಿ ಆಗಿತ್ತು. ನಂತರ ಕತೆಗಳು, ಹಲವು ಲೇಖನಗಳು ಪ್ರಕಟವಾದವು. ಶುಭಾಶಯಗಳು ಪ್ರಜಾವಾಣಿಗೆ. ನೂರು ವರ್ಷ ತಲುಪಿ ಮುಂದುವರಿಯಲಿ.

ಎಲ್.ಸಿ. ಸುಮಿತ್ರಾ, ಸಾಹಿತಿ, ತೀರ್ಥಹಳ್ಳಿ

ಮಾರ್ಗದರ್ಶಕ...



ಪ್ರಜಾವಾಣಿ ಕನ್ನಡ ದಿನಪತ್ರಿಕೆ ವಿಶ್ವಾಸಾರ್ಹವಾಗಿದ್ದು, ಪ್ರಜಾವಾಣಿ ಓದದೇ ದಿನ ಆರಂಭ ಆಗುವುದಿಲ್ಲ ಅಥವಾ ದಿನ ಮುಗಿಯುವುದಿಲ್ಲ. ನಿಖರವಾದ ಸುದ್ದಿಗೆ ಪ್ರಜಾವಾಣಿಯೇ ಮತ್ತೊಂದು ಹೆಸರು. ದಿನಂಪ್ರತಿ ಅಗ್ರಸುದ್ದಿ, ಸಂಪಾದಕೀಯ, ಸಂಗತ, ವಾಚಕರ ವಾಣಿ ಪುರವಣಿ ಲೇಖನಗಳು ಮುದನೀಡುತ್ತವೆ.

ಜನರ ನಾಡಿ ಮಿಡಿತ ಬಲ್ಲ ಪ್ರಜಾವಾಣಿಯು ಓದುಗರ ಅಭಿರುಚಿಯನ್ನು ಎತ್ತರಿಸಿದೆ. ಕಾಲಕ್ಕೆ ತಕ್ಕಂತೆ ಅಪ್ಡೇಟ್ ಆಗುತ್ತಾ ಅದೇ ಗುಣಮಟ್ಟವನ್ನು, ನಂಬಿಕೆಯನ್ನು, ಸ್ಪಷ್ಟತೆಯನ್ನು ಕಾಪಾಡಿಕೊಂಡು ಬರುತ್ತಿದೆ. ನಿಷ್ಠುರವಾಗಿ ಪತ್ರಿಕೋದ್ಯಮಕ್ಕೆ ಮಾದರಿಯಾಗಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗುವವರಿಗೆ ಮಾರ್ಗದರ್ಶಕ. ಇದಕ್ಕಿಂತ ಹೆಚ್ಚು ಏನು ಹೇಳಲಿ?!...

ಈರಣ್ಣ ಬೆಂಗಾಲಿ, ವ್ಯಂಗ್ಯಚಿತ್ರಕಾರ, ರಾಯಚೂರು

ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣ

ಎಡಿಜಿಪಿ, ಡಿವೈಎಸ್ಪಿ ಮನೆಗಳ ಮೇಲೆ ಇ.ಡಿ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 545 ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ಪ್ರಮುಖ ಆರೋಪಿಗಳಾದ ಅಮ್ರಿತ್ ಪೌಲ್ ಹಾಗೂ ಶಾಂತಕುಮಾರ್ ಮನೆ ಸೇರಿದಂತೆ 11 ಸ್ಥಳಗಳ ಮೇಲೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಗುರುವಾರ ದಾಳಿ ಮಾಡಿ, ಶೋಧ ನಡೆಸಿದರು.

'ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ ಆಗಿದ್ದ ಅಮ್ರಿತ್ ಪೌಲ್ ಹಾಗೂ ಡಿವೈಎಸ್ಪಿ ಶಾಂತಕುಮಾರ್, ವಿಭಾಗದ ಸಿಬ್ಬಂದಿ ಮೂಲಕ ಅಭ್ಯರ್ಥಿಗಳಿಂದ ಲಕ್ಷಾಂತರ ರೂಪಾಯಿ ಹಣ ಪಡೆದಿದ್ದರು. ಅಭ್ಯರ್ಥಿಗಳ ಒಎಂಆರ್ ಪ್ರತಿ ತಿದ್ದಿಸಿ, ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಹೆಸರು ಬರುವಂತೆ ನೋಡಿಕೊಂಡಿದ್ದರು' ಎಂಬುದು ಸಿಐಡಿ ಅಧಿಕಾರಿಗಳ ತನಿಖೆಯಿಂದ ಪತ್ತೆಯಾಗಿತ್ತು.

ವಿಭಾಗದ ಸಿಬ್ಬಂದಿ ಮನೆ ಮೇಲೆ ದಾಳಿ ಮಾಡಿದ್ದ ಸಿಐಡಿ ಅಧಿಕಾರಿಗಳು, ₹ 2.50 ಕೋಟಿ ಜಪ್ತಿ ಮಾಡಿದ್ದರು. ಆರೋಪಿಗಳ ಅಕ್ರಮ ಹಣ ವರ್ಗಾವಣೆ ಬಗ್ಗೆ ಮಾಹಿತಿ ಪಡೆದಿದ್ದ ಇ.ಡಿ ಅಧಿಕಾರಿಗಳು, ಇಬ್ಬರ ಮನೆಗಳ ಮೇಲೆ ಏಕಕಾಲದಲ್ಲಿ ಮಾಡಿದರು. ಇತರೆ ಆರೋಪಿಗಳ 9 ಸ್ಥಳಗಳಲ್ಲೂ ಶೋಧ ನಡೆಸಿದರು.

ಸಹಕಾರನಗರದಲ್ಲಿರುವ ಅಮ್ರಿತ್ ಪೌಲ್ ಮನೆ ಹಾಗೂ ಆಡುಗೋಡಿ ಪೊಲೀಸ್ ಕ್ವಾರ್ಟರ್ಸ್‌ನಲ್ಲಿರುವ ಶಾಂತಕುಮಾರ್ ಮನೆಯಲ್ಲಿ ಬೆಳಿಗ್ಗೆ 11 ಗಂಟೆಯಿಂದ ರಾತ್ರಿಯವರೆಗೂ ಅಧಿಕಾರಿಗಳು ಪರಿಶೀಲನೆ ನಡೆಸಿದರು.

ಕುಟುಂಬದವರ ವಿಚಾರಣೆ: 'ಅಮ್ರಿತ್ ಪೌಲ್ ಹಾಗೂ ಶಾಂತಕುಮಾರ್, ನ್ಯಾಯಾಂಗ ಬಂಧನದಲ್ಲಿದ್ದಾರೆ. ಅವರ ಮನೆಗಳಲ್ಲಿ ಶೋಧ ನಡೆಸಿದ ಇ.ಡಿ ಐವರು ಅಧಿಕಾರಿಗಳ ತಂಡ, ಕುಟುಂಬಸ್ಥರನ್ನು ವಿಚಾರಣೆ ನಡೆಸಿತು. ಹಣ ವರ್ಗಾವಣೆಗೆ ಸಂಬಂಧಪಟ್ಟ ದಾಖಲೆಗಳ ಪರಿಶೀಲನೆ ಸಹ ನಡೆಸಿತು' ಎಂದು ಮೂಲಗಳು ಹೇಳಿವೆ.

ಅಭಿನಂದನೆ ಕಾರ್ಯಕ್ರಮದಲ್ಲಿ ನೌಕರರಿಗೆ ಬೊಮ್ಮಾಯಿ ಸಲಹೆ

'ಒಂದು ತಾಸು ಹೆಚ್ಚು ಕೆಲಸ ಮಾಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ದಿನ ಒಂದು ತಾಸು ಹೆಚ್ಚಿಗೆ ಕೆಲಸ ಮಾಡಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರಾಜ್ಯ ಸರ್ಕಾರಿ ನೌಕರರಿಗೆ ಸಲಹೆ ನೀಡಿದರು.

ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ 7ನೇ ವೇತನ ಆಯೋಗ ರಚನೆ ಮಾಡಿರುವುದಕ್ಕೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ನೇತೃತ್ವದಲ್ಲಿ ಗುರುವಾರ ನಡೆದ ಅಭಿನಂದನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ವಿಧಾನಸೌಧದಿಂದ ಕೆಳಹಂತದವರೆಗೆ ಈ ಕೆಲಸ ಆಗಬೇಕು. ಮುಂದಿನ ವಿಚಾರ ನನಗೆ ಬಿಡಿ. ಎಲ್ಲರೂ ಒಂದಾಗಿ ಸುಭಿಕ್ಷ ಮತ್ತು ಸಮೃದ್ಧ ನಾಡನ್ನು ಕಟ್ಟೋಣ. ಪ್ರಾಮಾಣಿಕತೆ, ನಿಷ್ಠೆ ಮತ್ತು ಕರ್ತವ್ಯ ಪ್ರಜ್ಞೆಯಿಂದ ಕೆಲಸ ಮಾಡಿ. ಬಡವರಿಗೆ ಜನಪರವಾದ ಕೆಲಸ ಮಾಡಿದರೆ ಕರ್ನಾಟಕ ಅಭಿವೃದ್ಧಿಯಾಗುತ್ತದೆ. ನವ ಕರ್ನಾಟಕದಿಂದ ನವ ಭಾರತ ನಿರ್ಮಿಸೋಣ. ದೇಶದ 5 ಟ್ರಿಲಿಯನ್ ಡಾಲರ್ ಆರ್ಥಿಕತೆಯ ಕನಸಿಗೆ ಕರ್ನಾಟಕದಿಂದ ಒಂದು ಟ್ರಿಲಿಯನ್ ಡಾಲರ್ ಕೊಡುಗೆ ನೀಡಬೇಕು' ಎಂದು ಹೇಳಿದರು.

'ವರ್ಷದಿಂದ ವರ್ಷಕ್ಕೆ ಹಣದುಬ್ಬರ ಹೆಚ್ಚಾಗುತ್ತದೆ. ಸರ್ಕಾರಿ ನೌಕರರಾಗಿ ಸೇವೆಗೆ ಸೇರಿದ ಸಂದರ್ಭಕ್ಕೂ ಈಗಿನ ಸಂದರ್ಭಕ್ಕೂ ವ್ಯತ್ಯಾಸ ಆಗಿರುತ್ತದೆ. ಸಮಯ ಮತ್ತು ಹಣ ಎರಡೂ ಬಹಳ ಮುಖ್ಯ. ಸರಿಯಾದ ಸಮಯದಲ್ಲಿ ಸರಿಯಾದ ಸಂಪಾದನೆಯಾದರೆ ಬದುಕಿಗೆ ಪ್ರೇರಣೆ. ಅದಕ್ಕಾಗಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಬಿ.ಎಸ್. ಯಡಿಯೂರಪ್ಪ ಅವರು ಕೂಡ ಇದಕ್ಕೆ ಒತ್ತಾಸೆಯಾಗಿದ್ದರು. ನೌಕರರ ಸಂಘದ ಅಧ್ಯಕ್ಷ ಷಡಕ್ಷರಿ ಅವರೂ ಒತ್ತಾಯ ಮಾಡಿದ್ದರು' ಎಂದು ಬೊಮ್ಮಾಯಿ ಹೇಳಿದರು.

'ಆಯೋಗದ ಅಧ್ಯಕ್ಷ ಡಾ.ಸುಧಾಕರ ರಾವ್ ಅವರು ದಕ್ಷರು, ಪ್ರಭಾವಕ್ಕೆ ಮಣಿಯದವರು. ನ್ಯಾಯಸಮ್ಮತವಾದ 7 ನೇ ವೇತನ ಆಯೋಗದ ವರದಿ ಬರಲಿ ಎಂದು ಶುದ್ಧಹಸ್ತ, ಶುದ್ಧ ಅಂತಃಕರಣವುಳ್ಳ ವ್ಯಕ್ತಿಯನ್ನೇ ಆಯ್ಕೆ ಮಾಡಿದ್ದೇವೆ' ಎಂದರು.



ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ, ತೋಟಗಾರಿಕಾ ಸಚಿವ ಮುನಿರತ್ನ ಇದ್ದರು

ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ

‘ಪಕ್ಷಕ್ಕೆ ಹಾನಿ ಆಗಬಾರದೆಂದು ಹೇಳಿಕೆ ಹಿಂಪಡೆದಿದ್ದೇನೆ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಹಿಂದೂ’ ಪದದ ಕುರಿತು ನಾನು ನೀಡಿದ್ದ ಹೇಳಿಕೆ ಹಿಂಪಡೆಯಲು ಸರ್ಕಾರ ಅಥವಾ ಯಾರ ಒತ್ತಡವೂ ಇರಲಿಲ್ಲ. ಸ್ಥಳೀಯ ನಾಯಕರು ಮನವೊಲಿಸಿದ್ದರಿಂದ ಪಕ್ಷಕ್ಕೆ ಹಾನಿ ಆಗಬಾರದೆಂದು ಈ ನಿರ್ಣಯ ಕೈಗೊಂಡಿದ್ದೇನೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನನ್ನ ಹೇಳಿಕೆಯನ್ನು ತಿರುಚಲಾಯಿತು. ಹೇಳಿಕೆ ಹಿಂಪಡೆದು ಮುಖ್ಯಮಂತ್ರಿಗೆ ಪತ್ರ ಬರೆದಿದ್ದೇನೆ. ನಿಪ್ಪಾಣಿಯಲ್ಲಿ ನಡೆದಿದ್ದು ಖಾಸಗಿ ಕಾರ್ಯಕ್ರಮ. ಮಾತಾಡಿದ್ದು ವೈಯಕ್ತಿಕ ಅಭಿಪ್ರಾಯ. ಪಕ್ಷಕ್ಕೂ ಅದಕ್ಕೂ ಸಂಬಂಧವಿಲ್ಲ. ಆದರೆ, ನನ್ನ ಮಾತಿನಿಂದ ಪಕ್ಷದ ವರ್ಚಸ್ಸಿಗೆ ಹಾನಿ ಆಗಬಾರದು ಎಂಬುದು ನನ್ನ ಉದ್ದೇಶ’ ಎಂದರು.

‘ನನ್ನ ಸಿದ್ಧಾಂತದಿಂದ ಹಿಂದೆ ಸರಿದಿಲ್ಲ. ಹೇಳಿಕೆಯನ್ನು ಸಾಬೀತುಗೊಳಿಸುವ ಯತ್ನ ಮುಂದುವರಿಸುತ್ತೇನೆ. ಪೂರಕ ದಾಖಲೆಗಳೊಂದಿಗೆ ವಿವಿಧ ವೇದಿಕೆಗಳ ಮೇಲೆ ಮಾತನಾಡುವೆ. ನೈಜ ಸ್ಥಿತಿ ವಿವರಿಸದೆ, ಅವಾಂತರ ಸೃಷ್ಟಿಸಿದವರ ವಿರುದ್ಧ ತನಿಖೆಗಾಗಿ ಸಮಿತಿ ರಚಿಸಬೇಕು. ಈ ಬಗ್ಗೆ ನಮ್ಮ ಪಕ್ಷದ ವೇದಿಕೆಯಲ್ಲಿ ಚರ್ಚಿಸಿ, ಸರ್ಕಾರದ ಮೇಲೆ ಒತ್ತಡ ತರುತ್ತೇವೆ’ ಎಂದು ಅವರು ಹೇಳಿದರು.



ಜಾರಕಿಹೊಳಿ

‘ಸತೀಶ ಜಾರಕಿಹೊಳಿ ದುಡುಕುವವರಲ್ಲ. ಕಾಂಗ್ರೆಸ್ ಸಹವಾಸದಿಂದ ಹೀಗಾಗಿದೆ’ ಎಂಬ ಸಿ.ಎಂ ಬಸವರಾಜ ಬೊಮ್ಮಾಯಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ನಾನು ದುಡುಕಿಲ್ಲ. ಸೂಕ್ಷ್ಮವಾಗಿ ಗಮನಿಸಿ ಎಂದಿದ್ದೇನೆ’ ಎಂದು ಉತ್ತರಿಸಿದರು.

‘ನಿಮ್ಮ ನಡೆ ಯಾರೊಂದಿಗೆ?’ ಎಂಬ ಪ್ರಶ್ನೆಗೆ, ‘ಎಲ್ಲರೊಂದಿಗೆ ನಮ್ಮ ನಡೆ’ ಎಂದರು.

‘ಇದನ್ನು ಇಲ್ಲಿಯೇ ಮುಗಿಸಿಬಿಡಿ’: ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಮಾತನಾಡಿ, ‘ಸತೀಶ ಜಾರಕಿಹೊಳಿ ತಮ್ಮ ಹೇಳಿಕೆ ವಾಪಸ್ ಪಡೆದು, ಈ ಪ್ರಕರಣಕ್ಕೆ ತೆರೆ ಎಳೆದಿದ್ದಾರೆ. ಎಲ್ಲ ವಿಚಾರಗಳನ್ನು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಹಾಗಾಗಿ ಈ ವಿವಾದವನ್ನು ಇಲ್ಲಿಯೇ ಮುಗಿಸಿಬಿಡಿ’ ಎಂದು ಕೈ ಮುಗಿದು ಮನವಿ ಮಾಡಿದರು.

ಶಾಸಕ ಗಣೇಶ ಹುಕ್ಕೇರಿ, ಮುಖಂಡರಾದ ಲಕ್ಷ್ಮಣರಾವ್ ಚಿಂಗಳೆ, ವಿನಯ ನಾವಲಗಟ್ಟಿ,ವೀರಕುಮಾರ್ ಪಾಟೀಲ ಇದ್ದರು.

ಬೆಳೆ ವಿಮೆ ಪರಿಹಾರ: ಶೀಘ್ರ ಇತ್ಯರ್ಥಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2022– 23 ನೇ ಸಾಲಿನ ಪೂರ್ವ ಮುಂಗಾರು ಹಂಗಾಮಿನ ರೈತರ ಬೆಳೆ ವಿಮೆ ಪರಿಹಾರ ಪಾವತಿಯನ್ನು ಡಿಸೆಂಬರ್ ಅಂತ್ಯದೊಳಗೆ ಇತ್ಯರ್ಥಪಡಿಸುವಂತೆ ಕೃಷಿ ಸಚಿವ ಬಿ.ಸಿ.ಪಾಟೀಲ ಅವರು ಅಧಿಕಾರಿಗಳಿಗೆ ಸೂಚಿಸಿದರು.

ವಿಕಾಸಸೌಧದಲ್ಲಿ ಗುರುವಾರ ಬೆಳೆವಿಮೆ ಪರಿಹಾರ ಪಾವತಿ ಸಂಬಂಧ ಅಧಿಕಾರಿಗಳ ಜತೆ ಸಭೆ ನಡೆಸಿ ಅವರು ಮಾತನಾಡಿದರು.

ಯಾವುದೇ ಕಾರಣಕ್ಕೂ ಬೆಳೆ ವಿಮೆ ಪರಿಹಾರ ಪಾವತಿ ತಡವಾಗಬಾರದು. ರೈತರು ವಿಮೆಗಾಗಿ ಕಾದು ಕುಳಿತಿರುತ್ತಾರೆ. ಕೃಷಿ ಅಧಿಕಾರಿಗಳು ವಿಮಾ ಕಂಪೆನಿಗಳೊಂದಿಗೆ ನಿರಂತರ ಸಂಪರ್ಕವನ್ನು ಹೊಂದಿರಬೇಕು ಎಂದು ಹೇಳಿದರು.

ಆಧಾರ್ ಕಾರ್ಡ್ ಜೋಡಣೆ ಆಗದೇ ಇರುವ ರೈತರ ಸಂಖ್ಯೆ ಸಾಕಷ್ಟು ಇರುವುದನ್ನು ಗಮನಿಸಿದ ಅವರು, ‘ಬೆಳೆ ವಿಮೆಗೆ ಆಧಾರ್ ಕಾರ್ಡ್ ಜೋಡಣೆ ಆಗಿದೆಯೇ ಎಂಬುದನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳಬೇಕು. ವಿಮಾ ಕಂಪನಿಗಳೊಂದಿಗೆ ಆಧಾರ್‌ನಲ್ಲಿ ಏನಾದರೂ ತಿದ್ದುಪಡಿ ಆಗಿದ್ದಲ್ಲಿ ಅದನ್ನು ನನ್ನ ಗಮನಕ್ಕೆ ತರಬೇಕು. ರೈತರೂ ಇದನ್ನು ಗಮನಿಸಬೇಕು’ ಎಂದೂ ಸಲಹೆ ನೀಡಿದರು.

ಮುಂಗಾರು ಹಂಗಾಮಿನ ಬೆಳೆಗಳಿಗೆ ಜನವರಿಯಲ್ಲಿ ವಿಮೆ ಪರಿಹಾರ ಪಾವತಿಯನ್ನು ಇತ್ಯರ್ಥಪಡಿಸಲು ಪ್ರಕ್ರಿಯೆ ಆರಂಭಿಸುವಂತೆಯೂ ಪಾಟೀಲ ಸೂಚಿಸಿದರು. ಕೃಷಿ ಇಲಾಖೆ ಕಾರ್ಯದರ್ಶಿ ಶಿವಯೋಗಿ ಕಳಸದ, ಆಯುಕ್ತ ಪಿ.ಶರತ್ ಮತ್ತು ಇತರ ಅಧಿಕಾರಿಗಳು ಭಾಗವಹಿಸಿದ್ದರು.

ಕಮಲಾ ಹಂಪನಾ ಪ್ರಶಸ್ತಿಗೆ ಲೇಖಕ ಪದ್ಮಪ್ರಸಾದ್ ಆಯ್ಕೆ

ಪ್ರಜಾವಾಣಿ ವಾರ್ತೆ



ತುಮಕೂರು: ‘ನಾಡೋಜ ಡಾ. ಕಮಲಾ ಹಂಪನಾ ಸಾಹಿತ್ಯ ವೇದಿಕೆ’ ನೀಡುವ 2022ನೇ ಸಾಲಿನ ದತ್ತಿ ಪ್ರಶಸ್ತಿಗೆ ಲೇಖಕ ಡಾ.ಎಸ್.ಪಿ. ಪದ್ಮಪ್ರಸಾದ್ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹10 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.

ಇದೇ 12ರಂದು ಬೆಂಗಳೂರಿನ ಬಿಎಂಶ್ರೀ ಪ್ರತಿಷ್ಠಾನದಲ್ಲಿ ನಡೆಯುವ ಲೇಖಕಿಯರ ಸಂಘದ ಸಮಾವೇಶದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಪದ್ಮಪ್ರಸಾದ್ ಅವರು ಈವರೆಗೆ 104 ಕೃತಿಗಳನ್ನು ಪ್ರಕಟಿಸಿದ್ದಾರೆ.

ಆದಾಯಕ್ಕಿಂತ ಹೆಚ್ಚು ಆಸ್ತಿ: ಎಂಜಿನಿಯರ್‌ಗೆ ₹ 25 ಲಕ್ಷ ದಂಡ

ಮಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಾಹಕ ಎಂಜಿನಿಯರ್ ಎನ್. ನರಸಿಂಹರಾಜುಗೆ 3ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯವು ಮೂರು ವರ್ಷ ಆರು ತಿಂಗಳು ಸಾದಾ ಸಜೆ ಹಾಗೂ ₹ 25 ಲಕ್ಷ ದಂಡ ವಿಧಿಸಿದೆ. ದಂಡ ಕಟ್ಟಲು ವಿಫಲವಾದಲ್ಲಿ ಮತ್ತೆ ಆರು ತಿಂಗಳ ಸಾದಾ ಶಿಕ್ಷೆ ಅನುಭವಿಸಬೇಕು ಎಂದು ಗುರುವಾರ ತೀರ್ಪು ನೀಡಿದೆ.



ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ಟೌನ್‌ನ ಎನ್. ನರಸಿಂಹರಾಜು, 2009ರಲ್ಲಿ ಇಲ್ಲಿನ ಲೋಕೋಪಯೋಗಿ ಇಲಾಖೆ ಯೋಜನಾ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಆಗಿದ್ದರು.

ಇವರು ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಬಗ್ಗೆ 2010 ಮಾರ್ಚ್ 24ರಂದು ಪ್ರಕರಣ ದಾಖಲಾಗಿತ್ತು. ಆಗಿನ ಲೋಕಾಯುಕ್ತ ಪೊಲೀಸ್ ಡಿವೈಎಸ್‌ಪಿ ಸದಾನಂದ ವರ್ಣೇಕರ್ ಅವರು ನೀಡಿದ ದೂರಿನಂತೆ, ಡಿವೈಎಸ್ಪಿ ವಿಠಲದಾಸ್ ಪೈ ಅವರು ಪ್ರಕರಣದ ತನಿಖೆ ನಡೆಸಿ, 3ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಕರ್ನಾಟಕ ಲೋಕಾಯುಕ್ತದ ವಿಶೇಷ ಸರ್ಕಾರಿ ವಕೀಲ ರವೀಂದ್ರ ಮುನ್ನಿಪಾಡಿ ಸರ್ಕಾರದ ಪರವಾಗಿ ವಾದ ಮಂಡಿಸಿದ್ದರು.

ಎನ್. ನರಸಿಂಹರಾಜು ವಿರುದ್ಧ 2009ರಲ್ಲಿ ಟ್ರ್ಯಾಪ್ ಪ್ರಕರಣ ಕೂಡ ದಾಖಲಾಗಿದ್ದು, ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ ಎಂದು ಮಂಗಳೂರು ಲೋಕಾಯುಕ್ತ ಎಸ್ಪಿ ಲಕ್ಷ್ಮಿ ಗಣೇಶ್ ಕೆ ತಿಳಿಸಿದ್ದಾರೆ.

ಎಂ.ಆರ್.ಕಮಲಗೆ ಸಾಹಿತ್ಯ ಕಲ್ಪತರು ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ತಿಪಟೂರು: ತಿಪಟೂರಿನ ‘ಬಯಲುಸೀಮೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘ’ ನೀಡುವ ‘ಸಾಹಿತ್ಯ ಕಲ್ಪತರು’ ರಾಜ್ಯಮಟ್ಟದ ಪ್ರಶಸ್ತಿಗೆ ಕವಯತ್ರಿ, ಅನುವಾದಕಿ, ಪ್ರಕಾಶಕಿ ಪ್ರೊ. ಎಂ.ಆರ್. ಕಮಲ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹10 ಸಾವಿರ ನಗದು, ಸ್ಮರಣ ಫಲಕ ಒಳಗೊಂಡಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎನ್. ಬಾನುಪ್ರಶಾಂತ್ ತಿಳಿಸಿದ್ದಾರೆ.

ಸಾಹಿತ್ಯ ಕ್ಷೇತ್ರದ ಜೀವಮಾನದ ಸಾಧನೆಗಾಗಿ ಕಮಲ ಅವರನ್ನು ಪ್ರಶಸ್ತಿಗೆ ಪರಿಗಣಿಸಲಾಗಿದೆ. ಇದು ಸಂಘ ನೀಡುತ್ತಿರುವ ಮೂರನೇ ಪ್ರಶಸ್ತಿಯಾಗಿದ್ದು, ಈ ಹಿಂದೆ ಬಾರಿ ಕವಿ ಡುಂಡಿರಾಜ್ ಮತ್ತು ಬಿ.ಆರ್. ಲಕ್ಷ್ಮಣರಾವ್ ಅವರಿಗೆ ಪ್ರಶಸ್ತಿ ನೀಡಲಾಗಿದೆ.

ಪ್ರಶಸ್ತಿ ಪ್ರದಾನ ಸಮಾರಂಭವು ನ. 18 ರಂದು ಸಂಜೆ 6ಕ್ಕೆ ನಗರದ ಸತ್ಯ ಗಣಪತಿ ಆಸ್ಥಾನ ಮಂಟಪದಲ್ಲಿ ಜರುಗಲಿದೆ. ಸಮಾರಂಭದಲ್ಲಿ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಬೆಂಗಳೂರು ದೂರದರ್ಶನ ಕೇಂದ್ರದ ಮಾಜಿ ನಿರ್ದೇಶಕ ಜಿ.ಎಂ. ಶಿರಹಟ್ಟಿ ಭಾಗವಹಿಸಲಿದ್ದಾರೆ.

ಶಿವರುದ್ರ ಸ್ವಾಮೀಜಿಗೆ ‘ರಮಣಶ್ರೀ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹಾಗೂ ರಮಣಶ್ರೀ ಪ್ರತಿಷ್ಠಾನ ನೀಡುವ 2022ನೇ ಸಾಲಿನ ‘ರಮಣಶ್ರೀ ಶರಣ ಪ್ರಶಸ್ತಿ’ ಘೋಷಣೆಯಾಗಿದ್ದು, ‘ರಮಣಶ್ರೀ ಶರಣ ಜೀವಮಾನ ಸಾಧಕ ಪ್ರಶಸ್ತಿ’ಗೆ ಬೇಲಿಮಠದ ಶಿವರುದ್ರ ಸ್ವಾಮೀಜಿ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ₹ 50 ಸಾವಿರ ನಗದು ಒಳಗೊಂಡಿದೆ. ಶರಣ ಸಾಹಿತ್ಯ ಸಂಶೋಧನೆಗೆ ಹುಬ್ಬಳ್ಳಿಯ ಬಿ.ವಿ. ಶಿರೂರ, ಆಧುನಿಕ ವಚನ ರಚನೆಗೆ ವಿಜಯಪುರದ ಫ.ಗು. ಸಿದ್ದಾಪುರ, ವಚನ ಸಂಗೀತಕ್ಕೆ ಬೆಂಗಳೂರಿನ ಮೃತ್ಯುಂಜಯ ದೊಡ್ಡವಾಡ ಹಾಗೂ ಶರಣ ಸಂಸ್ಕೃತಿ ಪ್ರಸಾರಕ್ಕೆ ಬಾಗಲಕೋಟೆಯ ಇಳಕಲ್‌ನ ಚಿತ್ತರಗಿ ವಿಜಯ ಮಹಾಂತೇಶ್ವರ ಸಂಸ್ಥಾನ ಮಠವು ‘ರಮಣಶ್ರೀ ಶರಣ ಪ್ರಶಸ್ತಿ’ಗೆ ಆಯ್ಕೆಯಾಗಿದೆ. ಈ ಪ್ರಶಸ್ತಿಯು ತಲಾ ₹ 40 ಸಾವಿರ ನಗದು ಒಳಗೊಂಡಿದೆ.

ಶರಣ ಸಾಹಿತ್ಯ ಸಂಶೋಧನೆಗೆ ಬೆಳಗಾವಿಯ ಕಾರಂಜಿ ಮಠದ ಶಿವಯೋಗಿ ದೇವರು, ವಚನ ರಚನೆಗೆ ಶಿವಮೊಗ್ಗದ ದಾಕ್ಷಾಯಿಣಿ ಜಯದೇವಪ್ಪ, ವಚನ ಸಂಗೀತಕ್ಕೆ ಬೆಂಗಳೂರಿನ ಸಿದ್ದರಾಮ ಕೇಸಾಪುರ ಹಾಗೂ ಶರಣ ಸಂಸ್ಕೃತಿ ಪ್ರಸಾರಕ್ಕೆ ನಂಜನಗೂಡಿನ ವಿಶ್ವಬಸವ ಸೇನೆಯ ಬಸವ ಯೋಗೇಶ್ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿ ತಲಾ ₹ 20 ಸಾವಿರ ನಗದು ಒಳಗೊಂಡಿದೆ.

ಇದೇ 17ರಂದು ಬೆಂಗಳೂರಿನ ರಿಚ್ಮಂಡ್ ವೃತ್ತದಲ್ಲಿರುವ ರಮಣಶ್ರೀ ಹೋಟೆಲ್‌ನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ವಸತಿ ಸಚಿವ ವಿ. ಸೋಮಣ್ಣ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರತಿಷ್ಠಾನದ ವೀರೇಂದ್ರ ಷಡಕ್ಷರಿ ಹಾಗೂ ಅರುಣಾ ಸತೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸುಭಾಷಿತ

ನೀವು ಜೀವನವನ್ನು ಪ್ರೀತಿಸುತ್ತೀರಿ ಎಂದಾದರೆ ಸಮಯ ಹಾಳು ಮಾಡಬೇಡಿ. ಏಕೆಂದರೆ ಸಮಯವೇ ಜೀವನ.

- ಬ್ರೂಸ್ ಲೀ

ಒಪ್ಪಿಗೆಯ ವಯೋಮಿತಿ: ಹೈಕೋರ್ಟ್ ಸಲಹೆ ಕುರಿತು ಗಂಭೀರ ಚಿಂತನೆ ಅಗತ್ಯ

‘**ಲೈಂಗಿಕ** ಸಂಪರ್ಕದ ಕುರಿತಂತೆ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಲ್ಲಿ ಹೇಳಿರುವ ‘ಒಪ್ಪಿಗೆಯ ವಯೋಮಿತಿ’ ನಿಯಮದ ಬಗ್ಗೆ ಮರುಚಿಂತನೆ ನಡೆಸಬೇಕು’ ಎಂದು ರಾಜ್ಯ ಹೈಕೋರ್ಟ್, ಕೇಂದ್ರ ಕಾನೂನು ಆಯೋಗಕ್ಕೆ ನಿರ್ದೇಶನ ನೀಡಿದೆ. ಹದಿನಾರು ವರ್ಷ ದಾಟಿದ (ಆದರೆ, ಹದಿನೆಂಟು ವರ್ಷಕ್ಕಿಂತ ಕಡಿಮೆ ಪ್ರಾಯದ) ಬಾಲಕಿಯರು ಪ್ರೇಮ ಪ್ರಕರಣಗಳಲ್ಲಿ ಸಿಲುಕಿ ಮನೆಬಿಟ್ಟು ಹೋಗುವ ಮತ್ತು ಲೈಂಗಿಕ ಸಂಪರ್ಕ ಹೊಂದುವ ಪ್ರಕರಣಗಳು ಹೆಚ್ಚುತ್ತಿರುವುದನ್ನು ಗಂಭೀರವಾಗಿ ತೆಗೆದುಕೊಂಡಿರುವ ನ್ಯಾಯಪೀಠವು, ವಾಸ್ತವ ಸಂಗತಿಗಳ ಆಧಾರದಲ್ಲಿ ‘ಒಪ್ಪಿಗೆಯ ವಯೋಮಿತಿ’ ನಿಯಮದ ಕುರಿತು ಮರುಪರಿಶೀಲನೆಯನ್ನು ನಡೆಸಬೇಕು ಎಂದೂ ಆದೇಶಿಸಿದೆ. ದೇಶದ ಯಾವುದೇ ಕಾಯ್ದೆಯು ನ್ಯಾಯದಾನದ ಮೂಲತತ್ವಕ್ಕೆ ಬದ್ಧವಾಗಿರಬೇಕು ಎನ್ನುವುದರಲ್ಲಿ ಎರಡನೇ ಮಾತಿಲ್ಲ. ಆದರೆ, ಅದೇ ಸಂದರ್ಭದಲ್ಲಿ, ನೆಲದ ವಾಸ್ತವವನ್ನು ಅರಿತುಕೊಂಡು, ಕಾಲಕ್ಕೆ ಅನುಗುಣವಾಗಿ ನಿಯಮದಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬೇಕು ಎಂಬ ಮಾತನ್ನೂ ಅಲ್ಲಗಳೆಯುವಂತಿಲ್ಲ. ಈ ದಿಸೆಯಲ್ಲಿ, ಹದಿನಾರು ವರ್ಷ ದಾಟಿದ ಬಾಲಕಿಯೊಂದಿಗೆ, ಅವಳ ಸಮ್ಮತಿಯಿಂದಲೇ ಲೈಂಗಿಕ ಸಂಪರ್ಕ ನಡೆದರೂ ಪೋಕ್ಸೊ ಕಾಯ್ದೆಯಡಿಯಲ್ಲಿ ಅದನ್ನು ಅಪರಾಧ ಎಂದು ಪರಿಗಣಿಸುತ್ತಿರುವ ಕುರಿತು ನ್ಯಾಯಪೀಠ ಆಶ್ಚರ್ಯ ವ್ಯಕ್ತಪಡಿಸಿರುವುದು ಗಮನಾರ್ಹವಾಗಿದೆ.



ಪೋಕ್ಸೊ ಕಾಯ್ದೆಯು ಒಂದಿನಿತೂ ಅಳ್ಳಕಗೊಳ್ಳದಂತೆ, ಲೈಂಗಿಕ ಸಂಪರ್ಕದ ‘ಒಪ್ಪಿಗೆಯ ವಯೋಮಿತಿ’ಯನ್ನು ಇಳಿಸುವ ದಿಸೆಯಲ್ಲಿ ಕಾನೂನು ಆಯೋಗ ಗಂಭೀರವಾಗಿ ಆಲೋಚಿಸುವುದು ಅಗತ್ಯ

ಲೈಂಗಿಕ ಕಿರುಕುಳದಿಂದ ಮಕ್ಕಳನ್ನು ರಕ್ಷಣೆ ಮಾಡುವುದಕ್ಕಾಗಿಯೇ ಪೋಕ್ಸೊ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ ಮತ್ತು ಲೈಂಗಿಕ ಸಂಪರ್ಕದ ‘ಒಪ್ಪಿಗೆಯ ವಯೋಮಿತಿ’ಯನ್ನು ಆ ಸಮಯದಲ್ಲಿಯೇ 16 ವರ್ಷದಿಂದ 18 ವರ್ಷಕ್ಕೆ ಹೆಚ್ಚಿಸಲಾಗಿದೆ. ಆದರೆ, ಕೋರ್ಟ್‌ಗೆ ವಿಚಾರಣೆಗಾಗಿ ಬರುತ್ತಿರುವ ಹಲವು ಪ್ರಕರಣಗಳಲ್ಲಿ ಹದಿನಾರು ವರ್ಷಕ್ಕಿಂತ ಹೆಚ್ಚಿನ ಪ್ರಾಯದ ಬಾಲಕಿಯರು, ಮದುವೆಯಾಗುವ ಹಾಗೂ ಪ್ರಣಯದಲ್ಲಿ ತೊಡಗುವ ಸ್ವ-ಇಚ್ಛೆಯಿಂದಲೇ ಮನೆಯಿಂದ ಹೋಗಿರುವುದು ಎದ್ದು ಕಂಡಿದೆ. ಇಂತಹ ಬಹುತೇಕ ಸಂದರ್ಭಗಳಲ್ಲಿ ಬಾಲಕಿಯ ಪಾಲಕರಿಂದ ಅವಳ ಪ್ರಿಯತಮನ ವಿರುದ್ಧ ಪ್ರಕರಣ ದಾಖಲಾಗಿದೆ. ಒಂದೊಮ್ಮೆ ಬಾಲಕಿಯೊಂದಿಗೆ ಲೈಂಗಿಕ ಸಂಪರ್ಕ ಏರ್ಪಟ್ಟಿರುವುದು ಸಾಬೀತಾದರೆ ಪೋಕ್ಸೊ ಕಾಯ್ದೆಯಡಿ ಹುಡುಗನ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ. ಆ ಹುಡುಗನೂ 18 ವರ್ಷಕ್ಕಿಂತ ಕಡಿಮೆ ವಯಸ್ಸಿನವನು ಆಗಿರಬಹುದು ಇಲ್ಲವೇ ಮದುವೆಗೆ ಕಾನೂನುಬದ್ಧ ವಯೋಮಿತಿಯನ್ನು (21 ವರ್ಷ) ಇನ್ನೂ ದಾಟಿಲ್ಲದೇ ಇರಬಹುದು. ಈ ವಯಸ್ಸಿನಲ್ಲಿ ಕಾನೂನು ಕ್ರಮಕ್ಕೆ ಗುರಿಯಾಗುವುದರ ಪರಿಣಾಮಗಳು ಜೀವನದ ಗತಿಯನ್ನೇ ಬದಲಾಯಿಸಬಲ್ಲವು. ಹುಡುಗನು ಕ್ರಿಮಿನಲ್ ಪ್ರಕರಣ ಎದುರಿಸುವಂತಾದರೆ, ಹುಡುಗಿಯ ಪಾಲಕರು ಇಂತಹ ಸಂಬಂಧವನ್ನು ವಿರೋಧಿಸುವ ಕಾರಣ, ಆಕೆ ಸರ್ಕಾರಿ ಸಂಸ್ಥೆಗಳಲ್ಲಿ ಆಶ್ರಯವನ್ನು ಪಡೆಯಬೇಕಾಗುತ್ತದೆ. ಇಬ್ಬರ ಜೀವನವನ್ನೂ ಇಂತಹ ಪ್ರಕರಣಗಳು ಹಾಳು ಮಾಡುತ್ತವೆ ಮತ್ತು ಎರಡೂ ಕುಟುಂಬಗಳು ಕಾನೂನು ಹೋರಾಟದಲ್ಲಿ ಹೈರಾಣಾಗುತ್ತವೆ ಎಂದು ತಜ್ಞರು ಹೇಳುವುದರಲ್ಲಿಯೂ ಅರ್ಥವಿದೆ.

ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆಯುವ ಅಪಾಯ ಹೆಚ್ಚು ಮತ್ತು ಅವರು ಲೈಂಗಿಕವಾಗಿ ಶೋಷಣೆಗೆ ಒಳಗಾಗದಂತೆ ಸಾಧ್ಯವಾದ ಎಲ್ಲ ಬಗೆಯಲ್ಲೂ ನಿಗಾ ವಹಿಸಬೇಕು. ಅದನ್ನು ಸಾಧ್ಯವಾಗಿಸಲು ಕಾನೂನಿನ ಹಿಡಿತ ಬಿಗಿಯಾದಷ್ಟೂ ಒಳ್ಳೆಯದು. ಆದಾಗ್ಯೂ, ಇಂತಹ ಪ್ರಕರಣಗಳ ತನಿಖೆ ಮತ್ತು ವಿಚಾರಣೆಯ ಸಂದರ್ಭದಲ್ಲಿ ಹದಿಹರೆಯದವರ ಆಕರ್ಷಣೆಯ ನೈಜತೆ ಮತ್ತು ಲೈಂಗಿಕ ಸಂಪರ್ಕ ಹೊಂದುವಾಗ ಹದಿನಾರು ವರ್ಷಕ್ಕಿಂತ ಹೆಚ್ಚಿನ ವಯೋಮಾನದವರ ಪರಸ್ಪರ ಸಮ್ಮತಿ- ಎರಡನ್ನೂ ಗಣನೆಗೆ ತೆಗೆದುಕೊಳ್ಳಬೇಕು. ‘ವಿದ್ಯಾರ್ಥಿಗಳಿಗೆ 9ನೇ ತರಗತಿಯಿಂದಲೇ ಭಾರತೀಯ ದಂಡ ಸಂಹಿತೆ (ಐಪಿಸಿ) ಹಾಗೂ ಪೋಕ್ಸೊ ಕಾಯ್ದೆಯ ನಿಯಮಗಳ ಬಗ್ಗೆ ಶಿಕ್ಷಣ ನೀಡಬೇಕು. ಐಪಿಸಿ ಮತ್ತು ಪೋಕ್ಸೊ ಕಾಯ್ದೆ ಉಲ್ಲಂಘನೆ ಮಾಡುವುದರಿಂದ ಎಂತಹ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂಬ ಬಗ್ಗೆ ಅವರಲ್ಲಿ ಅರಿವು ಮೂಡಿಸಬೇಕು’ ಎಂದು ನ್ಯಾಯಪೀಠ ನೀಡಿರುವ ಸೂಚನೆಯನ್ನು ಸರ್ಕಾರ ತ್ವರಿತವಾಗಿ ಪಾಲಿಸಬೇಕು. ಹೀಗೆ ಮಕ್ಕಳಲ್ಲಿ ಕಾಯ್ದೆಗಳ ಬಗ್ಗೆ ಅರಿವು ಮೂಡಿಸುವುದರಿಂದ ಇಂತಹ ಪ್ರಕರಣಗಳನ್ನು ನಿಯಂತ್ರಿಸಲು ಸಾಧ್ಯವಿದೆ. ಹಾಗೆಯೇ, ಪೋಕ್ಸೊ ಕಾಯ್ದೆಯು ಒಂದಿನಿತೂ ಅಳ್ಳಕಗೊಳ್ಳದಂತೆ ಲೈಂಗಿಕ ಸಂಪರ್ಕದ ‘ಒಪ್ಪಿಗೆಯ ವಯೋಮಿತಿ’ಯನ್ನು, ಕೋರ್ಟ್ ನಿರ್ದೇಶನದಂತೆ, ಹದಿನೆಂಟು ವರ್ಷದಿಂದ ಹದಿನಾರು ವರ್ಷಕ್ಕೆ ಇಳಿಸುವ ದಿಸೆಯಲ್ಲಿ ಕಾನೂನು ಆಯೋಗ ಸಹ ಗಂಭೀರವಾಗಿ ಆಲೋಚಿಸುವುದು ಅಗತ್ಯವಾಗಿದೆ.

ದಿನದ ಟ್ವೀಟ್

ಇದು ಯಾವ ಬಗೆಯ ಸೋಲು?



ಸೋಲಿನಲ್ಲಿ ಗೌರವಾನ್ವಿತ ಸೋಲು, ಸಾಮಾನ್ಯ ಸೋಲು, ಕೆಟ್ಟ ಸೋಲು, ಹೀನಾಯ ಸೋಲು ಎಂದೆಲ್ಲಾ ಇರುತ್ತವೆ. ಭಾರತದ ಕ್ರಿಕೆಟ್ ತಂಡವು ಇಂಗ್ಲೆಂಡ್ ವಿರುದ್ಧ ಸೋತಿರುವ ರೀತಿ ಯಾವ ಬಗೆಯದು ಎಂಬುದನ್ನು ನೀವೇ ನಿರ್ಧರಿಸಿಕೊಳ್ಳಿ.

ಎಂ.ಕೆ.ವೇಣು, ಪತ್ರಕರ್ತ

ಕಿಡಿನುಡಿ



ನಾನು ಕಾಂಗ್ರೆಸ್ಸಿಗೆ ಧನ್ಯವಾದ ಹೇಳ್ತೀನಿ. ಅವರ ಹಿಂದೂ ವಿರೋಧಿ ಮನಃಸ್ಥಿತಿಯನ್ನು ಆಗಾಗ್ಗೆ ಮುಚ್ಚುಮರೆ ಇಲ್ಲದೆ ಹೊರಹಾಕ್ತಾ ಇರ್ತಾರೆ.

ಪ್ರತಾಪ್ ಸಿಂಹ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಮಂಗಳವಾರ, 11-11-1997

• ಪಟೇಲ್ ನಾಯಕತ್ವಕ್ಕೆ ಧಕ್ಕೆ ಇಲ್ಲ: ಎಚ್.ಡಿ. ದೇವೇಗೌಡ

ಬೆಂಗಳೂರು, ನ. 10– ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಆಡಳಿತದ ಬಗೆಗೆ ಅತೃಪ್ತಿ ತಳೆದಿರುವ ಶಾಸಕರು ತಮ್ಮ ಅಳಲನ್ನು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಸಮ್ಮುಖದಲ್ಲಿ ಇಂದು ಮತ್ತೆ ತೋಡಿಕೊಂಡರು. ಆದರೂ ‘ಇದರಿಂದ ಪಟೇಲ್ ಸರ್ಕಾರಕ್ಕೆ ಯಾವ ಧಕ್ಕೆ ಅಥವಾ ಬೆದರಿಕೆಯೂ ಇಲ್ಲ’ ಎಂದು ದೇವೇಗೌಡರು ಸ್ಪಷ್ಟಪಡಿಸಿದರು.

ಸಭೆಯ ನಂತರ ಹೊರಬಂದು ಪತ್ರಕರ್ತರೊಂದಿಗೆ ಮಾತನಾಡಿದ ದೇವೇಗೌಡ ಅವರು ‘ಪಕ್ಷದವರಲ್ಲಿನ ಭಿನ್ನಾಭಿಪ್ರಾಯಗಳು ಪಟೇಲ್ ನೇತೃತ್ವದ ಸರ್ಕಾರಕ್ಕೆ ಯಾವುದೇ ಬೆದರಿಕೆಯನ್ನು ಒಡ್ಡಿಲ್ಲ ಅಥವಾ ನಾಯಕತ್ವದ ಬದಲಾವಣೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಈ ಎಲ್ಲ ಬೆಳವಣಿಗೆಗಳು ಪಕ್ಷದ ಮೇಲೆ ವ್ಯತಿರಿಕ್ತ ಪರಿಣಾಮ ಬೀರದು’ ಎಂದು ಹೇಳಿದರು.

• ಪಕ್ಷಾಂತರ ನಿಷೇಧ ಕಾಯಿದೆ: ಸಮಗ್ರ ತಿದ್ದುಪಡಿಗೆ ಒಲವು

ನವದೆಹಲಿ, ನ. 10 (ಪಿಟಿಐ)– ಪಕ್ಷಾಂತರ ನಿಷೇಧ ಕಾಯಿದೆಗೆ ಸಮಗ್ರ ತಿದ್ದುಪಡಿಯ ಅಗತ್ಯವಿದೆ ಎಂಬುದನ್ನು ಬಹುತೇಕ ರಾಜಕೀಯ ಪಕ್ಷಗಳು ಒಪ್ಪಿಕೊಂಡಿವೆ. ಆದರೆ ಇದು ಸಣ್ಣಪುಟ್ಟ ತಿದ್ದುಪಡಿಗಷ್ಟೇ ಮೀಸಲಾಗಿರದೇ ಸಮಗ್ರ ತಿದ್ದುಪಡಿಯಾಗಬೇಕು ಎಂಬುದನ್ನು ಅವು ಒತ್ತಿ ಹೇಳಿವೆ.

ಹನ್ನೆರಡು ವರ್ಷಗಳಷ್ಟು ಹಳೆಯದಾದ ಪಕ್ಷಾಂತರ ನಿಷೇಧ ಕಾಯಿದೆಗೆ ಉತ್ತರ ಪ್ರದೇಶದಲ್ಲಿ ಇತ್ತೀಚೆಗೆ ಉಂಟಾದ ರಾಜಕೀಯ ವಿದ್ಯಮಾನಗಳ ಹಿನ್ನೆಲೆಯಲ್ಲಿ ತಿದ್ದುಪಡಿ ತರುವ ಬಗ್ಗೆ ಇಂದು ಪ್ರಧಾನಿ ಐ.ಕೆ. ಗುಜ್ರಾಲ್ ಅವರ ನಿವಾಸದಲ್ಲಿ ಒಂದು ಗಂಟೆ ಕಾಲ ನಡೆದ ಸರ್ವ ಪಕ್ಷಗಳ ಸಭೆಯಲ್ಲಿ ವಿಷಯದ ಬಗ್ಗೆ ಬಹುತೇಕ ಒಮ್ಮತದ ಅಭಿಪ್ರಾಯ ಮೂಡಿಬಂತು.

50 ವರ್ಷಗಳ ಹಿಂದೆ

ಶನಿವಾರ, 11-11-1972

• ವಿದೇಶಿ ಉಡುಪು ಧರಿಸದಿರಲು ಭೂತಾನ್ ಸಚಿವರ ಆಜ್ಞೆ

ನವದೆಹಲಿ, ನ. 10– ಭೂತಾನಿಗಳದ್ದಲ್ಲದ ಉಡುಪನ್ನು ತೊಡಬಾರದೆಂದು ಭೂತಾನ್ ಜನರಿಗೆ ಅಲ್ಲಿನ ಗೃಹ ಸಚಿವರು ಆಜ್ಞೆ ಮಾಡಿದ್ದಾರೆ.

ಸರ್ಕಾರಿ ಹುದ್ದೆಯಲ್ಲಿರುವ ಭೂತಾನಿಗಳು ಪಾಶ್ಚಿಮಾತ್ಯ ತೊಡುಗೆಗಳನ್ನು ತೊರೆದು ಭೂತಾನ್ ಉಡುಪನ್ನು ಮಾತ್ರ ತೊಡಬೇಕು. ಈ ಆಜ್ಞೆ ಹಿರಿಯ ಅಧಿಕಾರಿಗಳಿಂದ ಹಿಡಿದು ಚಾಲಕರವರೆಗೆ ಅನ್ವಯಿಸುತ್ತದೆ.

ಸರ್ಕಾರಿ ಹುದ್ದೆಗಳಲ್ಲಿಲ್ಲದ ಸಾರ್ವಜನಿಕರೂ ಸಹ ‘ಭೂತಾನಿಗಳ ನಮೂನೆಯದಾಗಿರದ ಉಡುಪನ್ನು ಬಳಸಬಾರದು’ ಎಂದು ಗೃಹ ಸಚಿವರ ಆಜ್ಞೆ ತಿಳಿಸಿದೆ.

ಭೂತಾನಿಗಳ ಸಂಪ್ರದಾಯ ಉಳಿಸಿಕೊಳ್ಳಲು ಈ ಆಜ್ಞೆ ಮಾಡಲಾಗಿದೆ ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

• ನಗರದ ಎಚ್‌ಎಂಟಿ ಕಾರ್ಖಾನೆಯಲ್ಲಿ ಅನಿರ್ದಿಷ್ಟ ಕಾಲ ಲಾಕ್‌ಔಟ್ ಘೋಷಣೆ

ಬೆಂಗಳೂರು, ನ. 10– ನಗರದ ಎಚ್‌ಎಂಟಿ ಕಾರ್ಖಾನೆಯಲ್ಲಿ ಎರಡು ತಂಡದ ಕಾರ್ಮಿಕರ ನಡುವೆ ಇರುವ ವೈಷಮ್ಯದ ಫಲವಾಗಿ ಇಂದು ಪರಿಸ್ಥಿತಿ ವಿಕೋಪಕ್ಕೆ ಹೋಗಿ, ಕಾರ್ಖಾನೆ ಆಸ್ತಿಗೆ ಹಾನಿ ಹಾಗೂ ನೌಕರರಿಗೆ ಪ್ರಾಣಾಪಾಯ ಉಂಟಾಗುವುದನ್ನು ತಪ್ಪಿಸಲು ಆಡಳಿತವರ್ಗ ಅನಿರ್ದಿಷ್ಟ ಕಾಲ ಲಾಕ್‌ಔಟ್ ಘೋಷಿಸಿತು.

ಇದೇ ಕಾರಣಕ್ಕಾಗಿ ಕೇವಲ ಒಂದು ತಿಂಗಳ ಹಿಂದೆ ಲಾಕ್‌ಔಟ್ ಆಗಿದ್ದ ಘಟನೆಯನ್ನು ಪ್ರಸ್ತಾಪಿಸಿ, ಕಾರ್ಖಾನೆಯಲ್ಲಿ ಕಾರ್ಮಿಕರು ಸಂಪೂರ್ಣ ಶಿಸ್ತು ಪಾಲಿಸಿ ಶಾಂತಿ ನೆಲೆಸುವುದೆಂದು ಖಾತರಿ ಆಗುವವರೆಗೆ ಲಾಕ್‌ಔಟ್ ತೆಗೆಯುವುದಿಲ್ಲವೆಂದು ಆಡಳಿತ ವರ್ಗ ಸ್ಪಷ್ಟಪಡಿಸಿದೆ.

ನಮ್ಮೆಲ್ಲರ ಸಮಸ್ಯೆಗಳ ನಿವಾರಣೆಗೆ ನಮ್ಮೆಲ್ಲರ ಪ್ರಯತ್ನ ಬೇಕು

ಅನುಷ್ಠಾನದ ಮೇಲಿನ ಹೂಡಿಕೆ



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ರಾಜ್ಯ ವಿಧಾನಸಭೆಗೆ ಚುನಾವಣೆ ಹತ್ತಿರವಾಗುತ್ತಿರುವ ಹೊತ್ತಿನಲ್ಲಿ, ಬಿಜೆಪಿ ನೇತೃತ್ವದ ಸರ್ಕಾರವು ಒಳ್ಳೆಯ ಪರಿಣಾಮ ಬೀರಬಲ್ಲ ಯಾವುದೇ ಸುದ್ದಿಯನ್ನು ಒಳ್ಳೆಯ ಸಾಧನೆ ಎಂದು ತೋರಿಸಲು ಉತ್ಸುಕವಾಗಿದೆ. ಇದಕ್ಕೆ ಒಂದು ನಿದರ್ಶನ, ಈಚೆಗೆ ಮುಕ್ತಾಯವಾದ ಜಾಗತಿಕ ಹೂಡಿಕೆದಾರರ ಸಮಾವೇಶ. ಕಾರ್ಯಕ್ರಮದ ಸಮಾರೋಪದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ‘ಕರ್ನಾಟಕ ಇಂದು ಆಲೋಚಿಸುವುದನ್ನು ಭಾರತವು ನಾಳೆ ಕೃತಿಯಲ್ಲಿ ತೋರಿಸುತ್ತದೆ’ ಎಂದು ಒತ್ತಿ ಹೇಳಿದರು. ತಮ್ಮ ನೇತೃತ್ವದ ಸರ್ಕಾರವನ್ನು ಅವರು ಹೂಡಿಕೆಸ್ನೇಹಿ, ಮುಂದಾಲೋಚನೆ ಇರುವ ಸರ್ಕಾರವನ್ನಾಗಿ ಬಣ್ಣಿಸಿದರು. ₹ 10 ಲಕ್ಷ ಕೋಟಿ ಮೊತ್ತದ ಒಪ್ಪಂದಗಳು ಅಂತಿಮಗೊಂಡಿದ್ದನ್ನು ಅವರು ತಮ್ಮ ಮಾತಿಗೆ ಉದಾಹರಣೆಯಾಗಿ ಉಲ್ಲೇಖಿಸಿದರು.

ಈ ಬಾರಿಯ ಕಾರ್ಯಕ್ರಮದ ಯಶಸ್ಸನ್ನು ಹೊಗಳುವ ಸಂದರ್ಭದಲ್ಲಿ ಅವರು, ಹಿಂದೆ ಭರವಸೆಗಳಿಗೆ ತಕ್ಕಂತೆ ಸಾಧನೆ ಆಗದಿದ್ದುದನ್ನು ಒಪ್ಪಿಕೊಂಡರು. ಕೆಲವು ವರ್ಷಗಳಲ್ಲಿ ಒಪ್ಪಂದದ ಶೇಕಡ 8ರಷ್ಟು, ಶೇ 15ರಷ್ಟು ಮಾತ್ರ ಹೂಡಿಕೆ ಆಗಿದ್ದಿದೆ. ಈ ಬಾರಿ ಈ ರೀತಿ ಆಗುವುದಿಲ್ಲ ಎಂಬ ಭರವಸೆಯನ್ನು ಮುಖ್ಯಮಂತ್ರಿ ನೀಡಿದರು. ಹಿಂದಿನ ಸಮಾವೇಶಗಳಲ್ಲಿ ವಾಸ್ತವ ಹೂಡಿಕೆ ಕಡಿಮೆ ಆಗಿದ್ದರಿಂದ ಉಂಟಾದ ಸಿನಿಕತೆಯು ಈ ಬಾರಿಯೂ ಪ್ರಭಾವ ಉಂಟುಮಾಡಬಹುದು ಎಂಬುದು ಅವರಿಗೆ ಗೊತ್ತಿದೆ. ಒಪ್ಪಂದಗಳು ಒಳ್ಳೆಯ ಉದ್ದೇಶಗಳನ್ನು, ಭಾರಿ ಭರವಸೆಗಳನ್ನು ಪ್ರತಿನಿಧಿಸುತ್ತವೆ. ಇವು ಮೊತ್ತದ ಉಲ್ಲೇಖವಿರುವ, ಪಾವತಿಸುವವರು ಹಾಗೂ ಪಾವತಿ ಸ್ವೀಕರಿಸುವವರ ಹೆಸರು ಇರುವ, ಆದರೆ ದಿನಾಂಕ ಮತ್ತು ಸಹಿ ಇಲ್ಲದ ಚೆಕ್ ಇದ್ದಂತೆ!

ಕರ್ನಾಟಕ ಹಾಗೂ ಬೆಂಗಳೂರು ಒಂದು ಕಳೆದು ಹೋದ ಅವಕಾಶವನ್ನು ಹೇಗೆ ಪ್ರತಿನಿಧಿಸುತ್ತವೆ ಎಂಬುದನ್ನು ಹೇಳುವ ವರದಿಗಳು ಮಾಧ್ಯಮಗಳಲ್ಲಿ ಇವೆ. ರಾಜ್ಯವು ‘ಅಗಾಧ ಅವಕಾಶಗಳು ಹಾಗೂ ಸಾಮರ್ಥ್ಯಗಳ’ ತಾಣವಾಗಿರಬಹುದು. ಆದರೆ ಇದು ‘ತೀವ್ರ ಅಡಚಣೆಗಳಿರುವ ಮತ್ತು ಅಧಿಕಾರಶಾಹಿ ವ್ಯವಸ್ಥೆ ಸೃಷ್ಟಿಸುವ ವಿಳಂಬವು ಸಂಕಟ ಹುಟ್ಟಿಸುವ ಮಟ್ಟಕ್ಕೆ ಇರುವ’ ತಾಣವೂ ಹೌದು. ವಾಸ್ತವ ಹೂಡಿಕೆಗಳು ಕಡಿಮೆ ಪ್ರಮಾಣದಲ್ಲಿ ಇರುವುದಕ್ಕೆ ಇದು ಕಾರಣವೇ? ಇಲ್ಲಿ ನಾಲ್ಕು ಪ್ರಮುಖ ಅಡಚಣೆಗಳನ್ನು ನಿವಾರಿಸಬೇಕಿದೆ.

ಮೊದಲನೆಯದು, ಹೂಡಿಕೆಯನ್ನು ಆಕರ್ಷಿಸುವ ಹಾಗೂ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಬೇಕಿರುವ ಸ್ಥಿರತೆ ಸರ್ಕಾರಕ್ಕೆ ಇದೆಯೇ? ಅಷ್ಟು ಗಮನ ನೀಡಲು ಅದಕ್ಕೆ ಸಾಧ್ಯವೇ? ಕಳೆದ ಮೂರು ದಶಕಗಳಲ್ಲಿ (1992–2022) ಮುಖ್ಯಮಂತ್ರಿ ಹುದ್ದೆಯಲ್ಲಿದ್ದವರು 15 ಬಾರಿ ಬದಲಾಗಿದ್ದಾರೆ (12 ವ್ಯಕ್ತಿಗಳು). ಅಂದರೆ ಪ್ರತೀ ಎರಡು ವರ್ಷಗಳಿಗೆ ಒಬ್ಬರು ಮುಖ್ಯಮಂತ್ರಿ ಇಲ್ಲಿ ಆಡಳಿತ ನಡೆಸಿದ್ದಾರೆ. ಈ ಅವಧಿಯಲ್ಲಿ ಇಬ್ಬರು ಮಾತ್ರ ಮುಖ್ಯಮಂತ್ರಿ ಅವಧಿಯನ್ನು ಪೂರ್ಣಗೊಳಿಸಿದ್ದಾರೆ. ಮೂರು ದಶಕಗಳಲ್ಲಿ ನಡೆದ ಆರು ವಿಧಾನಸಭಾ ಚುನಾವಣೆಗಳಲ್ಲಿ ಆಡಳಿತಾರೂಢ ಪಕ್ಷವು ಮತ್ತೆ ಬಹುಮತ ಪಡೆದಿಲ್ಲ. ಆಯಾ ಸಂದರ್ಭದ ಸರ್ಕಾರದ ವಿಚಾರವಾಗಿ ಜನರ ಸಂತೃಪ್ತಿಯ ಮಟ್ಟವು ಹೆಚ್ಚಿರಲಿಲ್ಲ ಎಂಬುದನ್ನು ಲೋಕನೀತಿ–ಸಿಎಸ್‌ಡಿಎಸ್ ಸಮೀಕ್ಷೆಯ ಅಂಕಿ–ಅಂಶಗಳು ತಿಳಿಸಿವೆ. ಸರ್ಕಾರದ ಚುಕ್ಕಾಣಿ ಹಿಡಿದವರು ಅಭಿವೃದ್ಧಿ ಕಾರ್ಯತಂತ್ರಗಳಿಗೆ ಆದ್ಯತೆ ನೀಡದಿದ್ದುದಕ್ಕೆ ಮತ್ತು ರಾಜ್ಯವನ್ನು ನಿಜವಾಗಿಯೂ ಹೂಡಿಕೆದಾರಸ್ನೇಹಿ ಆಗಿಸದಿದ್ದುದಕ್ಕೆ ಇದು ಕಾರಣ.

ಎರಡನೆಯದಾಗಿ, ರಾಜ್ಯದಲ್ಲಿ ಹೆಚ್ಚಿನ ಹೂಡಿಕೆ ತರಲು ಹಾಗೂ ಹೆಚ್ಚಿನ ಹೂಡಿಕೆಗೆ ಬೇಕಿರುವ ವಾತಾವರಣ ಸೃಷ್ಟಿಸಲು ಪ್ರತೀ ಇಲಾಖೆಯೂ ಮುಖ್ಯಮಂತ್ರಿಯ ಮೇಲೆ (ಕೆಲವೊಮ್ಮೆ ಕೈಗಾರಿಕಾ ಸಚಿವರ ಮೇಲೆ) ಅವಲಂಬಿತವಾಗಿದೆ. ಸಂಸದೀಯ ವ್ಯವಸ್ಥೆಯು ಸಾಮೂಹಿಕ ಹೊಣೆಗಾರಿಕೆಯ ಆಧಾರದಲ್ಲಿ ಕೆಲಸ ಮಾಡಬೇಕಿದ್ದರೂ, ವಾಸ್ತವದಲ್ಲಿ ಪ್ರತೀ ಸಚಿವ ಕೂಡ ತಮ್ಮ ಸಣ್ಣ ರಾಜಕೀಯ ಕ್ಷೇತ್ರವನ್ನು ರಕ್ಷಿಸಿಕೊಳ್ಳುವಲ್ಲಿ ನಿರತರಾಗಿರುತ್ತಾರೆ. ಬೇರೆ ಬೇರೆ ಸಚಿವರು ಹಾಗೂ ಅವರ ಇಲಾಖೆಗಳು ಸಾಮೂಹಿಕವಾಗಿ ಕೆಲಸ ಮಾಡಲು ಯತ್ನಿಸುವುದು ಕಡಿಮೆ. ಎಡಗೈ ಏನು ಮಾಡುತ್ತಿದೆ ಎಂಬುದು ಬಹಳ ಸಂದರ್ಭಗಳಲ್ಲಿ ಬಲಗೈಗೆ ಗೊತ್ತೇ ಇರುವುದಿಲ್ಲ! ಇದರ ಜೊತೆಯಲ್ಲೇ, ಸರ್ಕಾರದಲ್ಲಿ ಇರುವ ಭ್ರಷ್ಟಾಚಾರದ ಪ್ರಮಾಣದ ಬಗ್ಗೆ ಪ್ರತಿರೋಧಗಳು ಹೆಚ್ಚುತ್ತಿವೆ. ಇಲ್ಲಿ ಪಕ್ಷಭೇದ ಇಲ್ಲ.

ಮೂರನೆಯದಾಗಿ, ಬೆಂಗಳೂರು ನಗರದ ಮೂಲ ಸೌಕರ್ಯಕ್ಕೆ ಸಂಬಂಧಿಸಿದ ಅಡಚಣೆಗಳು ಹಾಗೂ ಎರಡನೆಯ ಮತ್ತು ಮೂರನೆಯ ಹಂತದ ನಗರಗಳನ್ನು ಹೂಡಿಕೆಗೆ ಸಜ್ಜಾಗಿಸುವಲ್ಲಿನ ಹಿಂಜರಿಕೆ ಕೂಡ ಒಂದು ಪ್ರಮುಖ ಸವಾಲು. ಭಾರಿ ಯೋಜನೆಗಳನ್ನು ಸಿದ್ಧಪಡಿಸಿ, ಅವುಗಳನ್ನು ಒಂದಿಷ್ಟುಮಟ್ಟಿಗೆ ಅನುಷ್ಠಾನಕ್ಕೆ ತರಲಾಯಿತಾದರೂ, ಅವುಗಳನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಹೆಚ್ಚಿನ ಪ್ರಯತ್ನ ಆಗಿಲ್ಲ. ಮೂಲಸೌಕರ್ಯವನ್ನು ಹೆಚ್ಚಿಸುವ ಸಂದರ್ಭದಲ್ಲಿ ಹಿಂದಿನ ದಿನದ ಅಗತ್ಯಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿದೆ ಎಂಬಂತೆ ಕಾಣುತ್ತಿದೆಯೇ ವಿನಾ, ಇಂದಿನ ಹಾಗೂ ಮುಂದಿನ ಅಗತ್ಯಗಳನ್ನು ಪರಿಗಣಿಸಿದಂತೆ ಕಾಣುತ್ತಿಲ್ಲ. ಇದರ ಪರಿಣಾಮವಾಗಿ, ಯೋಜನೆಗಳ ಅನುಷ್ಠಾನ ಪೂರ್ಣಗೊಂಡಾಗ ಅವು ಆ ಕಾಲಘಟ್ಟದ ಹಾಗೂ ಭವಿಷ್ಯದ ಅಗತ್ಯಗಳನ್ನು ಪೂರೈಸುವಲ್ಲಿ ವಿಫಲವಾಗುತ್ತವೆ. ಸವಾಲುಗಳಿಗೆ ಕಾರ್ಯಸಾಧುವಾದ ಪರಿಹಾರಗಳನ್ನು ಹುಡುಕುವಲ್ಲಿ ರಾಜಕೀಯ ಇಚ್ಛಾಶಕ್ತಿ ಮತ್ತು ಅಧಿಕಾರಶಾಹಿಯ ಯತ್ನದ ಕೊರತೆ ಇದೆ. ಆದ್ಯತೆಗಳು ಬೇರೆಯದೇ ಆಗಿರುತ್ತವೆ.

ಕೊನೆಯದಾಗಿ, ಪ್ರಮುಖ ಪಾಲುದಾರರ ನಡುವಿನ ಕೆಸರೆರಚಾಟ ಸ್ಪಷ್ಟವಾಗಿ ಕಾಣುತ್ತಿರುತ್ತದೆ. ಖಾಸಗಿ ವಲಯವು ಸರ್ಕಾರವನ್ನು ದೂಷಿಸುತ್ತದೆ, ಸರ್ಕಾರವು ಖಾಸಗಿ ವಲಯದ ಕಡೆ ಬೊಟ್ಟು ಮಾಡುತ್ತದೆ. ನಗರವಾಸಿ, ಸುಶಿಕ್ಷಿತ ವರ್ಗವು ಸರ್ಕಾರವನ್ನು ದೂಷಿಸುತ್ತದೆಯಾದರೂ ಮತದಾರರಾಗಿ ತಮ್ಮ ಹಕ್ಕುಗಳನ್ನು ಚಲಾಯಿಸಲು ವಿಫಲವಾಗುತ್ತದೆ. ಭ್ರಷ್ಟಾಚಾರದ ಬಗ್ಗೆ ಎಲ್ಲರೂ ಮಾತನಾಡುತ್ತಾರೆ. ಆದರೆ, ತಮ್ಮ ಕೆಲಸ ಮಾಡಿಸಿಕೊಳ್ಳಲು ಭ್ರಷ್ಟಾಚಾರಕ್ಕೆ ಕೊಡುಗೆ ನೀಡಲು ಯಾರಿಗೂ ಬೇಸರವಿಲ್ಲ.

ಬೆಂಗಳೂರಿನಲ್ಲಿ ಭಾರಿ ಮಳೆ ಸುರಿದಾಗ ನೀರು ಎಲ್ಲೆಂದರಲ್ಲಿ ಕಟ್ಟಿಕೊಳ್ಳುವುದಕ್ಕೆ ಬಡಾವಣೆಗಳು, ಅಪಾರ್ಟ್‌ಮೆಂಟ್ ಸಂಕೀರ್ಣಗಳು ಹಾಗೂ ಗೇಟೆಡ್ ಕಮ್ಯುನಿಟಿಗಳನ್ನು ನಿಯಮ ಉಲ್ಲಂಘಿಸಿ ನಿರ್ಮಾಣ ಮಾಡಿದ್ದು ಕಾರಣ. ಆದರೆ ಹೀಗೆ ನಿಯಮಗಳ ಉಲ್ಲಂಘನೆ ಆಗುವಾಗ ನಾಗರಿಕರು ಹೆಚ್ಚು ಜಾಗೃತರಾಗಿ ಪ್ರತಿಕ್ರಿಯೆ ನೀಡಿದ ನಿದರ್ಶನಗಳು ಕಡಿಮೆ. ತಾವೇ ಮುಂದಾಗಿ ಕ್ರಮಗಳನ್ನು ಕೈಗೊಳ್ಳುವ ಬದಲು, ಏನಾದರೂ ನಡೆದಾಗ ಅದಕ್ಕೆ ಪ್ರತಿಕ್ರಿಯೆ ನೀಡುವುದು ಮಾತ್ರ ಕಾಣುತ್ತದೆ. ಇದರ ಪರಿಣಾಮಗಳು ನಾವು ಎದುರಿಸುತ್ತಿರುವ ಅಡಚಣೆಗಳ ರೂಪದಲ್ಲಿ ಕಾಣಿಸುತ್ತವೆ.

ಮುಖ್ಯಮಂತ್ರಿ ಬೊಮ್ಮಾಯಿ ಅವರು ಸಮಾರೋಪ ಸಮಾರಂಭದಲ್ಲಿ ಆಡಿದ ಮಾತುಗಳ ಕಡೆ ಮತ್ತೆ ಗಮನ ಹರಿಸೋಣ. ಒಪ್ಪಂದಗಳ ವಿಚಾರವಾಗಿ ಅವರು ತೃಪ್ತಿ ವ್ಯಕ್ತಪಡಿಸಿದರು. ಒಪ್ಪಂದಗಳನ್ನು ಕ್ರಿಯಾರೂಪಕ್ಕೆ ತರುವ ಕೆಲಸಗಳನ್ನು ಅತ್ಯಂತ ಶ್ರದ್ಧೆಯಿಂದ ಆರಂಭಿಸಬೇಕಾದ ಅಗತ್ಯ ಇದೆ ಎಂಬ ಎಚ್ಚರಿಕೆಯ ಮಾತನ್ನೂ ಅವರು ಆಡಿದರು. ಆದರೆ, ಶೀಘ್ರದಲ್ಲಿಯೇ ಚುನಾವಣೆ ಎದುರಿಸಲಿರುವ ಸರ್ಕಾರಕ್ಕೆ ಈ ಕೆಲಸ ಮಾಡುವುದಕ್ಕೆ ಬೇಕಿರುವ ಸಮಯ, ಶಕ್ತಿ ಹಾಗೂ ಒಲವು ಇರುತ್ತದೆಯೇ? ಮೂಲಸೌಕರ್ಯದ ಸ್ಥಿತಿ ವಿಚಾರವಾಗಿ ನಗರವಾಸಿ ಮತದಾರರು ಕೋಪ ವ್ಯಕ್ತಪಡಿಸುತ್ತಾರೆ. ಆದರೆ, ತಮ್ಮ ಜಡತ್ವ ಹಾಗೂ ಅನಾಸಕ್ತಿಯನ್ನು ತೊಡೆದುಹಾಕಿ, ಬೇರೆ ಬೇರೆ ಪಕ್ಷಗಳನ್ನು ಉತ್ತರದಾಯಿ ಆಗಿಸಲು ಅವರು ಮನಸ್ಸು ಮಾಡುವರೇ? ಇವೆಲ್ಲ ನಮ್ಮೆಲ್ಲರ ಸಮಸ್ಯೆಗಳು ಹಾಗೂ ಇವುಗಳ ನಿವಾರಣೆಗೆ ನಮ್ಮೆಲ್ಲರ ಪ್ರಯತ್ನ ಬೇಕು ಎಂಬುದು ಅರಿವಾಗುತ್ತದೆಯೇ? ಅಥವಾ ನಾವು ಪ್ರತ್ಯೇಕವಾಗಿಯೇ ಉಳಿದು, ಇವುಗಳ ಬಗ್ಗೆ ಗೊಣಗುವುದನ್ನು ಮುಂದುವರಿಸಿ, ಸಮಸ್ಯೆಗಳು ಹಾಗೇ ಇರಲು ಬಿಡುತ್ತೇವೆಯೇ?



ಚುರುಮುರಿ



ಅರ್ಥ- ಅನರ್ಥ!

• ಬಿ.ಎನ್.ಮಲ್ಲೇಶ್

‘ಲೇ ಗುಡ್ಡೆ, ನಿಂಗೆ ಗುಡ್ಡೆ ಅಂತ ಯಾರು ಹೆಸರಿಟ್ರಲೆ?’ ದುಬ್ಬೀರ ಕೇಳಿದ.

‘ಯಾಕೆ? ಅದನ್ ತಗಂಡು ನೀನೇನ್ ಮಾಡ್ತಿ?’

‘ಲೇಯ್, ರಾಜ್ಯದಾಗೀಗ ಹೆಸರುಗಳ ಅರ್ಥ, ಅನರ್ಥದ ಬಗ್ಗೆ ವಿವಾದ ಶುರುವಾಗೇತಿ, ಅದ್ಕೆ ಕೇಳಿದೆ’.

‘ಹಂಗಾದ್ರೆ ನಿಂಗೆ ದುಬ್ಬೀರ ಅಂತ ಯಾರು ಹೆಸರಿಟ್ರು? ಹಂಗಂದ್ರೆ ಏನು?’ ಗುಡ್ಡೆ ತಿರುಗೇಟು ಕೊಟ್ಟ.

‘ದುಬ್ಬೀರ ಅಂದ್ರೆ ದೊಡ್ಡ ಈರ ಅಂತ. ಸಣ್ಣೀರಂಗೆ ವಿರುದ್ಧ ಪದ’.

‘ಸರಿ, ಈರ ಅಂದ್ರೆ?’

‘ಅದು ವೀರ ಅಂತ. ಆಡುಮಾತಲ್ಲಿ ಈರ ಆಗೇತಿ. ಈಗೇಳು ನಿನ್ನೆಸರು ಗುಡ್ಡೆ ಯಾಕೆ?’

‘ಅದನ್ನ ನಾನೇಳ್ತೀನಿ... ಇವ್ನು ಮೊದ್ಲು ಭಾನ್ ಭಾನುವಾರ ಕುರಿ ಕುಯ್ದು ಪಾಲಾಕಿ ಗುಡ್ಡೆ ಮಾಂಸ ಮಾರ್ತಿದ್ದ. ಅದ್ಕೆ ಎಲ್ರೂ ಗುಡ್ಡೆ ಅಂತ ಹೆಸರಿಟ್ಟಿದಾರೆ’ ತೆಪರೇಸಿ ನಕ್ಕ.

ಗುಡ್ಡೆಗೆ ಸಿಟ್ಟು ಬಂತು ‘ಲೇಯ್, ನಂದಿರ್ಲಿ, ನಿಂಗೆ ತೆಪರ ಅಂತ ಯಾವನು ಹೆಸರಿಟ್ಟ, ಅದಕ್ಕೆ ಪಿಕಿಪೀಡಿಯಾದಲ್ಲಿ ಏನರ್ಥ ಹೇಳಲೆ’ ಎಂದ.

‘ಲೇ ಅದು ಪಿಕಿಪೀಡಿಯ ಅಲ್ಲ, ವಿಕಿಪೀಡಿಯ...’ ದುಬ್ಬೀರ ತಿದ್ದಿದ.

‘ಎಂಥದೋ ಒಂದು ಪೀಡಿಯ. ಹೋಗ್ಲಿ, ತೆಪರ ಅಂದ್ರೆ ಪರ್ಷಿಯನ್ ಭಾಷೇಲಿ ಏನರ್ಥ ಹೇಳಲೆ’ ಗುಡ್ಡೆ ಪಟ್ಟು ಬಿಡಲಿಲ್ಲ.

‘ತೆಪರ ಅಂದ್ರೆ ಕನ್ನಡದಲ್ಲಿ ದಡ್ಡ ಅಂತ ಅರ್ಥ. ಈ ಪರ್ಷಿಯನ್ನು, ರಷಿಯನ್ನು ನಮಗೇನ್ ಗೊತ್ತಲೆ?’ ಕೊಟ್ರೇಶಿ ಆಕ್ಷೇಪಿಸಿದ.

‘ಲೇ ಗುಡ್ಡೆ, ಎಲ್ಲದಕ್ಕೂ ಅರ್ಥ ಹುಡುಕಬಾರ್ದು. ಈಗ ಫಾರಿನ್ನಲ್ಲಿ ಬಟ್ಲರು ಹಿಟ್ಲರು, ಟೇಲರು ಮಿಲ್ಲರು, ನಟ್ಟು ಬೋಲ್ಟು ಅಂತೆಲ್ಲ ಹೆಸರಿಟ್ಕಂಡಿರ್ತಾರಪ, ಅದಕ್ಕೆಲ್ಲ ಏನರ್ಥ? ಅರ್ಥ ಮುಖ್ಯ ಅಲ್ಲಲೆ, ಆಕೃತಿ ಮುಖ್ಯ’ ದುಬ್ಬೀರ ಸಮಾಧಾನ ಮಾಡಿದ.

‘ವ್ಹಾವ್! ಎಂಥಾ ಮಾತಾಡಿದ್ಯೋ ವೀರಾ... ವೀರಾಧಿವೀರಾ, ದುಬ್ಬೀರಾ...’ ಎಂದ ಗುಡ್ಡೆ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ರಾಮಧಾನ್ಯ ಚರಿತ್ರೆ: ಸಾರ್ವಕಾಲಿಕ ಸಂದೇಶ

ಕನಕದಾಸರ ಸೃಜನಶೀಲ ಬೌದ್ಧಿಕ ಪ್ರತಿಭೆಯು ನಮ್ಮೆಲ್ಲರಿಗೂ ಅನ್ವಯವಾಗಬಲ್ಲ ಕಥೆಯನ್ನು ಶತಮಾನಗಳಷ್ಟು ಹಿಂದೆಯೇ ಹುಟ್ಟುಹಾಕಿದೆ

• ಡಾ. ಕೆ.ಎಸ್.ಪವಿತ್ರ

‘**ಕನಕ** ಜಯಂತಿ’ಯನ್ನು ಇಂದು (ನ. 11) ನಾಡಿನ ಎಲ್ಲೆಡೆ ಆಚರಿಸಲಾಗುತ್ತಿದೆ. ಇತರ ಜಯಂತಿಗಳಂತೆಯೇ ‘ಆಚರಿಸಿ’ ಮರೆಯುವಂತೆ! ಸರ್ಕಾರಿ ರಜೆ ಎಂಬ ಸಂಗತಿಯಿಂದ ಸಂತಸ ಬಿಟ್ಟರೆ ಹೆಚ್ಚಿನ ಜಯಂತಿಗಳ ಆಚರಣೆ ‘ಅರ್ಥಪೂರ್ಣ’ ಎಂಬ ರೀತಿಯಲ್ಲಿ ನಮ್ಮ ಸಮಾಜದಲ್ಲಿ ಸಾಧ್ಯವಾಗಿಲ್ಲ. ಕನಕದಾಸರು ಬಹಳಷ್ಟು ಕೀರ್ತನೆಗಳು, ಮುಂಡಿಗೆಗಳೆಂಬ ಒಗಟಿನ ಪದ್ಯಗಳು, ನಳಚರಿತ್ರೆ, ಮೋಹನ ತರಂಗಿಣಿ, ಹರಿಭಕ್ತಿಸಾರ ಕಾವ್ಯಗಳನ್ನು ರಚಿಸಿದ್ದಾರೆ. ಆದರೆ ಇಂದಿಗೂ ‘ಇವತ್ತಿನ ಕಥೆಯೇ’ ಅನ್ನಿಸುವಂತಹ ಅವರ ಕಾವ್ಯವೆಂದರೆ ‘ರಾಮಧಾನ್ಯ ಚರಿತ್ರೆ’. ಶಾಲಾ ಮಕ್ಕಳಿಗೂ ಸುಲಭವಾಗಿ ಬೋಧೆಯಾಗಬಹುದಾದ, ನಮ್ಮೆಲ್ಲರಿಗೂ ಅನ್ವಯಿಸಬಲ್ಲ ಕಥೆಯನ್ನು ಕನಕದಾಸರ ಸೃಜನಶೀಲ ಬೌದ್ಧಿಕ ಪ್ರತಿಭೆ ಶತಮಾನಗಳ ಹಿಂದೆಯೇ ಹುಟ್ಟುಹಾಕಿದೆ.

158 ಪದ್ಯಗಳ ಪುಟ್ಟ ಕೃತಿ ‘ರಾಮಧಾನ್ಯ ಚರಿತ್ರೆ’. ಭಾರತದಲ್ಲಿರುವ ರಾಮಾಯಣದ ಕಥೆಗಳ ಬೇರೆಲ್ಲಾ ರೂಪಗಳಿಗಿಂತ ಇದರ ಸ್ವರೂಪ ಭಿನ್ನ. ರಾಮನ ಕಥೆಗಳಲ್ಲಿ ‘ರಾಗಿ ರಾಮ’ನ ಕಥೆ ಎದ್ದು ನಿಲ್ಲುತ್ತದೆ. ರಾಗಿ ಮತ್ತು ಭತ್ತ ಎಂಬ ಎರಡು ಧಾನ್ಯಗಳು ಇಲ್ಲಿ ತಾನೇ ಮೇಲು ಎಂದು ಜಗಳಕ್ಕೆ ನಿಲ್ಲುತ್ತವೆ. ಕಥೆ ನಡೆದಿರುವುದು ರಾಮನಿದ್ದ ತ್ರೇತಾಯುಗದಲ್ಲಾದರೂ ಅದನ್ನು ಹೇಳುತ್ತಿರುವುದು ದ್ವಾಪರಯುಗದಲ್ಲಿ ಎನ್ನುವುದು ಗಮನಾರ್ಹ. ಅಂದರೆ ಕಥೆಯಲ್ಲಿರುವ ಸಂದೇಶ ಸಾರ್ವಕಾಲಿಕ! ಕಥಾ ಸಂದರ್ಭದ ಪ್ರಕಾರ, ಪಾಂಡವರು ಅಧಿಕಾರವನ್ನು ಕಳೆದುಕೊಂಡಿದ್ದಾರೆ. ಅವರಿಗೆ ಋಷಿ ಹೇಳುತ್ತಿರುವ ಕಥೆಯು ರಾವಣನನ್ನು ವಧಿಸಿ ತನ್ನ ‘ಅಧಿಕಾರ’ ಮರಳಿ ಪಡೆದ ರಾಮನ ಎದುರು ನಡೆದಂಥದ್ದು.

‘ಯಾವುದು ಸರ್ವಶ್ರೇಷ್ಠವಾದ ಧಾನ್ಯ?’ ಎಂದು ಕೇಳಿದಾಗ, ಗೌತಮ ಮುನಿ ‘ರಾಗಿ’ ಎಂದು ಉತ್ತರಿಸುತ್ತಾನೆ. ಈಗಲೂ ನಡೆಯುವಂತೆ ಮಾತಿನಿಂದ ಜಗಳ ಮೊದಲಾಗುತ್ತದೆ. ಭತ್ತ ತಾನು ಶ್ರೇಷ್ಠ ಎನ್ನುತ್ತಾ ರಾಗಿಯನ್ನು ವಿಧವಿಧವಾಗಿ ಮೂದಲಿಸುತ್ತದೆ. ರಾಗಿಯೇನೂ ‘ಶ್ರೇಷ್ಠ’ನಂತೆ ಸುಮ್ಮನಿರದೆ ತಾನೂ ಭತ್ತವನ್ನು ಹೀಯಾಳಿಸುತ್ತದೆ. ಇಬ್ಬರ ಜಗಳದ ಪರಿಹಾರಕ್ಕಾಗಿ ರಾಮ ಒಂದು ಪರೀಕ್ಷೆಯೊಡ್ಡುತ್ತಾನೆ. ಆರು ತಿಂಗಳ ಕಾಲ ಸೆರೆಯೊಳಿರಿಸಿ, ಅಯೋಧ್ಯೆಗೆ ಕರೆತರುವಂತೆ ಹೇಳುತ್ತಾನೆ. ಅಯೋಧ್ಯೆಗೆ ಇಬ್ಬರನ್ನೂ ಕರೆತಂದಾಗ, ಸೆರೆಮನೆವಾಸದ ನಂತರವೂ ರಾಗಿ ಬಲವಾಗಿಯೇ ಇದ್ದರೂ, ಭತ್ತ ಸೊರಗಿ ಸೋತಿರುತ್ತದೆ. ರಾಮನು ರಾಗಿಗೆ ತನ್ನ ‘ರಾಘವ’ ಎಂಬ ಹೆಸರು ನೀಡಿ ಸನ್ಮಾನಿಸುತ್ತಾನೆ. ಸಪ್ಪಗಾಗಿ ಕೆಳಕ್ಕೆ ಮುಖ ಹಾಕಿದ ಭತ್ತವನ್ನು ಸಮಾಧಾನಪಡಿಸಿ ‘ನೀನು ದೇವರ ಪರಮಾನ್ನ, ಈತ ಮನುಜರಿಗೆ ಪಕ್ವಾನ್ನ, ನೀವಿಬ್ಬರೂ ಒಟ್ಟಿಗಿದ್ದರೆ ಧರೆಗೆ ಒಳ್ಳೆಯದು’ ಎಂದು ಇಬ್ಬರನ್ನೂ ಒಟ್ಟುಗೂಡಿಸುತ್ತಾನೆ.

ರಾಮಧಾನ್ಯ ಚರಿತ್ರೆಯ ಪುಟ್ಟ ಆದರೆ ಚಿಂತನಾರ್ಹ ಕಥನಕಾವ್ಯವು ಬೌದ್ಧಿಕ- ಪಂಡಿತ ವಲಯಗಳಲ್ಲಿ ಬಹಳಷ್ಟು ಚರ್ಚೆಗೆ ಒಳಗಾಗಿದೆ. ಅದರ ಬಗ್ಗೆ ನಾಡಿನ ಹೆಸರಾಂತ ಸಂಸ್ಥೆ-ವಿಶ್ವವಿದ್ಯಾಲಯಗಳು ಗೋಷ್ಠಿಗಳನ್ನೇ ಏರ್ಪಡಿಸಿವೆ. ಆದರೆ ಇವು ಜನಸಾಮಾನ್ಯರನ್ನು, ದಿನಬೆಳಗಾದರೆ ಮಾತಿನ ಕಲಹಕ್ಕೆ ಕಾಯುತ್ತಿರುವ ರಾಜಕಾರಣಿಗಳು- ರಾಜಕೀಯ ಪಕ್ಷಗಳನ್ನು ತಲುಪಿದಂತಿಲ್ಲ! ರಾಗಿ- ಭತ್ತದ ನಡುವಿನ ಜಗಳವು ಮನೆಯ ಅಣ್ಣ-ತಂಗಿ-ಅಕ್ಕ-ತಮ್ಮಂದಿರು, ಪುರುಷ-ಸ್ತ್ರೀ, ಬಡವ- ಶ್ರೀಮಂತ, ಅಕ್ಷರಸ್ಥ- ಅನಕ್ಷರಸ್ಥ ಹೀಗೆ ಪರಸ್ಪರ ಕೀಳು ದೃಷ್ಟಿ, ಅಸಮಾನತೆ, ಶ್ರೇಷ್ಠತೆಯ ಹಂಬಲದ ಅಭಿವ್ಯಕ್ತಿ ಎನ್ನುವುದನ್ನು, ‘ಕನಕ ಜಯಂತಿ’ ಆಚರಿಸುವ ನಾವು ಗಮನಿಸಿದಂತಿಲ್ಲ.

ತೋಚಿದಂತೆ ಹೇಳಿಕೆ ನೀಡುವ ರಾಜಕೀಯ ಮಂದಿ, ಅದಕ್ಕೆ ಸಾಮಾಜಿಕ ಮಾಧ್ಯಮಗಳ ಮೂಲಕ ಮಹಾಪೂರವಾಗಿ ಹರಿದು ಬರುವ ಪರ, ವಿರೋಧದ ಹೇಳಿಕೆಗಳು, ಒಂದೆರಡು ದಿನಗಳಲ್ಲಿ ಎಲ್ಲವೂ ತಣ್ಣಗಾಗಿ, ಇವೆಲ್ಲವೂ ನಡೆದದ್ದು ‘ಮಾತಿನ ಚಪಲಕ್ಕೆ, ವ್ಯಕ್ತಿಯ ಪ್ರತಿಷ್ಠೆಗೆ ಅಷ್ಟೇ’ ಎಂಬಂಥ ಪರಿಸ್ಥಿತಿ. ಇಂತಹ ಸಂದರ್ಭದಲ್ಲಿ ನಾವು ಕನಕದಾಸರ ‘ರಾಮಧಾನ್ಯ ಚರಿತ್ರೆ’ಯನ್ನು ಅಗತ್ಯವಾಗಿ ನೆನಪಿಸಿಕೊಳ್ಳಬೇಕು. ರಾಗಿ- ಭತ್ತ ಎರಡಕ್ಕೂ ಗೌರವ ನೀಡುವ ಕನಕದಾಸರ ‘ರಾಮ’ನನ್ನು ನೆನಪಿಸಿಕೊಳ್ಳಬೇಕು.



ಕನಕದಾಸರ ಜೀವನ ಕಥನದಲ್ಲಿ ಬರುವ ‘ಯಾರು ವೈಕುಂಠಕ್ಕೆ ಹೋಗಬಹುದು?’ ಎಂಬ ಪ್ರಶ್ನೆಗೆ ಕನಕದಾಸರಿತ್ತ ‘ನಾನು ಹೋದರೆ ಹೋದೇನು’ ಎಂಬ ಉತ್ತರವನ್ನು ಮತ್ತೆ ಮತ್ತೆ ನೆನೆಯಬೇಕು. ‘ನಾನು’ ಎಂಬ ಕಾರಣದಿಂದಲೇ ಎಲ್ಲ ರೀತಿಯ ಸಂಘರ್ಷಗಳೂ ಹೆಚ್ಚಾಗಿರುವ ಇಂದಿನ ಸಂದರ್ಭವನ್ನು ನಿಭಾಯಿಸುವುದು ಸುಲಭವಲ್ಲ. ನಾವು ನಾವೇ ಏನನ್ನಾದರೂ ಹೇಳಿಬಿಡಬಲ್ಲ, ಬರೆದುಬಿಡಬಲ್ಲ, ವ್ಯಾಪಕ ಪ್ರಸರಣದ ತಂತ್ರಜ್ಞಾನದ ಯುಗದಲ್ಲಿ ನಾವಿದ್ದೇವೆ. ಹೀಗಿರುವಾಗ, ಮಾತನಾಡುವ ಮುನ್ನ ಹತ್ತು ಬಾರಿ ಯೋಚಿಸುವ, ಪ್ರತಿಕ್ರಿಯಿಸುವ ಮುನ್ನ ಎಚ್ಚರದಿಂದ ಅವಲೋಕಿಸುವುದನ್ನು ನಾವು ಕಲಿಯಲೇಬೇಕಿದೆ.

‘ರಾಮಧಾನ್ಯ ಚರಿತ್ರೆ’ಯಂತಹ ಬೋಧಪ್ರದವಾದ ಕಾವ್ಯಗಳು ಕನ್ನಡದಲ್ಲಿ ಬಹಳಷ್ಟಿವೆ. ಆಡಳಿತ ವ್ಯವಸ್ಥೆಯು ವರ್ಗಸಂಘರ್ಷವನ್ನು ನೇರವಾಗಿಯೇ ನಿಭಾಯಿಸಿರುವ ಉದಾಹರಣೆಯೂ ಶ್ರವಣಬೆಳಗೊಳದ ‘ಬುಕ್ಕರಾಯನ ಶಾಸನ’ದಲ್ಲಿದೆ. ಇಂತಹ ಸಾಹಿತ್ಯವನ್ನು ಓದುವುದು, ಸುಲಭವಾಗಿ ಪ್ರಚೋದನೆಗೆ ಒಳಗಾಗುವ ಯುವಜನರಿಗೆ, ಮಕ್ಕಳಿಗೆ ಅದನ್ನು ಶ್ರವಣ- ದೃಶ್ಯ ಮಾಧ್ಯಮಗಳ ಮೂಲಕ ತಲುಪಿಸುವುದು ‘ಕನಕ ಜಯಂತಿ’ಯಂತಹ ಆಚರಣೆಗಳಂದು ನಾವು ಮಾಡಬೇಕಾಗಿರುವ ಕಾರ್ಯ. ಅದಾಗದೇ ಹೋದರೆ ಈ ಬಾರಿಯಂತೆ ‘ಕನಕ ಜಯಂತಿ’ ಕೇವಲ ‘ದೀರ್ಘ ವಾರಾಂತ್ಯ’ವಾಗಿ ಜನರಿಗೆ ಒಂದು ಹೆಚ್ಚುವರಿ ರಜೆ, ಸರ್ಕಾರಿ ಅಧಿಕಾರಿಗಳಿಗೆ, ಶಿಕ್ಷಕರಿಗೆ ಆಚರಣೆಯ ಸಭೆಯಷ್ಟೇ ಆದೀತು!

ವಾಚಕರ ವಾಣಿ

ಸಚಿವರ ಸಲಹೆ ಪರಿಗಣಿಸಿ

ಕೋವಿಡ್ ನಿರ್ಬಂಧ ಉಲ್ಲಂಘನೆ ಆರೋಪದಲ್ಲಿ ಸಾರ್ವಜನಿಕರ ವಿರುದ್ಧ ದಾಖಲಾಗಿರುವ ಮೊಕದ್ದಮೆಗಳನ್ನು ಹಿಂಪಡೆಯುವ ಅಗತ್ಯವಿದೆ ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಅಭಿಪ್ರಾಯಪಟ್ಟಿರುವುದು (ಪ್ರ.ವಾ. ನ. 10) ಸೂಕ್ತವಾಗಿದೆ. ಸಮಾಜದಲ್ಲಿ ಆತಂಕ ಸೃಷ್ಟಿಸುವವರು, ಕ್ಷಮಾರ್ಹವಲ್ಲದ ಅಪರಾಧಗಳನ್ನು ಎಸಗಿದ ಆರೋಪ ಹೊತ್ತಿರುವಂತಹವರ ವಿರುದ್ಧದ ಪ್ರಕರಣಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ವಾಪಸ್ ಪಡೆದಿರುವ ಅನೇಕ ನಿದರ್ಶನಗಳಿವೆ. ಹೀಗಿರುವಾಗ, ಕೋವಿಡ್ ಸಮಯದಲ್ಲಿ ಹೊಟ್ಟೆಪಾಡಿಗಾಗಿ ಮತ್ತು ದಿನನಿತ್ಯದ ಅವಶ್ಯಕತೆಗಳ ಸಲುವಾಗಿ ನಿರ್ಬಂಧ ಉಲ್ಲಂಘಿಸಿದ್ದ ಜನಸಾಮಾನ್ಯರ ಮೇಲೆ ದಾಖಲಾಗಿರುವ ಪ್ರಕರಣಗಳನ್ನು ವಾಪಸ್ ಪಡೆದರೆ ಸರ್ಕಾರಕ್ಕೆ ಅಥವಾ ಸಮಾಜಕ್ಕೆ ಯಾವುದೇ ನಷ್ಟವಿಲ್ಲ. ಹಾಗಾಗಿ, ಕಾನೂನು ಸಚಿವರ ಸಲಹೆಯನ್ನು ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು.

ಹುಸೇನಬಾಷಾ ತಳೇವಾಡ, ಹುಬ್ಬಳ್ಳಿ

ಬೇರೆ ಬೇರೆ ಭಾಷೆಯಲ್ಲಿ ಬೇರೆ ಬೇರೆ ಅರ್ಥ

‘ಹಿಂದೂ’ ಎಂಬ ಪದಕ್ಕೆ ಪರ್ಷಿಯನ್ ಭಾಷೆಯಲ್ಲಿ ಅಶ್ಲೀಲ ಅರ್ಥವಿದೆ ಎನ್ನುವವರು ಒಂದು ವಿಷಯವನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಪರ್ಷಿಯನ್ ಅರ್ಥ ಬಿಡಿ. ಕನ್ನಡದ ‘ಸ್ವಾರ್ಥಿ’ ಎಂಬ ಪದಕ್ಕೆ ಇಂಗ್ಲಿಷ್‌ನಲ್ಲಿ (swarthy) ‘ಕಪ್ಪಾದ’ ಅಥವಾ ‘ಬಿಸಿಲಿನಲ್ಲಿ ಬೆಂದ’ ಎಂಬ ಅರ್ಥಗಳಿವೆ. ಹಾಗೆಯೇ ಕನ್ನಡದಲ್ಲಿ ‘ಎಕ್ಕಡ’ ಎನ್ನುವ ಪದಕ್ಕೆ ತೆಲುಗಿನಲ್ಲಿ ‘ಎಲ್ಲಿ?’ ಎಂಬ ಅರ್ಥ ಬರುತ್ತದೆ. ಹೀಗೆ ಹೇಳುತ್ತಾ ಹೋದರೆ ಅನೇಕ ಶಬ್ದಗಳು ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ಅರ್ಥಗಳಿಂದ ಕೂಡಿರುತ್ತವೆ.

ನಾವು ಯಾವ ಭಾಷೆಯಲ್ಲಿ ಮಾತನಾಡುತ್ತಿರುತ್ತೇವೆಯೋ ಅಥವಾ ಬರೆಯುತ್ತಿರುತ್ತೇವೆಯೋ ಆಯಾ ಭಾಷೆಗೆ ತಕ್ಕಂತೆ ಅರ್ಥೈಸಿಕೊಳ್ಳಬೇಕೇ ವಿನಾ ಇನ್ನೊಂದು ಭಾಷೆಯಲ್ಲಿ ಇದರ ಪದ ವ್ಯತ್ಯಾಸ ಇರುವುದರ ಕಡೆಗೆ ಗಮನ ಕೊಡಬಾರದು. ಈ ವಿಷಯದಲ್ಲಿ ವಿವಾದ ಸೃಷ್ಟಿಸಿ ಸಮಜಾಯಿಷಿ ಕೊಟ್ಟುಕೊಳ್ಳುವುದು ಉಚಿತವಲ್ಲ.

ಎಚ್.ವಿ.ಶ್ರೀಧರ್, ಬೆಂಗಳೂರು

ಕಸಾಪ ಪ್ರಕಟಿತ ಪುಸ್ತಕಗಳೂ ಲಭಿಸಲಿ

ಕೇಂದ್ರ ಸಾಹಿತ್ಯ ಅಕಾಡೆಮಿಯು ಬೆಂಗಳೂರಿನ ಮೆಟ್ರೊ ರೈಲು ನಿಲ್ದಾಣದಲ್ಲಿ ಪುಸ್ತಕ ಮಳಿಗೆ ಸ್ಥಾಪಿಸಿರುವ ಸುದ್ದಿಯು ಸ್ವಾಗತಾರ್ಹವಾದದ್ದು. ಮೊಬೈಲ್‌ಗಳ ಹಾವಳಿಯಿಂದ ಪುಸ್ತಕ ಓದುವ, ಕೊಳ್ಳುವ ಹವ್ಯಾಸವೇ ಮರೆಯಾಗುತ್ತಿದೆ. ಬಹುತೇಕರು ಪುಸ್ತಕಗಳ ಓದಿನಿಂದ ವಂಚಿತರಾಗುತ್ತಿದ್ದಾರೆ. ಪುಸ್ತಕಗಳಿಗಾಗಿ ಮಳಿಗೆಗಳನ್ನು ಹುಡುಕಿಕೊಂಡು ಹೋಗುವಷ್ಟು ಸಮಯವೂ ಅನೇಕರಿಗೆ ಇರುವುದಿಲ್ಲ. ಇಂಥ ಸಂದರ್ಭದಲ್ಲಿ ಜನರಿಗೆ ತಮ್ಮ ಪ್ರಯಾಣದ ಸಂದರ್ಭದಲ್ಲಿ ಕಣ್ಣಳತೆಯಲ್ಲಿಯೇ ಪುಸ್ತಕಗಳು ದೊರೆಯುವಂತೆ ಆಗಿದ್ದು ತುಂಬಾ ಸಂತೋಷದ ಸಂಗತಿ. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಪುಸ್ತಕಗಳೂ ಇಲ್ಲಿ ದೊರೆಯುವಂತಾದರೆ ಇನ್ನೂ ಒಳ್ಳೆಯದು.

ಕೊಂಪಿ ಗುರುಬಸಪ್ಪ, ಬೆಂಗಳೂರು

ರಸ್ತೆಗುಂಡಿ ಮುಚ್ಚುವ ಹಾಸ್ಯಾಸ್ಪದ ನಡೆ!

ಬೆಂಗಳೂರಿನ ರಸ್ತೆಗುಂಡಿಗಳಿಗೆ ಮುಕ್ತಿ ದೊರಕಿಸುವಂತೆ ಕರ್ನಾಟಕ ಹೈಕೋರ್ಟ್ ಹಲವು ಬಾರಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆಗೆ (ಬಿಬಿಎಂಪಿ) ಎಚ್ಚರಿಕೆ ನೀಡಿ, ಛೀಮಾರಿ ಹಾಕಿದ್ದರೂ ಪ್ರಯೋಜನವಾಗಿಲ್ಲ. ಅಷ್ಟೇ ಅಲ್ಲ, ರಸ್ತೆಗುಂಡಿ ಮುಚ್ಚಲು ಮಳೆ ಅವಕಾಶವನ್ನೇ ನೀಡುತ್ತಿಲ್ಲ ಎಂದು ನಮ್ಮ ಸಚಿವರೊಬ್ಬರು ಈಚೆಗೆ ಬೇಜವಾಬ್ದಾರಿಯ ಹೇಳಿಕೆಯನ್ನೂ ನೀಡಿದ್ದರು.

ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರಿನಲ್ಲಿ ಸಂಚರಿಸಲಿರುವ ಮಾರ್ಗಗಳಲ್ಲಿ ತಾತ್ಕಾಲಿಕವಾಗಿ ರಸ್ತೆಗುಂಡಿಗಳನ್ನು ಮುಚ್ಚಿ, ಅಬ್ಬಾ ಎಂಥ ಅದ್ಭುತ ರಸ್ತೆಗಳಿವೆ ಎನಿಸುವಂತೆ ಮಾಡಲು ಯತ್ನಿಸಿರುವುದು ಹಾಸ್ಯಾಸ್ಪದವಾಗಿದೆ. ಅದೂ ಆ ರಸ್ತೆಗಳು ಕೇವಲ ವಾರಕ್ಕೋ ಹದಿನೈದು ದಿನಗಳಿಗೋ ಹಾಳಾಗುವಂತಹ ಗುಣಮಟ್ಟದಲ್ಲಿ ಕೆಲಸ ಮಾಡಿ, ಜನಸಾಮಾನ್ಯರ ತೆರಿಗೆ ಹಣವನ್ನು ಪೋಲು ಮಾಡುವುದು ಯಾವ ನ್ಯಾಯ?

ಮಲ್ಲತ್ತಹಳ್ಳಿ ಡಾ. ಎಚ್. ತುಕಾರಾಂ, ಬೆಂಗಳೂರು

ನಮ್ಮ ಅಭಿವೃದ್ಧಿ ನಮ್ಮ ಕೈಯಲ್ಲಿ...

‘ಜಾತಿ: ಏಕೆ ಇಂದಿಗೂ ಜೀವಂತ?’ ಎಂಬ ಲೇಖನದಲ್ಲಿ (ಪ್ರ.ವಾ., ನ. 4) ಅರುಣ್ ಸಿನ್ಹಾ ಅವರು ಮಾಡಿರುವ ವಿಶ್ಲೇಷಣೆ ಅಭಿನಂದನಾರ್ಹವಾಗಿದೆ. ನಮ್ಮ ಸಂವಿಧಾನದ ಆಶಯಗಳನ್ನು ಕಾರ್ಯರೂಪಕ್ಕೆ ತರಲು ಸರ್ಕಾರಗಳು ವಿಫಲವಾಗಿರುವುದೇ ಜಾತಿ ಪದ್ಧತಿ ಜೀವಂತವಾಗಿರಲು ಮುಖ್ಯ ಕಾರಣ. ಜನಪ್ರತಿನಿಧಿಗಳು ತಮ್ಮ ತಮ್ಮ ಜಾತಿಯ ಹೆಸರು ಬಳಸಿ ಬಲ ಪ್ರದರ್ಶನ ಮಾಡುವುದು ಸಾಮಾನ್ಯವಾಗಿದೆ.

ಜಾತಿ ಎನ್ನುವುದು ಒಂದು ಕಾಲ್ಪನಿಕ ಪದ. ಇದು ಜೀವಂತವಾಗಿ ಇರಲಿ ಅಥವಾ ಇಲ್ಲದಿರಲಿ ಯಾರಿಗೂ ನಷ್ಟವಿಲ್ಲ. ಜಾತಿ ನಿಂದನೆಗೆ ಒಳಗಾಗುವವರು ಮೊದಲು ಸ್ವಾಭಿಮಾನಿಗಳಾಗಲು, ಜ್ಞಾನಿಗಳಾಗಲು, ಸಂಸ್ಕಾರವಂತರಾಗಲು, ಆರ್ಥಿಕವಾಗಿ ಸಶಕ್ತರಾಗಲು ಶ್ರಮ ಪಡಬೇಕು. ಸೂಕ್ತ ವ್ಯಕ್ತಿಗಳ ಮಾರ್ಗದರ್ಶನ ಪಡೆದು ಮುನ್ನಡೆಯಬೇಕು. ಸಂವಿಧಾನದ ಅರಿವಿರಬೇಕು. ಮೂಢನಂಬಿಕೆ ತ್ಯಜಿಸಿ, ವೈಜ್ಞಾನಿಕ ದೃಷ್ಟಿಕೋನ ಬೆಳೆಸಿಕೊಳ್ಳಬೇಕು. ನಮ್ಮ ಅಭಿವೃದ್ಧಿ ನಮ್ಮ ಕೈಯಲ್ಲಿದೆ ಎಂಬುದನ್ನು ಮರೆಯಬಾರದು.

ಡಾ. ಎಸ್.ಡಿ.ರಂಗಸ್ವಾಮಿ, ಹಾಸನ

ಎಲ್ಲ ಅಕ್ರಮದ ಮೇಲೂ ಕಣ್ಗಾವಲು?

ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕಳ್ಳಮಾರ್ಗದ ಮೂಲಕ ಎದುರಿಸುವ ಅಭ್ಯರ್ಥಿಗಳ ಪತ್ತೆಗೆ ಐರಿಸ್ (ಕಣ್ಣಿನ ಪಾಪೆ) ಸ್ಕ್ಯಾನ್‌ನಂತಹ ಅತ್ಯಾಧುನಿಕ ‘ಕಣ್ಗಾವಲು’ ವ್ಯವಸ್ಥೆ ಅಳವಡಿಸಲು ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಮುಂದಾಗಿರುವುದು ಸ್ವಾಗತಾರ್ಹ. ಆದರೆ ಕೆಪಿಎಸ್‌ಸಿ, ಪರೀಕ್ಷಾಪೂರ್ವ ಮತ್ತು ಪರೀಕ್ಷಾ ನಂತರದ ಅಕ್ರಮಗಳಾದಂತಹ ಪ್ರಶ್ನೆಪತ್ರಿಕೆ ಸೋರಿಕೆ, ಒಎಂಆರ್ ಶೀಟ್ ತಿದ್ದುಪಡಿಯಂತಹ ಕೃತ್ಯಗಳನ್ನೂ ತಡೆಯಲು ಮುಂದಾಗುವುದೇ? ಈ ಹಿಂದೆ, ನೇಮಕಾತಿ ಪರೀಕ್ಷೆಗಳಲ್ಲಿನ ಅಕ್ರಮಗಳಿಗೆ ಸಂಬಂಧಿಸಿದಂತೆ, ಕೆಪಿಎಸ್‌ಸಿಯನ್ನು ಮುಚ್ಚುವುದೇ ಲೇಸು ಎಂದು ಹೈಕೋರ್ಟ್ ಹೇಳಿದ್ದನ್ನು ಮರೆಯುವಂತಿಲ್ಲ.


ಬಿ.ಪಂಪಾಪತಿ ಶರಣಪ್ಪ, ತಿಮ್ಮಾಪುರ, ಸಿಂಧನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ದೆಹಲಿ ವಾಯುಮಾಲಿನ್ಯ ವಾರ್ಷಿಕ ಕಾಯಿಲೆ


ಪ್ರಜಾವಾಣಿ ವಾರ್ತೆ

ಚಳಿಗಾಲ ಬಂತೆಂದರೆ ರಾಷ್ಟ್ರ ರಾಜಧಾನಿ ದೆಹಲಿಯ ಜನರಲ್ಲಿ ಕಿರಿಕಿರಿ ಶುರುವಾಗುತ್ತದೆ. ಪ್ರತೀ ವರ್ಷದ ಅಕ್ಟೋಬರ್‌ನಿಂದ ಡಿಸೆಂಬರ್ ಅವಧಿ ಅಲ್ಲಿನ ಜನರಿಗೆ ಯಾತನಾಮಯ ಆಗಿರುತ್ತದೆ. ಚಳಿಗಿಂತ ಹೆಚ್ಚಾಗಿ ಇಲ್ಲಿನ ಜನರನ್ನು ಕಾಡುವುದು ವಾಯುಮಾಲಿನ್ಯ. ಈ ಅವಧಿಯಲ್ಲಿ ನಗರದಲ್ಲಿ ಗಾಳಿಯ ಗುಣಮಟ್ಟ ವಿಪರೀತ ಕುಸಿಯುತ್ತದೆ. ಈ ವರ್ಷವೂ ವಾಯುಮಾಲಿನ್ಯ ಅಪಾಯಕಾರಿ ಹಂತಕ್ಕೆ ಕುಸಿದಿದೆ. ಕಳಪೆ ಗುಣಮಟ್ಟದ ಗಾಳಿಯಿಂದಾಗಿ ಶೇ 80ರಷ್ಟು ಜನರಲ್ಲಿ ಆರೋಗ್ಯದ ಹಲವು ಸಮಸ್ಯೆ ಗಳು ಕಾಣಿಸಿಕೊಂಡಿವೆ ಎನ್ನುತ್ತದೆ 'ಲೋಕಲ್ ಸರ್ಕಲ್ಸ್' ಸಮೀಕ್ಷಾ ವರದಿ. ದೆಹಲಿ ಸರ್ಕಾರವು ಮುಂಜಾಗ್ರತಾ ಕ್ರಮವಾಗಿ ಕೆಲವು ದಿನಗಳ ಮಟ್ಟಿಗೆ ಪ್ರಾಥಮಿಕ ಶಾಲೆಗಳನ್ನು ಮುಚ್ಚಲು ಆದೇಶಿಸಿತ್ತು. ಅತ್ತ ಜನರು ಆರೋಗ್ಯ ಸಮಸ್ಯೆಗಳಿಂದ ತೊಂದರೆ ಎದುರಿಸುತ್ತಿದ್ದರೆ, ಇತ್ತ ರಾಜಕಾರಣಿಗಳು ಕೆಸರೆರಚಾಟದಲ್ಲಿ ತೊಡಗಿದ್ದಾರೆ.



ಐವರಲ್ಲಿ ನಾಲ್ವರಿಗೆ ಅನಾರೋಗ್ಯ

ದೆಹಲಿ ರಾಜಧಾನಿ ಪ್ರದೇಶದ ಪ್ರತಿ 5 ಜನರ ಪೈಕಿ 4 ಜನರು ವಾಯು ಮಾಲಿನ್ಯ ಸಂಬಂಧಿ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಗಂಟಲು ಕೆರೆತ, ಕೆಮ್ಮು, ನೆಗಡಿ, ಕಣ್ಣುರಿಯಂತಹ ಸಮಸ್ಯೆಗಳು ಜನರನ್ನು ಬಾಧಿಸುತ್ತಿವೆ. ಲೋಕಲ್ ಸರ್ಕಲ್ಸ್ ನಡೆಸಿದ ಸಮೀಕ್ಷೆಗೆ ಒಳಪಟ್ಟವರ ಪೈಕಿ, ಶೇ 18ರಷ್ಟು ಜನರು ಆರೋಗ್ಯ ಸಮಸ್ಯೆ ಕಾರಣಕ್ಕೆ ಈಗಾಗಲೇ ಆಸ್ಪತ್ರೆಗಳಿಗೆ ಎಡತಾಕಿದ್ದಾರೆ.





ಅನಾರೋಗ್ಯಕಾರಿ ಹಂತದಲ್ಲಿ ಗಾಳಿಯ ಗುಣಮಟ್ಟ

ಗಾಳಿಯ ಗುಣಮಟ್ಟ ಸೂಚ್ಯಂಕ (ಎಕ್ಯೂಐ) ಆಧರಿಸಿ ಗಾಳಿಯ ಗುಣಮಟ್ಟವನ್ನು ಅಳೆಯಲಾಗುತ್ತದೆ. ಪ್ರತಿ ಘನಮೀಟರ್ ಗಾಳಿಯಲ್ಲಿ 2.5 ಮೈಕ್ರಾನ್ ಗಾತ್ರದ (ಪಿಎಂ 2.5) ಮಾಲಿನ್ಯಕಾರಕ ಕಣಗಳ ಸಂಖ್ಯೆ ಎಷ್ಟಿವೆ ಎಂಬುದರ ಆಧಾರದ ಮೇಲೆ ಗಾಳಿಯ ಗುಣಮಟ್ಟವನ್ನು ನಿರ್ಣಯಿಸಲಾಗುತ್ತದೆ. ಸೊನ್ನೆಯಿಂದ 50 ಎಕ್ಯೂಐ ಇದ್ದರೆ, ಗಾಳಿಯು ಉತ್ತಮವಾಗಿದೆ ಎಂಬರ್ಥ. 300ರಿಂದ 500 ಹಾಗೂ ಅದಕ್ಕೂ ಮೇಲ್ಪಟ್ಟ ಎಕ್ಯೂಐ ಇದ್ದರೆ ಅದು 'ಅಪಾಯಕಾರಿ' ಮತ್ತು 'ತೀವ್ರ ಅಪಾಯಕಾರಿ' ಮಟ್ಟವನ್ನು ತಲುಪಿದೆ ಎಂದರ್ಥ. ಇಂತಹ ವಾತಾವರಣದಲ್ಲಿ ಇರಲು ಸಾಧ್ಯವೇ ಇಲ್ಲದಂತಹ ಪರಿಸ್ಥಿತಿ ಇರುತ್ತದೆ. ದೆಹಲಿಯಲ್ಲಿ ಸದ್ಯದ ವಾಯುಗುಣಮಟ್ಟವು 'ಅನಾರೋಗ್ಯಕಾರಿ' ಹಂತದಲ್ಲಿದ್ದು, 'ಅಪಾಯಕಾರಿ' ಹಂತಕ್ಕೆ ಕುಸಿಯುತ್ತಿದೆ ಎಂದು ತಜ್ಞರು ಎಚ್ಚರಿಸಿದ್ದಾರೆ.

'ಸುಪ್ತ ಹಂತಕ'

'ವಾಯುಮಾಲಿನ್ಯ ಸುಪ್ತ ಹಂತಕ ನಿದ್ದಂತೆ. ಮಕ್ಕಳು, ವಯಸ್ಸಾದವರು, ಆರೋಗ್ಯ ಸಮಸ್ಯೆ ಇರುವವರು ಮಾಲಿನ್ಯದ ಪ್ರದೇಶಗಳಿಂದ ದೂರ ಇರಬೇಕು. ಹೊರಗಡೆ ಹೋಗುವಾಗ ಮಾಸ್ಕ್ ಧರಿಸಬೇಕು' ಎಂದು ಏಮ್ಸ್ ಮಾಜಿ ನಿರ್ದೇಶಕ ಡಾ. ರಣದೀಪ್ ಗುಲೇರಿಯಾ ಅವರು ಹೇಳಿದ್ದಾರೆ.


ಡಬ್ಲ್ಯುಎಚ್‌ಒ ಎಚ್ಚರಿಕೆ

ಇತ್ತೀಚಿನ ದಶಕಗಳಲ್ಲಿ ದೆಹಲಿಯ ನಾಗರಿಕರು ವಾಯುಮಾಲಿನ್ಯದ ಸಂತ್ರಸ್ತರಾಗಿದ್ದಾರೆ. ಮುಂಗಾರು ಹಂಗಾಮು ಕಳೆದು ಉತ್ತರದ ರಾಜ್ಯಗಳಲ್ಲಿ ಕೊಯ್ಲು ಮುಗಿಯುವ ವೇಳೆಗೆ ರಾಜಧಾನಿಯಲ್ಲಿ ಈ ಸಮಸ್ಯೆ ಇನ್ನಷ್ಟು ಬಿಗಡಾಯಿಸುತ್ತದೆ. ಗಾಳಿಯಲ್ಲಿರುವ ಮಾಲಿನ್ಯಕಾರಕ ಸೂಕ್ಷ್ಮ ಕಣಗಳು (ಪಿಎಂ 2.5) ಉಸಿರಾಟದ ಮೂಲಕ ಶ್ವಾಸಕೋಶವನ್ನು ಸೇರಿ, ವಿವಿಧ ರೀತಿಯ ಆರೋಗ್ಯ ಸಮಸ್ಯೆಗಳನ್ನು ತಂದೊಡ್ಡುತ್ತವೆ. ಮಕ್ಕಳು, ವಯಸ್ಸಾದವರು ಹಾಗೂ ಈ ಮೊದಲೇ ಅಸ್ತಮಾ, ಹೃದಯ ಸಮಸ್ಯೆಗಳನ್ನು ಹೊಂದಿರುವವರಿಗೆ ವಾಯುಮಾಲಿನ್ಯ ಇನ್ನಷ್ಟು ಕಿರಿಕಿರಿ ಉಂಟುಮಾಡುತ್ತದೆ. ಮಾಲಿನ್ಯಕಾರಕ ಕಣಗಳನ್ನು ಹೊಂದಿರುವ ಗಾಳಿಯನ್ನು ದೀರ್ಘಕಾಲ ಸೇವಿಸುವುದರಿಂದ ಆರೋಗ್ಯವಂತರಲ್ಲೂ ಸಮಸ್ಯೆಗಳು ಕಾಣಿಸುತ್ತವೆ. ಇಂತಹ ಗಾಳಿಯ ಸೇವನೆಯು ಉಸಿರಾಟದ ಸೋಂಕು, ಹೃದಯ ಸಂಬಂಧಿ ಕಾಯಿಲೆ ಹಾಗೂ ಶ್ವಾಸಕೋಶದ ಕ್ಯಾನ್ಸರ್‌ನಂತಹ ಸಮಸ್ಯೆಗಳನ್ನು ಉಂಟುಮಾಡುವ ಅಪಾಯವಿರುತ್ತದೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಎಚ್ಚರಿಸಿದೆ.


ಐದೇ ದಿನಗಳಲ್ಲಿ ಏರುಪೇರು

ದೀಪಾವಳಿಯ ಬಳಿಕ ದೆಹಲಿಯ ವಾಯು ಗುಣಮಟ್ಟ ಹೇಗಿದೆ ಎಂದು ಸಮೀಕ್ಷೆ ನಡೆಸಲಾಯಿತು. ಅ.30ರ ವೇಳೆಗೆ ಶೇ 70ರಷ್ಟು ಜನರು ತಾವು ವಾಯುಮಾಲಿನ್ಯದ ಪರಿಣಾಮಗಳನ್ನು ಎದುರಿಸುತ್ತಿದ್ದೇವೆ ಎಂದು ಹೇಳಿಕೊಂಡಿದ್ದರು. ಇದಾದ ಐದು ದಿನಕ್ಕೆ ಮತ್ತೊಂದು ಸಮೀಕ್ಷೆ ನಡೆಸಲಾಯಿತು. ನ.4ರ ವೇಳೆಗೆ, ವಾಯುಮಾಲಿನ್ಯದಿಂದ ತೊಂದರೆ ಎದುರಿಸುತ್ತಿದ್ದೇವೆ ಎಂದು ಹೇಳುವವರ ಪ್ರಮಾಣ ಶೇ 80ಕ್ಕೆ ಜಿಗಿಯಿತು. ಕೇವಲ ಐದು ದಿನಗಳಲ್ಲಿ ದೆಹಲಿವಾಸಿಗಳ ಆರೋಗ್ಯದಲ್ಲಿ ಭಾರಿ ಏರುಪೇರು ಕಂಡುಬಂದಿದೆ ಎಂದು ವರದಿ ತಿಳಿಸಿದೆ. ತಮ್ಮ ಕುಟುಂಬದ ಕನಿಷ್ಠ ಒಬ್ಬರು ಸದಸ್ಯರು ಆರೋಗ್ಯ ಸಂಬಂಧಿ ಸಮಸ್ಯೆಗಳಿಗೆ ತುತ್ತಾಗಿದ್ದಾರೆ ಎಂದು ಸಮೀಕ್ಷೆಯಲ್ಲಿ ಭಾಗಿಯಾದ ಜನರು ಹೇಳಿದ್ದಾರೆ

ಶೇ 80ರಷ್ಟು ಜನರಿಗೆ ಅನಾರೋಗ್ಯ




ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದವರು



ಕೃಷಿ ತ್ಯಾಜ್ಯ ದಹನ ಮುಖ್ಯ ಕಾರಣ

ಚಳಿಗಾಲದಲ್ಲಿ ದೆಹಲಿಯಲ್ಲಿ ಗಾಳಿಯ ಗುಣಮಟ್ಟ ವಿಪರೀತ ಕುಸಿಯಲು ಕೃಷಿ ತ್ಯಾಜ್ಯ ಸುಡುವುದೇ ಮುಖ್ಯ ಕಾರಣ ಎಂದು ಹೆಚ್ಚಿನ ಜನ ಅಭಿಪ್ರಾಯಪಟ್ಟಿದ್ದಾರೆ. ಪಂಜಾಬ್, ಹರಿಯಾಣ, ಉತ್ತರ ಪ್ರದೇಶದಲ್ಲಿ ರೈತರು ಹೊಲಗಳಲ್ಲಿ ಕೃಷಿ ತ್ಯಾಜ್ಯಕ್ಕೆ ಬೆಂಕಿ ಇಡುತ್ತಾರೆ. ಕೃಷಿ ತ್ಯಾಜ್ಯ ಸುಡುವುದರಿಂದ ಏಳುವ ಹೊಗೆಯು ಪಕ್ಕದ ದೆಹಲಿವರೆಗೆ ವ್ಯಾಪಿಸುತ್ತದೆ. ಇದರಿಂದಲೇ ಅಧಿಕ ವಾಯುಮಾಲಿನ್ಯ ಉಂಟಾಗುತ್ತಿದೆ ಎಂದು ಶೇ 50ಕ್ಕೂ ಹೆಚ್ಚು ಜನರು ಅಭಿಪ್ರಾಯಪಟ್ಟಿದ್ದಾರೆ. ಸಮೀಕ್ಷೆಯಲ್ಲಿ ಭಾಗಿಯಾದವರ ಪೈಕಿ 10,037 ಜನರು ಈ ಪ್ರಶ್ನೆಗೆ ಉತ್ತರಿಸಿದ್ದಾರೆ.


ದೆಹಲಿಯ ಮಾಲಿನ್ಯಕ್ಕೆ ಕಾರಣಗಳು





ವೈದ್ಯಕೀಯ ಸಲಹೆಗೆ ಮುಂದಾದ ಜನ..

ಅಕ್ಟೋಬರ್ ಶುರುವಾಗುತ್ತಲೇ ಜನರಲ್ಲಿ ಆರೋಗ್ಯ ಸಮಸ್ಯೆಗಳು ಶುರುವಾದವು. ಒಂದು ತಿಂಗಳು ಕಳೆಯುವಷ್ಟರಲ್ಲಿ ಶೇ 12ರಷ್ಟು ಜನರು ವೈದ್ಯರನ್ನು ಭೇಟಿ ಮಾಡಿಬಂದರು. ಇನ್ನೂ ಶೇ 6ರಷ್ಟು ಜನರು ಆಸ್ಪತ್ರೆಗೆ ಹೋಗಿಬಂದಿದ್ದಾರೆ. ಶೇ 22ರಷ್ಟು ಜನರು ವೈದ್ಯರ ಜೊತೆ ದೂರವಾಣಿಯಲ್ಲಿ ಸಮಾಲೋಚಿಸಿ ಸಲಹೆ ಪಡೆದಿದ್ದಾರೆ. ಇನ್ನಷ್ಟು ಮಂದಿ ವೈದ್ಯರ ಸಲಹೆ ಪಡೆಯಲು ಮುಂದಾಗಿದ್ದಾರೆ. ಶೇ 24ರಷ್ಟು ಜನರಲ್ಲೂ ವಾಯುಮಾಲಿನ್ಯ ಸಂಬಂಧಿ ಸಮಸ್ಯೆಗಳಿದ್ದರೂ, ಅವರು ಸ್ವಂತಕ್ಕೆ ಚಿಕಿತ್ಸೆ ಪಡೆಯಲು ಮುಂದಾಗಿದ್ದಾರೆ ಎಂದು ವರದಿ ತಿಳಿಸಿದೆ.



ಪ್ರಜಾವಾಣಿ ಗ್ರಾಫಿಕ್ಸ್ | ಮಂಜುನಾಥ ಹುಲಕೊಪ್ಪದ


ಆಧಾರ: ಲೋಕಲ್ ಸರ್ಕಲ್ಸ್, ಪಿಟಿಐ, ಎಕ್ಯೂಐ

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಕ್ರಿಕೆಟ್ ತಂಡದಿಂದ ಆಗಾಗ್ಗೆ ಆಟಗಾರರ ಬದಲಾವಣೆ ಮತ್ತು ತಂಡದಿಂದ ಕೈಬಿಡುವ ಕ್ರಮವೇ ಟಿ20 ವಿಶ್ವಕಪ್ 2020 ಟೂರ್ನಿಯಲ್ಲಿ ಭಾರತ ತಂಡಕ್ಕೆ ಮುಳುವಾಯಿತು ಎಂದು ನಿಮಗೆ ಅನ್ನಿಸುತ್ತದೆಯೆ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ





ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 272



ಕಲ್ಯಾಣಕ್ಕೆ ಹೊರಟ ಶಿವ

ಶಿವನಿಗೆ ವರಪೂಜೆ ಮಾಡಿದ ನಂತರ ಗಿರಿರಾಜ ದುರ್ಗೋಪವೀತಕ ಎಂಬ ಕರ್ಮವನ್ನು ವೇದಮಂತ್ರಗಳಿಂದ ಮಾಡಿಸಿದ. ಗಿರಿಜೆಗೆ ಮಂಗಳಕರವಾದ ಅಭ್ಯಂಜನ ಮಾಡಿಸಿ, ಸಖಿಯರು ಮತ್ತು ಪುರದ ಸುಮಂಗಲೆಯರು ಆರತಿಯನ್ನು ಬೆಳಗಿದರು. ನಂತರ ಲಕ್ಷ್ಮಿ, ಸರಸ್ವತಿಯರು ಶಿವನು ಕೊಟ್ಟ ವಸ್ತ್ರಾಭರಣಗಳಿಂದ ಅವಳನ್ನಲಂಕರಿಸಿದರು. ರತ್ನಖಚಿತವಾದ ಕುಪ್ಪಸವನ್ನು ಗಿರಿಜೆಗೆ ತೊಡಿಸಿ, ಹೊಸದಾದ ರೇಶಿಮೆ ಪತ್ತಲಗಳೆರಡನ್ನು ಉಡುಗೊರೆಯಾಗಿ ನೀಡಿದರು. ರತ್ನ ಖಚಿತವಾದ ಮನೋಹರವಾದ ಹಾರವನ್ನು ಗಿರಿಜೆಯ ಕಂಠದಲ್ಲಿ ಹಾಕಿ, ಶುದ್ಧ ಚಿನ್ನದಿಂದ ನಿರ್ಮಿಸಿದ ಅಮೂಲ್ಯವಾದ ಕಡಗಗಳನ್ನು ಕೋಮಲವಾದ ಅವಳ ಕೈಗಳಿಗೆ ತೊಡಿಸಿದರು.

ಗಿರಿಜೆಯನ್ನು ಅಲಂಕರಿಸಿದ ನಂತರ ಲಕ್ಷ್ಮಿ, ಸರಸ್ವತಿ, ಹರಿ, ಬ್ರಹ್ಮ, ಇಂದ್ರ ಮೊದಲಾದ ದೇವತೆಗಳು, ಮುನಿಗಳು ವರನ ಗೃಹದಲ್ಲಿದ್ದ ಶಿವನ ಬಳಿಗೆ ಹೋದರು. ಗರ್ಗಮುನಿ ಹಿಮವಂತನಿಗೆ 'ಪ್ರಾಣಿಗ್ರಹಣಕ್ಕಾಗಿ ನಿಶ್ಚಿತವಾದ ಕಾಲ ಸಮೀಪಿಸಿತು. ವರನಾದ ಶಿವನನ್ನು ಬೇಗನೆ ಕಲ್ಯಾಣ ಮಂಟಪಕ್ಕೆ ಕರೆದುಕೊಂಡು ಬಾ' ಎಂದ.

ಹಿಮವಂತ ತನ್ನ ಬಂಧುಗಳನ್ನು ಶಿವನ ಕರೆತರಲು ಕಳುಹಿಸಿದ. ಅವರೆಲ್ಲ ಮಂಗಳದ್ರವ್ಯಗಳೊಂದಿಗೆ ಉತ್ಸವದೋಪಾದಿಯಲ್ಲಿ ಮಹಾದೇವನ ಬಳಿಗೆ ತೆರಳಿದರು. ಹೀಗೆ ಹಿಮವಂತನ ಬಂಧುಗಳು ಶಿವ ವಾಸಿಸುತ್ತಿದ್ದ ವರನ ಗೃಹಕ್ಕೆ ಹೋಗುವಾಗ ಪಂಡಿತರು ವೇದಘೋಷವನ್ನು ಮಾಡುತ್ತಿದ್ದರು. ಸಂಗೀತ ನರ್ತನಗಳು ಮಹೋತ್ಸಾಹದಿಂದ ನಡೆಯುತ್ತಿದ್ದವು.

ಹಿಮವಂತನ ಬಂಧುಗಳಾದ ಗಿರಿಗಳ ಮಹೋತ್ಸವದ ವಾದ್ಯಶಬ್ದಗಳನ್ನು ಕೇಳಿ ವರನ ಬಿಡಾರದಲ್ಲಿದ್ದ ದೇವತೆಗಳು ಮುನಿಗಳು ಮೊದಲಾದವರು ಶಿವನನ್ನು ಕರೆದುಕೊಂಡು ಹೋಗಲು ವಧುವಿನ ಬಂಧುಗಳು ಬರುತ್ತಿದ್ದಾರೆಂದು ಹರ್ಷದಿಂದ ಬೇಗನೆ ಹೊರಡಲು ಸಿದ್ಧವಾದರು. 'ಕನ್ಯಾದಾನಕ್ಕೆ ಮುಹೂರ್ತವು ಸಮೀಪಿಸಿತು, ನಮ್ಮೆಲ್ಲರ ಭಾಗ್ಯೋದಯವಾಯಿತು, ನಾವು ಮಹಾಧನ್ಯರು. ಜಗತ್ತಿಗೇ ಮಂಗಳವನ್ನು ಉಂಟುಮಾಡುವಂತಹ ಗಿರಿಜಾಶಿವರ ಮದುವೆಯನ್ನು ನಾವು ನಮ್ಮ ಕಣ್ಣುಗಳಿಂದಲೇ ನೋಡುತ್ತೇವೆ. ನಮಗಿಂತಲೂ ಧನ್ಯರು ಇನ್ನಾರು ಇಲ್ಲ' ಎಂದು ಅವರೆಲ್ಲಾ ಹರ್ಷದಿಂದ ಸಂಭ್ರಮಿಸಿದರು.

ಹೀಗೆ ದೇವತೆಗಳೆಲ್ಲ ಪರಸ್ಪರ ತಮ್ಮ ಭಾಗ್ಯವನ್ನು ನೆನೆದು ಮಾತನಾಡುತ್ತಿರುವಾಗ ಗಿರಿರಾಜನಾದ ಹಿಮವಂತನ ಬಂಧುಗಳೆಲ್ಲರೂ ಆಗಮಿಸಿದರು. ಶಿವನ ಬಳಿಗೆ ಬಂದ ಅವರೆಲ್ಲ ಕನ್ಯಾದಾನಕ್ಕೆ ಯೋಗ್ಯವಾದ ಕಾಲ ಪ್ರಾಪ್ತವಾಗಿದೆ. ಎಲ್ಲರೂ ದಯವಿಟ್ಟು ಹಿಮವಂತನ ಮನೆಗೆ ಚಿತ್ತೈಸಬೇಕೆಂದು ಪ್ರಾರ್ಥಿಸಿದರು. ಪ್ರಾರ್ಥನೆಯನ್ನು ಕೇಳಿ ಹರಿ ಮೊದಲಾದ ದೇವತೆಗಳೆಲ್ಲರೂ ಸಂತಸದಿಂದ ಸಂಭ್ರಮಿಸುತ್ತಾ, ಶುಭಮಸ್ತು ಎಂದು ಹಿಮವಂತನ ಬಂಧುಗಳಿಗೆ ಹೇಳಿ ಜಯಘೋಷ ಮಾಡಿದರು.

ಗಿರಿಜೆಯಲ್ಲಿ ಅನುರಕ್ತನಾದ ಶಿವನಿಗೂ ತುಂಬಾ ಸಂತೋಷವಾಯಿತು. ಆದರೆ ಲೀಲಾವಿಗ್ರಹನಾದ ಅವನು ತನ್ನ ಸಂತೋಷಮುದ್ರೆಯನ್ನು ಹೊರಗೆ ಪ್ರಕಟಿಸದೆ ಗಂಭೀರವದನನಾಗೇ ಇದ್ದ. ವಿವಾಹ ವಿಧಿವಿಧಾನದ ಪ್ರಕಾರ ಲೋಕಕ್ಕೆ ಸುಖವನ್ನು ಉಂಟುಮಾಡುವ ಆ ಶಂಕರ ಮಂಗಳಸ್ನಾನವನ್ನು ಪ್ರಸನ್ನತೆಯಿಂದ ಮಾಡಿದ. ಮಂಗಳಸ್ನಾನ ಮಾಡಿದ ನಂತರ ಶಿವನಿಗೆ ದೇವತೆಗಳು ಸುಂದರವಾದ ವಸ್ತ್ರಗಳನ್ನು ಉಡಿಸಿ, ಅವನನ್ನು ರತ್ನಾಭರಣಗಳಿಂದ ಅಲಂಕರಿಸಿದರು. ಶಿವ ಮಂಗಳಘೋಷಗಳ ನಡುವೆ ನಂದಿಕೇಶ್ವರನ ಮೇಲೆ ಕುಳಿತು, ಕಲ್ಯಾಣಮಂಟಪದ ಕಡೆ ಹೊರಟ. ಈ ಸಂದರ್ಭದಲ್ಲಿ ದೇವತೆಗಳು ಮಂಗಳವಾದ್ಯಗಳನ್ನು ಬಾರಿಸುತ್ತಾ ಉತ್ಸವದೋಪಾದಿಯಲ್ಲಿ ಹೆಜ್ಜೆ ಹಾಕಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಗೋವಾದ ಕಡಲತೀರಗಳಲ್ಲಿ ಮದ್ಯ ಸೇವನೆಗೆ ಅಲ್ಲಿನ ಸರ್ಕಾರ ನಿರ್ಬಂಧ ಹೇರಿದೆ ಎನ್ನಲಾದ ಪೋಸ್ಟರ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ನಿಯಮ ಉಲ್ಲಂಘಿಸಿ ಕಡಲತೀರಗಳಲ್ಲಿ ಮದ್ಯಸೇವಿಸಿದರೆ ₹5,000ದಿಂದ ₹50,000ವರೆಗೆ ದಂಡ ವಿಧಿಸಲು ಸರ್ಕಾರ ಮುಂದಾಗಿದೆ ಎಂದು ಪೋಸ್ಟರ್‌ನಲ್ಲಿ ಹೇಳಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಈ ಬಗ್ಗೆ ಸಾಕಷ್ಟು ಚರ್ಚೆಯಾಗುತ್ತಿದೆ. ಆದರೆ ಈ ಮಾಹಿತಿ ಸಂಪೂರ್ಣ ಸತ್ಯವಲ್ಲ.



ಕಡಲತೀರಗಳ ಬಯಲು ಪ್ರದೇಶಗಳು, ಪ್ರವಾಸಿ ತಾಣಗಳಲ್ಲಿ ಮದ್ಯ ಸೇವನೆ ಹಾಗೂ ಅಡುಗೆ ಮಾಡಲು ನಿರ್ಬಂಧವಿದೆ. 2013ರಿಂದಲೂ ಈ ನಿರ್ಬಂಧವಿದ್ದು, 2019ರ ಪ್ರವಾಸೋದ್ಯಮ ತಿದ್ದುಪಡಿ ಕಾಯ್ದೆಯಲ್ಲೂ ಇದನ್ನು ಉಲ್ಲೇಖಿಸಲಾಗಿದೆ. ಆದರೆ, ಕಡಲತೀರಗಳ ಶಾಕ್‌ನಲ್ಲಿ (ಕ್ಯಾಬಿನ್, ಮನೆಯಂತಹ ಸ್ಥಳ) ಮದ್ಯಸೇವನೆಗೆ ಯಾವುದೇ ಅಡ್ಡಿಯಿಲ್ಲ ಎಂದು ಕಾಯ್ದೆ ಹೇಳುತ್ತದೆ. ಗೋವಾದ ಪ್ರವಾಸಿ ತಾಣಗಳು ಹಾಗೂ ಕಡಲತೀರದ ಬಯಲು ಪ್ರದೇಶಗಳಲ್ಲಿ ಕಸ ಹಾಕುವುದು, ಅಡುಗೆ ಮಾಡುವುದು, ಬಾಟಲ್‌ಗಳನ್ನು ಒಡೆದುಹಾಕುವುದಕ್ಕೆ ನಿರ್ಬಂಧ ವಿಧಿಸಿ ಪ್ರವಾಸೋದ್ಯಮ ಕಾರ್ಯದರ್ಶಿ ನಿಖಿಲ್ ದೇಸಾಯಿ ಅವರು ಇದೇ ಅ.31ರಂದು ಆದೇಶ ಹೊರಡಿಸಿದ್ದಾರೆ. ಇದನ್ನೇ ತಪ್ಪಾಗಿ ಅರ್ಥೈಸಿ, ರಾಜ್ಯದ ಎಲ್ಲ ಕಡಲತೀರಗಳಲ್ಲೂ ಮದ್ಯಪಾನ ನಿಷೇಧಿಸಲಾಗಿದೆ ಎಂದು ಬಿಂಬಿಸಲಾಗಿದೆ ಎಂದು 'ಲಾಜಿಕಲ್ ಇಂಡಿಯನ್' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ

ಬ್ರಹ್ಮಾನುಭವ

ಒಮ್ಮೆ ಹೂದೋಟದಲಿ, ಒಮ್ಮೆ ಕೆಳೆಕೂಟದಲಿ |
ಒಮ್ಮೆ ಸಂಗೀತದಲಿ, ಒಮ್ಮೆ ಶಾಸ್ತ್ರದಲಿ ||
ಒಮ್ಮೆ ಸಂಸಾರದಲಿ, ಮತ್ತೊಮ್ಮೆ ಮೌನದಲಿ |
ಬ್ರಹ್ಮಾನುಭವಿಯಾಗೊ- ಮಂಕುತಿಮ್ಮ || 754 ||

ಪದ-ಅರ್ಥ: ಕೆಳೆಕೂಟದಲಿ = ಗೆಳೆಯರ ಗುಂಪಿನಲ್ಲಿ, ಬ್ರಹ್ಮಾನುಭವಿಯಾಗೊ = ಬ್ರಹ್ಮನ + ಅನುಭವಿಯಾಗೊ.

ವಾಚ್ಯಾರ್ಥ: ಒಮ್ಮೆ ತೋಟ ಸಂಚಾರದಲಿ, ಒಮ್ಮೆ ಮಿತ್ರಕೂಟದಲ್ಲಿ, ಒಮ್ಮೆ ಸಂಗೀತದಲ್ಲಿ ಮತ್ತೊಮ್ಮೆ ಶಾಸ್ತ್ರದಲ್ಲಿ, ಒಮ್ಮೆ ಸಂಸಾರದಲಿ ಮತ್ತೆ ಕೆಲವೊಮ್ಮೆ ಮೌನದಲ್ಲಿ ಬ್ರಹ್ಮದ ಅನುಭವವನ್ನು ಪಡೆ.

ವಿವರಣೆ: ಅಧ್ಯಾತ್ಮಿಕವಾಗಿ ಮನುಷ್ಯ ಜೀವನದ ಪರಮಗುರಿ ಬ್ರಹ್ಮವಸ್ತುವಿನ ಸಾಕ್ಷಾತ್ಕಾರ. ಅದನ್ನು ಎಲ್ಲಿ ಹುಡುಕುವುದು? ಜೀವನದ ಪರ್ವತಶಿಖರವನ್ನು ಯಾವ ಕಡೆಯಿಂದಲೂ ಏರಬಹುದು. ತುದಿ ತಲುಪಿದಾಗ ಎಲ್ಲ ಮಾರ್ಗಗಳೂ ಒಂದೇ ಕಡೆಗೆ ಸೇರುತ್ತವೆ. ಪಯಣದ ಪ್ರಾರಂಭಿಕ ನೆಲೆಗಳು ಬೇರೆ ಬೇರೆಯಾಗಿರುವುದಕ್ಕೆ ಸಾಂಸ್ಕೃತಿಕ, ಐತಿಹಾಸಿಕ,ಭೌಗೋಳಿಕ ಮತ್ತು ಜನಸಮುದಾಯದ ಮನೋಧರ್ಮಗಳು ಕಾರಣವಾಗಿರಬಹುದು. ಮನುಷ್ಯನ ಅಪ್ರತಿಮ ಸಾಹಸವೈಭವಕ್ಕೆ ವೈವಿಧ್ಯಮಯ ಮೆರುಗನ್ನು ನೀಡುವ ಈ ಚಿಂತನೆ ಆಶ್ಚರ್ಯವೇನಲ್ಲ. ಎಲ್ಲರಿಗೂ ಒಂದೇ ಸಾಂಪ್ರದಾಯಿಕ ಮಾರ್ಗವನ್ನು ಹಾಕಿ ಕೊಟ್ಟಿದ್ದಿದ್ದರೆ,ಇದ್ದಿರಬಹುದಾದ ಏಕತಾನತೆಗೆ ಹೋಲಿಸಿದರೆ, ಲೋಕದಲ್ಲಿ ಅಂತಹವೈವಿಧ್ಯಕ್ಕೆ ಅವಕಾಶವಿರುವುದು ಎಷ್ಟೊಂದು ಕಲಾತ್ಮಕವಾಗಿದೆ! ವಿವಿಧ ಮಾರ್ಗಗಳಲ್ಲಿ ಸಾಧನೆ ಮಾಡಲು ಆಸಕ್ತಿ ಮೂಡಿಸುವಂತಿದೆ. ದೇವನು ಒಬ್ಬನೇ ಆದರೂ, ಅನೇಕ ಪ್ರಕಾರಗಳಲ್ಲಿ ಆಟವಾಡುತ್ತಾನಲ್ಲವೆ? ಎಲ್ಲ ವ್ಯತ್ಯಾಸಗಳಿಗೂ ಅತೀತನಾಗಿ, ಎಲ್ಲರನ್ನೂ ಕೈ ಬೀಸಿ ಕರೆಯುತ್ತಿರುವುದು ಒಂದೇ ಗುರಿಎನ್ನುವುದು ಸುಳ್ಳಲ್ಲ. ಕಗ್ಗ ಆ ಮಾತನ್ನು ಎಷ್ಟು ಸುಂದರವಾಗಿ ಹೇಳುತ್ತದೆ! ಬ್ರಹ್ಮಾನುಭವಿಯಾಗಲು ಅನೇಕ ದಾರಿಗಳು. ಯಾವ ದಾರಿಯೂಶ್ರೇಷ್ಠವಲ್ಲ, ಯಾವ ದಾರಿಯೂ ಕನಿಷ್ಠವಲ್ಲ. ತೋಟದಲ್ಲಿಬೆಮರು ಹರಿಸಿ ದುಡಿಯುವ ಮಾಲಿ, ಎರಡು ಮೂರುತಿಂಗಳುಗಳ ಪರಿಶ್ರಮದ ನಂತರ ಬೆಳೆದ ಸುಂದರ ಹೂಗಳನ್ನು ಕೈಯಲ್ಲಿ ಹಿಡಿದಾಗ ಆಗುವ ಆನಂದ, ಅನುಭೂತಿ-,ಖುಷಿಯ ಅನುಭೂತಿಗೆ ಕಡಿಮೆಯದಲ್ಲ. ಸಜ್ಜನರ ಸಂಗದಲ್ಲಿ, ಸ್ನೇಹಿತರ ಆತ್ಮೀಯತೆಯಲ್ಲಿ ಹೊಳೆದು ಮಿನುಗಿದ ಅಂತ:ಕರಣ ಬ್ರಹ್ಮದ ದರ್ಶನವೇ. ಸಂಗೀತದ ಉತ್ತುಂಗ ಶಿಬಿರಗಳಲ್ಲಿ ಮಗ್ನನಾದ ಗಾಯಕನಿಗಾಗುವುದೂ ಅದೇ ದಿವ್ಯಾನುಭವ. ಶಾಸ್ತ್ರದ ಆಳ, ವಿಸ್ತಾರಗಳನ್ನು ತನ್ನ ಆಂತರ್ಯದಲ್ಲಿ ಇಳಿಸಿಕೊಳ್ಳುವ ಜ್ಞಾನಿಗೂ ಅದೇ ದರ್ಶನವಾದೀತು. ಸಂಸಾರದಜೀವನ ಸುಲಭವಲ್ಲ. ಅಲ್ಲಿಯ ಅಸಮಂಜಸತೆಗಳನ್ನು ಸಮನ್ವಯಿಸುವಾಗ, ಮತ್ತೊಬ್ಬರೊಡನೆ ಹೊಂದಾಣಿಕೆ ಮಾಡಿಕೊಳ್ಳುವಾಗ ತೋರುವ ಮನಸ್ಥಿಮಿತತೆ, ದಯೆ, ತ್ಯಾಗಗಳು ದೈವೀಲಕ್ಷಣಗಳೇ. ಇವೆಲ್ಲವುಗಳೊಂದಿಗೆ ಕೇವಲ ತನ್ನ ಆಂತರ್ಯವನ್ನೇ ವೀಕ್ಷಿಸುತ್ತ, ಅದನ್ನು ಪರಿಶುದ್ಧಗೊಳಿಸುತ್ತ ಮೌನದಲ್ಲಿಯೂ ಬ್ರಹ್ಮವಸ್ತುವನ್ನು ಕಾಣಬಹುದು. ಹೀಗೆ ಹಲವು ವಿಧಗಳಲ್ಲಿ, ಹಲವು ಹಂತಗಳಲ್ಲಿ ಮನಸ್ಸನ್ನು ಹದಗೊಳಿಸುತ್ತ, ಪರಿಶುದ್ಧಗೊಳಿಸುತ್ತ ಹೋದಾಗ ದೊರೆವುದೇ ಬ್ರಹ್ಮಾನುಭವ. ಬ್ರಹ್ಮಾನುಭವೆಂದರೆ ನಾಲ್ಕು ಕೈ, ಕಿರೀಟ ಧರಿಸಿದ ದೇವರನ್ನು ಕಾಣುವುದಲ್ಲ, ಎಲ್ಲರಲ್ಲೂ, ಎಲ್ಲದರಲ್ಲೂ ಭಗವಂತನ ಅವತರಣವನ್ನು ಕಾಣುವ ಮನೋಧರ್ಮ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ನವೆಂಬರ್ 11, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ತೃತೀಯ ಗಂ. 20-18, ನಕ್ಷತ್ರ: ಮೃಗಶಿರ ಅಹೋರಾತ್ರ ಯೋಗ: ಶಿವ ಗಂ. 21-28, ಕರಣ: ವಣಿಜ ಗಂ. 07-22, ತುಲಾ ಮಾಸದ 24 ನೇ ದಿನ. ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-32 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 15 ರಬಿಯುಸ್ಸಾನಿ
ದಿನ ವಿಶೇಷ : ಸಂಕಷ್ಟಹರ ಚತುರ್ಥಿ (ಚಂದ್ರೋದಯ ರಾತ್ರಿ 08-15), ಕನಕ ಜಯಂತಿ
ಅದೃಷ್ಟ ಸಂಖ್ಯೆ : 2, 10

ಮೇಷ: ಇನ್ನೊಬ್ಬರಿಂದ ಹೇಳಿಸಿಕೊಂಡ ವಿಚಾರವನ್ನು ಅಗೌರವವೆಂದು ಭಾವಿಸಬೇಡಿ. ತಪ್ಪನ್ನು ತಿದ್ದಿಕೊಳ್ಳುವ ಅವಕಾಶ ಸಿಗುತ್ತದೆ. ವಸ್ತ್ರ ವ್ಯಾಪಾರಿಗಳಿಗೆ ಈ ದಿನ ಉತ್ತಮ ವ್ಯಾಪಾರ. ತೀರ್ಥಕ್ಷೇತ್ರದ ದರ್ಶನ ಮಾಡಲಿದ್ದೀರಿ.

ವೃಷಭ: ತಂತ್ರಜ್ಞಾನಕ್ಕೆ ಸಂಬಂಧಿಸಿದಂತಹ ಉದ್ಯೋಗದಲ್ಲಿ ಹಿನ್ನಡೆಯ ಅನುಭವ ತೋರಿಬರಲಿದೆ. ಸೋಮಾರಿತನ ನಿಮಗೆ ಶತ್ರುವಾಗಿ ಪರಿಣಾಮ ಬೀರುವುದು. ಕಲಿತ ವಿದ್ಯೆಯನ್ನು ಬಳಸಿಕೊಳ್ಳುವ ಪ್ರಯತ್ನವಿರಲಿ.

ಮಿಥುನ: ವೃತ್ತಿಯಲ್ಲಿ ಹೊಸ ಅವಕಾಶಗಳಿವೆ. ವ್ಯವಹಾರಕ್ಕೆ ದೀರ್ಘಕಾಲದಿಂದ ನಿರೀಕ್ಷಿಸುತ್ತಿರುವ ಉತ್ತೇಜನ ದೊರೆಯುತ್ತದೆ. ನಿಮ್ಮ ಎಲ್ಲಾ ಕಾರ್ಯಗಳು ಸಫಲವಾಗುವುದು.

ಕರ್ಕಾಟಕ: ಪೋಲಿಸ್ ಅಧಿಕಾರಿಗಳಿಗೆ ವರ್ಗಾವಣೆ ಸಂಭವ. ಹತ್ತಿ ಬೆಳೆಗಾರರಿಗೆ ಉತ್ತಮ ಲಾಭ. ಸ್ವಂತ ಹೂಡಿಕೆಯಿಂದ ಧನಾರ್ಜನೆ ವಿಷಯದಲ್ಲಿ ಸಮತೋಲನ ಸಾಧಿಸಬಹುದು.

ಸಿಂಹ: ಕೌಟುಂಬಿಕ ಸಮಸ್ಯೆಗಳು ಬಗೆಹರಿಯುವುವು. ಎತ್ತರದ ಸ್ಥಾನ ತಲುಪಬೇಕೆಂಬ ಮಹತ್ವಾಕಾಂಕ್ಷೆಯು ಸಾಕಾರವಾಗಲಿದೆ. ಹೊಸ ವಿಷಯಗಳ ಕಲಿಕೆಗೆ ಇಂದು ಸುದಿನ.

ಕನ್ಯಾ: ಸಂಘ ಸಂಸ್ಥೆಯಲ್ಲಿ ನಿಮ್ಮ ಪ್ರಾಮುಖ್ಯತೆ, ಜವಾಬ್ದಾರಿ ಈ ದಿನ ಹೆಚ್ಚಲಿದೆ. ಬೇಕರಿ ವಸ್ತುಗಳು ಹಾಗೂ ಸಿಹಿ ಪದಾರ್ಥಗಳ ಮಾರಾಟದಿಂದ ಅಧಿಕ ಲಾಭ. ಇತರರ ಮನಸ್ಸನ್ನು ಗೆಲ್ಲುವ ಅವಕಾಶವಿದೆ.

ತುಲಾ: ಕೆಲವು ದಿನಗಳಿಂದ ಮುಂದೂಡಿದ್ದ ವಿದೇಶ ಪ್ರಯಾಣವನ್ನು ಮತ್ತೆ ಕೈಗೊಳ್ಳುವ ಬಗ್ಗೆ ಯೋಚನೆ ಬರುವುದು. ನಿಮ್ಮಲ್ಲಿರುವ ಸೃಜನಾತ್ಮಕ ಕಲ್ಪನೆಯನ್ನು ಸೂಕ್ತ ಹಾದಿಯಲ್ಲಿ ಬಳಕೆ ಮಾಡಿ.

ವೃಶ್ಚಿಕ: ಅನಗತ್ಯ ವಸ್ತುಗಳಿಗೆ ಹಣಕಾಸಿನ ಹರಿವು ಹೆಚ್ಚಾಗಲಿದೆ. ಏಕಕಾಲದಲ್ಲಿ ಸಾಕಷ್ಟು ಕೆಲಸಗಳನ್ನು ಗಮನಿಸಬೇಕಾದ ಅನಿವಾರ್ಯತೆ ಇದೆ. ಪಶುಸಂಗೋಪನೆ ಮತ್ತು ಹಾಲು ಉತ್ಪನ್ನಗಳಿಂದ ಲಾಭ ಪಡೆಯುವಿರಿ.

ಧನು: ನಿಮ್ಮ ಪ್ರಾಮಾಣಿಕತೆಯನ್ನು ಈ ದಿನ ದುರುಪಯೋಗ ಪಡಿಸಿಕೊಳ್ಳುವರು ಜಾಗ್ರತರಾಗಿರಿ.. ಔಷಧಿ ವ್ಯಾಪರಿಗಳಿಗೆ ಅಧಿಕ ಲಾಭ . ಸಹೋದರರ ಆಗಮನದಿಂದ ಮನಸ್ಸಿಗೆ ನೆಮ್ಮದಿ ಮತ್ತು ಸಂತೋಷ ಇರಲಿದೆ.

ಮಕರ: ಕುಟುಂಬದ ಗೊಂದಲ ಪರಿಹರಿಸುವ ಹೊಣೆಗಾರಿಕೆಯನ್ನು ಸ್ವಪ್ರೇರಣೆಯಿಂದ ನೀವು ತೆಗೆದುಕೊಳ್ಳುವುದು ಸರಿಯಲ್ಲ. ನೂತನ ಸಂಸ್ಥೆಯೊಂದರಲ್ಲಿ ಉದ್ಯೋಗವಕಾಶವಿರುವುದು. ಕ್ರೀಡಾಪಟುಗಳಿಗೆ ಅದೃಷ್ಟದ ಜಯ ಸಿಗಲಿದೆ.

ಕುಂಭ: ನಿಮ್ಮಿಂದ ನಡೆಯದೇ ಇರುವ ತಪ್ಪುಗಳ ಅಪವಾದವನ್ನು ಹೊರಬೇಕಾಗಬಹುದು. ತಂದೆಯವರ ಆರೋಗ್ಯ ಸುಧಾರಣೆಯಾಗಿ ಮನಸ್ಸಿಗೆ ನೆಮ್ಮದಿ ಉಂಟಾಗಲಿದೆ. ಶ್ರೀಹರಿಯನ್ನು ಸ್ತುತಿಸಿದಲ್ಲಿ ಅಭೀಷ್ಟಗಳು ಈಡೇರುವುದು.


ಮೀನ: ಕೆಲಸವನ್ನು ಮುಂದೂಡುವ ಅಭ್ಯಾಸ ಕಡಿಮೆ ಮಾಡಿ. ಕೆಲಸದ ನಿಮಿತ್ತವಾಗಿ ದೂರ ಪ್ರಯಾಣ ಬೆಳೆಸುವುದು ಉಚಿತವಲ್ಲ, ಆದ್ದರಿಂದ ಅನಿವಾರ್ಯವಾದಲ್ಲಿ ಸ್ನೇಹಿತರೊಂದಿಗೆ ಕೈಗೊಳ್ಳಿರಿ.

ಪದಬಂಧ 5135

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಇದೊಂದು ಬಗೆಯ ಚರ್ಮವಾದ್ಯ (4)
3.ದಾಸ್ತಾನು ಇಡುವ ಸ್ಥಳ (3)
5.ಸಾರ್ವತ್ರಿಕವಾಗಿ ಕಾಣಿಸಿಕೊಂಡಿರುವ ಪ್ರವಾಸಿ (3)
6.ಸದಾ ಕಾಲ ಚಾರನದ್ದು ಒಳ್ಳೆಯ ನಡತೆ (4)
8.ದ್ರವದಿಂದ ತುಂಬಿರುವಂಥದ್ದು (4)
10.ದೇವಾಲಯದ ಸಭಾಮಂಟಪ (4)
12.ವೃಕ್ಷದ ಹತ್ತಿರ ಬಿದ್ದಿರುವ ಪಚ್ಚೆ (4)
13.ಹುಟ್ಟಿದಕಾಲ ನಕ್ಷತ್ರ ಇತ್ಯಾದಿಗಳನ್ನು ತಿಳಿಸುವ ಪತ್ರಿಕೆ (3)
16.ವನದಲ್ಲಿರುವ ಉಡುಗೆ (3)
17.ಕತ್ತು ಬಗ್ಗಿಸಿ ಹಾಕಿದ ಸಹಿ (4)

ಮೇಲಿಂದ ಕೆಳಕ್ಕೆ
1.ವಸ್ತುಗಳನ್ನಿಡುವ ತಗಡಿನ ಪೆಟ್ಟಿಗೆ (2)
2.ಸಮಯ ಸೂಚಕ ಯಂತ್ರ (4)
3.ಮರದ ಸುತ್ತ ಹಾರಾಡುತ್ತಿರುವ ದುಂಬಿ (4)
4.ಕಬ್ಬು ಬಿದಿರು ಇತ್ಯಾದಿಗಳ ಗಂಟು (2)
7.ದಾನ ನೀಡಿರುವ ರಾಕ್ಷಸ (3)
9.ಈತ ಹಳಬ! (3)
11.ಆನೆ ಮೊಗದವನು (4)
12.ಹೂವಿನಲ್ಲಿನ ಸಿಹಿ ರಸ (4)
14.ವರನಿಗೆ ಕೇಳಿಸಿದ ಧ್ವನಿ (2)
15.ಒಂದು ಸಲಕ್ಕೆ ನುಂಗುವಷ್ಟು ಆಹಾರ(2)



5134ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಭೂತಿಪೂಜೆ
3.ಚಮಚ 5.ವರ್ಗೀಕರಣ
7.ಕವಾಟ 8.ಹುಸಿಮುನಿಸು
11.ಅಗುಳು 12.ನಾಮಕರಣ
14.ಉಸುಮು 15.ವಿಮಾನಯಾನ

ಮೇಲಿಂದ ಕೆಳಕ್ಕೆ:
1.ವಿಭಾವನೆ 2.ತಿರುಕ
4.ಚರಟ 6.ರಕ್ಕಸಿ
7.ಕಡಸು 8.ಹುರುಳು
9.ನಿಯಮ 10.ಜಾಣತನ
11.ಅಡರು 13.ಕದನ

ಸುಡೊಕು 5521

			4		2		7	
3		6				2		5
				5			8	
8		5						1
			5	9	3		2	
7		2		6		5		4
				2		8		7
2		7					6	
6			7		9	4		

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5520 ಸುಡೊಕು

5	3	4	9	8	2	1	7	6
1	7	6	3	4	5	9	8	2
9	8	2	1	6	7	3	4	5
7	2	3	5	9	8	6	1	4
6	5	9	7	1	4	2	3	8
4	1	8	2	3	6	5	9	7
2	9	5	8	7	1	4	6	3
3	6	7	4	2	9	8	5	1
8	4	1	6	5	3	7	2	9

ಸಿನಿಮಾ ಪುರವಣಿ



‘ರಾಣ’ನಿಗೆ ‘ಪ್ರಿಯ’ಳಾದ ರೀಷ್ಮಾ

ಕಿರಿ ವಯಸ್ಸಿನಲ್ಲೇ ತಮ್ಮೆರಡು ಸಿನಿಮಾಗಳು ತೆರೆಗೆ ಬಂದಿರೋ ಖುಷಿಯಲಿದ್ದಾರೆ ನಟಿ ರೀಷ್ಮಾ ನಾಣಯ್ಯ. ‘ರಾಣ’ ಸಿನಿಮಾ ಅವರ ಎರಡನೇ ಪ್ರಾಜೆಕ್ಟ್. ಕೀನ್ಯಾದ ‘ಬಾನದಾರಿಯಲ್ಲಿ’ ಸುತ್ತಿ ವ್ಲಾಗರ್ ಆಗಿ ಮರಳಿರುವ ರೀಷ್ಮಾ ‘ಸಿನಿಮಾ ಪುರವಣಿ’ ಜೊತೆ ಮಾತಿಗೆ ಸಿಕ್ಕರು...

ರೀಷ್ಮಾ ನಾಣಯ್ಯ

ಅಭಿಲಾಷ್ ಪಿ.ಎಸ್.

- **ಬೆಳ್ಳಿತೆರೆಯಲ್ಲಿ ಕಾಣಿಸಿಕೊಂಡ ವರ್ಷದಲ್ಲೇ ಎರಡು ಸಿನಿಮಾ...**

ಯಾವುದೇ ಸಿನಿಮಾ ಹಿನ್ನೆಲೆ ಇಲ್ಲದೆ ಈ ರಂಗಕ್ಕೆ ಕಾಲಿಟ್ಟವಳು ನಾನು. ಏಳೆಂಟು ತಿಂಗಳ ಅಂತರದಲ್ಲೇ ನನ್ನ ಎರಡನೇ ಸಿನಿಮಾ ತೆರೆ ಕಾಣುತ್ತಿರುವುದಕ್ಕೆ ನಾನಂತೂ ಖುಷಿಯಾಗಿದ್ದೇನೆ. ಪ್ರೇಮ್ ಅವರು ನಿರ್ದೇಶಿಸಿದ ‘ಏಕ್ ಲವ್ ಯಾ’ ಸಿನಿಮಾಗೆ ನಾನು ಪ್ರವೇಶಿಸಿದಾಗ ನನಗೆ 17 ವರ್ಷ! ಸಿನಿಮಾದಲ್ಲಿ ನಟನೆಯ ಅವಕಾಶ ಎಲ್ಲರಿಗೂ ಸಿಗುವ ಭಾಗ್ಯವಲ್ಲ. ಅದೂ ಮೊದಲ ಸಿನಿಮಾವೇ ಖ್ಯಾತ ನಿರ್ದೇಶಕರ ಜೊತೆಗೆ. ಕಳೆದ ಫೆಬ್ರುವರಿಯಲ್ಲಿ ಈ ಸಿನಿಮಾ ಬಿಡುಗಡೆಯಾದಾಗ ನನಗೆ 18 ವರ್ಷ!

‘ಏಕ್ ಲವ್ ಯಾ’ ಪ್ರಚಾರದ ಸಂದರ್ಭದಲ್ಲಿ ‘ರಾಣ’ ಚಿತ್ರದ ಆಫರ್ ಬಂದಿತ್ತು. ನಿರ್ಮಾಪಕರಾದ ಮಂಜು ಹಾಗೂ ಗುಜ್ಜಲ್ ಪುರುಷೋತ್ತಮ್ ಅವರು ಭೇಟಿಯಾಗಿ ‘ರಾಣ’ ಚಿತ್ರದ ಬಗ್ಗೆ ಮಾತುಕತೆ ನಡೆಸಿದ್ದರು. ತಮ್ಮ ಚಿತ್ರಕ್ಕಾಗಿ ಹೊಸ ಮುಖದ ಹುಡುಕಾಟದಲ್ಲಿ ಅವರಿದ್ದರು. ನಟ ರಾಣಾ(ಅಭಿಷೇಕ್) ಅವರೇ ನನ್ನ ಬಗ್ಗೆ ಚಿತ್ರತಂಡಕ್ಕೆ ತಿಳಿಸಿದ್ದರು. ಈ ವಯಸ್ಸಿನಲ್ಲೇ ಅವಕಾಶಗಳು ಅರಸಿ ಬರುತ್ತಿರುವುದು ಖುಷಿ ತಂದಿದೆ. ಸದ್ಯ ಜ್ಯೋತಿ ನಿವಾಸ್ ಕಾಲೇಜಿನಲ್ಲಿ ಬಿ.ಎ ಪತ್ರಿಕೋದ್ಯಮ ಅಂತಿಮ ವರ್ಷದಲ್ಲಿ ವಿದ್ಯಾಭ್ಯಾಸ ನಡೆಯುತ್ತಿದೆ. ಓದಿನ ಜೊತೆಗೆ ಚಿತ್ರರಂಗದ ಹೆಜ್ಜೆ ಸಾಗಿದೆ.

- **‘ಏಕ್ ಲವ್ ಯಾ’ ಹಾಗೂ ‘ರಾಣ’ದಲ್ಲಿನ ರೀಷ್ಮಾಗೂ ಇರುವ ವ್ಯತ್ಯಾಸ...**

ಈ ಎರಡೂ ಪಾತ್ರಗಳಿಗೂ ಬಹಳ ವ್ಯತ್ಯಾವಿದೆ. ‘ಏಕ್ ಲವ್ ಯಾ’ ಸಿನಿಮಾದಲ್ಲಿ ನನ್ನದು ಮುಗ್ಧ ಹುಡುಗಿಯ ಪಾತ್ರ. ಒಂದು ರೀತಿ ‘ಟಿಪಿಕಲ್ ಸಾಫ್ಟ್ ಹುಡ್ಗಿ’. ವಿದ್ಯಾರ್ಥಿನಿಯಾಗಿ, ಉದ್ಯೋಗಸ್ಥೆಯಾಗಿ ನಾನು ಅಲ್ಲಿ ಕಾಣಿಸಿಕೊಂಡಿದ್ದೆ. ನಾನು ಮೊದಲು ಕ್ಯಾಮೆರಾ ಮುಂದೆ ಕಾಣಿಸಿಕೊಂಡು ಸುಮಾರು ಮೂರು ವರ್ಷವಾಗುತ್ತಾ ಬಂದಿದೆ. ಹೀಗಾಗಿ ‘ರಾಣ’ ಸಿನಿಮಾದಲ್ಲಿ ಬಾಹ್ಯವಾಗಿ ಹಾಗೂ ನಟನೆಯಲ್ಲಿ ನನ್ನಲ್ಲಾದ ಬದಲಾವಣೆ ಗಮನಿಸಬಹುದು. ಈ ಸಿನಿಮಾದಲ್ಲಿ ‘ಪ್ರಿಯ’ ಎಂಬ ಪಾತ್ರದಲ್ಲಿ ನಾನು ಕಾಣಿಸಿಕೊಂಡಿದ್ದೇನೆ. ಆಕೆ ವರ್ತಮಾನದಲ್ಲಿ ಬದುಕುವ ಹುಡುಗಿ. ಭವಿಷ್ಯದ ಬಗ್ಗೆ ಹೆಚ್ಚಿನ ಚಿಂತೆ ಇಲ್ಲದಾಕೆ. ಅವಳದ್ದು ನೇರ ನುಡಿ.

‘ಏಕ್ ಲವ್ ಯಾ’ ಅನುಭವ ನನ್ನ ಸಿನಿಪಯಣಕ್ಕೆ ದೊಡ್ಡ ತಿರುವು ನೀಡಿತ್ತು. ಏಕಾಏಕಿ ಬಂದೊದಗಿದ್ದ ಅವಕಾಶವದು. ಕ್ಯಾಮೆರಾ ಮುಂದೆ ನಿಲ್ಲುವುದು, ಸಂಭಾಷಣೆ ಹೀಗೆ ಎಲ್ಲವುದಕ್ಕೂ ಅದೇ ಸಿನಿಮಾ ವೇದಿಕೆ. ಪ್ರೇಮ್ ಅವರೇ ನನಗೂ ರಾಣಾ ಅವರಿಗೂ ಹೆಜ್ಜೆ ಹೆಜ್ಜೆಗೂ ತರಬೇತಿ ನೀಡಿದ್ದರು.

- **‘ರಾಣ’ ಚಿತ್ರೀಕರಣದ ಅನುಭವ...**

ಚಿತ್ರದ ಟ್ರೈಲರ್ ನೋಡಿದರೆ ಇದೊಂದು ಆ್ಯಕ್ಷನ್ ಸಿನಿಮಾ ಎಂದು ಪ್ರೇಕ್ಷಕರಿಗೆ ಅನಿಸಬಹುದು. ಆದರೆ ಇದೊಂದು ಕಂಟೆಂಟ್ ಸಿನಿಮಾ. ಕಮರ್ಷಿಯಲ್ ಸ್ಪರ್ಶ ಈ ಸಿನಿಮಾಗಿದೆ. ಭಾವನಾತ್ಮಕ ದೃಶ್ಯಗಳು, ಹಾಸ್ಯ ಎಲ್ಲದರ ಮಿಶ್ರಣವೂ ಇಲ್ಲಿದೆ. ನಂದಕಿಶೋರ್ ಅವರ ಜೊತೆ ಕೆಲಸ ಮಾಡುವುದು ಒಳ್ಳೆಯ ಅನುಭವ. ಚಿತ್ರೀಕರಣದ ಸಮಯದಲ್ಲಿ ಸೆಟ್ ಅಲ್ಲಿ ಅವರು ಬಹಳ ಶಾಂತವಾಗಿರುತ್ತಾರೆ.(ನಗುತ್ತಾ) ಅದೇ ಪ್ರೇಮ್ ಅವರು ಜೋರಾಗಿದ್ದರು. ತಮಾಷೆ ಮಾಡಿಕೊಂಡು, ಬೈಯುತ್ತಾ ತಮ್ಮನ್ನು ಚಿತ್ರೀಕರಣದಲ್ಲಿ ತೊಡಗಿಸಿಕೊಳ್ಳುತ್ತಿದ್ದರು.

ಶ್ರೇಯಸ್ ಒಬ್ಬ ಕಠಿಣ ಪರಿಶ್ರಮಿ. ಪ್ರತಿಯೊಂದು ದೃಶ್ಯವೂ ಚೆನ್ನಾಗಿರಬೇಕು ಎಂದು ಬಯಸುವವರು. ನಮ್ಮಿಬ್ಬರ ನಡುವಿನ ಕೆಮೆಸ್ಟ್ರಿಯೂ ಅದ್ಭುತವಾಗಿದೆ. ನಮ್ಮ ನಡುವೆ ಯಾವುದೇ ಅಹಂ ಇರಲಿಲ್ಲ. ದೃಶ್ಯಕ್ಕೆ ಜೀವತುಂಬಲು ಪರಸ್ಪರ ಮಾತನಾಡಿಕೊಂಡೇ ನಟಿಸುತ್ತಿದ್ದೆವು. ಇದರಿಂದ ಒಂದು ರೀತಿ ಸ್ಫೂರ್ತಿಯೂ ದೊರಕುತ್ತಿತ್ತು. ‘ಗಲ್ಲಿ ಬಾಯ್’ ಹಾಡಿನ ಚಿತ್ರೀಕರಣಕ್ಕೆ ಅದ್ಧೂರಿಯಾದ ಸೆಟ್ ಹಾಕಲಾಗಿತ್ತು. ಒಂದು ವಾರ ಈ ಹಾಡಿಗಾಗಿ ರಿಹರ್ಸಲ್ ಮಾಡಿ ಶೂಟಿಂಗ್ ನಡೆಸಿದ್ದೆವು. ಸ್ಪರ್ಧೆಗೆ ಇಳಿದವರಂತೆ ನಾವಿಲ್ಲಿ ಡ್ಯಾನ್ಸ್ ಮಾಡಿದ್ದೇವೆ.

- **ಹೊಸ ಪ್ರಾಜೆಕ್ಟ್‌ಗಳು...**

ಸದ್ಯ ಧನ್ವೀರ್ ಅವರ ಜೊತೆಗೆ ‘ವಾಮನ’ ಚಿತ್ರದ ಚಿತ್ರೀಕರಣದಲ್ಲಿ ತೊಡಗಿಸಿಕೊಂಡಿದ್ದೇನೆ. ಎರಡು ಹಾಡುಗಳ ಚಿತ್ರೀಕರಣವಷ್ಟೇ ಬಾಕಿ ಇದೆ. ‘ಬಾನದಾರಿಯಲ್ಲಿ’ ಸಿನಿಮಾದ ಚಿತ್ರೀಕರಣ ಇನ್ನೊಂದೆರಡು ದಿನ ಬಾಕಿ ಇದೆ. ಹೊಸ ಆಫರ್‌ಗಳು ಬರುತ್ತಿದ್ದು, ಮಾತುಕತೆ ಅಂತಿಮವಾದ ಬಳಿಕ ಮಾಹಿತಿ ನೀಡುತ್ತೇನೆ. ❖

- **ಕೀನ್ಯಾದ ‘ಬಾನದಾರಿ’ ಪಯಣ ಹೇಗಿತ್ತು?**

ಅದೊಂದು ಲೈಫ್‌ಟೈಂ ಅನುಭವ. ನನ್ನ, ನಟರಾದ ಗಣೇಶ್ ಹಾಗೂ ರಂಗಾಯಣ ರಘು ಅವರ ಪಾತ್ರಗಳ ಚಿತ್ರೀಕರಣವಷ್ಟೇ ಕೀನ್ಯಾ ಸೇರಿದಂತೆ ಆಫ್ರಿಕಾದ ಕೆಲ ಭಾಗದಲ್ಲಿ ನಡೆದಿತ್ತು. ಕೇವಲ 22 ಜನ ಅಲ್ಲಿಗೆ ತೆರಳಿದ್ದೆವು. ‘ಇಬ್ಬರು ಮೇರು ಕಲಾವಿದರ ಜೊತೆಗೆ ನೀವಿದ್ದೀರಿ. ಹೇಗೆ ಗೆದ್ದು ತೋರಿಸುತ್ತೀರಿ ಎನ್ನುವುದು ನಿಮ್ಮ ಮೇಲಿದೆ’ ಎಂದು ನಿರ್ದೇಶಕರಾದ ಪ್ರೀತಂ ಗುಬ್ಬಿ ಹೇಳುತ್ತಿದ್ದರು. ನನಗೆ ಯಾವುದೇ ಒತ್ತಡ ಇರಲಿಲ್ಲ. ಇಬ್ಬರೂ ನನಗೆ ಮಾರ್ಗದರ್ಶಿಯಾಗಿದ್ದರು. ಅಲ್ಲಿನ ಚಿತ್ರೀಕರಣ ಅಡ್ವೆಂಚರಸ್ ಅನುಭವ. ತೆರೆದ ಜೀಪ್‌ನಲ್ಲಿ ಸಫಾರಿಗೆ ಹೋಗಿದ್ದೆವು. ಹದಿಮೂರು ದಿನ ನಾವಲ್ಲಿ ಕಳೆದಿದ್ದೆವು.

‘ಬಾನದಾರಿಯಲ್ಲಿ’ ಸಿನಿಮಾದಲ್ಲಿ ನಾನು ‘ಕಾದಂಬರಿ’ ಎಂಬ ಪಾತ್ರದಲ್ಲಿ ನಟಿಸುತ್ತಿದ್ದೇನೆ. ಮೊದಲು ನನ್ನ ಪಾತ್ರ ವೈಲ್ಡ್‌ಲೈಫ್ ಫೋಟೊಗ್ರಾಫರ್ ಆಗಿತ್ತು. ಇದೀಗ ವ್ಲಾಗರ್ ಆಗಿ ಈ ಪಾತ್ರವನ್ನು ಬದಲಾಯಿಸಲಾಗಿದೆ. ಪ್ರತಿ ಹೆಜ್ಜೆಯನ್ನೂ ದಾಖಲಿಸುವ, ಸಾಮಾಜಿಕ ಮಾಧ್ಯಮಗಳಲ್ಲಿ ಸಕ್ರಿಯವಾಗಿರುವ ಪಾತ್ರವದು.



ದಶಕದ ಬಳಿಕ ತೆರೆಗೆ ‘ಕ್ವೀನ್’

ಸ್ಯಾಂಡಲ್‌ವುಡ್ ಕ್ವೀನ್, ನಟಿ ರಮ್ಯಾ ದಶಕದ ಬಳಿಕ ಮತ್ತೆ ತೆರೆ ಮೇಲೆ ಬರಲು ಸಜ್ಜಾಗಿದ್ದಾರೆ. ‘ಸ್ವಾತಿ ಮುತ್ತಿ’ನಿಂದ ಹೊರಹೆಜ್ಜೆ ಇಟ್ಟಿದ್ದ ರಮ್ಯಾ ಇದೀಗ ‘ಉತ್ತರಕಾಂಡ’ದೊಳಗೆ ಪ್ರವೇಶಿಸಿದ್ದಾರೆ.

‘ರತ್ನನ್ ಪ್ರಪಂಚ’ ಸಿನಿಮಾ ಯಶಸ್ಸು, ಕೆ.ಆರ್.ಜಿ ಸ್ಟುಡಿಯೋಸ್, ಡಾಲಿ ಧನಂಜಯ ಮತ್ತು ರೋಹಿತ್ ಪದಕಿ ಕಾಂಬಿನೇಷನ್ ಅನ್ನು ಮತ್ತೊಮ್ಮೆ ತೆರೆ ಮೇಲೆ ತರುತ್ತಿದೆ. ಈ ತಂಡದ ಹೊಸ ಸಿನಿಮಾ ‘ಉತ್ತರಕಾಂಡ’ ಸೆಟ್ಟೇರಿದ್ದು, ಇತ್ತೀಚೆಗೆ ಬೆಂಗಳೂರಿನ ಪಂಚಮುಖಿ ಗಣಪತಿ ದೇವಸ್ಥಾನದಲ್ಲಿ ಮುಹೂರ್ತ ನಡೆಯಿತು. ಕೆ.ಆರ್.ಜಿ. ಸ್ಟುಡಿಯೋಸ್ ಸಂಸ್ಥೆಯ ಕಾರ್ತಿಕ್ ಮತ್ತು ಯೋಗಿ ಜಿ.ರಾಜ್ ಅವರು ಈ ಚಿತ್ರ ನಿರ್ಮಿಸುತ್ತಿದ್ದಾರೆ.

ಈ ಸಿನಿಮಾ ಉತ್ತರ ಕರ್ನಾಟಕದ ಹಿನ್ನೆಲೆಯಲ್ಲಿ ನಡೆಯಲಿದೆ. ಮುಹೂರ್ತ ಕಾರ್ಯಕ್ರಮದ ವಿಡಿಯೊದಲ್ಲಿ ಉತ್ತರ ಕರ್ನಾಟಕ ಭಾಷೆಯಲ್ಲೇ ಸಿನಿಮಾದ ಮುನ್ನುಡಿಯನ್ನು ರಮ್ಯಾ ಹೇಳಿದ್ದಾರೆ. ಚಿತ್ರಕ್ಕಾಗಿ ಭಾಷೆ, ಉಡುಗೆ-ತೊಡುಗೆಯ ಮೇಲೆ ರಮ್ಯಾ ಗಂಭೀರವಾಗಿ ಕಸರತ್ತು ನಡೆಸುತ್ತಿದ್ದಾರೆ ಎಂದಿದೆ ಚಿತ್ರತಂಡ.

‘ರತ್ನನ್ ಪ್ರಪಂಚ ಚಿತ್ರಕ್ಕೆ ನಾಯಕಿಯ ಪಾತ್ರಕ್ಕಾಗಿ ಇದೇ ತಂಡ ನನ್ನ ಬಳಿ ಬಂದಿದ್ದಾಗ, ಕಾರಣಾಂತರಗಳಿಂದ ಅದನ್ನು ಒಪ್ಪಿಕೊಳ್ಳಲಾಗಿರಲಿಲ್ಲ. ನನಗೆ ಅತ್ಯಂತ ಆಪ್ತವಾದ ಸಿನಿಮಾ ರತ್ನನ್ ಪ್ರಪಂಚ. ಅಂತಹ ಒಳ್ಳೆಯ ತಂಡದ ಜೊತೆ ಕೈ ಜೋಡಿಸಿ ಬೆಳ್ಳಿಪರದೆಗೆ ಹಿಂತಿರುಗುತ್ತಿರುವುದು ಸಂತೋಷ ತಂದಿದೆ’ ಎಂದಿದ್ದಾರೆ ರಮ್ಯಾ.

‘ಉತ್ತರಕಾಂಡ’ದಲ್ಲಿ ಧನಂಜಯ ಮುಖ್ಯಭೂಮಿಕೆಯಲ್ಲಿದ್ದಾರೆ. ಇದು ಅವರ ವೃತ್ತಿಯಲ್ಲೇ ಬಿಗ್ ಬಜೆಟ್ ಸಿನಿಮಾ. ‘ಈ ಸಿನಿಮಾ ಮನುಷ್ಯನ ವಿಲಕ್ಷಣ ಮನಸ್ಸಿನ ಹೋರಾಟವನ್ನ ಬಿಂಬಿಸುತ್ತದೆ. ಸರಿ ತಪ್ಪುಗಳ ಸಿದ್ಧಾಂತ, ಅಹಂಕಾರಗಳ ಗುದ್ದಾಟ. ಉತ್ತರ ಕರ್ನಾಟಕದ ಅದ್ಭುತ ಬದುಕಿನ ನಡುವೆ ನಡೆಯುವ ಕಥೆ ಹೇಳುತ್ತಿರುವುದು ನನಗೆ ದೊಡ್ಡ ಸವಾಲು ಮತ್ತು ಜವಾಬ್ದಾರಿ’ ಎಂದಿದ್ದಾರೆ ನಿರ್ದೇಶಕ ರೋಹಿತ್ ಪದಕಿ. ಚಿತ್ರ ಸಂಪೂರ್ಣ ಉತ್ತರ ಕರ್ನಾಟಕದ ಸೊಗಡಲ್ಲಿ, ಭಾಷೆಯಲ್ಲಿ ಇರುತ್ತದೆ. ಅಲ್ಲಿಯೇ ಚಿತ್ರೀಕರಣವೂ ನಡೆಯಲಿದೆ ಎಂದಿದೆ ಚಿತ್ರತಂಡ.

‘ಇನ್ ಮ್ಯಾಲಿಂದ ಫುಲ್ ಗುದ್ದಾಂಗುದ್ದಿ’ ಎಂಬ ಟ್ಯಾಗ್‌ಲೈನ್ ಇರುವ ‘ಉತ್ತರಕಾಂಡ’ದಲ್ಲಿ ದೊಡ್ಡ ತಾರಾಗಣವೇ ಇರಲಿದೆ. ಈ ಬಗ್ಗೆ ಮುಂದಿನ ದಿನಗಳಲ್ಲಿ ಮಾಹಿತಿ ನೀಡುವುದಾಗಿ ಚಿತ್ರತಂಡ ತಿಳಿಸಿದೆ. ಚಿತ್ರದ ಚಿತ್ರೀಕರಣ ಜನವರಿಯಿಂದ ಪ್ರಾರಂಭವಾಗಲಿದ್ದು, ಅರವಿಂದ ಕಶ್ಯಪ್ ಛಾಯಾಗ್ರಹಣ, ಚರಣ್ ರಾಜ್ ಸಂಗೀತ ಸಂಯೋಜನೆ ಚಿತ್ರಕ್ಕಿರಲಿದೆ. ❖

ಹಲವು ಶೇಡ್ಸ್‌ನಲ್ಲಿ ‘ಅಬ್ಬರ’



‘ಡೈನಾಮಿಕ್ ಪ್ರಿನ್ಸ್’ ಪ್ರಜ್ವಲ್ ದೇವರಾಜ್ ನಟನೆಯ, ಕೆ.ರಾಮ್‌ನಾರಾಯಣ್ ನಿರ್ದೇಶನದ ಸಿನಿಮಾ ‘ಅಬ್ಬರ’ ತೆರೆಗೆ ಬರಲು ಮುಹೂರ್ತ ನಿಗದಿಯಾಗಿದ್ದು, ನ.18ರಂದು ಈ ಚಿತ್ರ ತೆರೆಕಾಣಲಿದೆ.

ಕಳೆದ ಆಗಸ್ಟ್ 12ರಂದೇ ಈ ಸಿನಿಮಾ ಬಿಡುಗಡೆಯಾಗಬೇಕಿತ್ತು. ಬಿಡುಗಡೆ ದಿನಾಂಕವನ್ನೂ ಘೋಷಿಸಿದ್ದ ಚಿತ್ರತಂಡ, ಕೊನೆಯ ಕ್ಷಣದಲ್ಲಿ ಚಿತ್ರ ಬಿಡುಗಡೆಯನ್ನು ಮುಂದೂಡಿತ್ತು. ‘ಅಬ್ಬರ’ ಸಿನಿಮಾದಲ್ಲಿ ಐದಾರು ಶೇಡ್ಸ್‌ನಲ್ಲಿ ಪ್ರಜ್ವಲ್ ಕಾಣಿಸಿಕೊಂಡಿದ್ದು, ಮೂವರು ಹೀರೊಯಿನ್ ಜೊತೆ ಡ್ಯುಯೆಟ್ ಹಾಡಿದ್ದಾರೆ. ಪ್ರಜ್ವಲ್‌ಗೆ ನಾಯಕಿಯರಾಗಿ ಲೇಖಾ ಚಂದ್ರ, ನಿಮಿಕಾ ರತ್ನಾಕರ್, ರಾಜಶ್ರೀ ಪೊನ್ನಪ್ಪ ನಟಿಸಿದ್ದಾರೆ. ಚಿತ್ರದ ಟ್ರೇಲರ್ ಅನ್ನು ಇತ್ತೀಚೆಗೆ ನಟ ದೇವರಾಜ್ ಬಿಡುಗಡೆಗೊಳಿಸಿದರು.

ಚಿತ್ರದಲ್ಲಿ ಖಳನಾಯಕನ ಪಾತ್ರಕ್ಕೆ ರವಿಶಂಕರ್ ಬಣ್ಣಹಚ್ಚಿದ್ದು, ಶೋಭರಾಜ್, ಕೋಟೆ ಪ್ರಭಾಕರ್, ವಿಕ್ಟರಿ ವಾಸು ಮುಂತಾದವರು ತಾರಾಬಳಗದಲ್ಲಿದ್ದಾರೆ. ❖

ಸಿನಿಮಾತು ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಪಟಾಕಿ ಘಟಕದಲ್ಲಿ ಸ್ಫೋಟ: 5 ಸಾವು

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ಮದುರೈ ಸಮೀಪದ ಅಳಗುಸಿರೈನ ಪಟಾಕಿ ತಯಾರಿಕಾ ಘಟಕದಲ್ಲಿ ಗುರುವಾರ ಸಂಜೆ ಸ್ಫೋಟ ಸಂಭವಿಸಿ ಐದು ಕಾರ್ಮಿಕರು ಮೃತಪಟ್ಟು, 19 ಜನರು ಗಾಯಗೊಂಡಿದ್ದಾರೆ. ಗಾಯಗೊಂಡವರಿಗೆ ಹತ್ತಿರದ ಎರಡು ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರ್ಮಿಕರು ಕೆಲಸದಲ್ಲಿ ನಿರತರಾಗಿದ್ದ ವೇಳೆ ಸ್ಫೋಟ ಸಂಭವಿಸಿದೆ. ಘಟಕದ ಎರಡು ಷೆಡ್ಡುಗಳಿಗೆ ಹಾನಿಯಾಗಿದೆ. ಗಾಯಗೊಂಡ 13 ಜನರನ್ನು ತಿರುಮಂಗಲಂ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಾಕಿ 6 ಗಾಯಾಳುಗಳನ್ನು ಮದುರೈನ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ ಘಟನೆ ಕುರಿತು ತನಿಖೆ ನಡೆಸಲು ಜಿಲ್ಲಾಧಿಕಾರಿ ಆದೇಶಿಸಿದ್ದಾರೆ. ಭದ್ರತಾ ಕ್ರಮಗಳನ್ನು ಘಟಕದ ಮಾಲೀಕರು ಉಲ್ಲಂಘಿಸಿದ್ದಾರೆಯೇ ಎಂಬ ಕುರಿತು ತನಿಖೆ ನಡೆಸಲಾಗುವುದು ಎಂದು ತಮಿಳುನಾಡಿನ ಸಚಿವರೊಬ್ಬರು ತಿಳಿಸಿದ್ದಾರೆ.

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಮೃತರ ಕುಟುಂಬಗಳಿಗೆ ತಲಾ ₹5 ಲಕ್ಷ ಪರಿಹಾರ ಘೋಷಿಸಿದ್ದಾರೆ. ಗಾಯಗೊಂಡವರಿಗೆ ಚಿಕಿತ್ಸೆ ನೀಡುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದ್ದಾರೆ.

ತಮಿಳುನಾಡಿನಲ್ಲಿ ಎನ್‌ಇಪಿ ಜಾರಿ ಇಲ್ಲ: ಸಚಿವ

ಚೆನ್ನೈ: ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಗೆ ತಮಿಳುನಾಡಿನ ವಿರೋಧವಿದೆ. ವಿದ್ಯಾರ್ಥಿಗಳ ಅಗತ್ಯ ಪೂರೈಸುವ ಏಕೈಕ ಮಾರ್ಗವೆಂದರೆ ರಾಜ್ಯಕ್ಕೆ ಪ್ರತ್ಯೇಕ ಶಿಕ್ಷಣ ನೀತಿ ರೂಪಿಸುವುದು ಎಂದು ಶಾಲಾ ಶಿಕ್ಷಣ ಸಚಿವ ಅನ್ಬಿಲ್ ಮಹೇಶ್ ಪೊಯಮೊಳಿ ಗುರುವಾರ ಹೇಳಿದ್ದಾರೆ.

ಶಿಕ್ಷೆ ಪ್ರಶ್ನಿಸಿದ್ದ ಆಜಂ ಖಾನ್ ಅರ್ಜಿ ತಿರಸ್ಕೃತ

ಬರೇಲಿ, ಉತ್ತರಪ್ರದೇಶ (ಪಿಟಿಐ): ದ್ವೇಷ ಭಾಷಣ ಪ್ರಕರಣ ಸಂಬಂಧ ತಮಗೆ ಶಿಕ್ಷೆ ವಿಧಿಸಿರುವುದನ್ನು ಪ್ರಶ್ನಿಸಿ ಸಮಾಜವಾದಿ ಪಕ್ಷದ ನಾಯಕ ಆಜಂ ಖಾನ್ ಸಲ್ಲಿಸಿದ್ದ ಅರ್ಜಿಯನ್ನು ರಾಂಪುರ ಸೆಷನ್ಸ್ ನ್ಯಾಯಾಲಯ ಗುರುವಾರ ತಿರಸ್ಕರಿಸಿದೆ.

ದ್ವೇಷ ಭಾಷಣದ ಆರೋಪ ಸಾಬೀತಾಗಿದ್ದರಿಂದ ರಾಂಪುರದ ಜನಪ್ರತಿನಿಧಿಗಳ ನ್ಯಾಯಾಲಯವು ಆಜಂ ಖಾನ್ ಅವರಿಗೆ ಮೂರು ವರ್ಷಗಳ ಜೈಲು ಶಿಕ್ಷೆ ವಿಧಿಸಿತ್ತು. ಹೀಗಾಗಿ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಲಾಗಿತ್ತು.

ತಮಿಳುನಾಡಿನ 45 ಸ್ಥಳಗಳಲ್ಲಿ ಎನ್‌ಐಎ ದಾಳಿ


ಕೊಯಮತ್ತೂರು: ತಮಿಳುನಾಡಿನ ಕೊಯಮತ್ತೂರಿನಲ್ಲಿ ಸಂಭವಿಸಿದ ಕಾರು ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಗುರುವಾರ ಚೆನ್ನೈ, ಮಧುರೈ ಸೇರಿದಂತೆ ರಾಜ್ಯಾದ್ಯಂತ 45 ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿದೆ.

ಮೂಲಗಳ ಪ್ರಕಾರ, ಕೊಯಮತ್ತೂರಿನಲ್ಲಿ 20, ಚೆನ್ನೈಯಲ್ಲಿ 12ಕ್ಕೂ ಹೆಚ್ಚು ಮತ್ತು ಮಧುರೈ ರಾಮನಾಥಪುರಂ ಸೇರಿದಂತೆ ವಿವಿಧೆಡೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ತಮಿಳುನಾಡು ಪೊಲೀಸರು ಬಂಧಿಸಿರುವ ಆರು ಆರೋಪಿಗಳಿಗೆ ಸಂಬಂಧಪಟ್ಟ ಸ್ಥಳ ಹಾಗೂ ಮನೆಗಳ ಮೇಲೆ ದಾಳಿ ನಡೆಸಲಾಗಿದ್ದು, ನಿಷೇಧಿತ ಸಂಘಟನೆಯ ಸದಸ್ಯರನ್ನು ತನಿಖೆಗೊಳಪಡಿಸಲಾಗುತ್ತಿದೆ.

ಅ. 23ರಂದು ಕೊಯಮತ್ತೂರಿನ ಉಕ್ಕಡಂ ದೇವಾಲಯದ ಬಳಿ ಕಾರಿನಲ್ಲಿ ಅಡುಗೆ ಅನಿಲ ಸಿಲಿಂಡರ್ ಸ್ಫೋಟಗೊಂಡು ಅದರಲ್ಲಿದ್ದ ಜಮೀಶ್ ಮುಬೀನ್ ಎಂಬಾತ ಮೃತಪಟ್ಟಿದ್ದ. ಘಟನೆಯಲ್ಲಿ ಮುಬೀನ್ ನಂಟು ಹಾಗೂ ಭಯೋತ್ಪಾದನಾ ಕೃತ್ಯದ ಸಂಚು ಕುರಿತಾಗಿ ತನಿಖೆ ನಡೆಸಲಾಗುತ್ತಿದೆ.

ಶುಕ್ರವಾರ • ನವೆಂಬರ್ 11, 2022 ಪ್ರಜಾವಾಣಿ



ಜೆಎನ್‌ಯು ವಿದ್ಯಾರ್ಥಿಗಳ ಘರ್ಷಣೆ: ಇಬ್ಬರಿಗೆ ಗಾಯ

ನವದೆಹಲಿ (ಪಿಟಿಐ): ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಕ್ಯಾಂಪಸ್‌ನಲ್ಲಿ ಗುರುವಾರ ವಿದ್ಯಾರ್ಥಿಗಳ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದಿದ್ದು, ಇಬ್ಬರು ಗಾಯಗೊಂಡಿದ್ದಾರೆ.

ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರವಾದ ಕೆಲ ವಿಡಿಯೊ ತುಣುಕುಗಳು ವಿದ್ಯಾರ್ಥಿಗಳು ಕ್ಯಾಂಪಸ್‌ನಲ್ಲಿ ಕೋಲು ಹಿಡಿದು ಓಡುತ್ತಿರುವುದನ್ನು ತೋರಿಸಿದೆ.

'ವೈಯಕ್ತಿಕ ವಿಷಯಕ್ಕೆ ಸಂಬಂಧಿಸಿದಂತೆ ಇಬ್ಬರು ವಿದ್ಯಾರ್ಥಿಗಳ ನಡುವೆ ಜಗಳ ನಡೆದಿದ್ದು, ನಂತರ ಅವರ ಸ್ನೇಹಿತರು ಸೇರಿಕೊಂಡರು. ಘರ್ಷಣೆ ವೇಳೆ ಇಬ್ಬರಿಗೆ ಗಾಯಗಳಾಗಿವೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮುಂದಿನ ವರ್ಷ 12 ಲಕ್ಷ ಭಾರತೀಯರಿಗೆ ಅಮೆರಿಕ ವೀಸಾ: ರಾಯಭಾರ ಕಚೇರಿ ಅಧಿಕಾರಿಗಳು

ಕಾಯುವ ಸಮಯ ಮತ್ತಷ್ಟು ಕಡಿಮೆ

ಮುಖ್ಯಾಂಶಗಳು

- ಭಾರತೀಯರಿಗೆ ಪ್ರತಿ ತಿಂಗಳು ಒಂದು ಲಕ್ಷ ವೀಸಾ ನೀಡುವ ಯೋಜನೆ
- 1 ವರ್ಷದಲ್ಲಿ ಸುಮಾರು 82 ಸಾವಿರ ವೀಸಾ ವಿತರಣೆ

ನವದೆಹಲಿ (ಪಿಟಿಐ): ಅಮೆರಿಕದ ವೀಸಾ ಪಡೆಯಲು ಕಾಯುವ ಅವಧಿಯು 2023ರ ಬೇಸಿಗೆಯ ವೇಳೆಗೆ ಗಣನೀಯ ಪ್ರಮಾಣದಲ್ಲಿ ಕಡಿತವಾಗುವ ನಿರೀಕ್ಷೆ ಇದೆ. ಮುಂದಿನ ವರ್ಷ ಸುಮಾರು 12 ಲಕ್ಷ ಭಾರತೀಯರಿಗೆ ವೀಸಾ ಸಿಗಬಹುದು ಎಂದು ಅಮೆರಿಕ ರಾಯಭಾರ ಕಚೇರಿಯ ಹಿರಿಯ ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

'ವೀಸಾ ವಿಚಾರದಲ್ಲಿ ವಾಷಿಂಗ್ಟನ್‌ಗೆ ಭಾರತದ ಮೊದಲ ಆದ್ಯತೆ. ಭಾರತೀಯರಿಗೆ ಪ್ರತಿ ತಿಂಗಳು ಒಂದು ಲಕ್ಷ ವೀಸಾ ನೀಡುವ ಯೋಜನೆ ಇದೆ. ಮುಂದಿನ ವರ್ಷದ ಮಧ್ಯಭಾಗದಲ್ಲಿ ವೀಸಾ ಪಡೆಯುವ ಪ್ರಕ್ರಿಯೆಗೆ ಕಾಯುವ ಪರಿಸ್ಥಿತಿಯನ್ನು ಕೋವಿಡ್ -19ರ ಪೂರ್ವದಲ್ಲಿದ್ದ ಮಟ್ಟಕ್ಕೆ ತರುವುದು ನಮ್ಮ ಉದ್ದೇಶ' ಎಂದು ಅಧಿಕಾರಿ ಹೇಳಿದರು.

ಕಳೆದ ಒಂದು ವರ್ಷದಲ್ಲಿ ಸುಮಾರು 82 ಸಾವಿರ ವೀಸಾಗಳನ್ನು ನೀಡಲಾಗಿದೆ. ಮುಂದಿನ ಬೇಸಿಗೆ ಹೊತ್ತಿಗೆ 11 ಲಕ್ಷದಿಂದ 12 ಲಕ್ಷ ವೀಸಾಗಳನ್ನು ಭಾರತೀಯರಿಗೆ ನೀಡಲು ಎದುರು ನೋಡುತ್ತಿದ್ದೇವೆ. ವೀಸಾಕ್ಕೆ ಕಾಯಬೇಕಿರುವ ದೀರ್ಘ ಅವಧಿ ಸಮಸ್ಯೆಯನ್ನು ಭಾರತದ ಜೊತೆ ಸೇರಿ ನಿವಾರಿಸಲು ಪ್ರಯತ್ನಿಸಲಾಗುತ್ತಿದೆ. ಅಮೆರಿಕದ ವೀಸಾಗಳನ್ನು ಪ್ರಸ್ತುತ ಹೆಚ್ಚು ಪಡೆಯುತ್ತಿರುವ ರಾಷ್ಟ್ರಗಳಲ್ಲಿ ಮೆಕ್ಸಿಕೊ ಮತ್ತು ಚೀನಾ ನಂತರದ ಸ್ಥಾನದಲ್ಲಿ ಭಾರತವಿದೆ. ಮುಂದಿನ ದಿನಗಳಲ್ಲಿ ಭಾರತ ಎರಡನೇ ಸ್ಥಾನಕ್ಕೆ ಏರಲಿದೆ ಎಂದು ತಿಳಿಸಿದ್ದಾರೆ.

ಆದ್ಯತೆಯ ಮೇಲೆ ಎಚ್ (ಎಚ್1ಬಿ) ಮತ್ತು ಎಲ್ ವರ್ಗದ ವೀಸಾ ನೀಡಲು ಈಗಾಗಲೇ ಭಾರತೀಯರನ್ನು ಗುರುತಿಸಲಾಗಿದೆ. ವೀಸಾ ನವೀಕರಣ ಬಯಸಿದ್ದವರಿಗೆ ಸುಮಾರು ಒಂದು ಲಕ್ಷ ಸ್ಲಾಟ್‌ಗಳನ್ನು ಇತ್ತೀಚೆಗೆ ಬಿಡುಗಡೆ ಮಾಡಲಾಗಿದೆ. ಕೆಲವು ವರ್ಗಗಳ ವೀಸಾಕ್ಕೆ ಕಾಯುವ ಸಮಯವನ್ನು ಈಗಾಗಲೇ ಹಿಂದಿನ 450 ದಿನಗಳ ಅವಧಿಯನ್ನು ಒಂಬತ್ತು ತಿಂಗಳಿಗೆ ತಗ್ಗಿಸಲಾಗಿದೆ. ಬಿ1, ಬಿ2 (ವ್ಯವಹಾರ ಮತ್ತು ಪ್ರವಾಸ) ವೀಸಾಗಳಿಗೆ ಕಾಯಬೇಕಿದ್ದ ಸುಮಾರು ಒಂಬತ್ತು ತಿಂಗಳ ಅವಧಿಯನ್ನೂ ತಗ್ಗಿಸಲಾಗುತ್ತಿದೆ ಎಂದು ತಿಳಿಸಿದರು.

ವಿದ್ಯಾರ್ಥಿ ವೀಸಾಗಳಿಗೆ ಕಾಯುವ ಸಮಯ ಕಡಿತಗೊಳಿಸಲು, ಅದರಲ್ಲೂ ವಿಶೇಷವಾಗಿ ವಿದ್ಯಾರ್ಥಿ ವೀಸಾ ನವೀಕರಣಕ್ಕೆ ಕಾದಿರುವವರಿಗೆ ಕಾಯುವ ಅವಧಿ ಕಡಿತಗೊಳಿಸಲು ಆದ್ಯತೆ ನೀಡಲಾಗುತ್ತಿದೆ ಎಂದು ಹೇಳಿದರು.

ಕೋವಿಡ್ 19 ಸಂಬಂಧಿತ ಪ್ರಯಾಣ ನಿರ್ಬಂಧಗಳನ್ನು ತೆಗೆದ ನಂತರ ಅಮೆರಿಕದ ವೀಸಾ ಅರ್ಜಿಗಳು ಏರಿಕೆಯಾದ ಕೆಲವೇ ಪ್ರಮುಖ ದೇಶಗಳಲ್ಲಿ ಭಾರತವೂ ಒಂದು. ವೀಸಾಗಳ ಅನುಮತಿಗೆ ಕಾಯಬೇಕಾದ ದೀರ್ಘ ಸಮಯವನ್ನು ಪರಿಗಣಿಸಿ, ಹೆಚ್ಚಿನ ಸಿಬ್ಬಂದಿ ನೇಮಕ ಮಾಡಿಕೊಳ್ಳುವುದು ಮತ್ತು 'ಡ್ರಾಪ್ ಬಾಕ್ಸ್' (ಸಂದರ್ಶನವಿಲ್ಲದೆ ಅಮೆರಿಕ ವೀಸಾ ನವೀಕರಣಕ್ಕೆ ಅರ್ಜಿ ಸಲ್ಲಿಸುವ ಪ್ರಕ್ರಿಯೆ- 4 ವರ್ಷಗಳಿಂದ ಅಮೆರಿಕ ವೀಸಾ ಹೊಂದಿರುವವರು ಡ್ರಾಪ್ ಬಾಕ್ಸ್ ಸೌಲಭ್ಯಕ್ಕೆ ಅರ್ಹರು) ಸೌಲಭ್ಯಗಳನ್ನು ಹೆಚ್ಚಿಸುವುದು ಸೇರಿ ಹಲವು ಉಪಕ್ರಮಗಳನ್ನು ರೂಪಿಸುತ್ತಿದೆ ಎಂದು ಅಧಿಕಾರಿ ತಿಳಿಸಿದರು.

ನಿವೃತ್ತಿ ನಂತರದ ಪ್ರಯೋಜನಗಳಿಗಾಗಿ ಕೊಚ್ಚಾರ್ ಸಲ್ಲಿಸಿದ್ದ ಅರ್ಜಿ ತಿರಸ್ಕೃತ

ಮುಂಬೈ (ಪಿಟಿಐ): ಐಸಿಐಸಿಐ ಬ್ಯಾಂಕ್‌ನ ಸಿಇಒ ಹುದ್ದೆಯಿಂದ ಚಂದಾ ಕೊಚ್ಚಾರ್ ಅವರನ್ನು ವಜಾಗೊಳಿಸಿದ್ದು ಮೇಲ್ನೋಟಕ್ಕೆ ಊರ್ಜಿತ ಎಂದು ತೋರುತ್ತದೆ ಎಂದು ಹೇಳಿರುವ ಬಾಂಬೆ ಹೈಕೋರ್ಟ್, ನಿವೃತ್ತಿ ನಂತರದ ಪ್ರಯೋಜಗಳನ್ನು ಕೋರಿ ಅವರು ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ತಿರಸ್ಕರಿಸಿದೆ.

2018ರಲ್ಲಿ ಸ್ವಾಧೀನಪಡಿಸಿಕೊಂಡಿದ್ದ 6.90 ಲಕ್ಷ ಷೇರುಗಳ ವ್ಯವಹಾರವನ್ನು ನಡೆಸದಂತೆ ಮತ್ತು ಈಗ ನಡೆಸಿರುವ ವ್ಯವಹಾರಗಳ ಕುರಿತು ಮುಂದಿನ ಆರು ತಿಂಗಳಲ್ಲಿ ಅಫಿಡವಿಟ್ ಸಲ್ಲಿಸುವಂತೆಯೂ ನ್ಯಾಯಾಧೀಶ ಆರ್.ಐ. ಚಗ್ಲಾ ಅವರಿದ್ದ ಏಕಸದಸ್ಯ ಪೀಠವು ಚಂದಾ ಅವರಿಗೆ ನಿರ್ದೇಶಿಸಿದೆ.

ಜಿ20 ಶೃಂಗಸಭೆ: ಇಂಡೊನೇಷ್ಯಾಗೆ ಮೋದಿ

ನವದೆಹಲಿ (ಪಿಟಿಐ): ಜಿ20 ಗುಂಪಿನ ಶೃಂಗಸಭೆಯ ಅಂಗವಾಗಿ ಇದೇ 14ರಿಂದ 16ರವರೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಇಂಡೊನೇಷ್ಯಾದ ಬಾಲಿ ನಗರಕ್ಕೆ ಭೇಟಿ ನೀಡಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಗುರುವಾರ ತಿಳಿಸಿದೆ.

ಶೃಂಗಸಭೆಯು 15 ಮತ್ತು 16ರಂದು ಬಾಲಿಯಲ್ಲಿ ನಡೆಯಲಿದೆ.

ದಾಖಲೆಯಿಲ್ಲದ ಹಣದ ವ್ಯವಹಾರ ಪಿಎಂಎಲ್‌ಎ ಅಡಿ ಅಪರಾಧವಲ್ಲ: ವಿಶೇಷ ನ್ಯಾಯಾಲಯ

ಮುಂಬೈ (ಪಿಟಿಐ): ಶಿವಸೇನಾ (ಉದ್ಧವ್ ಬಾಳಾಸಾಹೇಬ್ ಠಾಕ್ರೆ) ಸಂಸದ ಸಂಜಯ್ ರಾವುತ್ ಅವರ ಆಲಿಬಾಗ್ ಹತ್ತಿರದ ಕಿಹಿಮ್ ಪ್ರದೇಶದಲ್ಲಿ ಭೂಮಿ ಕೊಳ್ಳಲು ದಾಖಲೆಯಿಲ್ಲದ ಹಣದ ವ್ಯವಹಾರ ಮಾಡಿದ್ದಾರೆ. ಆದರೆ, ಇದನ್ನೇ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ಅಪರಾಧ ಎಂದು ಪರಿಗಣಿಸಲಾಗುವುದಿಲ್ಲ ಎಂದು ಇಲ್ಲಿಯ ವಿಶೇಷ ಕೋರ್ಟ್ ಹೇಳಿದೆ.

ಪಾತ್ರ ಚಾಳ್ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದ ಅವ್ಯವಹಾರದ ಮೊಕದ್ದಮೆಯಲ್ಲಿ ಸಂಜಯ್ ರಾವುತ್ ಅವರನ್ನು ಇ.ಡಿ ಆಗಸ್ಟ್ 1ರಂದು ಬಂಧಿಸಿತ್ತು. ಈ ಮೊಕದ್ದಮೆಯಲ್ಲಿ ಸಂಜಯ್ ಅವರಿಗೆ ವಿಶೇಷ ಪಿಎಂಎಲ್‌ಎ ನ್ಯಾಯಾಲಯ ಬುಧವಾರ ಜಾಮೀನು ನೀಡಿದೆ. ವಿಚಾರಣಾಧಿಕಾರಿಗಳು ಸಲ್ಲಿಸಿರುವ ಆರೋಪಪಟ್ಟಿಯಲ್ಲಿ ಹೇಳಿರುವಂತೆ ಸಂಜಯ್ ರಾವುತ್ ಅವರು ಸಹ ಆರೋಪಿ ಪ್ರವೀಣ್ ರಾವುತ್ ಅವರಿಂದ ದಾಖಲೆಯಿಲ್ಲದ ಮೂಲದಿಂದ ಹಣ ಪಡೆದಿರಬಹುದು. ಆದರೆ ಇದನ್ನೇ ಅಕ್ರಮ ಎಂದು ಹೇಳಲಾಗುವುದಿಲ್ಲ ಎಂಬ ಅಂಶವನ್ನು ವಿಶೇಷ ನ್ಯಾಯಾಧೀಶ ಎಂ.ಜಿ. ದೇಶಪಾಂಡೆ ಎತ್ತಿಹಿಡಿದಿದ್ದರು.

ಜೊತೆಗೆ, ಪ್ರವೀಣ್ ರಾವುತ್ ಅವರ ಜೊತೆ ಸಂಜಯ್ ಅವರು ಕೈಗೊಂಡಿದ್ದ ಪ್ರವಾಸಗಳ ಮಾಹಿತಿ ಮತ್ತು ಸಂಜಯ್ ಬಳಸುತ್ತಿರುವ ಕಾರು ಅವರ ಸ್ನೇಹಿತರೊಬ್ಬರ ಹೆಸರಿನಲ್ಲಿ ಎಂಬ ಅಂಶಗಳನ್ನು ತನಿಖಾಧಿಕಾರಿಗಳು ಆರೋಪಪಟ್ಟಿಯಲ್ಲಿ ದಾಖಲಿಸಿದ್ದರು. ಅವುಗಳೆಲ್ಲವೂ ಮೇಲ್ನೋಟಕ್ಕೆ ಅಕ್ರಮಗಳಂತೆ ಕಾಣುವುದಿಲ್ಲ ಎಂದು ಕೋರ್ಟ್ ಹೇಳಿದೆ.

ಮುಂಬೈನ ಅರ್ಥರ್ ರಸ್ತೆ ಜೈಲಿನಿಂದ ಬುಧವಾರ ಸಂಜೆ ಸಂಜಯ್ ಹೊರಬಂದಿದ್ದರು.

'ತನಿಖಾ ಸಂಸ್ಥೆಗಳು ಕೇಂದ್ರದ ಸಾಕುಪ್ರಾಣಿಗಳಂತೆ ವರ್ತಿಸುತ್ತಿವೆ'

ಮುಂಬೈ: ತನಿಖಾ ಸಂಸ್ಥೆಗಳು ಕೇಂದ್ರ ಸರ್ಕಾರದ 'ಸಾಕುಪ್ರಾಣಿ'ಗಳಂತೆ ವರ್ತಿಸುತ್ತಿವೆ ಎಂದು ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಗುರುವಾರ ಆರೋಪಿಸಿದ್ದಾರೆ.

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಶಿವಸೇನಾ ಸಂಸದ ಸಂಜಯ್ ರಾವುತ್ ಅವರಿಗೆ ನ್ಯಾಯಾಲಯವು ಜಾಮೀನು ಮಂಜೂರು ಮಾಡಿರುವುದು ದೇಶಕ್ಕೆ ಮಾರ್ಗದರ್ಶಿಯಂತಾಗಿದೆ ಎಂದೂ ಹೇಳಿದ್ದಾರೆ.

ರಾವುತ್ ಅವರು ಉದ್ಧವ್ ಠಾಕ್ರೆ ಅವರನ್ನು ಅವರ ನಿವಾಸದಲ್ಲಿ ಗುರುವಾರ ಭೇಟಿಯಾಗಿ ಚರ್ಚಿಸಿದ್ದಾರೆ.

ಹಿಮಾಚಲ ಪ್ರದೇಶ: 68 ವಿಧಾನಸಭಾ ಕ್ಷೇತ್ರಗಳಿಗೆ ಮತದಾನ ನಾಳೆ

ಬಹಿರಂಗ ಪ್ರಚಾರ ಅಂತ್ಯ

ಜನತಂತ್ರದ ಹಬ್ಬ 2022

ಶಿಮ್ಲಾ: ಹಿಮಾಚಲ ಪ್ರದೇಶ ವಿಧಾನಸಭೆ ಚುನಾವಣೆಯ ಬಹಿರಂಗ ಪ್ರಚಾರ ಕಾರ್ಯ ಗುರುವಾರ ಅಂತ್ಯಗೊಂಡಿದೆ.

ಜೈರಾಮ್ ಠಾಕೂರ್ ನೇತೃತ್ವದಲ್ಲಿ ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೇರುವ ನಿರೀಕ್ಷೆ ಇಟ್ಟುಕೊಂಡಿರುವ ಬಿಜೆಪಿಯು, ಮರಳಿ ಅಧಿಕಾರಕ್ಕೆ ಬಂದರೆ ಏಕರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ಜಾರಿಗೊಳಿಸುವ ಭರವಸೆ ನೀಡಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಎರಡು ಬಾರಿ ರಾಜ್ಯಕ್ಕೆ ಭೇಟಿ ನೀಡಿ ಚುನಾವಣಾ ಪ್ರಚಾರ ರ‍್ಯಾಲಿಗಳಲ್ಲಿ ಪಾಲ್ಗೊಂಡಿದ್ದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಭಾರತ್ ಜೊಡೊ ಯಾತ್ರೆಯಲ್ಲಿ ನಿರತರಾಗಿರುವುದರಿಂದ ಹಿಮಾಚಲ ಪ್ರದೇಶದಲ್ಲಿ ಪಕ್ಷದ ಪರವಾಗಿ ಪ್ರಚಾರ ಕಾರ್ಯದಲ್ಲಿ ಪಾಲ್ಗೊಂಡಿಲ್ಲ. ಆದರೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಇಲ್ಲಿ ಪ್ರಚಾರ ಕಾರ್ಯವನ್ನು ಮುನ್ನಡೆಸಿದ್ದಾರೆ.

ಕೇಂದ್ರ ಗೃಹಸಚಿವ ಅಮಿತ್ ಶಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಕೂಡ ಬಹಿರಂಗ ಪ್ರಚಾರ ಕೊನೆಗೊಳ್ಳುವುದಕ್ಕೂ ಮುನ್ನ ಹಮ್ಮಿಕೊಂಡಿದ್ದ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಿದ್ದಾರೆ.

ಹಿಮಾಚಲ ಪ್ರದೇಶದ 68 ವಿಧಾನಸಭಾ ಕ್ಷೇತ್ರಗಳಿಗೆ ಇದೇ 12ರಂದು ಮತದಾನ ನಡೆಯಲಿದೆ. ಡಿಸೆಂಬರ್ 8ರಂದು ಮತ ಎಣಿಕೆ ನಡೆಯಲಿದೆ.



ಹಿಮಾಚಲ ಪ್ರದೇಶದ ಲಾಹೌಲ್ ಮತ್ತು ಸ್ಪಿತಿ ಜಿಲ್ಲೆಯ ಮತಗಟ್ಟೆಗಳಿಗೆ ಅಧಿಕಾರಿಗಳು ಇವಿಎಂಗಳೊಂದಿಗೆ ಗುರುವಾರ ತೆರಳಿದರು —ಪಿಟಿಐ ಚಿತ್ರ

‘ಚುನಾವಣೆಯಲ್ಲಿ ಗೆದ್ದರೆ ಹಳೆಯ ಪಿಂಚಣಿ ಯೋಜನೆ ಮತ್ತೆ ಜಾರಿ’

ಶಿಮ್ಲಾ (ಪಿಟಿಐ): ‘ಹಿಮಾಚಲ ಪ್ರದೇಶ ಮತ್ತು ಗುಜರಾತ್‌ನ ಮುಂಬರಲಿರುವ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸಿದರೆ ಹಳೆಯ ಪಿಂಚಣಿ ಯೋಜನೆಯನ್ನು ಮತ್ತೆ ಜಾರಿಗೆ ತರಲಾಗುವುದು’ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಗುರುವಾರ ಹೇಳಿದ್ದಾರೆ.

ಈ ಕುರಿತು ಫೇಸ್‌ಬುಕ್‌ನಲ್ಲಿ ಪ್ರಿಯಾಂಕಾ ಅವರು ಪೋಸ್ಟ್‌ವೊಂದನ್ನು ಹಂಚಿಕೊಂಡಿದ್ದು, ‘ಹಳೆಯ ಪಿಂಚಣಿ ಯೋಜನೆಯನ್ನು ರದ್ದುಪಡಿಸುವ ಮೂಲಕ ಬಿಜೆಪಿಯು ವೃದ್ಧರ ಆರ್ಥಿಕ ಭದ್ರತೆಯನ್ನು ಕಸಿದುಕೊಂಡಿದೆ’ ಎಂದು ಆರೋಪಿಸಿದ್ದಾರೆ.

‘ದೇಶದ ಅಭಿವೃದ್ಧಿಗೆ ಕೊಡುಗೆ ನೀಡುವ ಪ್ರತಿಯೊಬ್ಬ ಉದ್ಯೋಗಿಯು ಪಿಂಚಣಿ ಪಡೆಯಬೇಕೆಂದು ಕಾಂಗ್ರೆಸ್ ನಂಬುತ್ತದೆ. ಪಿಂಚಣಿ ಪ್ರತಿ ಉದ್ಯೋಗಿಯ ಹಕ್ಕು. ಇದನ್ನು ಗಮನದಲ್ಲಿರಿಸಿಕೊಂಡೇ ಛತ್ತೀಸಗಡ ಹಾಗೂ ರಾಜಸ್ಥಾನದ ಕಾಂಗ್ರೆಸ್ ಸರ್ಕಾರಗಳು ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿವೆ’ ಎಂದಿದ್ದಾರೆ.

ಹಲವು ಸಿ.ಎಂ ಅಭ್ಯರ್ಥಿಗಳ ಉಪಸ್ಥಿತಿ ನಮ್ಮ ಬಲ: ಖರ್ಗೆ

‘ಹಿಮಾಚಲ ಪ್ರದೇಶದಲ್ಲಿ ಹಲವಾರು ಮುಖ್ಯಮಂತ್ರಿ ಅಭ್ಯರ್ಥಿಗಳ ಉಪಸ್ಥಿತಿಯು ನಮ್ಮ ಬಲವೇ ಹೊರತು ದೌರ್ಬಲ್ಯವಲ್ಲ’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಗುರುವಾರ ಹೇಳಿದರು.

‘ಇದಕ್ಕೆ ತದ್ವಿರುದ್ಧವಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ನಂಬಿ ಆಡಳಿತರೂಢ ಸರ್ಕಾರವಾದ ಬಿಜೆಪಿ ಚುನಾವಣಾ ಕಣಕ್ಕೆ ಇಳಿಯುತ್ತಿದೆ. ಏಕೆಂದರೆ, ಇಲ್ಲಿನ (ಹಿಮಾಚಲ ಪ್ರದೇಶ) ಮುಖ್ಯಮಂತ್ರಿ ಜೈರಾಮ್ ಠಾಕೂರ್ ಹಾಗೂ ಅವರ ಸರ್ಕಾರದ ವೈಫಲ್ಯತೆಯ ಬಗ್ಗೆ ಬಿಜೆಪಿಗೆ ತಿಳಿದಿದೆ’ ಎಂದರು. ‘ಮೋದಿಯವರು, ಅಭ್ಯರ್ಥಿಯನ್ನು ನೋಡಬೇಡಿ. ತಮ್ಮನ್ನು ನೋಡಿ ಮತ ಹಾಕುವಂತೆ ಹೇಳುತ್ತಿದ್ದಾರೆ. ಹಿಮಾಚಲ ಪ್ರದೇಶದ ಜನರನ್ನು ಕೀಳಾಗಿ ಕಾಣುವಂತೆ ಮೋದಿಯವರ ವರ್ತನೆ ಇದೆ. ಚುನಾವಣೆ ಮುಗಿದ ನಂತರ ಪ್ರಧಾನಿ ಇಲ್ಲಿರುವುದಿಲ್ಲ ಎಂದು ಈ ರಾಜ್ಯದ ಜನರಿಗೆ ಗೊತ್ತಿದೆ’ ಎಂದು ತಿಳಿಸಿದರು.

ಮುಲಾಯಂ ಸೊಸೆ ಡಿಂಪಲ್ ಕಣಕ್ಕೆ

ಪ್ರಜಾವಾಣಿ ವಾರ್ತೆ

ಲಖನೌ: ಮುಲಾಯಂ ಸಿಂಗ್ ಯಾದವ್ ಅವರ ನಿಧನದಿಂದ ತೆರವಾಗಿರುವ ಉತ್ತರ ಪ್ರದೇಶದ ಮೇನ್‌ಪುರಿ ಲೋಕಸಭಾ ಕ್ಷೇತ್ರದಿಂದ ಅವರ ಸೊಸೆ, ಅಖಿಲೇಶ್ ಯಾದವ್ ಅವರ ಪತ್ನಿ ಡಿಂಪಲ್ ಯಾದವ್ ಅವರಿಗೆ ಸಮಾಜವಾದಿ ಪಕ್ಷ ಟಿಕೆಟ್ ನೀಡಿದೆ.

ಡಿಸೆಂಬರ್ 5ಕ್ಕೆ ಈ ಕ್ಷೇತ್ರಕ್ಕೆ ಉಪ ಚುನಾವಣೆ ನಡೆಯಲಿದೆ. ಅದೇ ದಿನದಂದು ವಿವಿಧ ರಾಜ್ಯಗಳ 5 ವಿಧಾನಸಭಾ ಕ್ಷೇತ್ರಗಳಿಗೂ ಉಪ ಚುನಾವಣೆ ನಿಗದಿಯಾಗಿದೆ. ಗುಜರಾತ್ ಹಾಗೂ ಹಿಮಾಚಲ ಪ್ರದೇಶ ಚುನಾಚವಣೆ ಫಲಿತಾಂಶ ಘೋಷಣೆಯಾಗುವ ಡಿಸೆಂಬರ್ 8 ರಂದೇ ಈ ಕ್ಷೇತ್ರದ ಫಲಿತಾಂಶವೂ ಹೊರ ಬೀಳಲಿದೆ.

ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಮುಲಾಯಂ ಸಿಂಗ್ ಯಾದವ್ ಅಕ್ಟೋಬರ್ 10 ರಂದು ಕೊನೆಯುಸಿರೆಳೆದಿದ್ದರು.

2019ರ ಲೋಕಸಭಾ ಚುನಾವಣೆಯಲ್ಲಿ ಮುಲಾಯಂ ಸಿಂಗ್ ಯಾದವ್ ಅವರು ಇಲ್ಲಿ 94,000 ಮತಗಳ ಅಂತರದಿಂದ ಜಯಗಳಿಸಿದ್ದರು. ಇದು ಅವರ ರಾಜಕೀಯ ಜೀವನದ ಅತಿ ಕಡಿಮೆ ಅಂತರದ ಗೆಲುವಾಗಿದೆ.

2014ರ ಚುನಾವಣೆಯಲ್ಲಿ 3.64 ಲಕ್ಷ ಮತಗಳ ಅಂತರದಿಂದ ಮುಲಾಯಂ ಸಿಂಗ್ ಗೆಲುವು ಸಾಧಿಸಿದ್ದರು.

ಬಾಳಿನ ಕನಕ ತೋರಣ

• ನಿಂಗಪ್ಪ ಮುದೇನೂರು



ಇಂದು ಕನಕದಾಸ ಜಯಂತಿ

‘**ತಲ್ಲಣಿಸದಿರು** ಕಂಡ್ಯ ತಾಳು ಮನವೇ ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ’ – ಎನ್ನುವ ಭರವಸೆಯ ಮಾತುಗಳನ್ನು ಆಡಿದವರು ಭಕ್ತ ಕನಕದಾಸರು. ಅವರು ವಿಜಯನಗರ ಸಾಮ್ರಾಜ್ಯದ ಆಸುಪಾಸಿನಲ್ಲಿದ್ದವರು. ಆ ಕಾಲದ ಪರಿಸರ ಮತ್ತು ಅವರು ಬೆಳೆದು ಬಂದ ಪರಿಸರಗಳ ಸಂಕೀರ್ಣತೆಯಲ್ಲಿ ಕನಕದಾಸರ ವ್ಯಕ್ತಿತ್ವ ಅರಳಿಕೊಂಡಿದೆ. ಯುದ್ಧದಿಂದ ಗಾಯಗೊಂಡ ಸಂದರ್ಭ ಅವರ ಬದುಕಿನ ಧ್ಯಾನವನ್ನೇ ಬದಲಿಸಿತು. ಲೌಕಿಕದ ಮನುಷ್ಯ ಅಲೌಕಿಗೊಳ್ಳುವ ಸಂತದಾರಿಗಳು ಇಲ್ಲಿಯೇ ಗೋಚರಿಸಿದವು. ಇತಿಹಾಸವನ್ನು ಸಾಹಿತ್ಯದ ಪಠ್ಯದಲ್ಲಿರಿಸಿ ಅದಕ್ಕೊಂದು ಸೌಂದರ್ಯಪ್ರಜ್ಞೆ ಮೂಡಿಸುವ ಕಲೆ ಕನಕದಾಸರಿಗೆ ದಕ್ಕಿದೆ. ಅದಕ್ಕೆ ಉದಾಹರಣೆ ಅವರ ‘ಮೋಹನತರಂಗಿಣಿ’. ನಳಚರಿತ್ರೆ, ಹರಿಭಕ್ತಿಸಾರಗಳು ಕೂಡ ಅವರ ಸೃಜನಶೀಲ ಬದುಕಿನ ಧ್ಯಾನವೇ.

ಹಳ್ಳಿಯ ಒಬ್ಬ ದೇಸೀಹುಡುಗ ಕಾವ್ಯದ ಸೋಪಜ್ಞತೆಯನ್ನು ಭಕ್ತಿಯ ಮೂಲಕ ವಿಸ್ತರಿಸಿಕೊಂಡದ್ದು, ದೈವಮೂಲವನ್ನು ಸಾಮಾಜಿಕ ಸಂರಚನೆಯೊಳಗೆ ತಂದು ಸಮನ್ವಯಗೊಳಿಸಿದ್ದು, ಸಮಾಜದ ದುಃಖವನ್ನು ನಿವಾರಿಸಿಕೊಳ್ಳಲು ಹಾಡು–ಭಜನೆಗಳನ್ನು ರಚಿಸಿ ನಾಡು ಸುತ್ತುತ್ತಾ ಪ್ರೇಮವನ್ನು ಬಯಸಿದ್ದು – ಇವೆಲ್ಲವೂ ಅಪರೂಪದ ಸಂಗತಿಗಳು. ಕನಕದಾಸರ ಕಾವ್ಯಗಳಲ್ಲಿ ನಿಸರ್ಗ ಮತ್ತು ಭಕ್ತಿಯ ಪರಿಮಳ ಎದ್ದುಕಾಣುತ್ತದೆ. ತನ್ನ ನೆಲದ ಸ್ವಾಭಿಮಾನವನ್ನು, ಅಂತಃಸತ್ವವನ್ನು, ಅದರ ರುಚಿ–ಗಂಧವನ್ನು ಅನನ್ಯವಾಗಿ ಕಟ್ಟಿಕೊಟ್ಟದ್ದು ಅವರ ‘ರಾಮಧಾನ್ಯಚರಿತೆ’. ಅಲ್ಲಿ ಭತ್ತ ಮತ್ತು ರಾಗಿಯ ಸಂಘರ್ಷಗಳು ಏನೇ ಇರಲಿ; ಅವೆರಡೂ ಈ ನೆಲದ ದುಡಿಮೆಯಲ್ಲಿ, ಈ ನೆಲದ ಬೆವರಿನಲ್ಲಿ ಮೊಳಕೆ ಕಟ್ಟಿದ ಬೀಜದ ಕಾಳುಗಳೇ! ಇಂತಹ ನೆಲದ ಬೀಜದಲ್ಲಿ, ಅದರ ತತ್ವದಲ್ಲಿ ಭೇದವಿರಬಾರದು ಎನ್ನುವುದನ್ನು ಅವರ ಕಾವ್ಯತತ್ವ ಮಾನ್ಯಮಾಡಿದೆ. ಅಯೋಧ್ಯೆಯ ರಾಮನು ಈ ನೆಲದ ದುಡಿಯುವ ವರ್ಗದ ರಾಗಿಯ ಸವಿಯನ್ನು ಉಂಡು ಸಂಭ್ರಮಿಸಿದ ಬಗೆ, ಅದನ್ನು ಕನಕದಾಸರು ವರ್ಣಿಸುವ ಬಗೆ, ಉತ್ತರದ ಎಲ್ಲ ಶಕ್ತಿಗಳ ಜೊತೆ ಕನ್ನಡದ ನೆಲದ ಸಹಬಾಳ್ವೆಯ ಗಟ್ಟಿತನವನ್ನು, ಸುಕ್ಕಾಗದ ಜೀವನಪ್ರೀತಿಯನ್ನು ತೋರುವುದು – ಇವು ಇದು ಕನಕದಾಸರ ವ್ಯಕ್ತಿತ್ವ.

ಕನಕದಾಸರ ವ್ಯಕ್ತಿತದ ಭಾಗವೇ ಅವರ ಬರಹಗಳು. ಅವರ ಕೀರ್ತನೆಗಳಲ್ಲಿ ಸಮಾಜವನ್ನು ಕಟ್ಟುವ ಕ್ರಿಯೆಯಿದೆ. ಕುಟುಂಬವನ್ನು ಸೌಹಾರ್ದಗೊಳಿಸುವ ನೀತಿ ಇದೆ. ನಾಡನ್ನು ನಿಸರ್ಗದತ್ತವಾಗಿ ತೆಗೆದುಕೊಂಡು ಹೋಗುವ ಕೌಶಲ ಇದೆ. ಅವರ ಮುಂಡಿಗೆಗಳಂತೂ ನಮ್ಮ ಜ್ಞಾನವನ್ನು ಸದಾ ಎಚ್ಚರಿಸುತ್ತವೆ. ಇಂತಹ ಕವಿ, ಸಂತ ಬಾಳಿ ಬದುಕಿದ ನಾಡು ಸದಾ ಸೌಹಾರ್ದದ ತೋಟವಾಗಿ ಇರಬೇಕಾದದ್ದು, ನಾವುಗಳು ನಾಡನ್ನು ಕೂಡಿ ಕಾಪಿಟ್ಟು ಹಸನು ಮಾಡಬೇಕಾದದ್ದು ನಮ್ಮ ಕರ್ತವ್ಯ. ಕನಕದಾಸರು ಮೋಹನತರಂಗಿಣಿಯಲ್ಲಿ ಕಾಣಿಸುವ ಹಲಸು, ನೇರಳೆ, ದಾಳಿಂಬೆ, ಖರ್ಜೂರ, ದ್ರಾಕ್ಷಿ, ಕಬ್ಬು, ತೆಂಗು, ಪಪ್ಪಾಯಿ, ಕಿತ್ತಳೆ, ಮಾವು, ಬಾಳೆ, ನಿಂಬೆ ಮತ್ತು ಜಾಜಿ, ಮಲ್ಲಿಗೆ, ಸುರಹೊನ್ನೆ, ಸಂಪಿಗೆ, ಪಾದರಿ, ಸುರಗಿ, ಸೇವಂತಿಯ ತೋಟಗಳನ್ನು ಈ ಮಣ್ಣು ಸದಾ ಕಾಪಾಡಿಕೊಳ್ಳಬೇಕಿದೆ.

ಕವಿಯಾದವನ ಯೋಗವೆಂದರೆ ಅವನ ಕಾವ್ಯದಲ್ಲಿ ಸದಾ ನಿಸರ್ಗವೊಂದು ಕೂಡಿಕೊಂಡಿರುವುದು. ಅದನ್ನು ಬುದ್ಧನಲ್ಲೂ ನೋಡುತ್ತೇವೆ; ಪಂಪನ ಕಾವ್ಯದಲ್ಲೂ ಕಾಣುತ್ತೇವೆ; ಹರಿಹರನ ರಗಳೆಗಳಲ್ಲೂ ಭಕ್ತಿಯೊಂದಿಗೆ ನಿಸರ್ಗವೇ ಕಾಣುತ್ತದೆ. ಕವಿ ನಿಸರ್ಗದಲ್ಲಿ ಬದುಕುತ್ತಾನೆ. ಅಲ್ಲಿ ಸೃಜನಶೀಲತೆಯೂ ಬದುಕುತ್ತದೆ. ಸಂತನು ಸದಾ ನಿಸರ್ಗದ ಜೊತೆ ಸಂಬಂಧವನ್ನಿಟ್ಟುಕೊಂಡೇ ಸಾಗುವಂಥವನು. ಪ್ರಕೃತಿಯೇ ದೇವರೆಂದು ಭಾವಿಸಿದ ಲೋಕದೃಷ್ಟಿಯೇ ಕನ್ನಡ ಕಾವ್ಯತತ್ವವಾಗಿ ನಮ್ಮ ಸೃಜನಶೀಲ ಬಾಳನ್ನು ಬಾಳಿಸುತ್ತಲೇ ಬಂದಿದೆ. ನಾವು ಉಳಿಯುವ, ಬದುಕಿ ಬಾಳುವ ನುಡಿಯ ಪರಿಸರವನ್ನು ಮಲಿನವಾಗದಂತೆ ಕಾಪಾಡುವ ಜವಾಬ್ದಾರಿಯೂ ನಮ್ಮಮೇಲಿದೆ. ನಮ್ಮೆಲ್ಲ ಸಂತರು ನುಡಿಯನ್ನು ಮಲಿನವಾಗದಂತೆ ತಮ್ಮ ಅರಿವಿನಿಂದ, ಗುರುತ್ವದ ಶಕ್ತಿಯಿಂದ ಶುಚಿಗೊಳಿಸಿದರು. ನಾವು ಈ ನುಡಿಗಳನ್ನು ಹಿಡಿದು ಮನದ ತೋರಣಗಳನ್ನು ಕಟ್ಟುವ, ಸಮಾಜವನ್ನು ಅಂದಗೊಳಿಸುವ ಪ್ರಯತ್ನವನ್ನು ಮಾಡುತ್ತಲೇ ಇರಬೇಕಾಗುತ್ತದೆ.

ಗುಜರಾತ್: ಮೊರ್ಬಿ ಶಾಸಕ, ಮಾಜಿ ಸಿ.ಎಂ ರೂಪಾಣಿಗೆ ಟಿಕೆಟ್ ಇಲ್ಲ

ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

ಅಹಮದಾಬಾದ್ (ಪಿಟಿಐ): ಗುಜರಾತ್ ವಿಧಾನಸಭೆ ಚುನಾವಣೆಗೆ ಬಿಜೆಪಿ ತನ್ನ 160 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಗುರುವಾರ ಬಿಡುಗಡೆ ಮಾಡಿದೆ. 38 ಹಾಲಿ ಶಾಸಕರಿಗೆ ಟಿಕೆಟ್ ನಿರಾಕರಿಸಲಾಗಿದೆ. ಇವರಲ್ಲಿ ಐವರು ಸಚಿವರು ಮತ್ತು ಸೇತುವೆ ಕುಸಿತದ ದುರಂತ ಸಂಭವಿಸಿದ ಮೊರ್ಬಿ ಶಾಸಕ ಕಿರಣ್ ಪಟೇಲ್ ಅವರು ಸೇರಿದ್ದಾರೆ.

2012 ಮತ್ತು 2017ರಲ್ಲಿ ಭುಜ್ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದ ಗುಜರಾತ್ ವಿಧಾನಸಭೆ ಸ್ಪೀಕರ್ ನಿಂಬಾಬೆನ್ ಆಚಾರ್ಯ ಅವರಿಗೂ ಟಿಕೆಟ್ ನಿರಾಕರಿಸಲಾಗಿದೆ. ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾಣಿ ಮತ್ತು ಅವರ ಸಂಪುಟದಲ್ಲಿ ಶಾಸಕರಾಗಿದ್ದ ಏಳು ಶಾಸಕರಿಗೂ ಟಿಕೆಟ್ ನೀಡಿಲ್ಲ.

ಕಾಂಗ್ರೆಸ್ ತೊರೆದವರಿಗೆ ಟಿಕೆಟ್: ಕಳೆದ 5 ವರ್ಷದಲ್ಲಿ ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆ ಆಗಿರುವ ಹಲವು ಶಾಸಕರಿಗೆ ಬಿಜೆಪಿ ಈ ಬಾರಿ ಟಿಕೆಟ್ ನೀಡಿದೆ.

ಪಾಟಿದಾರ್ ಆಂದೋಲನದ ನಾಯಕ ಹಾರ್ದಿಕ್ ಪಟೇಲ್ ಅವರು ತಮ್ಮ ತವರು ಕ್ಷೇತ್ರವಾದ ವಿರಾಮಗಾಮ್‌ನಿಂದ ಸ್ಪರ್ಧಿಸಲಿದ್ದಾರೆ. ಕ್ರಿಕೆಟಿಗ ರವೀಂದ್ರ ಸಿಂಹ ಜಡೇಜಾ ಅವರ ಪತ್ನಿ ರಿವಾಬಾ ಜಡೇಜಾ ಉತ್ತರ ಜಾಮ್‌ನಗರ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ.

ಹಾಲಿ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ಘಟ್ಲೋಡಿಯಾ ದಿಂದಲೇ ಕಣಕ್ಕಿಳಿಯಲಿದ್ದಾರೆ. 182 ಸದಸ್ಯರ ಗುಜರಾತ್ ವಿಧಾನಸಭೆಗೆ ಡಿಸೆಂಬರ್ 1 ಮತ್ತು ಡಿಸೆಂಬರ್ 5 ರಂದು ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದ್ದು, 8 ರಂದು ಮತ ಎಣಿಕೆ ನಡೆಯಲಿದೆ. ಡಿ. 1ರಂದು ಮೊದಲ ಹಂತದಲ್ಲಿ ಮತದಾನ ನಡೆಯುವ 89 ಸ್ಥಾನ ಪೈಕಿ 84 ಅಭ್ಯರ್ಥಿಗಳು ಮತ್ತು ಡಿ. 5ರಂದು ಮತದಾನ ನಡೆಯಲಿರುವ 93 ಕ್ಷೇತ್ರಗಳ 76 ಅಭ್ಯರ್ಥಿಗಳ ಹೆಸರನ್ನು ಪಟ್ಟಿಯಲ್ಲಿ ಹೆಸರಿಸಲಾಗಿದೆ.

ಪಟ್ಟಿಯಲ್ಲಿ 69 ಹಾಲಿ ಶಾಸಕರು ಇದ್ದಾರೆ. ಹೆಚ್ಚಿನ ಸಂಖ್ಯೆಯ ಹಾಲಿ ಶಾಸಕರನ್ನು ಕೈಬಿಡಲಾಗಿದೆ. ಪಟ್ಟಿಯಲ್ಲಿ 14 ಮಹಿಳೆಯರೂ ಇದ್ದಾರೆ.

2 ದಿನದಲ್ಲಿ ಕಾಂಗ್ರೆಸ್ ತೊರೆದ ಮೂವರು ಶಾಸಕರು

ವಿಧಾನಸಭೆ ಚುನಾವಣೆ ನಡುವೆಯೇ ಗುಜರಾತ್‌ನ ದಾಹೋದ್ ಜಿಲ್ಲೆಯ ಜಲೋದ್ ಕ್ಷೇತ್ರದ ಕಾಂಗ್ರೆಸ್ ಶಾಸಕ ಭವೇಶ್ ಕತಾರಾ ಅವರು ಗುರುವಾರ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಕಾಂಗ್ರೆಸ್‌ನ ಮೋಹನ್‌ಸಿನ್ಹ್ ರಾಥ್ವಾ ಮತ್ತು ಭಗವಾನ್ ಬರಾದ್ ಈ ಹಿಂದೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಕತಾರಾ ಅವರು ಬುಧವಾರ ರಾತ್ರಿ ವಿಧಾನಸಭಾಧ್ಯಕ್ಷರ ನಿವಾಸಕ್ಕೆ ತೆರಳಿ ರಾಜೀನಾಮೆ ಸಲ್ಲಿಸಿದ್ದಾರೆ.

ಕತಾರಾ ರಾಜೀನಾಮೆಯೊಂದಿಗೆ ಎರಡು ದಿನದಲ್ಲಿ ಮೂವರು ಶಾಸಕರು ಕಾಂಗ್ರೆಸ್ ತೊರೆದಂತಾಗಿದೆ.

ಬಿಜೆಪಿಯು ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸುತ್ತಿರುವ ಹೊತ್ತಿನಲ್ಲೇ ಕತಾರಾ ಅವರೂ ರಾಜೀನಾಮೆ ನೀಡಿದ್ದಾರೆ. ಬಹುತೇಕ ಗುರುವಾರ ಅವರು ಬಿಜೆಪಿ ಸೇರುವ ಸಾಧ್ಯತೆ ಇದೆ.

ಈ ಹಿಂದೆ, ರಾಥ್ವಾ ಮತ್ತು ಬರಾದ್ ಕೂಡ ಕಾಂಗ್ರೆಸ್ ಮತ್ತು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿ ಸೇರಿದ್ದರು.

ವಿಆರ್‌ಎಸ್ ಕೇಳಿದ ಅಧಿಕಾರಿ: ಕರ್ನಾಟಕ ವಿಧಾನಸಭೆಗೆ ಸ್ಪರ್ಧೆ?

ಪ್ರಜಾವಾಣಿ ವಾರ್ತೆ



ಶಂಭು ಕಲ್ಲೋಳಿಕರ್

ಚೆನ್ನೈ: ತಮಿಳುನಾಡಿನ ಸಮಾಜ ಕಲ್ಯಾಣ ಮತ್ತು ಪೌಷ್ಟಿಕ ಆಹಾರ ಕಾರ್ಯಕ್ರಮ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಹಿರಿಯ ಐಎಎಸ್ ಅಧಿಕಾರಿ, ಕರ್ನಾಟಕ ಮೂಲದ ಶಂಭು ಕಲ್ಲೋಳಿಕರ ಸ್ವಯಂ ನಿವೃತ್ತಿ ಕೋರಿ ಅರ್ಜಿ ಸಲ್ಲಿಸಿದ್ದಾರೆ. ಅವರು, ಬೆಳಗಾವಿ ಜಿಲ್ಲೆಯ ಕ್ಷೇತ್ರವೊಂದರಿಂದ ಮುಂದಿನ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ನಿರೀಕ್ಷೆಯಿದೆ.

ಬೆಳಗಾವಿ ಜಿಲ್ಲೆ ರಾಯಭಾಗ ಮೂಲದ ಇವರು, 1991ನೇ ಕೇಡರ್‌ನ ಐಎಎಸ್ ಅಧಿಕಾರಿ. ಕೇಂದ್ರ ಮತ್ತು ರಾಜ್ಯದಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಸರ್ಕಾರದ ಮೂಲಗಳ ಪ್ರಕಾರ, ‘ಸ್ವಯಂನಿವೃತ್ತಿ ಕೋರಿ ಇವರು ಸಲ್ಲಿಸಿರುವ ಅರ್ಜಿಯನ್ನು ಪರಿಗಣಿಸಲಾಗಿದೆ’. ಈ ಕುರಿತ ಪ್ರತಿಕ್ರಿಯೆಗೆ ಅಧಿಕಾರಿಯನ್ನು ಸಂಪರ್ಕಿಸಲು ಯತ್ನಿಸಲಾಯಿತು. ಆದರೆ, ಅವರು ಲಭ್ಯರಾಗಲಿಲ್ಲ.

ಮೂಲಗಳ ಪ್ರಕಾರ, ಕಲ್ಲೋಳಿಕರ ಅವರು ಕಾಂಗ್ರೆಸ್ ಪಕ್ಷದ ಕರ್ನಾಟಕದ ಮುಖಂಡರ ಜೊತೆಗೆ ಹಲವು ತಿಂಗಳಿಂದ ಸಂಪರ್ಕದಲ್ಲಿದ್ದಾರೆ. ಕರ್ತವ್ಯದಿಂದ ಬಿಡುಗಡೆ ಆಗುತ್ತಿದ್ದಂತೆ ಕಾಂಗ್ರೆಸ್‌ಗೆ ಸೇರ್ಪಡೆಯಾಗುವುದು ನಿಶ್ಚಿತವಾಗಿದೆ.

‘ಅವರು ಬೆಳಗಾವಿ ಜಿಲ್ಲೆ ಕ್ಷೇತ್ರವೊಂದರಿಂದ ಚುನಾವಣೆಗೆ ಸ್ಪರ್ಧಿಸಲು ಬಯಸಿದ್ದಾರೆ. ಶೀಘ್ರವೇ ಪಕ್ಷಕ್ಕೆ ಸೇರುವರು’ ಎಂದು ಕಾಂಗ್ರೆಸ್ ಪಕ್ಷದ ಮುಖಂಡರೊಬ್ಬರು ಪ್ರತಿಕ್ರಿಯಿಸಿದ್ದು, ಮತ್ತೊಬ್ಬ ಮುಖಂಡರೂ ಈ ವಿಷಯವನ್ನು ದೃಢಪಡಿಸಿದ್ದಾರೆ.

ರಾಜಕಾರಣ ಪ್ರವೇಶಿಸಲು ಐಎಎಸ್ ಹುದ್ದೆಗೆ ರಾಜೀನಾಮೆ ನೀಡುತ್ತಿರುವ ತಮಿಳುನಾಡಿನ ಮೂರನೇ ಐಎಎಸ್ ಅಧಿಕಾರಿ ಇವರು. ಈ ಹಿಂದೆ 2020ರಲ್ಲಿ ವಿಆರ್‌ಎಸ್ ಪಡೆದಿದ್ದ ಸಂತೋಷ್ ಬಾಬು ಅವರು ಕಮಲಹಾಸನ್ ನೇತೃತ್ವದ ಮಕ್ಕಳ್ ನೀಧಿ ಮಯ್ಯಂಗೆ (ಎಂಎನ್‌ಎಂ) ಸೇರಿದ್ದು, ಚೆನ್ನೈನ ವೇಲಚೆರಿ ಕ್ಷೇತ್ರದಿಂದ ಸ್ಪರ್ಧಿಸಿ, ಸೋತಿದ್ದರು. ಈ ವರ್ಷದ ಆರಂಭದಲ್ಲಿ ಜಗಮೋಹನ್ ಸಿಂಗ್ ರಾಜು ಅವರು ಸ್ವಯಂ ನಿವೃತ್ತಿ ಪಡೆದಿದ್ದು, ಅಮೃತಸರ ಪೂರ್ವ ಕ್ಷೇತ್ರದಿಂದ ಬಿಜೆಪಿಯಿಂದ ಸ್ಪರ್ಧಿಸಲು ಬಯಸಿದ್ದರು.

ಐಎಎಸ್ ಅಧಿಕಾರಿಯಾಗಿ ಪಶ್ಚಿಮ ಬಂಗಾಳದಲ್ಲಿ ಸೇವೆಯನ್ನು ಆರಂಭಿಸಿದ್ದ ಕಲ್ಲೋಳಿಕರ ಅವರು, ತಮಿಳುನಾಡಿನಲ್ಲಿ ಪುಡುಕ್ಕೊಟ್ಟಾಯಿ ಮತ್ತು ತಿರುವರೂರ್ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಯಾಗಿದ್ದರು. ಮೀನುಗಾರಿಕೆ ಇಲಾಖೆ ಆಯುಕ್ತರು, ತಮಿಳುನಾಡು ಏಡ್ಸ್ ನಿಯಂತ್ರಣ ಸೊಸೈಟಿಯ ಯೋಜನಾ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದರು.

ಕರ್ನಾಟಕ ಕೇಡರ್‌ನ ಐಎಎಸ್ ಅಧಿಕಾರಿಯಾಗಿದ್ದ ಸಸಿಕಾಂತ್ ಸೆಂಥಿಲ್ ಮತ್ತು ಐಪಿಎಸ್ ಅಧಿಕಾರಿಯಾಗಿದ್ದ ಕೆ.ಅಣ್ಣಾಮಲೈ ಅವರು ಈ ಹಿಂದೆ ಸ್ವಯಂ ನಿವೃತ್ತಿ ಪಡೆದ ಬಳಿಕ ತಮಿಳುನಾಡಿನಲ್ಲಿ ಈಗ ರಾಜಕಾರಣಿಗಳಾಗಿದ್ದಾರೆ. ಸೆಂಥಿಲ್ ಅವರು ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದರೆ, ಅಣ್ಣಾಮಲೈ ಅವರು ಬಿಜೆಪಿ ತಮಿಳುನಾಡು ಘಟಕದ ಅಧ್ಯಕ್ಷರಾಗಿದ್ದಾರೆ.

ಲಾಲುಗೆ ಪುತ್ರಿಯಿಂದ ಮೂತ್ರಪಿಂಡ ದಾನ

ನವದೆಹಲಿ: ಅನಾರೋಗ್ಯಕ್ಕೆ ಒಳಗಾಗಿರುವ ರಾಷ್ಟ್ರೀಯ ಜನತಾ ದಳದ(ಆರ್‌ಜೆಡಿ) ವರಿಷ್ಠ ಲಾಲು ಪ್ರಸಾದ್ ಅವರಿಗೆ ಸಿಂಗಪುರದಲ್ಲಿರುವ ಮಗಳು ರೋಶಿನಿ ಆಚಾರ್ಯ ಕಿಡ್ನಿ ದಾನ ಮಾಡಲಿದ್ದಾರೆ ಎಂದು ಅವರ ಕುಟುಂಬದ ಆಪ್ತರು ತಿಳಿಸಿದ್ದಾರೆ.

ಸಿಂಗಪುರದಲ್ಲಿ ಕಿಡ್ನಿ ಸಮಸ್ಯೆಗೆ ಚಿಕಿತ್ಸೆ ಪಡೆದಿದ್ದ ಲಾಲು, ಕಳೆದ ತಿಂಗಳು ಸ್ವದೇಶಕ್ಕೆ ವಾಪಸ್ ಆಗಿದ್ದರು.

ಆರೋಗ್ಯದ ಹಲವು ಸಮಸ್ಯೆಗಳನ್ನು ಎದುರಿಸುತ್ತಿರುವ ಆರ್‌ಜೆಡಿ ಅಧ್ಯಕ್ಷರಿಗೆ ಕಿಡ್ನಿ ಕಸಿ ಮಾಡಿಸಿಕೊಳ್ಳಲು ವೈದ್ಯರು ಸೂಚಿಸಿದ್ದಾರೆ.

ಸಿಂಗಪುರದಲ್ಲಿರುವ ಅವರ ಮಗಳು ರೋಶಿನಿ ಆಚಾರ್ಯ, ತಮ್ಮ ತಂದೆಗಾಗಿ ಮೂತ್ರಪಿಂಡ ನೀಡಲು ಮುಂದೆ ಬಂದಿದ್ದಾರೆ ಎಂದು ಕುಟುಂಬ ಸದಸ್ಯರೊಬ್ಬರು ಪಿಟಿಐಗೆ ತಿಳಿಸಿದ್ದಾರೆ.

ಮೇವು ಹಗರಣದಲ್ಲಿ ಶಿಕ್ಷೆಗೆ ಒಳಗಾಗಿರುವ ಲಾಲು ಪ್ರಸಾದ್ ಸದ್ಯ ಜಾಮೀನಿನ ಮೇಲೆ ಹೊರಗಿದ್ದಾರೆ. ಸದ್ಯ, ದೆಹಲಿಯಲ್ಲಿರುವ ಅವರು, ದೆಹಲಿ ಮತ್ತು ರಾಂಚಿ ಆಸ್ಪತ್ರೆಗಳಲ್ಲಿ ಈ ಹಿಂದೆ ಮೂತ್ರಪಿಂಡ ಸಮಸ್ಯೆಗೆ ಚಿಕಿತ್ಸೆ ಪಡೆದಿದ್ದರು.



‘ಡೇ ಅಟ್ ಸೀ’ ಮುಂಬೈ ಕರಾವಳಿಯಲ್ಲಿ ವೆಸ್ಟರ್ನ್ ನೇವಲ್ ಕಮಾಂಡ್ ಆಯೋಜಿಸಿದ ‘ಡೇ ಅಟ್ ಸೀ’ ಕಾರ್ಯಕ್ರಮದಲ್ಲಿ ಭಾರತೀಯ ನೌಕಾಪಡೆಯ ಹಡಗುಗಳಲ್ಲಿನ ದೈನಂದಿನ ನೌಕಾ ಕಾರ್ಯಾಚರಣೆಗಳನ್ನು ಗಣ್ಯರು ವೀಕ್ಷಿಸಿದರು —ಪಿಟಿಐ ಚಿತ್ರ

‘ಹವಾಮಾನ ಬದಲಾವಣೆಯ ಪರಿಣಾಮ ಎದುರಿಸಲು ಹಣಕಾಸಿನ ನೆರವು ಹೆಚ್ಚಿಸಿ’

ನವದೆಹಲಿ (ಪಿಟಿಐ): ‘ಹವಾಮಾನ ಬದಲಾವಣೆಗೆ ಹೊಂದಿಕೊಳ್ಳಲು ಹಾಗೂ ಅದರಿಂದ ಉಂಟಾಗುವ ದುಷ್ಪರಿಣಾಮಗಳನ್ನು ಎದುರಿಸುವುದಕ್ಕಾಗಿ ಅಭಿವೃದ್ಧಿಶೀಲ ರಾಷ್ಟ್ರಗಳು ಮಾಡುತ್ತಿರುವ ವೆಚ್ಚ ಗಣನೀಯವಾಗಿ ಏರಿದೆ. ಹೀಗಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಈ ದೇಶಗಳಿಗೆ ನೀಡಲು ಉದ್ದೇಶಿಸಿರುವ ‘ಹವಾಮಾನ ಹಣಕಾಸು’ ನೆರವನ್ನು ಹೆಚ್ಚಳ ಮಾಡಬೇಕು. ಶ್ರೀಮಂತ ದೇಶಗಳು ಇದಕ್ಕೆ ಪೂರಕವಾಗಿ ಸಂಪನ್ಮೂಲಗಳನ್ನು ಕ್ರೋಡೀಕರಿಸಬೇಕು’ ಎಂದು ಭಾರತವು ವಿಶ್ವಸಂಸ್ಥೆಯ ಹವಾಮಾನ ಶೃಂಗಸಭೆಯಲ್ಲಿ (ಸಿಒಪಿ27) ಒತ್ತಿ ಹೇಳಿದೆ.

‘ಹವಾಮಾನ ಬದಲಾವಣೆಯಿಂದ ಉಂಟಾಗುವ ಪರಿಣಾಮಗಳನ್ನು ಎದುರಿಸುವುದಕ್ಕಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ 2020ರವರೆಗೂ ಪ್ರತಿವರ್ಷ ಒಟ್ಟು 100 ಬಿಲಿಯನ್ ಅಮೆರಿಕನ್ ಡಾಲರ್ (ಸುಮಾರು ₹8.16 ಲಕ್ಷ ಕೋಟಿ) ನೆರವು ಒದಗಿಸುವುದಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು 2009ರಲ್ಲಿ ಕೋಪನ್‌ಹೇಗನ್‌ನಲ್ಲಿ ನಡೆದಿದ್ದ ಶೃಂಗಸಭೆಯಲ್ಲಿ ಹೇಳಿದ್ದವು. ಆದರೆ ಇಷ್ಟು ಮೊತ್ತದ ನೆರವು ಒದಗಿಸಲು ಈ ರಾಷ್ಟ್ರಗಳು ಪದೇ ಪದೇ ವಿಫಲವಾಗಿವೆ’ ಎಂದು ಭಾರತದ ನಿಯೋಗ ಸಭೆಗೆ ತಿಳಿಸಿದೆ.

‘ಅಭಿವೃದ್ಧಿಶೀಲ ರಾಷ್ಟ್ರಗಳು ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಸಮರ್ಥವಾಗಿ ಎದುರಿಸಲು ಅಗತ್ಯವಿರುವ ಹಣಕಾಸು ಹಾಗೂ ತಾಂತ್ರಿಕ ಬೆಂಬಲವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ನೀಡಬೇಕು. ವಾತಾವರಣದಲ್ಲಿ ಇಂಗಾಲವು ಅಧಿಕ ಪ್ರಮಾಣದಲ್ಲಿ ಶೇಖರಣೆಯಾಗುತ್ತಿರುವುದರಲ್ಲಿ ಶ್ರೀಮಂತ ರಾಷ್ಟ್ರಗಳ ಕೊಡುಗೆ ಹೆಚ್ಚಿದೆ’ ಎಂದೂ ಭಾರತ ಹೇಳಿದೆ.

‘ಹವಾಮಾನ ಬದಲಾವಣೆಯ ಮಹಾತ್ವಕಾಂಕ್ಷಿ ಗುರಿಗಳನ್ನು ಸಾಧಿಸಬೇಕಾದರೆ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಹಣಕಾಸಿನ ನೆರವು ಅತ್ಯಗತ್ಯ’ ಎಂದೂ ಪ್ರತಿಪಾದಿಸಿದೆ.

ಜಾಗತಿಕ ಹವಾಮಾನ ಹಣಕಾಸಿಗೆ ಸಂಬಂಧಿಸಿದಂತೆ ಹೊಸದಾಗಿ ಸಿದ್ಧಪಡಿಸಲಾಗಿರುವ ‘ನ್ಯೂ ಕಲೆಕ್ಟೀವ್ ಕ್ವಾಂಟಿಫೈಯ್ಡ್ ಗೋಲ್ ಆನ್ ಕ್ಲೈಮೇಟ್ ಫಿನಾನ್ಸ್‌ಗೆ (ಎನ್‌ಸಿಕ್ಯೂಜಿ) ಒಪ್ಪಿಗೆ ಸೂಚಿಸುವಂತೆ ಭಾರತ ಸೇರಿದಂತೆ ಇತರೆ ಅಭಿವೃದ್ಧಿಶೀಲ ರಾಷ್ಟ್ರಗಳು ಶ್ರೀಮಂತ ರಾಷ್ಟ್ರಗಳನ್ನು ಒತ್ತಾಯಿಸಿವೆ.

‘ಹೊಸ ಅರ್ಜಿಗಳು ವಿಚಾರಣಾ ಪಟ್ಟಿಗೆ ಸ್ವಯಂಚಾಲಿತವಾಗಿಯೇ ಸೇರ್ಪಡೆ’

ನವದೆಹಲಿ(ಪಿಟಿಐ) : ‘ಸುಪ್ರೀಂ ಕೋರ್ಟ್‌ಗೆ ಸಲ್ಲಿಕೆಯಾಗುವ ಹೊಸ ಅರ್ಜಿಗಳು ಸಂಬಂಧಪಟ್ಟ ನ್ಯಾಯಪೀಠಗಳ ಮುಂದೆ ಸ್ವಯಂಚಾಲಿತವಾಗಿಯೇ ವಿಚಾರಣಾ ಪಟ್ಟಿಗೆ ಸೇರ್ಪಡೆಯಾಗಲಿವೆ’ ಎಂದು ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಗುರುವಾರ ಹೇಳಿದ್ದಾರೆ.

ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಹಾಗೂ ಜೆ.ಬಿ.ಪಾರ್ದಿವಾಲಾ ಅವರನ್ನು ಒಳಗೊಂಡ ನ್ಯಾಯಪೀಠದ ನೇತೃತ್ವ ವಹಿಸಿದ್ದ ಅವರು, ‘ಈ ಕುರಿತು ರಜಿಸ್ಟ್ರಾರ್ ಅವರಿಗೆ ನಿರ್ದೇಶನ ನೀಡಿದ್ದೇನೆ’ ಎಂದು ಹೇಳಿದರು.

‘ಸೋಮವಾರ, ಮಂಗಳವಾರ ಹಾಗೂ ಬುಧವಾರದಂದು ಸಲ್ಲಿಕೆಯಾಗಿರುವ ಅರ್ಜಿಗಳು, ಬರುವ ಸೋಮವಾರದಿಂದಲೇ ವಿಚಾರಣೆ ಪಟ್ಟಿಗೆ ಸೇರಲಿವೆ ಹಾಗೂ ಈ ಪ್ರಕ್ರಿಯೆ ಸ್ವಯಂಚಾಲಿತವಾಗಿಯೇ ನಡೆಯಲಿದೆ’ ಎಂದು ಮುಖ್ಯ ನ್ಯಾಯಮೂರ್ತಿ ಅವರು ಹೇಳಿದರು.

‘ಸಿಸೋಡಿಯಾಗೆ ಅಬಕಾರಿ ನೀತಿ ಕಡತದ ಪ್ರತಿ ನೀಡಲು ನಕಾರ’

ನವದೆಹಲಿ (ಪಿಟಿಐ): 2021–22ರ ಅಬಕಾರಿ ನೀತಿಗೆ ಸಂಬಂಧಿಸಿದ ಕಡತಗಳ ಪ್ರತಿ ಒದಗಿಸಬೇಕು ಎಂಬ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯ ಅವರ ಬೇಡಿಕೆಯನ್ನು ದೆಹಲಿಯ ಕಾನೂನು ಇಲಾಖೆಯು ತಳ್ಳಿ ಹಾಕಿದೆ ಎಂದು ಮೂಲಗಳು ತಿಳಿಸಿವೆ.

ಈ ಕುರಿತು ಟ್ವೀಟ್ ಮಾಡಿರುವ ಸಿಸೋಡಿಯ ಅವರು, ‘ತನಿಖಾ ಸಂಸ್ಥೆಗಳು ಗಮನ ಬೇರೆ ಕಡೆ ಸೆಳೆಯುವ ಬದಲಿಗೆ ಇದುವರೆಗಿನ ತನಿಖೆಯಿಂದ ಏನು ಪತ್ತೆಯಾಗಿದೆ ಎಂಬುದನ್ನು ಬಹಿರಂಗಪಡಿಸಬೇಕು’ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮೂಲಗಳ ಪ್ರಕಾರ, ಸಿಸೋಡಿಯ ಅವರು ತಮ್ಮ ವಿಶೇಷಾಧಿಕಾರಿಗೆ ಕಡತಗಳ ಜೆರಾಕ್ಸ್ ಪ್ರತಿ ಹಾಗೂ ಸ್ಕ್ಯಾನ್ ಮಾಡಲಾದ ಕಾಪಿಯನ್ನು ಪೆನ್‌ಡ್ರೈವ್‌ನಲ್ಲಿ ತರುವಂತೆ ಸೂಚಿಸಿದ್ದರು. ಅಬಕಾರಿ ಇಲಾಖೆ ಸದ್ಯ ಕಡತಗಳನ್ನು ತನಿಖೆಗಾಗಿ ಸಿಬಿಐಗೆ ಒಪ್ಪಿಸಿದೆ. ಅಲ್ಲದೆ, ಪ್ರತಿ ಒದಗಿಸುವ ಕುರಿತು ಕಾನೂನು ಇಲಾಖೆಯ ಅನುಮತಿಯನ್ನು ಕೋರಿತ್ತು ಎಂದು ಹೇಳಲಾಗಿದೆ.

‘ಪ್ರಕರಣದ ತನಿಖೆ ವಿವಿಧ ಹಂತದಲ್ಲಿದೆ. ಸಿಸೋಡಿಯ ಅವರೇ ಮೊದಲ ಆರೋಪಿ ಎನ್ನಲಾಗುತ್ತಿರುವ ಹಿನ್ನೆಲೆಯಲ್ಲಿ ನಿಯಮಗಳ ಅನುಸಾರ ಪ್ರತಿಯನ್ನು ಪಡೆಯುವ ಸಚಿವರ ಅಧಿಕಾರ ಇಲ್ಲಿ ಊರ್ಜಿತವಾಗದು ಎಂದು ಇಲಾಖೆ ಪ್ರತಿಕ್ರಿಯಿಸಿದೆ’ ಎನ್ನಲಾಗಿದೆ.

ಅವ್ಯವಹಾರ: ಇಬ್ಬರ ಬಂಧನ

ನವದೆಹಲಿ: ದೆಹಲಿಯ ಅಬಕಾರಿ ನೀತಿಯಲ್ಲಿ ನಡೆದಿದೆ ಎನ್ನಲಾದ ಹಣ ಅಕ್ರಮ ವರ್ಗಾವಣೆ ಮೊಕದ್ದಮೆಗೆ ಸಂಬಂಧಿಸಿ ಅರಬಿಂದೊ ಫಾರ್ಮಾದ ನಿರ್ದೇಶಕರೊಬ್ಬರು ಮತ್ತು ಪೆರ್ನಾಡ್ ರಿಚರ್ಡ್ ಎಂಬ ಮದ್ಯ ವ್ಯವಹಾರ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕರೊಬ್ಬರನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಬುಧವಾರ ಬಂಧಿಸಿದೆ.

ಅರಬಿಂದೊ ಫಾರ್ಮಾದ ಪಿ. ಶರತ್ ಚಂದ್ರ ರೆಡ್ಡಿ ಮತ್ತು ಪೆನ್ರಾಡ್ ರಿಚರ್ಡ್‌ನ ಬೆನಾಯ್ ಬಾಬು ಅವರು ವಿಚಾರಣೆ ವೇಳೆ ಸಮರ್ಪಕ ಉತ್ತರ ನೀಡಿರಲಿಲ್ಲ ಎಂಬ ಕಾರಣ ಅವರನ್ನು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿ(ಪಿಎಂಎಲ್‌ಎ) ಬಂಧಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ದೆಹಲಿ ಅಬಕಾರಿ ನೀತಿ ರೂಪಿಸುವ ವೇಳೆ ರೆಡ್ಡಿ ಮತ್ತು ಬಾಬು ಕೂಡಾ ಸರ್ಕಾರಿ ಅಧಿಕಾರಿಗಳ ಜೊತೆ ಇದ್ದರು. ಪರವಾನಗಿ ಹರಾಜಿನ ಬೆಲೆ ನಿಗದಿಪಡಿಸುವಲ್ಲಿ ರೆಡ್ಡಿ ಪ್ರಮುಖ ಪಾತ್ರ ಹೊಂದಿದ್ದರು. ಬಾಬು ಕೂಡ ಅದರ ಭಾಗವಾಗಿದ್ದರು ಎಂದು ಇ.ಡಿ ಅಧಿಕಾರಿಗಳು ಆರೋಪಿಸಿದ್ದಾರೆ.

ದೆಹಲಿಯ ಅಬಕಾರಿ ನೀತಿ ಹಗರಣದ ವಿಚಾರಣೆಯನ್ನು ಇ.ಡಿ ನಡೆಸುತ್ತಿದ್ದು, ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರು ಈ ಮೊಕದ್ದಮೆಯ ಪ್ರಮುಖ ಆರೋಪಿಯಾಗಿದ್ದಾರೆ.

ಕುಲಾಧಿಪತಿ ಸ್ಥಾನ: ರಾಜ್ಯಪಾಲರ ಪದಚ್ಯುತಿ

ತಿರುವನಂತಪುರ: ಕೇರಳದ ಸಂಸ್ಕೃತಿ ವ್ಯವಹಾರ ಇಲಾಖೆಯ ಅಧೀನದಲ್ಲಿ ಬರುವ ಕೇರಳ ಕಲಾಮಂಡಲಂ ಡೀಮ್ಡ್ ವಿ.ವಿಯ ಕುಲಾಧಿಪತಿ ಸ್ಥಾನದಿಂದ ರಾಜ್ಯಪಾಲರನ್ನು ಪದಚ್ಯುತಿಗೊಳಿಸಿ ಸರ್ಕಾರ ಗುರುವಾರ ನಿರ್ಧಾರ ಕೈಗೊಂಡಿದೆ.

ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಣಿ ಜಾರ್ಜ್ ಅವರು ಈ ಕುರಿತು ಆದೇಶ ಹೊರಡಿಸಿದ್ದಾರೆ. ಕಲೆ ಮತ್ತು ಸಂಸ್ಕೃತಿ ಕ್ಷೇತ್ರದ ಪ್ರಮುಖ ಸಾಧಕರೊಬ್ಬರನ್ನು ಕುಲಾಧಿಪತಿಯಾಗಿ ನೇಮಿಸುವ ಸಂಬಂಧ ನಿಯಮಗಳಿಗೂ ತಿದ್ದುಪಡಿ ತರಲಾಗಿದೆ.

ಇದು, ಡೀಮ್ಡ್ ವಿಶ್ವವಿದ್ಯಾಲಯ ಆಗಿರುವುದರಿಂದ ಈ ನಿರ್ಧಾರಕ್ಕೆ ರಾಜ್ಯಪಾಲರ ಅನುಮೋದನೆ ಅನಗತ್ಯ ಎಂದು ಮೂಲಗಳು ತಿಳಿಸಿವೆ.

ಗೌತಮ್ ನವ್ಲಾಖಾ ಗೃಹ ಬಂಧನಕ್ಕೆ ‘ಸುಪ್ರೀಂ’ ಅವಕಾಶ



ನವದೆಹಲಿ (ಪಿಟಿಐ): ಎಲ್ಗಾರ್ ಪರಿಷದ್–ಮಾವೋವಾದಿ ಸಂಪರ್ಕ ಪ್ರಕರಣದಲ್ಲಿ ಜೈಲಿನಲ್ಲಿರುವ ಸಾಮಾಜಿಕ ಕಾರ್ಯಕರ್ತ ಗೌತಮ್ ನವ್ಲಾಖಾ ಅವರನ್ನು ಗೃಹ ಬಂಧನದಲ್ಲಿರಿಸಲು ಗುರುವಾರ ಅನುಮತಿ ನೀಡಿರುವ ಸುಪ್ರೀಂ ಕೋರ್ಟ್, ವೈದ್ಯಕೀಯ ವರದಿ ತಿರಸ್ಕರಿಸಲು ಯಾವುದೇ ಕಾರಣವಿಲ್ಲ ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಮತ್ತು ಹೃಷಿಕೇಶ್ ರಾಯ್ ಅವರ ಪೀಠ 70 ವರ್ಷದ ಗೌತಮ್ ಅವರನ್ನು ಮುಂಬೈನಲ್ಲಿ ಒಂದು ತಿಂಗಳು ಗೃಹಬಂಧನದಲ್ಲಿರಿಸುವ ಆದೇಶವನ್ನು 48 ಗಂಟೆಗಳ ಒಳಗೆ ಜಾರಿಗೆ ತರಬೇಕು ಎಂದು ಹೇಳಿದೆ.

ಪೊಲೀಸ್ ಸಿಬ್ಬಂದಿ ಲಭ್ಯವಿರುವಂತೆ ಮಾಡಲು ವೆಚ್ಚವಾಗಿ ಅಂದಾಜು ₹ 2.4 ಲಕ್ಷ ಠೇವಣಿ ಇಡುವಂತೆ ನವ್ಲಾಖಾಗೆ ಎನ್‌ಐಎ ನಿರ್ದೇಶನ ನೀಡಿದೆ.


ಗೃಹಬಂಧನ ಅವಧಿಯಲ್ಲಿ ಕಂಪ್ಯೂಟರ್ ಮತ್ತು ಇಂಟರ್‌ನೆಟ್ ಬಳಸಲು ಅನುಮತಿ ನೀಡಿಲ್ಲ. ಟಿ.ವಿ ವೀಕ್ಷಣೆ ಮತ್ತು ದಿನಪತ್ರಿಕೆ ಓದಲು ಅವಕಾಶ ನೀಡಲಾಗಿದೆ. ಮುಂಬೈ ತೊರೆಯುವಂತಿಲ್ಲ ಹಾಗೂ ಸಾಕ್ಷಿಗಳ ಮೇಲೆ ಪ್ರಭಾವ ಬೀರಲು ಯಾವುದೇ ರೀತಿಯಲ್ಲಿ ಪ್ರಯತ್ನಿಸುವಂತಿಲ್ಲ ಎಂದು ಕೋರ್ಟ್ ಹೇಳಿದೆ.

ಅರ್ಜಿದಾರರು ಎಲ್ಲಾ ಷರತ್ತುಗಳಿಗೆ ಬದ್ಧರಾಗಿರಬೇಕು. ನಿಯಮ ಉಲ್ಲಂಘಿಸಿದರೆ ಆದೇಶವನ್ನು ತಕ್ಷಣವೇ ರದ್ದುಗೊಳಿಸಬಹುದು ಎಂದು ತಿಳಿಸಿದೆ.

ಹಲವು ಅರ್ಜಿ ಸಲ್ಲಿಕೆ: ಎಲ್ಗಾರ್ ಪರಿಷದ್-ಮಾವೋವಾದಿ ಸಂಪರ್ಕ ಪ್ರಕರಣದ ಆರೋಪಿಗಳು ಜೈಲಿನಲ್ಲಿ ಸೌಲಭ್ಯಗಳ ಕೊರತೆ ಮತ್ತು ಅದಕ್ಕೆ ಪ್ರವೇಶ ನಿರಾಕರಿಸಿದ್ದಕ್ಕಾಗಿ ಹಲವಾರು ಅರ್ಜಿಗಳನ್ನು ಸಲ್ಲಿಸಿದ್ದಾರೆ.

ವೈದ್ಯಕೀಯ ಚಿಕಿತ್ಸೆ ಪಡೆಯುವುದರ ಜೊತೆಗೆ ಜೈಲಿನೊಳಗೆ ಪುಸ್ತಕಗಳು, ಕುರ್ಚಿಗಳು, ಕನ್ನಡಕ ಮತ್ತು ಸೊಳ್ಳೆ ಪರದೆಗಳನ್ನು ಪಡೆಯಲು ಅನುಮತಿಗಾಗಿ ಪದೇ ಪದೇ ನ್ಯಾಯಾಲಯಕ್ಕೆ ಮನವಿ ಮಾಡಿದ್ದಾರೆ.

ಷೇರುಪೇಟೆ ವಹಿವಾಟು 420



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,157
ಇಂದಿನ ಅಂತ್ಯ	18,028
▼	129
ದಿನದ ಕನಿಷ್ಠ	17,969

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹530
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹530

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹278-589
ದ್ವಿತಳಿ (ಬಿ.ವಿ)	₹333-813

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1500 (1510)
ಸೋಯಾ (ರಿಫೈನ್ಡ್)	₹1355 (1380)
ಸೂರ್ಯಕಾಂತಿ (ರಿಫೈನ್ಡ್)	₹1580 (1600)
ಪಾಮೋಲಿನ್	₹980 (1005)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹146.50
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹131

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹2000-2500
ಮಧ್ಯಮ	₹1200-2000
ಸಣ್ಣ	₹500-1200

ಹಬ್ಬದ ಬೇಡಿಕೆ: ಕಂಪನಿಗಳ ನಿವ್ವಳ ಲಾಭ ಏರಿಕೆ



ಬೆಂಗಳೂರು (ರಾಯಿಟರ್ಸ್): ₹ 818 ಕೋಟಿಗೂ ಹೆಚ್ಚಿನ ಮಾರುಕಟ್ಟೆ ಮೌಲ್ಯ ಹೊಂದಿರುವ ಭಾರತದ 191 ಕಂಪನಿಗಳ ಪೈಕಿ 118 ಕಂಪನಿಗಳ ನಿವ್ವಳ ಲಾಭವು ಎರಡನೇ ತ್ರೈಮಾಸಿಕದಲ್ಲಿ ಏರಿಕೆ ಆಗಿದೆ. ರಿಫಿನಿಟಿವ್ ಕಂಪನಿಯು ನೀಡಿರುವ ಅಂಕಿ–ಅಂಶಗಳ ಪ್ರಕಾರ, ಶೇಕಡ 90ರಷ್ಟು ಕಂಪನಿಗಳ ತ್ರೈಮಾಸಿಕ ವರಮಾನದಲ್ಲಿಯೂ ಏರಿಕೆ ಕಂಡುಬಂದಿದೆ.

ದೇಶವು ಎರಡು ವರ್ಷಗಳ ಬಳಿಕ ಕೋವಿಡ್ ನಿರ್ಬಂಧಗಳು ಇಲ್ಲದೇ ಹಬ್ಬದ ಋತುವನ್ನು ಆಚರಣೆ ಮಾಡಿರುವುದರಿಂದ ಉಡುಪುಗಳ ರಿಟೇಲ್ ಮಾರಾಟಗಾರರು, ರೆಸ್ಟೊರೆಂಟ್‌ಗಳು, ಬ್ಯಾಂಕ್‌ಗಳು, ನಿರ್ಮಾಣ ಕಂಪನಿಗಳ ಮಾರಾಟ ಹೆಚ್ಚಾಗಿದೆ.

ಬೆಲೆಯು ಗರಿಷ್ಠ ಮಟ್ಟದಲ್ಲಿ ಇದ್ದರೂ ಗ್ರಾಹಕರು ಆಹಾರ ಮತ್ತು ಇತರೆ ವಸ್ತುಗಳನ್ನು ಖರೀದಿಸಿದ್ದಾರೆ. ಹಬ್ಬದ ಋತುವಿನ ಬೇಡಿಕೆಯು ಕಂಪನಿಗಳ ತ್ರೈಮಾಸಿಕದ ಗಳಿಕೆ ಮೇಲೆ ಪ್ರಭಾವ ಬೀರಿದೆ ಎನ್ನುವುದನ್ನು ಅಲ್ಲಗಳೆಯುವಂತಿಲ್ಲ ಎಂದು ಕ್ಯಾಂಟಿಕೊ ರಿಸರ್ಚ್‌ನ ಅರ್ಥಶಾಸ್ತ್ರಜ್ಞ ವಿವೇಕ್ ಕುಮಾರ್ ಹೇಳಿದ್ದಾರೆ.

ಸರ್ಕಾರದ ಅಂಕಿ–ಅಂಶಗಳ ಪ್ರಕಾರ, ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ದೇಶದ ಬಂಡವಾಳ ವೆಚ್ಚವು ಕಳೆದ ವರ್ಷಕ್ಕಿಂತ ಶೇ 50ರಷ್ಟು ಹೆಚ್ಚಾಗಿ ₹ 3.43 ಲಕ್ಷ ಕೋಟಿಗೆ ತಲುಪಿದೆ.

ರೆಸ್ಟೊರೆಂಟ್‌ಗಳ ವರಮಾನವು ಕಳೆದ ವರ್ಷದ ಮಟ್ಟಕ್ಕೆ ಹೋಲಿಸಿದರೆ ಈ ಬಾರಿ ಶೇ 90ಕ್ಕೂ ಹೆಚ್ಚು ಏರಿಕೆ ಕಂಡಿದೆ. ಬಟ್ಟೆ, ವಿದ್ಯುತ್, ನಿರ್ಮಾಣ, ರಾಸಾಯನಿಕ, ಬ್ಯಾಂಕ್ ಮತ್ತು ಆಟೊ ಕಂಪನಿಗಳ ವರಮಾನವು ಹೆಚ್ಚಾಗಿದೆ ಎಂದು ರಿಫಿನಿಟಿವ್ ಮಾಹಿತಿ ನೀಡಿದೆ.

ರಾಯಭಾರ ಕಚೇರಿಗಳ ಮೂಲಕ ಬ್ರ್ಯಾಂಡಿಂಗ್: ಕೇಂದ್ರ

ಸಿರಿಧಾನ್ಯ ರಫ್ತು ಉತ್ತೇಜನಕ್ಕೆ ಕ್ರಮ

ನವದೆಹಲಿ (ಪಿಟಿಐ): ಸಿರಿಧಾನ್ಯಗಳ ರಫ್ತು ಉತ್ತೇಜನಕ್ಕೆ ಕೇಂದ್ರ ಸರ್ಕಾರವು ಬೇರೆ ಬೇರೆ ದೇಶಗಳಲ್ಲಿ ಭಾರತೀಯ ರಾಯಭಾರ ಕಚೇರಿಗಳ ನೆರವು ಪಡೆಯುವ ಯೋಜನೆ ರೂಪಿಸಿದೆ. ಈ ಯೋಜನೆಯ ಭಾಗವಾಗಿ ಕೇಂದ್ರವು, ಜಾಗತಿಕ ಮಟ್ಟದಲ್ಲಿ ರಿಟೇಲ್ ಸೂಪರ್‌ಮಾರ್ಕೆಟ್ ಹೊಂದಿರುವ ವಾಲ್‌ಮಾರ್ಟ್ ಹಾಗೂ ಕಾರುಫಾ ಕಂಪನಿಗಳ ನೆರವನ್ನೂ ಪಡೆಯಲಿದೆ.

ದೇಶಿ ಸಿರಿಧಾನ್ಯಗಳ ಬ್ರ್ಯಾಂಡಿಂಗ್ ಮತ್ತು ಪ್ರಚಾರ ಕಾರ್ಯಗಳಿಗೆ ವಿದೇಶಗಳಲ್ಲಿನ ರಾಯಭಾರ ಕಚೇರಿಗಳ ಸಹಾಯ ಪಡೆಯಲಾಗುತ್ತದೆ. ಸಿರಿಧಾನ್ಯಗಳನ್ನು ಖರೀದಿಸುವ ದೊಡ್ಡ ಅಂಗಡಿಗಳು, ಸೂಪರ್‌ಮಾರ್ಕೆಟ್‌ಗಳು, ಹೈಪರ್‌ಮಾರ್ಕೆಟ್‌ಗಳನ್ನು ಗುರುತಿಸಲು ಸೂಚಿಸಲಾಗುತ್ತದೆ.

ರಫ್ತು ಉತ್ತೇಜನಾ ಕಾರ್ಯತಂತ್ರದ ಭಾಗವಾಗಿ ಲುಲು ಸಮೂಹ,

ಮುಖ್ಯಾಂಶಗಳು

- ಪ್ರಮುಖ ಸೂಪರ್ ಮಾರ್ಕೆಟ್‌ಗಳ ಜೊತೆ ಒಪ್ಪಂದ
- ಸಿರಿಧಾನ್ಯ ಮಾರುಕಟ್ಟೆ ವಿಸ್ತರಿಸುವ ನಿರೀಕ್ಷೆ

ಕಾರುಫಾ, ಅಲ್ ಜಜೀರಾ, ಅಲ್ ಮಯ, ವಾಲ್ಮಾರ್ಟ್ ಕಂಪನಿಗಳ ಜೊತೆ ಒಪ್ಪಂದ ಮಾಡಿಕೊಂಡು, ಅವುಗಳಲ್ಲಿ ಸಿರಿಧಾನ್ಯಗಳು ಲಭ್ಯವಿರುವಂತೆ ಮಾಡಲಾಗುತ್ತದೆ ಎಂದು ವಾಣಿಜ್ಯ ಸಚಿವಾಲಯದ ಹೇಳಿಕೆ ತಿಳಿಸಿದೆ.

ಯಾವ ದೇಶಗಳಲ್ಲಿ ಸಿರಿಧಾನ್ಯಗಳ ಮಾರಾಟಕ್ಕೆ ಗಮನ ನೀಡಲಾಗುತ್ತದೆಯೋ ಆ ದೇಶಗಳ ಭಾರತದಲ್ಲಿನ ರಾಯಭಾರಿಗಳನ್ನು ಸಿರಿಧಾನ್ಯ ಆಧಾರಿತ ಉತ್ಪನ್ನಗಳ ಪ್ರದರ್ಶನಕ್ಕೆ ಆಹ್ವಾನಿಸಲಾಗುತ್ತದೆ. ಸಿರಿಧಾನ್ಯಗಳ ರಫ್ತು ಉತ್ತೇಜನ ಪ್ರಯತ್ನವು ಡಿಸೆಂಬರ್‌ನಿಂದ ಶುರುವಾಗಲಿದೆ.



ವಿಶ್ವ ಸಂಸ್ಥೆಯ ಸರ್ವಸದಸ್ಯರ ಸಭೆಯಲ್ಲಿ 2023ನೆಯ ಇಸವಿಯನ್ನು 'ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷ' ಎಂದು ಘೋಷಿಸಲಾಗಿದೆ. ಭಾರತದ ಸಿರಿಧಾನ್ಯಗಳನ್ನು ಮತ್ತು ಅವುಗಳ ಮೌಲ್ಯವರ್ಧಿತ ಉತ್ಪನ್ನಗಳನ್ನು ವಿಶ್ವದ ಎಲ್ಲೆಡೆ ಜನಪ್ರಿಯಗೊಳಿಸುವುದು ಕೇಂದ್ರದ ಉದ್ದೇಶ.

2023ರ ಗಲ್ಫ್ ಫುಡ್ ಕಾರ್ಯಕ್ರಮ, ಸೋಲ್ ಫುಡ್ ಆ್ಯಂಡ್ ಹೋಟೆಲ್ ಶೋ, ಸೌದಿ ಆ್ಯಗ್ರೊ ಫುಡ್, ಸಿಡ್ನಿಯ ಫೈನ್ ಫುಡ್ ಶೋ, ಬೆಲ್ಜಿಯಂ ಫುಡ್ ಆ್ಯಂಡ್ ಬೆವರೇಜಸ್ ಶೋ ಕಾರ್ಯಕ್ರಮಗಳಲ್ಲಿ ಸಿರಿಧಾನ್ಯಗಳು ಹಾಗೂ ಅವುಗಳ ಮೌಲ್ಯವರ್ಧಿತ ಉತ್ಪನ್ನಗಳನ್ನು ಪ್ರದರ್ಶಿಸುವ ಆಲೋಚನೆಯನ್ನು ಸಚಿವಾಲಯ ಹೊಂದಿದೆ.

2021–22ರಲ್ಲಿ ದೇಶವು ಒಟ್ಟು ₹ 278 ಕೋಟಿ ಮೊತ್ತದ ಸಿರಿಧಾನ್ಯ ಉತ್ಪನ್ನಗಳನ್ನು ರಫ್ತು ಮಾಡಿದೆ. 2025ರ ವೇಳೆಗೆ ಸಿರಿಧಾನ್ಯಗಳ ಮಾರುಕಟ್ಟೆಯು ₹ 97 ಸಾವಿರ ಕೋಟಿಗೆ ತಲುಪುವ ಅಂದಾಜು ಇದೆ. ಈಗ ಸಿರಿಧಾನ್ಯ ಮಾರುಕಟ್ಟೆ ಗಾತ್ರ ₹ 72 ಸಾವಿರ ಕೋಟಿ.

ಇಂಡೊನೇಷ್ಯಾ, ಬೆಲ್ಜಿಯಂ, ಜಪಾನ್, ಜರ್ಮನಿ, ಮೆಕ್ಸಿಕೊ, ಇಟಲಿ, ಅಮೆರಿಕ, ಬ್ರಿಟನ್, ಬ್ರೆಜಿಲ್ ಮತ್ತು ನೆದರ್ಲೆಂಡ್ಸ್ ದೇಶಗಳು ಸಿರಿಧಾನ್ಯಗಳನ್ನು ಆಮದು ಮಾಡಿಕೊಳ್ಳುವ ಪ್ರಮುಖ ದೇಶಗಳು.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 420 ಅಂಶ ಇಳಿಕೆ

ಮುಂಬೈ (ಪಿಟಿಐ): ಮಾರಾಟದ ಒತ್ತಡಕ್ಕೆ ಒಳಗಾಗಿ ದೇಶದ ಷೇರುಪೇಟೆಗಳ ವಹಿವಾಟು ಗುರುವಾರ ಇಳಿಕೆ ಕಂಡಿತು. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 420 ಅಂಶ ಇಳಿಕೆಯಾಗಿ 61 ಸಾವಿರಕ್ಕಿಂತ ಕಡಿಮೆ ಮಟ್ಟದಲ್ಲಿ ವಹಿವಾಟು ಅಂತ್ಯಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 129 ಅಂಶ ಇಳಿಕೆಯಾಗಿ 18,028 ಅಂಶಗಳಿಗೆ ತಲುಪಿತು.



ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಮಾರಾಟದ ಒತ್ತಡದ ಜೊತೆಗೆ ಮಹೀಂದ್ರ, ಬಜಾಜ್ ಫಿನ್‌ಸರ್ವ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳು ಮೌಲ್ಯ ಇಳಿಕೆ ಸಹ ವಹಿವಾಟಿನ ಮೇಲೆ ಪರಿಣಾಮ ಬೀರಿತು. ಎಕ್ಸಿಸ್ ಬ್ಯಾಂಕ್ ಷೇರು ಮೌಲ್ಯ ಶೇ 3.54ರಷ್ಟು ಗರಿಷ್ಠ ಇಳಿಕೆ ಕಂಡಿತು.

ಏಷ್ಯಾದಲ್ಲಿ, ಶಾಂಘೈ, ಟೋಕಿಯೊ, ಸೋಲ್ ಮತ್ತು ಹಾಂಗ್‌ಕಾಂಗ್ ಷೇರುಪೇಟೆಗಳ ವಹಿವಾಟು ಇಳಿಕೆ ಕಂಡಿತು. ಯುರೋಪ್‌ನ ಮಾರುಕಟ್ಟೆಗಳು ನಕಾರಾತ್ಮಕ ವಹಿವಾಟು ನಡೆಸಿದವು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 0.06ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 92.59 ಬ್ಯಾರಲ್‌ಗೆ ತಲುಪಿತು.

ಬೆಂಗಳೂರಿನಲ್ಲಿ ಜಿಯೊ 5ಜಿ ಶುರು

ಬೆಂಗಳೂರು: ರಿಲಯನ್ಸ್ ಜಿಯೊ ಕಂಪನಿಯು ಬೆಂಗಳೂರು ಮತ್ತು ಹೈದರಾಬಾದ್‌ನಲ್ಲಿ 5ಜಿ ಸೇವೆಗಳನ್ನು ಆರಂಭಿಸಿರುವುದಾಗಿ ಗುರುವಾರ ತಿಳಿಸಿದೆ.

ಜಿಯೊ ಕಂಪನಿಯು 5ಜಿ ಸೇವೆಗಳನ್ನು ಹಂತ ಹಂತವಾಗಿ ವಿಸ್ತರಿಸುತ್ತಿದೆ. ದೇಶದ ಆರು ನಗರಗಳಲ್ಲಿ 5ಜಿ ಸೇವೆಗಳು ಈಗಾಗಲೇ ಲಭ್ಯವಿದ್ದವು. ಈಗ ಅದು ಬೆಂಗಳೂರು ಹಾಗೂ ಹೈದರಾಬಾದ್‌ಗೂ ವಿಸ್ತರಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ಜಿಯೊ 5ಜಿ ಗ್ರಾಹಕರಿಗೆ 500 ಎಂಬಿಪಿಎಸ್‌ನಿಂದ 1 ಜಿಬಿಪಿಎಸ್‌ವರೆಗಿನ ವೇಗದ ಇಂಟರ್ನೆಟ್ ಸೇವೆ ಲಭ್ಯವಾಗುತ್ತಿದೆ. ಗ್ರಾಹಕರು ದೊಡ್ಡ ಪ್ರಮಾಣದಲ್ಲಿ ಡೇಟಾ ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಅದು ಹೇಳಿದೆ.

ಬೆಂಗಳೂರು ಹಾಗೂ ಹೈದರಾಬಾದ್‌ನ ಜಿಯೊ ಗ್ರಾಹಕರು 5ಜಿ ಸೇವೆ ಪಡೆಯಲು ಹೆಚ್ಚುವರಿ ಶುಲ್ಕ ಪಾವತಿಸಬೇಕಾಗಿಲ್ಲ.

ಹುಂಡೈನಿಂದ ಬ್ಯಾಟರಿ ಎಲೆಕ್ಟ್ರಿಕ್ ಪ್ಲಾಟ್‌ಫಾರಂ

ನವದೆಹಲಿ (ಪಿಟಿಐ): 'ಅಯೋನಿಕ್ 5' ಮಾದರಿಯ ಮೂಲಕ ದೇಶದಲ್ಲಿ ಬ್ಯಾಟರಿ ಚಾಲಿತ ಎಲೆಕ್ಟ್ರಿಕ್ ವಾಹನಗಳ ಪ್ಲಾಟ್‌ಫಾರಂ ಪರಿಚಯಿಸುವುದಾಗಿ ಹುಂಡೈ ಮೋಟರ್ ಇಂಡಿಯಾ ಕಂಪನಿ ಹೇಳಿದೆ.

ಎಲೆಕ್ಟ್ರಿಕ್ ಗ್ಲೋಬಲ್ ಮಾಡ್ಯುಲರ್ ಪ್ಲಾಟ್‌ಫಾರಂ (ಇ–ಜಿಎಂಪಿ) ಆಧರಿತ ಕಂಪನಿಯ ಮೊದಲ ಮಾದರಿ 'ಅಯೋನಿಕ್ 5' ಆಗಿದ್ದು, 2023ರ ಜನರಿಯಲ್ಲಿ ನಡೆಯಲಿರುವ ವಾಹನ ಮೇಳದಲ್ಲಿ ಪ್ರದರ್ಶನಗೊಳ್ಳಲಿದೆ.

ಭಾರತದಲ್ಲಿ ಹೊಸ ಕಾಲದ ಗ್ರಾಹಕರಿಗೆ ಹೊಸ ವರ್ಗದ ವಿದ್ಯುತ್ ವಾಹನಗಳನ್ನು ನೀಡಲು 'ಇ–ಜಿಎಂಪಿ' ಕಾರಣವಾಗಲಿದೆ ಎಂದು ಹುಂಡೈ ಮೋಟರ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಅನ್ಸು ಕಿಮ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

2028ರ ವೇಳೆಗೆ ಭಾರತದಲ್ಲಿ ಆರು ವಿದ್ಯುತ್ ವಾಹನ ಮಾದರಿಗಳನ್ನು ಪರಿಚಯಿಸಲು ₹ 4 ಸಾವಿರ ಕೋಟಿ ಹೂಡಿಕೆ ಮಾಡುವುದಾಗಿ ಕಂಪನಿಯು ಕಳೆದ ವರ್ಷ ಘೋಷಿಸಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		**ಸಾಗರ**		ತಟ್ಟಿಬೆಟ್ಟೆ	36009-38099
ಬಂಟ್ವಾಳ		ಬಿಳಿಗೋಟು	26399-30519	**ಶಿರಸಿ**	
ಕೋಕ	12500-25000	ಚಾಲಿ	34899-38019	ಬೆಟ್ಟೆ	33899-44699
ಹೊಸತು	27500-38000	ಕೋಕ	24699-33809	ಬಿಳಿಗೋಟು	17289-36300
ಹಳತು	48000-56000	ಕೆಂಪುಗೋಟು	18699-36319	ಚಾಲಿ	32139-42339
ಚಿತ್ರದುರ್ಗ		ರಾಶಿ	44809-47529	ರಾಶಿ	38629-46999
ಆಪಿ	45600-46000	ಸಿಪ್ಪೆಗೋಟು	14069-19700	**ಯಲ್ಲಾಪುರ**	
ಬೆಟ್ಟೆ	36129-36559	**ಶಿವಮೊಗ್ಗ**		ಬಿಳಿಗೋಟು	24899-33899
ಕೆಂಪುಗೋಟು	29119-29599	ಗೊರಬಲು	17259-36869	ಚಾಲಿ	35262-42399
ರಾಶಿ	45139-45569	ಹೊಸತು	44839-46979	ಕೋಕ	22699-30299
ಕಾರ್ಕಳ		ರಾಶಿ	44669-47799	ಕೆಂಪುಗೋಟು	
ಹೊಸತು	25000-38000	ಸರಕು	58359-80626		24899-34542
ಹಳತು	40000-55500	**ಸಿದ್ದಾಪುರ**		ರಾಶಿ	46319-52199
ಕುಮಟ		ಬಿಳಿಗೋಟು	27809-33899	**ಮುದ್ರೆಮನೆ ಕಾಫಿ (50ಕೆ.ಜಿಗೆ)**	
ಚಿಪ್ಪು	27699-33389	ಚಾಲಿ	37079-41099	ಎಪಿ	14300
ಕೋಕ	16201-32109	ಕೋಕ	24399-33699	ಎಸಿ	7000
ಹಳೆಚಾಲಿ	37299-42599	ಕೆಂಪುಗೋಟು	28699-31799	ಆರ್‌ಪಿ	8500
ಹೊಸಚಾಲಿ	28181-32279	ರಾಶಿ	42509-46209	ಆರ್‌ಸಿ	4530

ನಿಧನ



ಶ್ರೀ. ಬಿ.ವಿ. ದತ್ತಾತ್ರೇಯ

ಟೆಲಿಕಾಂ ಎಂಪ್ಲಾಯೀಸ್ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ, ಬೆಂಗಳೂರು-20 ಇದರ ಹಿರಿಯ ನಿರ್ದೇಶಕರಾಗಿ ಸುಮಾರು 38 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದ ಶ್ರೀ. ಬಿ. ವಿ. ದತ್ತಾತ್ರೇಯರವರು (68) ದಿನಾಂಕ: 10.11.2022 ರಂದು ಅನಾರೋಗ್ಯದಿಂದ ನಿಧನ ಹೊಂದಿದ್ದಾರೆ ಎಂದು ತಿಳಿಸಲು ವಿಷಾದಿಸುತ್ತೇವೆ.

ದಿನಾಂಕ: 11-11-2022 ರಂದು (ಶುಕ್ರವಾರ) ಮೈಸೂರು ರಸ್ತೆಯಲ್ಲಿರುವ ಟಿಂಬರ್‌ಯಾರ್ಡ್ ಟೆಲಿಕಾಂ ಬಡಾವಣೆಯಲ್ಲಿರುವ ಮನೆ ನಂ. 43 ಅವರ ಸ್ವಗೃಹದಲ್ಲಿ ಅಂತಿಮದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ.

ದು:ಖತಪ್ತರು

ಅಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು, ಹಾಗೂ ಸಿಬ್ಬಂದಿವರ್ಗ, ಟೆಲಿಕಾಂ ಎಂಪ್ಲಾಯೀಸ್ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ, ಬೆಂಗಳೂರು-20



ಜಗನ್ನಾಥ ದೇವಸ್ಥಾನಕ್ಕೆ ರಾಷ್ಟ್ರಪತಿ

ರಾಷ್ಟ್ರಪತಿ ದ್ರೌಪತಿ ಮುರ್ಮು ಅವರು ಪುರಿ ಜಗನ್ನಾಥ ದೇವಾಲಯಕ್ಕೆ ಭೇಟಿ ನೀಡಿದ ವೇಳೆ ಜನರತ್ತ ಕೈ ಬೀಸಿದರು. ಅವರ ಜತೆ ಪುತ್ರಿ ಇತಿಶ್ರೀ ಇದ್ದರು. ಸುಮಾರು 1 ಕಿಲೋ ಮೀಟರ್ ಕಾಲ್ನಡಿಗೆಯಲ್ಲೇ ಸಾಗಿ ದೇವರ ದರ್ಶನ ಪಡೆದು, ದೇಶದ ಒಳಿತಿಗಾಗಿ ಪ್ರಾರ್ಥಿಸಿದರು. ದೇವಸ್ಥಾನದಲ್ಲಿ ವರ್ಣಚಿತ್ರವನ್ನು ನೀಡಿ ಅವರಿಗೆ ಗೌರವ ಸಲ್ಲಿಸಲಾಯಿತು.

– ಪಿಟಿಐ ಚಿತ್ರ

'ನ್ಯಾಯಾಲಯಗಳು ಸಹಾನುಭೂತಿ ಹೊಂದಿರಬೇಕು'

ನವದೆಹಲಿ (ಪಿಟಿಐ): ನ್ಯಾಯಾಲಯಗಳು ಕೇವಲ ಕಡತಗಳು ಮತ್ತು ಆದೇಶಗಳ ಜೊತೆ ವ್ಯವಹರಿಸುವುದಿಲ್ಲ, ಅವು ಮಾನವರ ಜೊತೆಯೂ ವ್ಯವಹರಿಸುತ್ತವೆ. ಹಾಗಾಗಿ ಕಾನೂನು ಪಾಲನೆ ಜೊತೆ ಸೂಕ್ಷ್ಮತೆ ಮತ್ತು ಸಹಾನುಭೂತಿಯನ್ನೂ ನ್ಯಾಯಾಲಯಗಳು ಹೊಂದಿರಬೇಕು ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ಜೀವಾವಧಿ ಶಿಕ್ಷೆಗೆ ಒಳಗಾಗಿರುವ ಕೊಲೆ ಮೊಕದ್ದಮೆಯ ಅಪರಾಧಿಯೊಬ್ಬ ತನ್ನ ಕುಟುಂಬದ ಆಸ್ತಿ ವ್ಯವಹಾರವನ್ನು ಬಗೆಹರಿಸಲು ಮತ್ತು ಆತನ ತಾಯಿಯ ಸಾವಿನಿಂದ ಉಂಟಾಗಿದ್ದ ಮಾನಸಿಕ ಒತ್ತಡವನ್ನು ನಿಭಾಯಿಸಲು 2 ತಿಂಗಳು ಪೆರೋಲ್ ಮೇಲೆ ಬಿಡುಗಡೆ ಮಾಡಬೇಕು ಎಂದು ಅರ್ಜಿ ಸಲ್ಲಿಸಿದ್ದನು. ಜೈಲಿನಲ್ಲಿ ಆತನ ನಡುವಳಿಕೆ ಸರಿಯಿಲ್ಲ ಎಂಬ ಕಾರಣ ನೀಡಿ ದೆಹಲಿ ಸರ್ಕಾರ ಬೇಡಿಕೆಯನ್ನು ತಳ್ಳಿಹಾಕಿತ್ತು. ವಿಚಾರಣೆ ನಡೆಸಿದ ದೆಹಲಿ ಹೈಕೋರ್ಟ್ ನ್ಯಾಯಾಧೀಶೆ ಸ್ವರಣ ಕಾಂತಾ ಶರ್ಮ, ಅಪರಾಧಿಯನ್ನು 45 ದಿನಗಳ ಪೆರೋಲ್ ಮೇಲೆ ಬಿಡುಗಡೆ ಮಾಡುವಂತೆ ನಿರ್ದೇಶಿಸಿದ್ದಾರೆ.

ಜಾಕ್ವೆಲಿನ್ ಜಾಮೀನು ಆದೇಶ ಕಾಯ್ದಿರಿಸಿದ ಕೋರ್ಟ್

ನಟಿಯನ್ನು ಏಕೆ ಬಂಧಿಸಿಲ್ಲ: ಇ.ಡಿಗೆ ದೆಹಲಿ ನ್ಯಾಯಾಲಯ ಪ್ರಶ್ನೆ

ನವದೆಹಲಿ (ಪಿಟಿಐ): ವಂಚಕ ಸುಕೇಶ್ ಚಂದ್ರಶೇಖರ್ ಆರೋಪಿಯಾಗಿರುವ ₹ 200 ಕೋಟಿ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನಟಿ ಜಾಕ್ವೆಲಿನ್ ಫರ್ನಾಂಡಿಸ್ ವಿರುದ್ಧ ಲುಕ್ ಔಟ್ ನೋಟಿಸ್ ಹೊರಡಿಸಿದ್ದರೂ ಏಕೆ ಬಂಧಿಸಲಿಲ್ಲ ಎಂದು ದೆಹಲಿ ನ್ಯಾಯಾಲಯ ಶುಕ್ರವಾರ ಜಾರಿ ನಿರ್ದೇಶನಾಲಯ (ಇ.ಡಿ)ವನ್ನು ತರಾಟೆಗೆ ತೆಗೆದುಕೊಂಡಿದೆ.

ಬಂಧನ ವಿಷಯದಲ್ಲಿ ಮನಸೋ ಇಚ್ಛೆಯಾಗಿ ವರ್ತಿಸುವ ತನಿಖಾ ಸಂಸ್ಥೆಯ ಕಾರ್ಯವೈಖರಿಯನ್ನು ಇದೇ ವೇಳೆ ಪೀಠ ಟೀಕಿಸಿತು.

ಈ ಹಿಂದೆ ಜಾಕ್ವೆಲಿನ್ ಅವರಿಗೆ ಮಧ್ಯಂತರ ಜಾಮೀನು ನೀಡಿದ್ದ ವಿಶೇಷ ನ್ಯಾಯಾಧೀಶ ಶೈಲೇಂದ್ರ ಮಲಿಕ್, ಜಾಕ್ವೆಲಿನ್ ಪರ ವಕೀಲರು ಮತ್ತು ಇ.ಡಿ ಪರ ವಕೀಲರ ವಾದ-ಪ್ರತಿವಾದ ಆಲಿಸಿದ ನಂತರ ನಟಿಯ ಜಾಮೀನು ಅರ್ಜಿಯ ಆದೇಶವನ್ನು ಶುಕ್ರವಾರಕ್ಕೆ ಕಾಯ್ದಿರಿಸಿದರು.



ಜಾಕ್ವೆಲಿನ್

ಹಣದ ಕೊರತೆಯಿಲ್ಲದ ಕಾರಣ ಜಾಕ್ವೆಲಿನ್ ಸುಲಭವಾಗಿ ದೇಶದಿಂದ ಪರಾರಿಯಾಗಬಹುದು ಎಂದು ಸಂಸ್ಥೆ ಸಲ್ಲಿಸಿದ ಮನವಿ ವಿಚಾರಣೆ ನಡೆಸಿದ ನ್ಯಾಯಾಲಯ, ನಟಿಯನ್ನು ಇಲ್ಲಿಯವರೆಗೆ ಏಕೆ ಬಂಧಿಸಿಲ್ಲ ಎಂದು ಪ್ರಶ್ನಿಸಿತು.

ನಟಿ ದೇಶ ತೊರೆಯುವುದನ್ನು ತಡೆಯಲು ವಿಮಾನ ನಿಲ್ದಾಣಗಳಲ್ಲಿ ಲುಕ್ ಔಟ್ ನೋಟಿಸ್ (ಎಲ್‌ಒಸಿ) ಹೊರಡಿಸಲಾಗಿದೆ ಎಂದು ಇ.ಡಿ ತಿಳಿಸಿತು.

'ಎಲ್‌ಒಸಿ ನೀಡಿದ್ದರೂ ತನಿಖೆ ಸಮಯದಲ್ಲಿ ಜಾಕ್ವೆಲಿನ್ ಅವರನ್ನು ಏಕೆ ಬಂಧಿಸಿಲ್ಲ? ಇತರೆ ಆರೋಪಿಗಳು ಜೈಲಿನಲ್ಲಿದ್ದಾರೆ. ಮನಸೋ ಇಚ್ಛೆಯಾಗಿ ಯಾಕೆ ವರ್ತಿಸುತ್ತೀರಾ' ಎಂದು ತನಿಖಾ ಸಂಸ್ಥೆಯನ್ನು ಪೀಠ ಪ್ರಶ್ನಿಸಿದೆ.

ಈಗಾಗಲೇ ತನಿಖೆ ಪೂರ್ಣಗೊಂಡು ಚಾರ್ಜ್ ಶೀಟ್ ಸಲ್ಲಿಕೆ ಆಗಿರುವುದರಿಂದ ಕಸ್ಟಡಿ ಅಗತ್ಯವಿಲ್ಲ ಎಂದು ಆರೋಪಿ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

10–11-2022

ಜಾವಾ 70/80(ಹೊಸ)	11100-11150
ಜಾವಾ 80/90(ಹೊಸ)	10600-10650
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	9900-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1520)
ಒಂದು ವಾರದ ಡೆಲಿವರಿ	1505 (1515)
ಸೋಯಾ ಕಚ್ಚಾ	1342 (1350)
ಪಾಮ್ ವಾರದ ಡೆಲಿವರಿ	978 (1003)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,500 (51,350)
ಬೆಳ್ಳಿ ಕೆ.ಜಿ 61,400 (61,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸೌರ ವಿದ್ಯುತ್: ಇಂಧನ ವೆಚ್ಚದಲ್ಲಿ ₹ 34 ಸಾವಿರ ಕೋಟಿ ಉಳಿತಾಯ

ನವದೆಹಲಿ (ಪಿಟಿಐ): ಸೌರಶಕ್ತಿಯಿಂದ ವಿದ್ಯುತ್ ಉತ್ಪಾದನೆ ಮಾಡುವ ಮೂಲಕ ಭಾರತವು ಕಳೆದ ಜನವರಿಯಿಂದ ಜೂನ್ ವರೆಗಿನ ಅವಧಿಯಲ್ಲಿ ವಿದ್ಯುತ್ ಉತ್ಪಾದನೆಗೆ ತಗುಲಲಿದ್ದ ಇಂಧನದ ವೆಚ್ಚದಲ್ಲಿ ₹ 34 ಸಾವಿರ ಕೋಟಿಗೂ ಅಧಿಕ ಉಳಿತಾಯ ಮಾಡಿದೆ.

ಅಲ್ಲದೇ, ದೇಶದಲ್ಲಿ ವಿದ್ಯುತ್ ಉತ್ಪಾದನೆಗಾಗಿ ವ್ಯಯವಾಗಲಿದ್ದ 1.94 ಕೋಟಿ ಟನ್‌ಗಳಷ್ಟು ಕಲ್ಲಿದ್ದಲನ್ನು ಸಹ ಉಳಿತಾಯ ಮಾಡಲಾಗಿದೆ ಎಂದು ಗುರುವಾರ ಬಿಡುಗಡೆಯಾಗಿರುವ ವರದಿಯೊಂದರಲ್ಲಿ ಹೇಳಲಾಗಿದೆ.

ಇಂಧನ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಸಂಸ್ಥೆಗಳಾದ ಇಎಂಬಿಇಆರ್, ಸೆಂಟರ್ ಫಾರ್ ರಿಸರ್ಚ್ ಆನ್ ಎನರ್ಜಿ ಅಂಡ್ ಕ್ಲೀನ್ ಏರ್ ಹಾಗೂ ಇನ್‌ಸ್ಟಿಟ್ಯೂಟ್ ಫಾರ್ ಎನರ್ಜಿ ಎಕನಾಮಿಕ್ಸ್ ಅಂಡ್ ಫೈನಾನ್ಶಿಯಲ್ ಅನಲಿಸಿಸ್ (ಐಇಇಎಫ್‌ಎ), ಈ ವರದಿಯನ್ನು ಸಿದ್ಧಪಡಿಸಿವೆ.



ಸೌರಶಕ್ತಿ ಬಳಸಿ ವಿದ್ಯುತ್ ಉತ್ಪಾದನೆ ಕ್ಷೇತ್ರದಲ್ಲಿ ಕಳೆದ ದಶಕದಲ್ಲಿ ದೇಶದಲ್ಲಿ ಆಗಿರುವ ಪ್ರಗತಿಯನ್ನು ಸಹ ಈ ಸಂಸ್ಥೆಗಳು ವಿಶ್ಲೇಷಿಸಿವೆ. ಸೌರಶಕ್ತಿ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡಿರುವ ವಿಶ್ವದ 10 ದೇಶಗಳ ಪೈಕಿ 5 ಏಷ್ಯಾದಲ್ಲಿವೆ. ಭಾರತ, ಚೀನಾ, ಜಪಾನ್, ದಕ್ಷಿಣ ಕೊರಿಯಾ ಹಾಗೂ ವಿಯೆಟ್ನಾಂ ಈ ಸಾಧನೆ ಮಾಡಿವೆ ಎಂದೂ ವರದಿಯಲ್ಲಿ ವಿವರಿಸಲಾಗಿದೆ.

'ಭಾರತವು ನವೀಕರಿಸಬಹುದಾದ ಇಂಧನ ಮೂಲಗಳ ಬಳಕೆಯನ್ನು ಹೆಚ್ಚಿಸಿದೆ. ಇದರಿಂದಾಗಿ, ವಿದ್ಯುತ್ ಉತ್ಪಾದನೆಗೆ ತಗುಲುವ ವೆಚ್ಚ ತಗ್ಗುವ ಜೊತೆಗೆ, ಗ್ರಾಹಕರಿಗೂ ಹೊರೆ ಕಡಿಮೆಯಾಗಲಿದೆ' ಎಂದು ಐಇಇಎಫ್‌ಎ ನಿರ್ದೇಶಕಿ (ದಕ್ಷಿಣ ಏಷ್ಯಾ) ವಿಭೂತಿ ಗರ್ಗ್ ಹೇಳಿದ್ದಾರೆ.

ಸೆಮಿಫೈನಲ್: ಕಳಪೆ ಬೌಲಿಂಗ್‌ಗೆ ಬೆಲೆತೆತ್ತ ರೋಹಿತ್ ಬಳಗ; ಪ್ರಶಸ್ತಿ ಸುತ್ತಿಗೆ ಇಂಗ್ಲೆಂಡ್ ಲಗ್ಗೆ

ಭಾರತಕ್ಕೆ ಹೀನಾಯ ಸೋಲು

• ಆರ್. ಕೌಶಿಕ್

ಅಡಿಲೇಡ್: ಭಾರತ ತಂಡವು ಗುರುವಾರ ಅಡಿಲೇಡ್ ಓವಲ್ ಕ್ರೀಡಾಂಗಣದಲ್ಲಿ ಇಂಗ್ಲೆಂಡ್ ತಂಡದ ಆರ್ಭಟಕ್ಕೆ ಜರ್ಜರಿತವಾಯಿತು.

ಚಲನಶೀಲವಾಗಿರುವ ಟಿ20 ಕ್ರಿಕೆಟ್ ಕ್ಷೇತ್ರದ ವೇಗಕ್ಕೆ ಒಗ್ಗಿಕೊಳ್ಳಲು ವಿಫಲವಾದ ರೋಹಿತ್ ಪಡೆ ಸೋಲಿನ ಕಹಿಯುಂಡಿತು. ಅಚ್ಚುಕಟ್ಟಾದ ತಂತ್ರಗಾರಿಕೆಯೊಂದಿಗೆ ಆಡಿದ ಇಂಗ್ಲೆಂಡ್ ತಂಡವು ಭಾರತದ ಎದುರಿನ ಸೆಮಿಫೈನಲ್‌ನಲ್ಲಿ 10 ವಿಕೆಟ್‌ಗಳಿಂದ ಗೆದ್ದು, ಫೈನಲ್‌ಗೆ ಲಗ್ಗೆಯಿಟ್ಟಿತು. ಹೋದ ವರ್ಷದ ಟೂರ್ನಿಯಲ್ಲಿಯೂ ಭಾರತ ತಂಡವು ಪಾಕಿಸ್ತಾನ ಎದುರೂ ಹತ್ತು ವಿಕೆಟ್‌ಗಳಿಂದ ಸೋತಿತ್ತು.

ಬ್ಯಾಟರ್‌ಗಳ ಅಸ್ಥಿರತೆ, ಹೋರಾಟದ ಛಲವೇ ಇಲ್ಲದ ಬೌಲಿಂಗ್ ರೋಹಿತ್ ಬಳಗದ ಸೋಲಿಗೆ ಕಾರಣವಾದವು. ಈ ಹಿಂದೆ ಮಾಡಿದ ತಪ್ಪುಗಳಿಂದ ಕಲಿಯದ ಭಾರತ ಪಡೆಯು ದಂಡ ತೆರಬೇಕಾಯಿತು.

ಟಾಸ್ ಗೆದ್ದ ಬಟ್ಲರ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಾಗಲೇ ಆತ್ಮವಿಶ್ವಾಸದಲ್ಲಿದ್ದರು. ಬ್ಯಾಟಿಂಗ್ ಆರಂಭಿಸಿದ ಭಾರತದ ಆರಂಭಿಕ ಜೋಡಿ ರೋಹಿತ್ ಮತ್ತು ರಾಹುಲ್ ಯಥಾಪ್ರಕಾರ ಉತ್ತಮ ಆರಂಭ ನೀಡದೇ ನಿರ್ಗಮಿಸಿದರು. ಈ ಹಂತದಲ್ಲಿ ತಮ್ಮ ಮೇಲಿನ ವಿಶ್ವಾಸ ಉಳಿಸಿಕೊಂಡ ವಿರಾಟ್ ಕೊಹ್ಲಿ ಹಾಗೂ ಕೊನೆಯ ಐದು ಓವರ್‌ಗಳಲ್ಲಿ ಅಬ್ಬರಿಸಿದ ಹಾರ್ದಿಕ್ ಪಾಂಡ್ಯ ಅವರ ಅರ್ಧಶತಕಗಳ ಬಲದಿಂದ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 168 ರನ್ ಗಳಿಸಿತು.

ಭಾರತದ ಸತ್ವರಹಿತ ಬೌಲಿಂಗ್ ಅನ್ನು ಬಟ್ಲರ್ ಹಾಗೂ ಅಲೆಕ್ಸ್ ಜೋಡಿ ನಿರ್ದಯವಾಗಿ ದಂಡಿಸಿತು. ಇದರಿಂದಾಗಿ ಇನಿಂಗ್ಸ್‌ನಲ್ಲಿ ಇನ್ನೂ ನಾಲ್ಕು ಓವರ್‌ಗಳು ಬಾಕಿಯಿರುವಾಗಲೇ ಇಂಗ್ಲೆಂಡ್ ಜಯ ಗಳಿಸಿತು. ಕ್ರೀಡಾಂಗಣದಲ್ಲಿ ಸೇರಿದ್ದ 40,094 ಪ್ರೇಕ್ಷಕರು ಏಕಪಕ್ಷೀಯ ಫಲಿತಾಂಶಕ್ಕೆ ಸಾಕ್ಷಿಯಾದರು!


ಭುವನೇಶ್ವರ್ ಕುಮಾರ್ ಹಾಕಿದ ಮೊದಲ ಓವರ್‌ನಲ್ಲಿ ಮೂರು ಬೌಂಡರಿ ಬಾರಿಸಿದ ಬಟ್ಲರ್ ಉತ್ತಮ ಆರಂಭ ನೀಡಿದರು. ಇದರಿಂದ ಇನ್ನೊಂದು ಬದಿಯಲ್ಲಿದ್ದ ಅಲೆಕ್ಸ್ ಹೇಲ್ಸ್ ಕೂಡ ಆತ್ಮವಿಶ್ವಾಸ ಹೆಚ್ಚಿಸಿಕೊಂಡರು. ನಂತರ ಅವರ ಅಬ್ಬರಕ್ಕೆ ಭಾರತದ ಬೌಲಿಂಗ್ ಪಡೆ ಅಕ್ಷರಶಃ ತತ್ತರಿಸಿತು.

ಆದರೆ, ಭಾರತಕ್ಕೆ ಬ್ಯಾಟಿಂಗ್‌ನಲ್ಲಿ ಇಂತಹ ಆರಂಭ ಸಿಗಲಿಲ್ಲ. ರೋಹಿತ್ ಹಾಗೂ ರಾಹುಲ್ ಜೊತೆಯಾಟದಲ್ಲಿ ಬಂದಿದ್ದು 9 ರನ್ ಮಾತ್ರ. ಟೂರ್ನಿಯ ಆರು ಪಂದ್ಯಗಳ ಪೈಕಿ 27 ರನ್‌ಗಳ ಗರಿಷ್ಠ ಜೊತೆಯಾಟವೊಂದು ಇವರ ಹೆಸರಿನಲ್ಲಿದೆ. ಬಟ್ಲರ್ ಹಾಗೂ ಅಲೆಕ್ಸ್ ನ್ಯೂಜಿಲೆಂಡ್ ಹಾಗೂ ಶ್ರೀಲಂಕಾ ಎದುರಿನ ಪಂದ್ಯಗಳಲ್ಲಿಯೂ ಅರ್ಧಶತಕದ ಜೊತೆಯಾಟವಾಡಿದ್ದರು. ಇಲ್ಲಿ ಇಡೀ ಇನಿಂಗ್ಸ್ ಅನ್ನೇ ತಮ್ಮದಾಗಿಸಿಕೊಂಡರು.

ಮೊಹಮ್ಮದ್ ಶಮಿ ಹಾಕಿದ 16ನೇ ಓವರ್‌ನ ಕೊನೆಯ ಎಸೆತವನ್ನು ಬಟ್ಲರ್ ಸಿಕ್ಸರ್‌ಗೆತ್ತಿ ವಿಜಯೋತ್ಸವ ಆಚರಿಸಿದರು. ಭಾನುವಾರದ ಫೈನಲ್‌ನಲ್ಲಿ ಪಾಕಿಸ್ತಾನದ ಎದುರು ಭಾರತ ಆಡಬೇಕು ಎಂಬ ಅಸಂಖ್ಯಾತ ಅಭಿಮಾನಿಗಳ ಕನಸೂ ನುಚ್ಚುನೂರಾಯಿತು. 1992ರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿಯೂ ಪಾಕ್ ಮತ್ತು ಇಂಗ್ಲೆಂಡ್ ಮುಖಾಮುಖಿಯಾಗಿದ್ದವು. ಆಗ ಇಮ್ರಾನ್ ಖಾನ್ ನಾಯಕತ್ವದ ಪಾಕ್ ಚಾಂಪಿಯನ್ ಆಗಿತ್ತು. ಅಂದು ಆ ಪಂದ್ಯ ನಡೆದಿದ್ದ ಮೆಲ್ಬರ್ನ್‌ನಲ್ಲಿಯೇ ಈ ಬಾರಿಯೂ ಫೈನಲ್ ನಡೆಯಲಿದೆ.

ಈ ಪಂದ್ಯದಲ್ಲಿ ಭಾರತದ ಮಟ್ಟಿಗೆ ಕೊಹ್ಲಿ ಹಾಗೂ ಹಾರ್ದಿಕ್ ಇನಿಂಗ್ಸ್‌ಗಳಷ್ಟೇ ಒಳ್ಳೆಯ ನೆನಪುಗಳು. ಆರಂಭಿಕ ಜೋಡಿ ಹಾಗೂ ಸೂರ್ಯಕುಮಾರ್ ಯಾದವ್ ಅವರನ್ನು ಕಟ್ಟಿಹಾಕುವಲ್ಲಿ ಇಂಗ್ಲೆಂಡ್ ಬೌಲರ್‌ಗಳು ಯಶಸ್ವಿಯಾದರು. ಇದರಿಂದಾಗಿ ರನ್‌ಗಳಿಕೆ ವೇಗ ಕಡಿಮೆಯಾಯಿತು. ಕೊಹ್ಲಿ ಗಟ್ಟಿಯಾಗಿ ನಿಂತಿದ್ದರೂ ತಂಡದ ಮೊತ್ತ 15 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 100 ರನ್‌ಗಳಾಗಿತ್ತು. ಅಲ್ಲಿಯವರೆಗೂ ತಾಳ್ಮೆಯಿಂದಿದ್ದ ಹಾರ್ದಿಕ್ ಬೀಸಾಟವಾಡಿದರು. ಇದರಿಂದಾಗಿ ಕೊನೆಯ ಐದು ಓವರ್‌ಗಳಲ್ಲಿ 68 ರನ್‌ಗಳು ಹರಿದುಬಂದವು. ಹಾರ್ದಿಕ್ 33 ಎಸೆತಗಳಲ್ಲಿ ಅಜೇಯ 63 ರನ್ ಗಳಿಸಿದರು. ಅದರಲ್ಲಿ ಐದು ಸಿಕ್ಸರ್‌ಗಳಿದ್ದವು.





ಇಂಗ್ಲೆಂಡ್ ತಂಡದ ನಾಯಕ ಜೋಸ್ ಬಟ್ಲರ್ ವಿಜಯೋತ್ಸವ ಮತ್ತು ಸೋಲಿನ ಹತಾಶೆಯಲ್ಲಿ ಭಾರತದ ಮೊಹಮ್ಮದ್ ಶಮಿ (ಎಡ) ಸೋಲಿನ ನಂತರ ತಮ್ಮ ಮುಖದ ಮೇಲೆ ಕ್ಯಾಪ್ ಎಳೆದುಕೊಂಡು ಪೆವಿಲಿಯನ್‌ನತ್ತ ಮರಳುತ್ತಿರುವ ವಿರಾಟ್ ಕೊಹ್ಲಿ –ಎಎಫ್‌ಪಿ ಚಿತ್ರ

ವಿಕೆಟ್ ನಷ್ಟವಿಲ್ಲದೇ ಗುರಿ ಬೆನ್ನಟ್ಟಿ ಜಯಿಸಿದ್ದು (ಟಿ20 ಮಾದರಿ)

ಗುರಿ	ವಿಜಯಿ	ಎದುರಾಳಿ	ಸ್ಥಳ	ವರ್ಷ	ಜೊತೆಯಾಟ
200	ಪಾಕಿಸ್ತಾನ	ಇಂಗ್ಲೆಂಡ್	ಕರಾಚಿ	2022	ಬಾಬರ್–ರಿಜ್ವಾನ್
170	ನ್ಯೂಜಿಲೆಂಡ್	ಪಾಕಿಸ್ತಾನ	ಹ್ಯಾಮಿಲ್ಟನ್	2016	ಗಪ್ಟಿಲ್–ವಿಲಿಯಮ್ಸನ್
169	ಇಂಗ್ಲೆಂಡ್	ಭಾರತ	ಅಡಿಲೇಡ್	2022	ಬಟ್ಲರ್–ಅಲೆಕ್ಸ್

ಟಿ20 ವಿಶ್ವಕಪ್ ಟೂರ್ನಿಗಳಲ್ಲಿ ಗರಿಷ್ಠ ಜೊತೆಯಾಟ

ರನ್	ಜೋಡಿ	ದೇಶ	ಎದುರಾಳಿ	ವರ್ಷ
170*	ಬಟ್ಲರ್–ಅಲೆಕ್ಸ್	ಇಂಗ್ಲೆಂಡ್	ಭಾರತ	2022
168	ಡಿಕಾಕ್–ರೊಸೊ	ದ.ಆಫ್ರಿಕಾ	ಬಾಂಗ್ಲಾ	2022
166	ಜಯವರ್ಧನೆ–ಸಂಗಕ್ಕಾರ	ಶ್ರೀಲಂಕಾ	ವಿಂಡೀಸ್	2010
152*	ಬಾಬರ್–ರಿಜ್ವಾನ್	ಪಾಕಿಸ್ತಾನ	ಭಾರತ	2021

ಸ್ಕೋರ್ ಕಾರ್ಡ್

ಭಾರತ 6ಕ್ಕೆ 168 (20 ಓವರ್)

ರಾಹುಲ್ ಸಿ ಬಟ್ಲರ್ ಬಿ ವೋಕ್ಸ್ 5 (5 ಎ., 4X1), ರೋಹಿತ್ ಸಿ ಕರನ್ ಬಿ ಜೋರ್ಡಾನ್ 27 (28 ಎ., 4X4), ಕೊಹ್ಲಿ ಸಿ ರಶೀದ್ ಬಿ ಜೋರ್ಡಾನ್ 50 (40 ಎ., 4X4, 6X1), ಸೂರ್ಯಕುಮಾರ್ ಸಿ ಸಾಲ್ಟ್ ಬಿ ರಶೀದ್ 14 (10 ಎ., 4X1, 6X1), ಹಾರ್ದಿಕ್ ಹಿಟ್‌ವಿಕೆಟ್ ಬಿ ಜೋರ್ಡನ್ 63 (33 ಎ., 4X4, 6X), ಅಶ್ವಿನ್ ಔಟಾಗದೆ 0 (0 ಎ)

ಇತರೆ: 3 (ವೈಡ್ 3)

ವಿಕೆಟ್ ಪತನ: 1–9 (ಕೆ.ಎಲ್.ರಾಹುಲ್; 1.4), 2–56 (ರೋಹಿತ್ ಶರ್ಮಾ; 8.5), 3–75 (ಸೂರ್ಯಕುಮಾರ್ ಯಾದವ್; 11.2), 4–136 (ವಿರಾಟ್ ಕೊಹ್ಲಿ; 17.6), 5–158 (ರಿಷಭ್ ಪಂತ್; 19.3), 6–168 (ಹಾರ್ದಿಕ್ ಪಾಂಡ್ಯ; 19.6)

ಬೌಲಿಂಗ್: ಬೆನ್ ಸ್ಟೋಕ್ಸ್ 2–0–18–0, ಕ್ರಿಸ್ ವೋಕ್ಸ್ 3–0–24–1, ಸ್ಯಾಮ್ ಕರನ್ 4–0–42–0, ಆದಿಲ್ ರಶೀದ್ 4–0–20–1, ಲಿಯಾಮ್ ಲಿವಿಂಗ್‌ಸ್ಟೋನ್ 3–0–21–0, ಕ್ರಿಸ್ ಜೋರ್ಡಾನ್ 4–0–43–3

ಇಂಗ್ಲೆಂಡ್ ವಿಕೆಟ್ ನಷ್ಟವಿಲ್ಲದೆ 170 (16 ಓವರ್)

ಜೋಸ್ ಬಟ್ಲರ್ ಔಟಾಗದೆ 80 (49 ಎ., 4X9, 6X3), ಅಲೆಕ್ಸ್ ಹೇಲ್ಸ್ ಔಟಾಗದೆ 86 (47 ಎ., 4X4, 6X7)

ಇತರೆ: 4 (ವೈಡ್ 4)

ಬೌಲಿಂಗ್: ಭುವನೇಶ್ವರ್ ಕುಮಾರ್ 2–0–25–0, ಅರ್ಷದೀಪ್ ಸಿಂಗ್ 2–0–15–0, ಅಕ್ಷರ್ ಪಟೇಲ್ 4–0–30–0, ಮೊಹಮ್ಮದ್ ಶಮಿ 3–0–39–0, ಆರ್. ಅಶ್ವಿನ್ 2–0–27–0, ಹಾರ್ದಿಕ್ ಪಾಂಡ್ಯ 3–0–34–0

ಫಲಿತಾಂಶ: ಇಂಗ್ಲೆಂಡ್‌ಗೆ 10 ವಿಕೆಟ್ ಗೆಲುವು

ಕೊಹ್ಲಿ ನಾಲ್ಕು ಸಾವಿರ ರನ್

ಅಡಿಲೇಡ್: ಭಾರತ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ನಾಲ್ಕು ಸಾವಿರ ರನ್‌ಗಳ ಗಡಿ ದಾಟಿದ ಮೊದಲ ಆಟಗಾರನೆಂಬ ಹೆಗ್ಗಳಿಕೆಗೆ ಪಾತ್ರರಾದರು.

115 ಪಂದ್ಯಗಳನ್ನು ಆಡಿರುವ ವಿರಾಟ್ ಈ ಸಾಧನೆ ಮಾಡಿದ್ದಾರೆ. 2010ರಲ್ಲಿ ಅವರು ಪದಾರ್ಪಣೆ ಮಾಡಿದ್ದರು.

34 ವರ್ಷದ ಕೊಹ್ಲಿ ಗುರುವಾರ ಇಂಗ್ಲೆಂಡ್ ಎದುರಿನ ಸೆಮಿಫೈನಲ್‌ನಲ್ಲಿ ಅರ್ಧಶತಕ ಗಳಿಸಿದರು. ಟಿ20 ವಿಶ್ವಕಪ್ ಟೂರ್ನಿಗಳ ಮೂರು ಸೆಮಿಫೈನಲ್‌ಗಳಲ್ಲಿ ಅರ್ಧಶತಕ ಗಳಿಸಿದ ಮೊದಲ ಬ್ಯಾಟರ್ ಆದರು. ಅವರು 2014ರಲ್ಲಿ ಮೀರಪುರ್‌ನಲ್ಲಿ ದಕ್ಷಿಣ ಆಫ್ರಿಕಾ ಎದುರು ಅಜೇಯ 72 ಹಾಗೂ 2016ರಲ್ಲಿ ಮುಂಬೈನಲ್ಲಿ ವೆಸ್ಟ್ ಇಂಡೀಸ್ ಎದುರು ಅಜೇಯ 89 ರನ್‌ಗಳನ್ನು ಗಳಿಸಿದ್ದರು.

ಈ ಟೂರ್ನಿಯಲ್ಲಿ ಅವರು ಒಟ್ಟು ನಾಲ್ಕು ಅರ್ಧಶತಕಗಳನ್ನು ಹೊಡೆದರು. ಆರು ಪಂದ್ಯಗಳಿಂದ ಒಟ್ಟು 296 ರನ್ ಗಳಿಸಿದ್ದಾರೆ. ಅತಿಹೆಚ್ಚು ರನ್ ಗಳಿಸಿರುವ ಬ್ಯಾಟರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ.

ಐಸಿಸಿ ಟ್ರೋಫಿ ಬರ: ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ಎದುರು ಸೋತ ನಂತರ ಭಾರತ ತಂಡದ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಟೀಕೆಗಳ ಮಹಾಪೂರವೇ ಹರಿಯುತ್ತಿದೆ.

ರೋಹಿತ್ ಶರ್ಮಾ ನಾಯಕತ್ವದ ಕುರಿತು ಹಲವರು ಟೀಕಿಸಿದ್ದಾರೆ. ಅಲ್ಲದೇ ಕನ್ನಡಿಗ ಕೆ.ಎಲ್. ರಾಹುಲ್ ಹಾಗೂ ರೋಹಿತ್ ಅವರ ಬ್ಯಾಟಿಂಗ್ ವೈಫಲ್ಯವೂ ಜನರ ಕೆಂಗಣ್ಣಿಗೆ ಗುರಿಯಾಗಿದೆ. ಆದರೆ ಭಾರತ ತಂಡದ ಮಾಜಿ ನಾಯಕ ಮಹೇಂದ್ರಸಿಂಗ್ ಧೋನಿ ಅವರ ಬಗ್ಗೆ ಮೆಚ್ಚುಗೆಯನ್ನೂ ವ್ಯಕ್ತಪಡಿಸಿದ್ದಾರೆ.

‘2007, 2011 ಹಾಗೂ 2013ರಲ್ಲಿ ಕ್ರಮವಾಗಿ ಟಿ20, ಏಕದಿನ ಮತ್ತು ಚಾಂಪಿಯನ್ಸ್ ಟ್ರೋಫಿ ಗೆದ್ದ ಧೋನಿ ಸಾರ್ವಕಾಲಿಕ ಶ್ರೇಷ್ಠ ನಾಯಕ. ಬಹಳಷ್ಟು ಪಂದ್ಯಗಳಲ್ಲಿ ತಂಡವನ್ನು ಸೋಲಿನಂಚಿನಿಂದ ಗೆಲುವಿನತ್ತ ನಡೆಸಿದ ದಿಟ್ಟ ಫಿನಿಷರ್. ಅವರ ಸಾಧನೆಯನ್ನು ಸರಿಗಟ್ಟುವ ನಾಯಕ ಸಿಗುವುದು ಯಾವಾಗ’ ಎಂದು ಹಲವರು ಟ್ವೀಟ್ ಮಾಡಿದ್ದಾರೆ.

ಭಾರತ ತಂಡವು 2013ರ ನಂತರ ಯಾವುದೇ ಐಸಿಸಿ ಟ್ರೋಫಿಯನ್ನು ಜಯಿಸಿಲ್ಲ. 2015, 2019ರ ಏಕದಿನ, 2018ರ ಚಾಂಪಿಯನ್ಸ್ ಟ್ರೋಫಿ, 2016 ಹಾಗೂ 2021ರ ಟಿ20 ವಿಶ್ವಕಪ್, 2019–20ರ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ಗಳಲ್ಲಿ ಮುಗ್ಗರಿಸಿತ್ತು.


ಟಿ20 ಕ್ರಿಕೆಟ್ ಹೆಚ್ಚು ರನ್ ಗಳಿಸಿರುವ ಬ್ಯಾಟರ್

ಆಟಗಾರ	ದೇಶ	ಅವಧಿ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ	ಸ್ಟ್ರೈಕ್‌ರೇಟ್
ವಿರಾಟ್ ಕೊಹ್ಲಿ	ಭಾರತ	2010-22	115	4008	122	1	37	137.96
ರೋಹಿತ್ ಶರ್ಮಾ	ಭಾರತ	2007-22	148	3853	118	4	29	139.24
ಮಾರ್ಟಿನ್ ಗಪ್ಟಿಲ್	ನ್ಯೂಜಿಲೆಂಡ್	2009-22	122	3531	105	2	20	135.70

ಒಂದು ನಾಣ್ಯಕ್ಕೆ ಎರಡು ಮುಖಗಳಿರುತ್ತವೆ. ಜೀವನವೂ ಅದೇ ರೀತಿಯಾಗಿದೆ. ನಮ್ಮ ತಂಡವು ಜಯಿಸಿದಾಗ ನಾವೇ ಗೆದ್ದಷ್ಟು ಸಂಭ್ರಮಿಸುತ್ತೇವೆ. ಅದೇ ತರಹ ತಂಡದ ಸೋಲನ್ನೂ ನಾವೂ ಹಂಚಿಕೊಳ್ಳಬೇಕು. ಜೀವನದಲ್ಲಿ ಸೋಲು ಮತ್ತು ಗೆಲುವು ಪರಸ್ಪರ ಒಂದಾಗಿ ಹೋಗುತ್ತವೆ.

ಸಚಿನ್ ತೆಂಡೂಲ್ಕರ್ ಕ್ರಿಕೆಟಿಗ

ಕೆಲವರ ನಿವೃತ್ತಿಗೆ ಇದು ಸಕಾಲ: ಗಾವಸ್ಕರ್



ಗಾವಸ್ಕರ್


ಅಡಿಲೇಡ್ (ಪಿಟಿಐ): ಭಾರತ ತಂಡದಲ್ಲಿರುವ ಕೆಲವು ಹಿರಿಯ ಆಟಗಾರರಿಗೆ ನಿವೃತ್ತಿ ಪಡೆಯಲು ಇದು ಸರಿಯಾದ ಸಮಯ. ರೋಹಿತ್ ಶರ್ಮಾ ನಾಯಕತ್ವದಿಂದ ಕೆಳಗಿಳಿದ ಮೇಲೆ ಹಾರ್ದಿಕ್ ಪಾಂಡ್ಯ ಅವರನ್ನು ನಾಯಕರನ್ನಾಗಿ ಮಾಡಬೇಕು ಎಂದು ಕ್ರಿಕೆಟ್ ವೀಕ್ಷಕ ವಿವರಣೆಗಾರ ಸುನೀಲ್ ಗಾವಸ್ಕರ್ ಹೇಳಿದ್ದಾರೆ.

‘ಹಾರ್ದಿಕ್ ಪಾಂಡ್ಯ ನಾಯಕರಾಗಿ ಆಡಿದ ಮೊದಲ ಐಪಿಎಲ್‌ನಲ್ಲಿಯೇ ತಮ್ಮ ತಂಡವನ್ನು ಚಾಂಪಿಯನ್ ಪಟ್ಟಕ್ಕೇರಿಸಿದ್ದರು. ಅವರಿಗೆ ಟಿ20 ತಂಡದ ನಾಯಕತ್ವ ನೀಡಲು ಪರಿಗಣಿಸಬೇಕು’ ಎಂದು ಸ್ಟಾರ್ ಸ್ಪೋರ್ಟ್ಸ್‌ಗೆ ಹೇಳಿಕೆ ನೀಡಿದ್ದಾರೆ.

‘30 ವರ್ಷ ಮೀರಿದ ಆಟಗಾರರಿದ್ದಾರೆ. ಅವರನ್ನು ತಂಡದಲ್ಲಿ ಆಡಿಸುವ ಬಗ್ಗೆ ಮರುಪರಿಶೀಲಿಸಬೇಕು’ ಎಂದು ಹೇಳಿದ್ದಾರೆ.

ಈ ಟೂರ್ನಿಯಲ್ಲಿ ನಾಯಕ ರೋಹಿತ್, ಆರ್. ಅಶ್ವಿನ್ ಹಾಗೂ ದಿನೇಶ್ ಕಾರ್ತಿಕ್ ಅವರು ಸತತ ವೈಫಲ್ಯ ಅನುಭವಿಸಿದ್ದಾರೆ.

ಇಂಗ್ಲೆಂಡ್‌ಗೆ ನೆರವಾದ ಬಿಗ್‌ಬ್ಯಾಷ್: ದ್ರಾವಿಡ್



ದ್ರಾವಿಡ್

ಅಡಿಲೇಡ್ (ಪಿಟಿಐ): ಬಿಗ್‌ಬ್ಯಾಷ್ ಲೀಗ್ ಟೂರ್ನಿಯಲ್ಲಿ ಆಡಿದ್ದು ಇಂಗ್ಲೆಂಡ್ ಆಟಗಾರರಿಗೆ ನೆರವಾಗಿದೆ ಎಂದು ಭಾರತ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅಭಿಪ್ರಾಯಪಟ್ಟಿದ್ದಾರೆ.

ಗುರುವಾರ ಪಂದ್ಯದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಇಂಗ್ಲೆಂಡ್ ಆಟಗಾರರಿಗೆ ಬಿಬಿಎಲ್ ಅನುಭವವು ಕೈಹಿಡಿದಿದೆ. ಆಸ್ಟ್ರೇಲಿಯಾದಲ್ಲಿ ಆಡುವ ಹಾಗೂ ಇಲ್ಲಿಯ ವಾತಾವರಣಕ್ಕೆ ಹೊಂದಿಕೊಳ್ಳಲು ಅವರಿಗೆ ಬಿಬಿಎಲ್ ನೆರವಾಗಿದೆ. ಇದರಲ್ಲಿ ಸಂಶಯವೇ ಇಲ್ಲ’ ಎಂದರು.

ಆಸ್ಟ್ರೇಲಿಯಾದಲ್ಲಿ ನಡೆಯುವ ಬಿಬಿಎಲ್ ಟೂರ್ನಿಯಲ್ಲಿ ಜೋಸ್ ಬಟ್ಲರ್ ಸಿಡ್ನಿ ಥಂಡರ್ಸ್ ಹಾಗೂ ಇನ್ನೂ ಕೆಲವು ಆಟಗಾರರು ಮೆಲ್ಬರ್ನ್ ರೆನೆಗೇಡ್ಸ್‌ನಲ್ಲಿ ಆಡುತ್ತಾರೆ.

ಭಾರತದ ಆಟಗಾರರೂ ಬಿಬಿಎಲ್‌ನಲ್ಲಿ ಆಡಬೇಕೆ ಎಂಬ ಪ್ರಶ್ನೆಗೆ ದ್ರಾವಿಡ್, ‘ಇದು ಬಿಸಿಸಿಐಗೆ ಬಿಟ್ಟ ವಿಚಾರ’ ಎಂದರು.

ವಿದೇಶದಲ್ಲಿ ನಡೆಯುವ ಟಿ20 ಲೀಗ್ ಟೂರ್ನಿಗಳಲ್ಲಿ ಆಡಲು ಬಿಸಿಸಿಐ ಭಾರತದ ಆಟಗಾರರಿಗೆ ಅನುಮತಿ ನೀಡುವುದಿಲ್ಲ.

ಐಒಎ: ನಿಯಮಾವಳಿಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ಮತ್ತು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ)ಯ ಉಸ್ತುವಾರಿಯಲ್ಲಿ ಸಿದ್ಧಪಡಿಸಿರುವ ಕರಡು ನಿಯಮಾವಳಿ ಅಳವಡಿಕೆಗೆ ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಒಪ್ಪಿಗೆ ಸೂಚಿಸಿದೆ.

ಗುರುವಾರ ಇಲ್ಲಿ ನಡೆದ ಐಒಎ ವಿಶೇಷ ಸಾಮಾನ್ಯ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಕೆಲವು ಸದಸ್ಯರು ನಿಯಮಾವಳಿಯಲ್ಲಿ ಮಾಡಿರುವ ಒಂದಷ್ಟು ತಿದ್ದುಪಡಿಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ‘ಸಮಾನ್ಯ ಸಭೆಯ ಹಕ್ಕನ್ನು ಕಸಿದುಕೊಳ್ಳಲಾಗಿದೆ’ ಎಂದು ಅವರು ದೂರಿದ್ದಾರೆ.

ಚೆನ್ನೈ ರೇಸ್

ಕ್ವಿ ಸವಾಜ್ ಗೆಲ್ಲುವ ನಿರೀಕ್ಷೆ

ಹಾಲ್ ಆಫ್ ಫೇಮರ್ ಹ್ಯಾಂಡಿಕ್ಯಾಪ್ ಶುಕ್ರವಾರದ ಚೆನ್ನೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕ್ವಿ ಸವಾಜ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ರೊಮಾಂಟಿಕ್ ಬೇ 6, ಆಂಟಿಗುವಾ 3, ಪ್ಲಾಟಿನಿ 1
2ನೇ ರೇಸ್: ಟರ್ಫ್ ಮೆಲೋಡಿ 5, ಸೇಫ್ಟಿ 3, ಎಂಪರರ್ ಚಾರ್ಮವಟ್ (1)
3ನೇ ರೇಸ್: ಟ್ರೆವಾಲಿಯಸ್ 10, ಅಂಗಾವಿ 11, ರೆಮಿಡೀಸ್ ಆಫ್ ಸ್ಪ್ರಿಂಗ್ 5
4ನೇ ರೇಸ್: ಕ್ವಿ ಸವಾಜ್ 7, ಸ್ಟಾರ್ಮ್ ಬ್ರೇಕರ್ 3, ಎಂಜಿಲಿಕಾಜಿ 2
5ನೇ ರೇಸ್: ಮ್ಯಾಜಿಕ್ ಮೊಮೆಂಟ್ 11, ಅಡ್ಮಿರಲ್ ಶಾ 3, ಫ್ಯಾಬ್ಯುಲಸ್ ಶೋ 7
6ನೇ ರೇಸ್: ಗೋಲ್ಡ್ ಕೈಟ್ 1, ಡ್ಯಾನ್ಸಿಂಗ್ ಕ್ವೀನ್ 6, ಅಂಬರ್ ಲೈಟ್ನಿಂಗ್ 8
7ನೇ ರೇಸ್: ಜುಕಾರ್ಡಿ 9, ಸ್ಟರ್ನ್ ಮೇಡನ್ 10, ಡೈಯಾಮಾಂಡೊ 5

ಉತ್ತಮ ಬೆಟ್: ಗೋಲ್ಡ್ ಕೈಟ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7



ಕತಾರ್‌ನಲ್ಲಿ ನಡೆಯುವ ಫಿಫಾ ವಿಶ್ವಕಪ್ ಫುಟ್‌ಬಾಲ್ ಹಿನ್ನೆಲೆಯಲ್ಲಿ ಗುರುವಾರ ಕೇರಳದ ಕೋಯಿಕ್ಕೋಡ್‌ನಲ್ಲಿ ಏರ್ಪಡಿಸಿದ್ದ ಮೆರವಣಿಗೆಯಲ್ಲಿ ಅರ್ಜೆಂಟೀನಾ ತಂಡದ ಲಯೊನೆಲ್ ಮೆಸ್ಸಿ ಅಭಿಮಾನಿಗಳು ಪಾಲ್ಗೊಂಡರು –ಪಿಟಿಐ ಚಿತ್ರ

ಕೊಕ್ಕೊ: ಮಂಡ್ಯ, ಮೈಸೂರು ಚಾಂಪಿಯನ್

ವಿಜಯಪುರ: ಮಂಡ್ಯ ಜಿಲ್ಲಾ ಬಾಲಕಿಯರ ತಂಡ ಮತ್ತು ಮೈಸೂರು ಜಿಲ್ಲಾ ಬಾಲಕರ ತಂಡ, ನಗರದ ಬಿ.ಎಲ್.ಡಿ.ಇ. ಸಂಸ್ಥೆಯ ವೈದ್ಯಕೀಯ ಕಾಲೇಜು ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪದವಿ ಪೂರ್ವ ಕಾಲೇಜುಗಳ ರಾಜ್ಯಮಟ್ಟದ ಕೊಕ್ಕೊ ಪಂದ್ಯಾವಳಿಯಲ್ಲಿ ಚಾಂಪಿಯನ್ ಪಟ್ಟ ಮುಡಿಗೇರಿಸಿಕೊಂಡವು.

ಪದವಿ ಪೂರ್ವ ಶಿಕ್ಷಣ ಇಲಾಖೆ ಮತ್ತು ಬಿ.ಎಲ್.ಡಿ.ಇ ಸಂಸ್ಥೆಯ ಆಶ್ರಯದಲ್ಲಿ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಮಂಡ್ಯ ಬಾಲಕಿಯರ ತಂಡವು ಮೈಸೂರು ಬಾಲಕಿಯರ ತಂಡವನ್ನು 11–8 ಅಂಕಗಳಿಂದ ಸೋಲಿಸಿತು.

ರೋಚಕ ಪೈಪೋಟಿ ನಡೆದ ಬಾಲಕರ ವಿಭಾಗದ ಪಂದ್ಯದಲ್ಲಿ ಮೈಸೂರು ತಂಡವು ದಾವಣಗೆರೆ ತಂಡವನ್ನು 14 -13 ಅಂಕಗಳಿಂದ ಸೋಲಿಸಿ ಪ್ರಶಸ್ತಿ ಜಯಿಸಿತು.

ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್

ಡ್ರೀಮ್ ಯುನೈಟೆಡ್‌ಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹರಿ ಬರ್ಮನ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡ, ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವು ಸಾಧಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಯುನೈಟೆಡ್ ತಂಡ 3–2 ಗೋಲುಗಳಿಂದ ಬಿಯುಎಫ್‌ಸಿ ತಂಡವನ್ನು ಮಣಿಸಿತು.

ಎರಡು ಗೋಲುಗಳನ್ನು ಗಳಿಸಿದ ಬರ್ಮನ್ (6 ಮತ್ತು 62ನೇ ನಿ.) ಅವರು ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಇನ್ನೊಂದು ಗೋಲನ್ನು ಲಿಂಗ್‌ಕೊಯ್ (89ನೇ ನಿ.) ತಂದಿತ್ತರು. ವೀರೋಚಿತ ಹೋರಾಟ ನಡೆಸಿದ ಬಿಯುಎಫ್‌ಸಿ ಪರ ಗುಯ್ ಹೆರ್ಮನ್ ಅಬೆಲೆಕ್ (21 ನೇ ನಿ.) ಮತ್ತು ಕೊಂತುಜಮ್ ಸಿಂಗ್ (58ನೇ ನಿ.) ಚೆಂಡನ್ನು ಗುರಿ ಸೇರಿಸಿದರು.

ಇನ್ನೊಂದು ಪಂದ್ಯದಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ 3–1 ಗೋಲುಗಳಿಂದ ರೆಬೆಲ್ಸ್ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು.

ಚೆಸ್ಟರ್‌ಪಾಲ್ ಲಿಂಗ್ಡೊ (15), ಇರ್ಫಾನ್ ಯಾದವಾಡ (31) ಮತ್ತು ಶಿಬಿಲ್ ಮುಹಮ್ಮದ್ (52) ಅವರು ಬೆಂಗಳೂರು ಯುನೈಟೆಡ್ ಪರ ಗೋಲು ಗಳಿಸಿದರು. ರೆಬೆಲ್ಸ್ ತಂಡದ ಏಕೈಕ ಗೋಲನ್ನು ಸಂಜೀಬ್ ಸಿಂಗ್ (45 + 2) ತಂದಿತ್ತರು.

ಶುಕ್ರವಾರ ನಡೆಯುವ ಪಂದ್ಯಗಳಲ್ಲಿ ಎಡಿಇ ಎಫ್‌ಸಿ- ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು, ಕೊಡಗು ಎಫ್‌ಸಿ-ಬಿಎಫ್‌ಸಿ, ರೂಟ್ಸ್ ಎಫ್‌ಸಿ- ಫ್ರೆಂಡ್ಸ್ ಯುನೈಟೆಡ್ ಎಫ್‌ಸಿ ಹಾಗೂ ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿ-ಎಎಸ್‌ಸಿ ಮತ್ತು ಸೆಂಟರ್ ತಂಡಗಳು ಪೈಪೋಟಿ ನಡೆಸಲಿವೆ.

ಮಹಿಳಾ ಟಿ20 ವಿಶ್ವಕಪ್‌ಗೂ ಮುನ್ನ ತ್ರಿಕೋನ ಸರಣಿ

ಜೋಹಾನ್ಸ್‌ಬರ್ಗ್ (ಪಿಟಿಐ): ಭಾರತ ಮಹಿಳಾ ತಂಡದವರು ಮುಂದಿನ ವರ್ಷ ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ ಟಿ20 ಕ್ರಿಕೆಟ್ ವಿಶ್ವಕಪ್‌ಗೂ ಮುನ್ನ ತ್ರಿಕೋನ ಸರಣಿಯಲ್ಲಿ ಆಡಲಿದ್ದಾರೆ.

ವಿಶ್ವಕಪ್ ಟೂರ್ನಿ ಫೆ.10 ರಿಂದ 26ರ ವರೆಗೆ ಆಯೋಜನೆಯಾಗಿದೆ. ವಿಶ್ವಕಪ್‌ಗೆ ಪೂರ್ವಭಾವಿಯಾಗಿ ಜ.19 ರಿಂದ ಫೆ.2ರ ವರೆಗೆ ನಡೆಯಲಿರುವ ತ್ರಿಕೋನ ಸರಣಿಯಲ್ಲಿ ಭಾರತ ಅಲ್ಲದೆ, ಆತಿಥೇಯ ದಕ್ಷಿಣ ಆಫ್ರಿಕಾ ಹಾಗೂ ವೆಸ್ಟ್ ಇಂಡೀಸ್ ತಂಡಗಳು ಪಾಲ್ಗೊಳ್ಳಲಿವೆ. ಸರಣಿಯ ಎಲ್ಲ ಪಂದ್ಯಗಳು ದಕ್ಷಿಣ ಆಫ್ರಿಕಾದ ಈಸ್ಟ್ ಲಂಡನ್‌ನಲ್ಲಿರುವ ಬಫೆಲೊ ಪಾರ್ಕ್ ಕ್ರೀಡಾಂಗಣದಲ್ಲಿ ನಡೆಯಲಿವೆ ಎಂದು ಕ್ರಿಕೆಟ್ ದಕ್ಷಿಣ ಆಫ್ರಿಕಾ ಪ್ರಕಟಣೆ ತಿಳಿಸಿದೆ.

ಪ್ರತಿ ತಂಡಗಳು ತಲಾ ಎರಡು ಸಲ ಮುಖಾಮುಖಿಯಾಗಲಿದ್ದು, ಪಾಯಿಂಟ್ಸ್ ಪಟ್ಟಿಯಲ್ಲಿ ಮೊದಲ ಎರಡು ಸ್ಥಾನಗಳನ್ನು ಪಡೆಯುವ ತಂಡಗಳು ಫೈನಲ್‌ನಲ್ಲಿ ಎದುರಾಗಲಿವೆ.

ಭಾರತ ಜ.19 ರಂದು ನಡೆಯಲಿರುವ ತನ್ನ ಮೊದಲ ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ. ಆ ಬಳಿಕ ವೆಸ್ಟ್‌ಇಂಡೀಸ್ (ಜ.23), ದಕ್ಷಿಣ ಆಫ್ರಿಕಾ (ಜ.28) ಮತ್ತು ವೆಸ್ಟ್ ಇಂಡೀಸ್ (ಜ.30) ವಿರುದ್ಧ ಆಡಲಿದೆ.

ಮಾಲ್ಡೀವ್ಸ್: ವಲಸೆ ಕಾರ್ಮಿಕರಿದ್ದ ವಸತಿಯಲ್ಲಿ ಬೆಂಕಿ

9 ಭಾರತೀಯರ ಸಹಿತ 10 ಸಾವು

ಮಾಲೆ (ಮಾಲ್ಡೀವ್ಸ್) (ಪಿಟಿಐ): ಇಲ್ಲಿನ ಮಾವೆಯೊ ಮಸೀದಿ ಸಮೀಪದ ಎಂ.ನಿರುಫೆಯಿ ಪ್ರದೇಶದಲ್ಲಿ ವಿದೇಶಿ ಕಾರ್ಮಿಕರನ್ನು ಇರಿಸಲಾಗಿದ್ದ ಇಕ್ಕಟ್ಟಾದ ವಸತಿ ಸಮುಚ್ಚಯದ ಗ್ಯಾರೇಜ್‌ನಲ್ಲಿ ಗುರುವಾರ ನಸುಕಿನಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಒಂಭತ್ತು ಮಂದಿ ಭಾರತೀಯರ ಸಹಿತ 10 ಮಂದಿ ಮೃತಪಟ್ಟಿದ್ದಾರೆ.

ಗ್ಯಾರೇಜು ನೆಲ ಮಹಡಿಯಲ್ಲಿದ್ದು, ಮೇಲಿನ ಮಹಡಿಯಲ್ಲಿ ವಲಸೆ ಕಾರ್ಮಿಕರು ವಾಸವಿದ್ದರು. ಮಧ್ಯರಾತ್ರಿ 12.30ರ ಸುಮಾರಿಗೆ ಬೆಂಕಿ ಹೊತ್ತಿಕೊಂಡಿದೆ. ಕೊಠಡಿಗೆ ಒಂದು ಕಿಟಕಿ ಮಾತ್ರ ಇತ್ತು. ಕೊಠಡಿಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಗ್ಯಾಸ್ ಸಿಲಿಂಡರ್‌ಗಳೂ ಇದ್ದವು. ಘಟನೆಯಲ್ಲಿ ಹಲವರು ಗಾಯಗೊಂಡಿದ್ದಾರೆ ಎಂದು ಅಂತರರಾಷ್ಟ್ರೀಯ ಸುದ್ದಿಸಂಸ್ಥೆ ‘ಸನ್‌ಆನ್‌ಲೈನ್’ ವರದಿ ಮಾಡಿದೆ.

‘ಮೃತಪಟ್ಟ ಇನ್ನೊಬ್ಬರು ಯಾವ ದೇಶದವರು ಎಂಬ ಬಗ್ಗೆ ತಿಳಿಯುವ ಪ್ರಯತ್ನ ನಡೆಯುತ್ತಿದೆ’ ಎಂದು ಭಾರತೀಯ ಹೈಕಮಿಷನ್‌ನ ಕಲ್ಯಾಣ ಅಧಿಕಾರಿ ರಾಂಧೀರ್ ಸಿಂಗ್ ಹೇಳಿದ್ದಾರೆ.

ಈ ವಸತಿ ಸಮುಚ್ಚಯದಲ್ಲಿ 38 ಮಂದಿ ವಾಸವಿದ್ದರು. ಏಳು ಮಂದಿ ಸ್ಥಳದಲ್ಲೇ ಮೃತಪಟ್ಟರೆ, ಉಳಿದವರು ತೀವ್ರ ಸುಟ್ಟ ಗಾಯದಿಂದಾಗಿ ಇಂದಿರಾ ಗಾಂಧಿ ಸ್ಮಾರಕ ಆಸ್ಪತ್ರೆಯಲ್ಲಿ ಮೃತಪಟ್ಟರು ಎಂದು ಅಗ್ನಿಶಾಮಕ ಇಲಾಖೆ ತಿಳಿಸಿದೆ.

2.5 ಲಕ್ಷ ಜನಸಂಖ್ಯೆಯ ಮಾಲೆಯಲ್ಲಿ ಬಹುಸಂಖ್ಯೆಯ ವಿದೇಶಿ ಕಾರ್ಮಿಕರೇ ಇದ್ದಾರೆ. ಈ ಪೈಕಿ ಬಾಂಗ್ಲಾದೇಶ, ಭಾರತ, ನೇಪಾಳ, ಪಾಕಿಸ್ತಾನ ಮತ್ತು ಶ್ರೀಲಂಕಾದಿಂದ ವಲಸೆ ಹೋದವರು ಅಧಿಕ ಮಂದಿ ಇದ್ದಾರೆ.



ಬೆಂಕಿ ಆಕಸ್ಮಿಕ ಸಂಭವಿಸಿದ ಕಟ್ಟಡದ ಹೊರಗಡೆ ಅಗ್ನಿಶಾಮಕ ಸಿಬ್ಬಂದಿ ಪರಿಹಾರ ಕಾರ್ಯಾಚರಣೆ ಕೈಗೊಂಡರು– ಎಎಫ್‌ಪಿ ಚಿತ್ರ

‘1 ಲಕ್ಷ ರಷ್ಯಾ ಸೈನಿಕರು ಹತ’

ವಾಷಿಂಗ್ಟನ್/ಕೀವ್ (ಎಪಿ): ಉಕ್ರೇನ್ ಮೇಲೆ ಆಕ್ರಮಣ ಆರಂಭಿಸಿದ ಒಂಬತ್ತು ತಿಂಗಳಲ್ಲಿ ರಷ್ಯಾದ ಸುಮಾರು ಒಂದು ಲಕ್ಷ ಸೈನಿಕರು ಉಕ್ರೇನ್‌ನಲ್ಲಿ ಜೀವ ತೆತ್ತಿದ್ದಾರೆ ಅಥವಾ ಗಾಯಗೊಂಡಿದ್ದಾರೆ ಎಂದು ಅಮೆರಿಕ ಹೇಳಿದೆ.

ನ್ಯೂಯಾರ್ಕ್ ಎಕಾನಮಿಕ್ ಕ್ಲಬ್‌ನಲ್ಲಿ ಬುಧವಾರ ಮಾತನಾಡಿದ ಅಮೆರಿಕ ಸೇನಾ ಜನರಲ್ ಜಂಟಿ ಮುಖ್ಯಸ್ಥ ಮಾರ್ಕ್ ಮಿಲ್ಲೆ ಅವರು ಉಕ್ರೇನ್ ಸೇನೆಯ ಕಡೆಯಲ್ಲೂ ಬಹುಶಃ ಇಷ್ಟೇ ಪ್ರಮಾಣದ ಸಾವು–ನೋವು ಉಂಟಾಗಿರಬಹುದು. ಅಲ್ಲದೇ ಉಕ್ರೇನಿನ ಅಂದಾಜು 40 ಸಾವಿರ ನಾಗರಿಕರು ಮೃತಪಟ್ಟಿದ್ದಾರೆ. ಈ ಯುದ್ಧದಲ್ಲಿ ಅಪಾರ ಪ್ರಮಾಣದ ಸಾವು–ನೋವು, ಮಾನವ ಸಂಕಟಗಳು ಸಂಭವಿಸಿವೆ ಎಂದು ಹೇಳಿದರು.

ಯುದ್ಧದ ಆರಂಭದಲ್ಲಿ ಆಕ್ರಮಿಸಿಕೊಂಡಿದ್ದ ದಕ್ಷಿಣ ಉಕ್ರೇನ್‌ನ ಪ್ರಾದೇಶಿಕ ರಾಜಧಾನಿ ಕೆರ್ಸಾನ್‌ನಿಂದ ರಷ್ಯಾ ಸೇನೆ ಹಿಂತೆಗೆತ ಘೋಷಿಸಿದೆ. ಎರಡೂ ದೇಶಗಳು ಚಳಿಗಾಲದಲ್ಲಿ ಹೋರಾಟ ಸ್ಥಗಿತಗೊಳಿಸಿ ಸಂಭಾವ್ಯ ಶಾಂತಿ ಮಾತುಕತೆ ನಡೆಸುವ ಸಾಧ್ಯತೆಯೂ ಇದೆ ಎಂದು ಅವರು ಹೇಳಿದರು.

ಕೆರ್ಸಾನ್‌ನಲ್ಲಿ ಸುಮಾರು 20 ಸಾವಿರದಿಂದ 30 ಸಾವಿರದಷ್ಟು ಸೈನಿಕರನ್ನು ರಷ್ಯಾ ಜಮಾವಣೆ ಮಾಡಿತ್ತು. ಎಲ್ಲ ಸೈನಿಕರನ್ನು ವಾಪಸ್ ಕರೆಸಿಕೊಳ್ಳಲು ಹಲವು ವಾರಗಳೇ ಬೇಕಾಗಬಹುದು. ಬೇಸಿಗೆಯಲ್ಲಿ ಆಕ್ರಮಣ ನಡೆಸಲು ಸೇನೆ ಮರುಸಂಯೋಜಿಸಲು, ಸೇನಾ ವಾಪಸಾತಿಯನ್ನು ಬಳಸಿಕೊಳ್ಳುವ ಸಾಧ್ಯತೆ ಇದೆ. ಆದರೆ, ಇದರಲ್ಲಿ ಮಾತುಕತೆಗೆ ಅವಕಾಶದ ಕಿಟಕಿ ತೆರೆಯುವ ಸಾಧ್ಯತೆಯೂ ಇಲ್ಲದಿಲ್ಲ ಎಂದು ಮಿಲ್ಲೆ ಹೇಳಿದ್ದಾರೆ.

ಆಕ್ರಮಿತ ಕೆರ್ಸಾನ್‌ನಿಂದ ಮಾತ್ರ ಸೇನೆಯನ್ನು ಹಿಂತೆಗೆದುಕೊಳ್ಳಲಾಗುತ್ತಿದೆ ಎಂದು ರಷ್ಯಾ ಸೇನೆ ಬುಧವಾರ ಹೇಳಿದೆ. ಆದರೆ, ಉಕ್ರೇನ್ ಈ ಬಗ್ಗೆ ಸಂಶಯ ವ್ಯಕ್ತಪಡಿಸಿದೆ. ಉಕ್ರೇನಿನ ಕೆಲವು ಮಿಲಿಟರಿ ವಿಶ್ಲೇಷಕರು ‘ಇದು ದೇಶದ ಸೇನಾ ಪಡೆಗಳನ್ನು ಸಾವಿನ ಬಲೆಯಲ್ಲಿ ಸಿಲುಕಿಸುವ ಆಮಿಷವಿರಬಹುದು’ ಎಂದು ಎಚ್ಚರಿಸಿದ್ದಾರೆ.

ಆಗ್ನೇಯದ ಎಂಟು ಪ್ರದೇಶಗಳಲ್ಲಿ ಕಳೆದ 24 ತಾಸುಗಳಲ್ಲಿ ರಷ್ಯಾ ಪಡೆಗಳ ವಾಯು ದಾಳಿ, ಡ್ರೋನ್, ಕ್ಷಿಪಣಿ ಹಾಗೂ ಭಾರಿ ಫಿರಂಗಿ, ಬಾಂಬ್ ದಾಳಿಯಿಂದ 9 ನಾಗರಿಕರು ಮೃತಪಟ್ಟಿದ್ದು, 24 ಜನರು ಗಾಯಗೊಂಡಿದ್ದಾರೆ. ಉಕ್ರೇನ್‌ನ ಇಂಧನ ವ್ಯವಸ್ಥೆಯ ಮೇಲೆ ರಷ್ಯಾದ ಭಾರಿ ದಾಳಿ ಮುಂದುವರಿದಿದೆ ಎಂದು ಉಕ್ರೇನ್ ಅಧ್ಯಕ್ಷರ ಕಚೇರಿ ಮಾಹಿತಿ ನೀಡಿದೆ.

ಅಮೆರಿಕದ ಚುನಾವಣೆ: ಭಾರತೀಯರ ಪ್ರಾಬಲ್ಯ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಕಾಂಗ್ರೆಸ್‌ಗೆ (ಸಂಸತ್) ಆಡಳಿತರೂಢ ಡೆಮಾಕ್ರಟಿಕ್ ಪಕ್ಷದಿಂದ ಐವರು ಭಾರತೀಯ ಮೂಲದ ಸಂಸದರು ಆಯ್ಕೆಯಾಗಿದ್ದು, ಅಮೆರಿಕ ರಾಜಕೀಯ ಇತಿಹಾಸದಲ್ಲಿ ಇದೊಂದು ದಾಖಲೆಯಾಗಿದೆ. ಅಲ್ಲದೆ, ಹಲವು ರಾಜ್ಯಗಳಲ್ಲಿ ಭಾರತೀಯ ಮೂಲದ ಹಲವರು ಶಾಸಕರಾಗಿಯೂ ಆಯ್ಕೆಯಾಗಿದ್ದಾರೆ.

ರಾಜ ಕೃಷ್ಣಮೂರ್ತಿ, ರಾವ್ ಖನ್ನಾ, ಪ್ರಮೀಳಾ ಜಯಪಾಲ್, ಶ್ರೀ ಥಾಣೇದಾರ್ ಮತ್ತು ಅಮಿ ಬೇರಾ ಅವರು ಸಂಸತ್ ಪ್ರತಿನಿಧಿಗಳಾಗಿ ಚುನಾಯಿತರಾದವರು.

ಬೇರಾ (57) ಅವರು ದೀರ್ಘಾವಧಿಯಿಂದ ಸಂಸದರಾಗಿ ಕ್ಯಾಲಿಫೋರ್ನಿಯಾದ 7ನೇ ಜಿಲ್ಲಾ ಕ್ಷೇತ್ರ ಪ್ರತಿನಿಧಿಸುತ್ತಿದ್ದಾರೆ. ಇವರು ಈ ಬಾರಿ ರಿಪಬ್ಲಿಕ್ ಪಕ್ಷದ ಟಾಮಿಕಾ ಹ್ಯಾಮಿಲ್ಟನ್ ಅವರ ವಿರುದ್ಧ ಗೆಲುವು ಸಾಧಿಸಿದ್ದಾರೆ. ಕೃಷ್ಣಮೂರ್ತಿ, ಖನ್ನಾ, ಪ್ರಮೀಳಾ ಜಯಪಾಲ್ ಹಾಗೂ ಬೇರಾ ಅವರು ಈ ಹಿಂದಿನ ಅವಧಿಯಲ್ಲೂ ಆಯ್ಕೆಯಾಗಿದ್ದರು.

ಅಲ್ಲದೇ ಭಾರತೀಯ ಮೂಲದ ಹಲವು ಮಂದಿ ರಾಜ್ಯದ ಶಾಸನ ಸಭೆಯ ಪ್ರತಿನಿಧಿಗಳಾಗಿ (ಶಾಸಕರು) ಆಯ್ಕೆಯಾಗಿದ್ದಾರೆ.

ಅರವಿಂದ್ ವೆಂಕಟ್, ತಾರಿಕ್ ಖಾನ್, ಸಲ್ಮಾನ್ ಭೋಜಣಿ, ಸುಲೇಮಾನ್ ಲಾಲಣಿ, ಸ್ಯಾಮ್ ಸಿಂಗ್, ರಾಜೀವ್ ಪುರಿ, ನಬೀಲಾ ಸೈಯದ್, ಮೇಘನ್ ಶ್ರೀನಿವಾಸ್, ಕೆವಿನ್ ಓಲಿಕ್ಕಲ್, ನಬ್ಲಿಯಾ ಇಸ್ಲಾಮ್, ಫಾರೂಕ್ ಮುಘಲ್, ಕುಮಾರ್ ಭಾರ್ವೆ (ಮೇರಿಲ್ಯಾಂಡ್), ಅನಿತಾ ಸಮಾನಿ (ಓಹಿಒ), ಕೆ.ಪಿ. ಜಾರ್ಜ್ (ಟೆಕ್ಸಾಸ್ ಫೋರ್ಟ್ ಬೆಂಡ್ ಕೌಂಟಿ ಜಡ್ಜ್), ಮೋನಿಕಾ ಸಿಂಗ್ (ಟೆಕ್ಸಾಸ್ ಹ್ಯಾರೀಸ್ ಕೌಂಟಿ ಜಡ್ಜ್), ಅಜಯ್ ರಾಮನ್ (ಓಕ್ಲಾಂಡ್ ಕೌಂಟಿ ಕಮಿಷನ್) ಶಾಸಕರಾಗಿ ಆಯ್ಕೆಯಾಗಿದ್ದಾರೆ.

ಇನ್ನೂ ಎಣಿಕೆ ನಡೆಯುತ್ತಿರುವ ನಾಲ್ಕು ಕ್ಷೇತ್ರಗಳಲ್ಲಿ ಭಾರತೀಯ ಮೂಲದ ಅಭ್ಯರ್ಥಿಗಳು ಮುಂಚೂಣಿಯಲ್ಲಿರುವುದಾಗಿ ತಿಳಿದುಬಂದಿದೆ.

ಸಂಕ್ಷಿಪ್ತ ಸುದ್ದಿ

ಫಿಲಿಪ್ಪೀನ್ಸ್‌ನಲ್ಲಿ ಘರ್ಷಣೆ: 7 ಸಾವು

ಮನಿಲಾ (ಫಿಲಿಪ್ಪೀನ್ಸ್) (ಎಪಿ): ಫಿಲಿಪ್ಪೀನ್ಸ್‌ನ ದಕ್ಷಿಣ ಭಾಗದ ಬಸಿಲನ್ ಪ್ರಾಂತ್ಯದ ಉಂಗ್‌ಕಯ ಪುಕನ್ ಪಟ್ಟಣದಲ್ಲಿ ಮಂಗಳವಾರದಿಂದ ಆರಂಭವಾಗಿರುವ ಮುಸ್ಲಿಂ ಬಂಡುಕೋರರು ಮತ್ತು ಸೇನಾಪಡೆಗಳ ನಡುವಿನ ಘರ್ಷಣೆಯಲ್ಲಿ ಕನಿಷ್ಠ ಮೂವರು ಯೋಧರು ಹಾಗೂ ನಾಲ್ವರು ಬಂಡುಕೋರರು ಮೃತಪಟ್ಟಿದ್ದಾರೆ. ಎರಡು ದಿನಗಳಿಂದ ನಡೆಯುತ್ತಿದ್ದ ಸಂಘರ್ಷ ಗುರುವಾರ ಮತ್ತಷ್ಟು ಉಲ್ಬಣಗೊಂಡಿತು.

‘ಮಹಿಳೆಯರಿಗಿಲ್ಲ ಜಿಮ್, ಉದ್ಯಾನ’

ಕಾಬೂಲ್ (ಎಪಿ): ಅಫ್ಗಾನಿಸ್ತಾನದಲ್ಲಿ ಮಹಿಳೆಯರು ಜಿಮ್ ಹಾಗೂ ಉದ್ಯಾನಗಳಿಗೆ ಪ್ರವೇಶ ಮಾಡುವುದಕ್ಕೆ ತಾಲಿಬಾನ್ ಆಡಳಿತದ ನಿರ್ಬಂಧ ವಿಧಿಸಿದೆ. ಲಿಂಗ ಪ್ರತ್ಯೇಕತೆಗಾಗಿ ವಾರದ ಬೇರೆ ಬೇರೆ ದಿನಗಳಲ್ಲಿ ಮಹಿಳೆ ಮತ್ತು ಪುರುಷರಿಗೆ ಉದ್ಯಾನ ಮತ್ತು ಜಿಮ್ ಬಳಕೆಗೆ ಅನುವು ಮಾಡಿಕೊಡಲು ಪ್ರಯತ್ನಿಸಲಾಯಿತು. ಆದರೆ ನಿಯಮ ಪಾಲನೆ ಆಗಲಿಲ್ಲ. ಹೀಗಾಗಿ, ಮಹಿಳೆಯರಿಗೆ ಉದ್ಯಾನ ಮತ್ತು ಜಿಮ್‌ಗಳ ಪ್ರವೇಶ ನಿಷೇಧಿಸಲಾಗಿದೆ ಎಂದು ಅಫ್ಗಾನಿಸ್ತಾನದ ಕಠಿಣ ಕಾನೂನು ಜಾರಿ ಸಚಿವಾಲಯದ ವಕ್ತಾರ ಮೊಹಮ್ಮದ್ ಅಕೆಫ್ ಮೊಹಜೆರ್ ಹೇಳಿದ್ದಾರೆ.

ಬಿಎಫ್‌ಸಿಗೆ ಗೆಲುವಿನ ವಿಶ್ವಾಸ

ಐಎಸ್‌ಎಲ್: ಕಂಠೀರವದಲ್ಲಿ ಇಂದು ಈಸ್ಟ್ ಬೆಂಗಾಲ್ ವಿರುದ್ಧ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸತತ ಎರಡು ಸೋಲಿನ ನಿರಾಸೆಯಿಂದ ಹೊರಬರುವ ಪ್ರಯತ್ನದಲ್ಲಿರುವ ಬೆಂಗಳೂರು ಎಫ್‌ಸಿ ತಂಡ, ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಶುಕ್ರವಾರ ಈಸ್ಟ್ ಬೆಂಗಾಲ್ ಎಫ್‌ಸಿಯ ಸವಾಲು ಎದುರಿಸಲಿದೆ.

ತವರು ನೆಲ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದ ಮೂಲಕ ಗೆಲುವಿನ ಹಾದಿಗೆ ಮರಳುವ ವಿಶ್ವಾಸವನ್ನು ಬೆಂಗಳೂರಿನ ತಂಡ ಹೊಂದಿದೆ.

ಲೀಗ್‌ನಲ್ಲಿ ಬಿಎಫ್‌ಸಿ ಇದುವರೆಗೆ ಸವೆಸಿದ ಹಾದಿ ಏರಿಳಿತಗಳಿಂದ ಕೂಡಿದ್ದಾಗಿದೆ. ಅ.8 ರಂದು ಕಂಠೀರವದಲ್ಲಿ ಋತುವಿನ ಮೊದಲ ಪಂದ್ಯ ಆಡಿತ್ತಲ್ಲದೆ, ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡವನ್ನು 1–0 ರಲ್ಲಿ ಮಣಿಸಿತ್ತು.

ಆ ಬಳಿಕ ಗೆಲುವಿನ ಸಿಹಿ ದೊರೆತಿಲ್ಲ. ಒಂದು ತಿಂಗಳಲ್ಲಿ ಮೂರು ‘ಅವೇ’ ಪಂದ್ಯಗಳನ್ನು ಆಡಿದ್ದು ಎರಡರಲ್ಲಿ ಸೋಲು ಎದುರಾಗಿದ್ದು, ಒಂದನ್ನು ಡ್ರಾ ಮಾಡಿಕೊಂಡಿದೆ. ನಾಲ್ಕು ಪಂದ್ಯಗಳನ್ನು ಆಡಿರುವ ತಂಡ ನಾಲ್ಕು ಪಾಯಿಂಟ್ಸ್‌ಗಳೊಂದಿಗೆ ಎಂಟನೇ ಸ್ಥಾನದಲ್ಲಿದೆ.

ಚೆನ್ನೈಯಿನ್ ಎಫ್‌ಸಿ ವಿರುದ್ಧ 1–1 ರಲ್ಲಿ ಡ್ರಾ ಸಾಧಿಸಿದ್ದರೆ, ಹೈದರಾಬಾದ್ ಎಫ್‌ಸಿ ಮತ್ತು ಒಡಿಶಾ ಎಫ್‌ಸಿ ಕೈಯಲ್ಲಿ 0–1 ಗೋಲಿನಿಂದ ಸೋತಿತ್ತು.

‘ತಂಡದ ಸದಸ್ಯರು ಸತತ ಎರಡು ಸೋಲುಗಳಿಂದ ನಿರಾಸೆಗೊಂಡಿಲ್ಲ. ಪುಟಿದೆದ್ದು ನಿಲ್ಲುವ ವಿಶ್ವಾಸದಲ್ಲಿದ್ದಾರೆ’ ಎಂದು ಕೋಚ್ ಸೈಮನ್ ಗ್ರೇಸನ್ ಹೇಳಿದ್ದಾರೆ.

‘ಕಳೆದ ಒಂದು ವಾರದ ಅವಧಿಯಲ್ಲಿ ಆಟಗಾರರು ಕಠಿಣ ತರಬೇತಿ ನಡೆಸಿದ್ದಾರೆ. ಎಲ್ಲರೂ ಸಕಾರಾತ್ಮಕ ಮನೋಭಾವ ಹೊಂದಿದ್ದು, ಶುಕ್ರವಾರದ ಆಟದಲ್ಲಿ ಶ್ರೇಷ್ಠ ಸಾಮರ್ಥ್ಯ ತೋರುವ ವಿಶ್ವಾಸವಿದೆ’ ಎಂದು ನುಡಿದಿದ್ದಾರೆ.

ನಾಲ್ಕು ಪಂದ್ಯಗಳಲ್ಲಿ ಕೇವಲ ಎರಡು ಗೋಲುಗಳನ್ನು ಮಾತ್ರ ಗಳಿಸಿರುವ ಬಿಎಫ್‌ಸಿ, ಈ ಪಂದ್ಯದಲ್ಲಿ ಪ್ರಮುಖ ಆಟಗಾರರಾದ ಜಾವಿ ಹೆರ್ನಾಂಡೆಸ್ ಮತ್ತು ಸುನಿಲ್ ಚೆಟ್ರಿ ಅವರಿಂದ ಉತ್ತಮ ಪ್ರದರ್ಶನ ನಿರೀಕ್ಷಿಸುತ್ತಿದೆ. ಸ್ಟ್ರೈಕರ್‌ಗಳಿಗೆ ನಿಖರ ಪಾಸ್‌ಗಳನ್ನು ನೀಡಲು ಇತರ ಆಟಗಾರರು ವಿಫಲವಾಗಿರುವುದರಿಂದ ತಂಡಕ್ಕೆ ಹೆಚ್ಚಿನ ಗೋಲು ಗಳಿಸಲು ಆಗಿಲ್ಲ. ಸ್ಟ್ರೈಕರ್ ಪ್ರಿನ್ಸ್ ಇಬಾರ ಅವರು ಗಾಯಗೊಂಡಿದ್ದು, ಶುಕ್ರವಾರ ಕಣಕ್ಕಿಳಿಯುತ್ತಿಲ್ಲ.

ಸ್ಟೀಫನ್ ಕಾನ್‌ಸ್ಟಂಟೈನ್ ಮಾರ್ಗದರ್ಶನದಲ್ಲಿ ಆಡುತ್ತಿರುವ ಈಸ್ಟ್ ಬೆಂಗಾಲ್, ಐದು ಪಂದ್ಯಗಳಲ್ಲಿ ಒಂದು ಗೆಲುವು ಸಾಧಿಸಿ 10ನೇ ಸ್ಥಾನದಲ್ಲಿದೆ. ಪಾಯಿಂಟ್ ಪಟ್ಟಿಯಲ್ಲಿ ಮೇಲಕ್ಕೇರಬೇಕಾದರೆ ಕೋಲ್ಕತ್ತದ ತಂಡಕ್ಕೆ ಗೆಲುವು ಅನಿವಾರ್ಯ. ಆದ್ದರಿಂದ ಕಂಠೀರವ ಕ್ರೀಡಾಂಗಣದಲ್ಲಿ ಜಿದ್ದಾಜಿದ್ದಿನ ಹೋರಾಟ ನಿರೀಕ್ಷಿಸಲಾಗಿದೆ.

ಪಂದ್ಯ ಆರಂಭ: ಸಂಜೆ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್


ಬೆಂಗಳೂರು ಎಫ್‌ಸಿ ತಂಡದ ಆಟಗಾರರು ಗುರುವಾರ ಅಭ್ಯಾಸ ನಡೆಸಿದರು

ಮುಖ್ಯಾಂಶಗಳು

- 5 ಪಂದ್ಯಗಳಿಂದ 4 ಪಾಯಿಂಟ್ಸ್ ಗಳಿಸಿರುವ ಬಿಎಫ್‌ಸಿ
- ತವರು ನೆಲದಲ್ಲಿ ಈ ಋತುವಿನ ಎರಡನೇ ಪಂದ್ಯ
- ಪಾಯಿಂಟ್ಸ್ ಪಟ್ಟಿಯಲ್ಲಿ ಮೇಲಕ್ಕೇರುವ ವಿಶ್ವಾಸ



ಸುಮಿತ್ (ಎಡ) ಹಾಗೂ ಗೋವಿಂದ್‌ಕುಮಾರ್

ಏಷ್ಯನ್ ಬಾಕ್ಸಿಂಗ್: ಫೈನಲ್‌ಗೆ ಶಿವ ಸುಮಿತ್, ಗೋವಿಂದ್‌ಗೆ ಕಂಚು

ನವದೆಹಲಿ: ಆರು ಬಾರಿಯ ಪದಕ ವಿಜೇತ ಭಾರತದ ಶಿವ ಥಾಪಾ ಅವರು ಜೋರ್ಡಾನ್‌ನ ಅಮ್ಮಾನ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಫೈನಲ್ ಪ್ರವೇಶಿಸಿದರು. ಪುರುಷರ ವಿಭಾಗದಲ್ಲಿ ಇತರ ನಾಲ್ವರು ಸೆಮಿ ಫೈನಲ್‌ನಲ್ಲಿ ಸೋತು ಕಂಚಿನ ಪದಕ ಪಡೆದರು.

ಗುರುವಾರ ನಡೆದ 63.5 ಕೆ.ಜಿ ವಿಭಾಗದ ಸೆಮಿಫೈನಲ್‌ನಲ್ಲಿ ಶಿವ ಥಾಪಾ 4–1 ರಲ್ಲಿ ತಜಿಕಿಸ್ತಾನದ ಬಖದೊರ್ ಉಸ್ಮಾನೊವ್ ಅವರನ್ನು ಮಣಿಸಿದರು. ಫೈನಲ್‌ನಲ್ಲಿ ಅವರು ಉಜ್ಬೆಕಿಸ್ತಾನದ ಅಬ್ದುಲ್ಲಯೇವ್ ರುಸ್ಲನ್ ಅವರ ಸವಾಲು ಎದುರಿಸುವರು.

ಮೊಹಮ್ಮದ್ ಹುಸಾಮುದ್ದೀನ್, ನರೇಂದರ್, ಸುಮಿತ್ ಮತ್ತು ಗೋವಿಂದ್‌ಕುಮಾರ್ ಸಹಾನಿ ಸೆಮಿ ತಡೆ ದಾಟುವಲ್ಲಿ ವಿಫಲರಾದರು.

48 ಕೆ.ಜಿ. ವಿಭಾಗದ ಸೆಮಿಫೈನಲ್‌ನಲ್ಲಿ ಗೋವಿಂದ್ 0–4 ರಲ್ಲಿ ಕಜಕಸ್ತಾನದ ಸಂಜಾರ್ ತಾಷ್ಕೆನ್‌ಬೆ ಕೈಯಲ್ಲಿ ಪರಾಭವಗೊಂಡರು.

ಸುಮಿತ್ ಅವರು 75 ಕೆ.ಜಿ. ವಿಭಾಗದ ಸೆಮಿಫೈನಲ್‌ನಲ್ಲಿ 0–5 ರಲ್ಲಿ ಉಜ್ಬೆಕಿಸ್ತಾನದ ಜಫರೊವ್ ಸೈದ್‌ಜಮ್‌ಶಿದ್ ಎದುರು ಸೋತರು.

ನರೇಂದರ್ (92+ ಕೆ.ಜಿ) ಅವರು 0–5 ರಲ್ಲಿ ಉಜ್ಬೆಕಿಸ್ತಾನದ ಮಲೊಜೊನೊವ್ ಲಜಿಬೆಕ್ ಎದುರು ಸೋತರು. ಹಿಂದಿನ ಬೌಟ್‌ನಲ್ಲಿ ಕಣ್ಣಿನ ಮೇಲ್ಭಾಗದ ಗಾಯಕ್ಕೆ ಒಳಗಾಗಿದ್ದ ಹುಸಾಮುದ್ದೀನ್ (57 ಕೆ.ಜಿ) ಅವರು ಸೆಮಿಯಲ್ಲಿ ಕಣಕ್ಕಿಳಿಯಲಿಲ್ಲ.

ಮಹಿಳೆಯರ ವಿಭಾಗದ ಫೈನಲ್ ಇಂದು: ಮಹಿಳೆಯರ ವಿಭಾಗದ ಫೈನಲ್ ಶುಕ್ರವಾರ ನಡೆಯಲಿದ್ದು, ಭಾರತದ ಲವ್ಲಿನಾ ಬೊರ್ಗೊಹೈನ್ (75 ಕೆ.ಜಿ), ಪರ್ವೀನ್ (63 ಕೆ.ಜಿ), ಅಫಿಯಾ ಪಠಾಣ್ (81+ ಕೆ.ಜಿ), ಸ್ವೀಟಿ (81 ಕೆ.ಜಿ) ಮತ್ತು ಮೀನಾಕ್ಷಿ (52 ಕೆ.ಜಿ) ಅವರು ಚಿನ್ನದ ಪದಕಕ್ಕಾಗಿ ತಮ್ಮ ಎದುರಾಳಿಗಳ ಜತೆ ಪೈಪೋಟಿ ನಡೆಸಲಿದ್ದಾರೆ.

ಹಾಕಿ: ಡಿಪಿಎಸ್‌ಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೆಲ್ಲಿ ಪಬ್ಲಿಕ್ ಸ್ಕೂಲ್ ಈಸ್ಟ್ (ಡಿಪಿಎಸ್) ತಂಡದವರು ಕರ್ನಾಟಕ ರಾಜ್ಯ ಹಾಕಿ ಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿರುವ ‘ಸಿ’ ಡಿವಿಷನ್ ಲೀಗ್ ಹಾಕಿ ಟೂರ್ನಿಯ ಪಂದ್ಯದಲ್ಲಿ 7–0 ರಲ್ಲಿ ಜೆನಿತ್ ಹಾಕಿ ಕ್ಲಬ್ ತಂಡವನ್ನು ಮಣಿಸಿದರು.

ಡಿಪಿಎಸ್ ತಂಡದ ನವಾಜ್ (5 ಮತ್ತು 26ನೇ ನಿ.) ಹಾಗೂ ತೇಜಸ್ ರೆಡ್ಡಿ (33 ಮತ್ತು 43) ಎರಡು ಗೋಲುಗಳನ್ನು ಗಳಿಸಿದರು. ಇತರ ಗೋಲುಗಳನ್ನು ಮುಹಮ್ಮದ್ ಅಶೌ (2), ಜೋಬಿನ್ (36) ಹಾಗೂ ಪ್ರೇಮ್ ಕುಮಾರ್ (44) ತಂದಿತ್ತರು.

ಜೆನಿತ್ ತಂಡ ಗೋಲಿನ ಖಾತೆ ತೆರೆಯುವಲ್ಲಿ ವಿಫಲವಾಯಿತು.

ಧಾರವಾಡದಲ್ಲಿ ರಾಜ್ಯಮಟ್ಟದ ಶಾಲಾ ಜಿಮ್ನಾಸ್ಟಿಕ್ಸ್

ಸಂಕೇತ್, ರಿಷ್ಯಾ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಧಾರವಾಡ: ಧಾರವಾಡದ ಸಂಕೇತ ಎಸ್. ಮಾನೆ ಹಾಗೂ ಬೆಂಗಳೂರು ದಕ್ಷಿಣದ ರಿಷ್ಯಾ ಗುರುವಾರ ಆರಂಭವಾದ ರಾಜ್ಯ ಮಟ್ಟದ ಶಾಲಾ ಜಿಮ್ನಾಸ್ಟಿಕ್ಸ್‌ನಲ್ಲಿ ಕ್ರಮವಾಗಿ 14 ವರ್ಷದೊಳಗಿನ ಬಾಲಕ ಹಾಗೂ ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು. ಅವರು ರಾಷ್ಟ್ರಮಟ್ಟದ ಸ್ಪರ್ಧೆಗೂ ಆಯ್ಕೆಯಾದರು.

ಧಾರವಾಡದ ಸಮೃದ್ಧ ಹಿರೇಗೌಡರ, ವಿನಾಯಕ ಭಡಣಕಾರ, ಬೆಂಗಳೂರು ದಕ್ಷಿಣ ಜಿಲ್ಲೆಯ ಎಸ್.ಕೆ.ಅನೀಶ್, ಬೆಂಗಳೂರು ನಗರ ಜಿಲ್ಲೆಯ ಜಿ. ಭಾರ್ಗ, ಮೈಸೂರಿನ ಕೆ. ಅರ್ಪಿತ್, ತುಮಕೂರಿನ ಕೆ.ಎಸ್.ಜೀವನ್ ಆಯ್ಕೆಯಾದರು.

ಬಾಲಕರ ವಿಭಾಗದಲ್ಲಿ 171 ಅಂಕಗಳೊಂದಿಗೆ ಧಾರವಾಡ ಪ್ರಥಮ, 118 ಅಂಕಗಳೊಂದಿಗೆ ತುಮಕೂರು ತೃತೀಯ ಹಾಗೂ 101 ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದರು.

ಬಾಲಕಿಯರ ವಿಭಾಗದಲ್ಲಿ 45.75 ಅಂಕಗಳೊಂದಿಗೆ ಧಾರವಾಡ ಪ್ರಥಮ, ಬೆಂಗಳೂರು ದಕ್ಷಿಣ 42.6 ಅಂಕಗಳೊಂದಿಗೆ ದ್ವಿತೀಯ ಹಾಗೂ ತುಮಕೂರು 23.82 ಅಂಕಗಳೊಂದಿಗೆ ತೃತೀಯ ಸ್ಥಾನ ಗಳಿಸಿತು.

ಫಲಿತಾಂಶ: ಬಾಲಕರು: ಫ್ಲೋರ್ ಎಕ್ಸರ್ಸೈಸ್: ಸಂಕೇತ್ ಎಸ್. ಮಾನೆ (ಧಾರವಾಡ; 14.4 ಪಾಯಿಂಟ್)–1, ಸಮೃದ್ಧ ಹಿರೇಗೌಡರ (ಧಾರವಾಡ –11.75)–2, ಜಿ. ಭಾರ್ಗ (ಬೆಂಗಳೂರು; 11.65)–3.

ಪೊಮೆಲ್ಡ್ : ಎಸ್.ಕೆ. ಅನೀಶ್ (ಬೆಂಗಳೂರು ದಕ್ಷಿಣ; 8.65)–1, ಸಂಕೇತ್ ಎಸ್. ಮಾನೆ (ಧಾರವಾಡ; 8.05)–2, ಸಮೃದ್ಧ ಹಿರೇಗೌಡರ (ಧಾರವಾಡ; 6.15)–3.

ರೋಮನ್ ರಿಂಗ್ಸ್: ಸಮೃದ್ಧ ಹಿರೇಗೌಡರ (9.7)–1, ಸಂಕೇತ ಎಸ್. ಮಾನೆ (9.05)–2,ಅರ್ಪಿತ್ ಕಲಾಗುಡಿ (ಮೈಸೂರು; 7.2)–3.

ಟೇಬಲ್ ವಾಲ್ಟ್: ಎಸ್.ಕೆ.ಅನೀಶ (10.8)–1, ಸಂಕೇತ ಮಾನೆ (10.5)–2, ಕೆ. ಅರ್ಪಿತ್ (10)–3


ಸಂಕೇತ ಮಾನೆ ಅವರ ಫ್ಲೋರ್ ಎಕ್ಸ್‌ಸೈಸ್ ಭಂಗಿ


ಕೆ. ರಿಷ್ಯಾ

ಪ್ಯಾರಲಲ್ ಬಾರ್: ಸಮೃದ್ಧ ಹಿರೇಗೌಡರ (12.1)–1, ಸಂಕೇತ ಮಾನೆ (12)–2, ಕೆ. ಅರ್ಪಿತ (8.05)–3. ಹಾರಿಜಾಂಟಲ್ ಬಾರ್: ಸಮೃದ್ಧ ಹಿರೇಗೌಡರ (4.75)–1, ಸಂಕೇತ ಮಾನೆ (3.9)–2, ಎಸ್.ಕೆ.ಅನೀಶ್ (1.6)–3.

ಬಾಲಕಿಯರು: ಫ್ಲೋರ್ ಎಕ್ಸರ್ಸೈಸ್: ಕೆ. ರಿಷ್ಯಾ (ಬೆಂಗಳೂರು ದಕ್ಷಿಣ; 11.95)–1. ಅನುಷಾ ಕುಂಬಾರ (ಧಾರವಾಡ; 9.85)–2, ಐಶ್ವರ್ಯ ಅಮ್ಮಿನಭಾವಿ (ಧಾರವಾಡ; 5.5)–3.

ಬ್ಯಾಲೆನ್ಸಿಂಗ್ ಭೀಮ್: ಅನುಷಾ ಕುಂಬಾರ (10.25)–1, ಕೆ. ರಿಷ್ಯಾ (10.05) –2, ಐಶ್ವರ್ಯ ಅಮ್ಮಿನಭಾವಿ (8.75)–3. ಅನ್‌ಈವನ್ ಬಾರ್: ಕೆ. ರಿಷ್ಯಾ (10.4)–1, ಅನುಷಾ ಕುಂಬಾರ (1)–2, ರಂಜನಿ (ತುಮಕೂರು; 0.5)–3 ಟೇಬಲ್ ವಾಲ್ಟ್: ಕೆ.ರಿಷ್ಯಾ (10.22)–1, ಎಸ್. ಜನನಿ (ತುಮಕೂರು; 8.52)–2, ಅನುಷಾ ಕುಂಬಾರ (5.22) –3.

ಜುಡೊ: ಬೆಳಗಾವಿಯ ಬಾಲಕರ ಮೇಲುಗೈ

ಕೋಲಾರ: ಬೆಳಗಾವಿ ಬಾಲಕರು ಬುಧವಾರ ಇಲ್ಲಿ ನಡೆದ ರಾಜ್ಯಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲೆಯ 14ರ ವಯೋಮಿತಿಯ ಜುಡೊ ಚಾಂಪಿಯನ್‌ಷಿಪ್‌ನಲ್ಲಿ ಮೇಲುಗೈ ಸಾಧಿಸಿದರು.

ನಗರದ ಟಿ.ಚನ್ನಯ್ಯ ರಂಗಮಂದಿರದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಆಶ್ರಯದಲ್ಲಿ ನಡೆದ ಚಾಂಪಿಯನ್‌ಷಿಪ್‌ನ 7 ವಿಭಾಗಗಳಲ್ಲಿ 6ರಲ್ಲಿ ಅಗ್ರಸ್ಥಾನ ಸಂಪಾದಿಸಿದರು.

ವಿವಿಧ ವಿಭಾಗಗಳಲ್ಲಿ ಈ ಜಿಲ್ಲೆಯ ಆಕಾಶ್, ಧೀರಜ್ ಹವಾಲ್ದಾರ್, ಸಂದೀಪ್ ಕೆ.ನಾಯಕ್, ಶಿವ ಯೋಗಿ ಸಂಗಮೇಶ್, ರಿಯಾಜ್ ಮೊದಲ ಸ್ಥಾನ ಗಿಟ್ಟಿಸಿದರು. ಪ್ರೌಢಶಾಲಾ ವಿಭಾಗದ 17 ವರ್ಷದೊಳಗಿನವರ ಬಾಲಕಿಯರ ವಿಭಾಗದಲ್ಲಿ ಉತ್ತಮ ಪೈಪೋಟಿ ಮೂಡಿಬಂತು. ಎರಡು ದಿನ ನಡೆದ ಚಾಂಪಿಯನ್‌ಷಿಪ್‌ನಲ್ಲಿ 15 ಜಿಲ್ಲೆಗಳಿಂದ ಸುಮಾರು 600 ಮಕ್ಕಳು ಪೈಪೋಟಿ ನಡೆಸಿದರು.

ಫಲಿತಾಂಶ ಇಂತಿವೆ: 14 ವರ್ಷ ಬಾಲಕರು (25 ಕೆ.ಜಿ ಒಳಗೆ): ಆಕಾಶ್ (ಬೆಳಗಾವಿ)–1, ಮಂಜುನಾಥ್ (ದಾವಣಗೆರೆ)–2, ಅರ್ಹನ್ (ಬಾಗಲಕೋಟೆ), ಅಕ್ಷಯ್ ಕುಮಾರ್ (ಮಂಡ್ಯ)–3.

30 ಕೆ.ಜಿ ಒಳಗೆ: ಧೀರಜ್ ಹವಾಲ್ದಾರ್ (ಬೆಳಗಾವಿ)–1, ವಿ.ನಾಗಚರಣ್ (ಬೆಂಗಳೂರು ಉತ್ತರ)–2, ಪಿ.ಪ್ರಜ್ವಲ್ (ಶಿವಮೊಗ್ಗ), ರಿತಿವಂತ್ (ವಿಜಯಪುರ)–3.

35 ಕೆ.ಜಿ ಒಳಗೆ: ಸಂದೀಪ್ ಕೆ.ನಾಯಕ್ (ಬೆಳಗಾವಿ)–1, ಬಿಮಲ್ ಪಾರ್ಕಿ (ಬೆಂಗಳೂರು ಉತ್ತರ)–2, ಪ್ರದೀಪ್ (ಬಾಗಲಕೋಟೆ), ಮಾದೇಶ್ (ಬೆಂಗಳೂರು ದಕ್ಷಿಣ)–3.

40 ಕೆ.ಜಿ ಒಳಗೆ: ಶಿವ ಯೋಗಿ (ಬೆಳಗಾವಿ)–1. ಗಾಯ್‌ಬುಂಗ್ ರಿಯಾಮ್ (ಬೆಂಗಳೂರು ದಕ್ಷಿಣ)–2, ಸರ್ಫರಾಜ್ (ಬಾಗಲಕೋಟೆ), ಸಾಗರ್ (ಶಿವಮೊಗ್ಗ)–3.

45 ಕೆ.ಜಿ ಒಳಗೆ: ಸಂಗಮೇಶ್ (ಬೆಳಗಾವಿ)–1, ಪಾಕಂಗ್ ಲುಂಗ್ಬೆ ರಿಯಾಮ್ (ಬೆಂಗಳೂರು ದಕ್ಷಿಣ)–2, ಬಿ.ಎನ್.ರುದ್ರೇಶ್ (ದಾವಣಗೆರೆ), ಪವನ್ (ಬೆಂಗಳೂರು)–3.

50 ಕೆ.ಜಿ ಒಳಗೆ: ರಿಯಾಜ್ (ಬೆಳಗಾವಿ)–1, ಯುವರಾಜ್ (ಚಿಕ್ಕಮಗಳೂರು)–2, ಸಾಯಿಶ್ಯಾಮ್ (ಕಲಬುರಗಿ), ದಿಲ್ಯಾನ್ (ಬೆಂಗಳೂರು ಉತ್ತರ)–3.

50 ಕೆ.ಜಿ ಮೇಲೆ: ಹ್ಯಾಪಿ ರಾಜ್ (ಕಲಬುರಗಿ)–1, ಪವನ್ ನಾಯಕ್ (ದಾವಣಗೆರೆ)–2, ವೇದಾಂತ್ (ಚಿಕ್ಕೋಡಿ), ಗುರುಪ್ರಸಾದ್ ಟಿ.ಎನ್ (ಕೋಲಾರ)–3.

ಬಾಲಕಿಯರು: 17 ವರ್ಷ: 36 ಕೆ.ಜಿ ಒಳಗೆ: ಎಂ.ಬಿ.ಭಾಗ್ಯಾ (ಧಾರವಾಡ)–1, ಟಿ.ವಿ.ಅನು (ಕೋಲಾರ)–2, ಗಂಗಾ ಸಾರ್ಕಿ (ಬೆಂಗಳೂರು ಉತ್ತರ), ಅನುರಾಧಾ (ಚಿಕ್ಕೋಡಿ)–3.

40 ಕೆ.ಜಿ ಒಳಗೆ: ಅಮೃತಾ ಅಶೋಕ್ ನಾಯಕ್ (ಬೆಳಗಾವಿ)–1, ವರಲಕ್ಷ್ಮಿ (ಬೆಂಗಳೂರು ದಕ್ಷಿಣ)–2, ಕಾವ್ಯಾ (ಕೋಲಾರ), ಕೆ.ವೈ.ಸ್ಪಂದನಾ (ದಾವಣಗೆರೆ)–3.

44 ಕೆ.ಜಿ. ಒಳಗೆ: ದಾನೇಶ್ವರಿ (ಕೋಲಾರ)–1, ಜೆ.ದೀಪಿಕಾ (ಬೆಂ. ಉತ್ತರ)–2, ಎಸ್.ಚೈತ್ರಶ್ರೀ (ಮಂಡ್ಯ), ಶಾಂಭವಿ ಎಸ್.ಬಿರಾದಾರ್ (ವಿಜಯಪುರ)–3. 48 ಕೆ.ಜಿ ಒಳಗೆ: ಎಂ.ಕವನಾ (ದಾವಣಗೆರೆ)–1, ಮೀನಾಕ್ಷಿ (ಬೆಂ.ಗ್ರಾಮಾಂತರ)–2, ವರ್ಷಾ (ಶಿವಮೊಗ್ಗ), ತೃಪ್ತಿ (ಬೆಂ. ಉತ್ತರ)–3.

52 ಕೆ.ಜಿ ಒಳಗೆ: ಆರತಿ (ವಿಜಯಪುರ)–1, ಜಿ.ಕಾವ್ಯಾ (ಬೆಳಗಾವಿ)–2, ಕೀರ್ತಿ ಬಾಯಿ (ಶಿವಮೊಗ್ಗ), ಪ್ರೀತಿ (ಚಿಕ್ಕೋಡಿ)–3.

57 ಕೆ.ಜಿ.ಒಳಗೆ: ಸಂಜನಾ (ಶಿವಮೊಗ್ಗ)–1, ಅಫ್ರೀನ್ ಬಾನು (ಬೆಳಗಾವಿ)–2, ಐಶ್ವರ್ಯಾ (ಮಂಡ್ಯ), ಕೆ.ಪೂಜಾ (ದಾವಣಗೆರೆ)–3.

63 ಕೆ.ಜಿ ಒಳಗೆ: ತನುಶ್ರೀ (ವಿಜಯಪುರ)–1, ಕೆ.ಶ್ರೇಯಾ (ಬೆಂ. ಗ್ರಾಮಾಂತರ)–2, ಎಸ್.ಶ್ರೇಯಾ (ಬೆಂಗಳೂರು ಉತ್ತರ), ಆರ್.ಹಂಸಾ (ದಾವಣಗೆರೆ)–3. 70 ಕೆ.ಜಿ ಒಳಗೆ: ಎಂ.ಚಂದನಾ (ಬೆಂ. ಗ್ರಾಮಾಂತರ)–1, ಪ್ರೀತಿ (ಮಂಡ್ಯ)–2, ಬಿ.ಎಂ. ಲಕ್ಷ್ಮಿ (ದಾವಣಗೆರೆ), ಎಂ.ಸಿಂಧು (ಕೋಲಾರ)–3. 70 ಕೆ.ಜಿ ಮೇಲೆ: ಐಶ್ವರ್ಯಾ (ಬೆಳಗಾವಿ)–1, ತಿಪ್ಪವ್ವ (ಬಾಗಲಕೋಟೆ)–2, ಪುಷ್ಪಿ (ಮಂಡ್ಯ), ಕೆ.ಆರ್.ತೇಜಸ್ವಿನಿ (ಬೆಂ. ಉತ್ತರ)–3.